ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್


25 ಜೂನ್ 2014 ಪುಟ 20 ರೂ. 15/-



ಪ್ರೊ.ಎ.ಆರ್ ರಾಮಲಿಂಗಂ ಇನ್ನಿಲ್ಲ



ಪಾಳೇಗಾರರಿಬ್ಬರ ಪಜೀತಿ!



ಪಶ್ಚಿಮ ಪದವೀಧರರ ಕ್ಷೇತ್ರ:

ಚೆಡ್ಡಿಗಳ ಚಮತ್ಕಾರ V/s ಹೊರಟ್ಟಿಗಳ ಹುಮ್ಮಸ್ಸು


ಕೆ.ಆರ್.ಪೇಟೆ

ಸೈಟು ಹಂಚಿಕೆ ಗೋಲ್‌ಮಾಲ್



ಫುಟ್‌ಬಾಲ್ ಸಾಂಬಾ!

ಒಂದು ಅಪೂರ್ವ ಪ್ರೇಮ್ ಕಹಾನಿ ಮತ್ತು ಫೇಸ್‌ಬುಕ್ ಆನಿವರ್ಸರಿ



ಡಾ.ವಾಸು ಎಚ್.ವಿ.

ಆಕೆಯ ನೋಟ್‌ಬುಕ್ಕುಗಳಲ್ಲಿ ಮಾತ್ರವಲ್ಲದೇ ಪಠ್ಯಪುಸ್ತಕಗಳಲ್ಲೂ ಮೊದಲ ಪುಟ ತಿರುವಿದರೆ ಸಾಕು ಅಲ್ಲಿ ಒಂದಲ್ಲ ಒಂದು ನುಡಿಮುತ್ತು ಇದ್ದೇ ಇರುತ್ತಿತ್ತು. 'ಜೀವನವೆಂದರೆ ಹುಟ್ಟು ಸಾವುಗಳ ನಡುವಿನ ನಾಲ್ಕು ದಿನಗಳ ವ್ಯವಹಾರವಲ್ಲ; ನಾಲ್ಕಾರು ಜನರೊಂದಿಗೆ ಪ್ರೀತಿ, ಜಗಳ, ಕೋಪತಾಪಗಳ ಸಂಬಂಧ', 'ಸ್ನೇಹಿತೆ ಶಾಶ್ವತವಲ್ಲದಿರಬಹುದು, ಆದರೆ ಈ ಸ್ನೇಹ ಮಾತ್ರ ಶಾಶ್ವತ' ಇತ್ಯಾದಿ ಇತ್ಯಾದಿ. 'ಇವೆಲ್ಲವನ್ನೂ ಯಾವ ಡಬ್ಬಾ ಟಿವಿ ಸೀರಿಯಲ್‌ಗಳಿಂದ ಎತ್ತಿ ಇಲ್ಲಿ ಹಾಕ್ಕೋತಿಯೋ?' ಎಂದು ಸ್ನೇಹಿತರು ಮೂಗುಮುರಿಯುತ್ತಿದ್ದರೂ, ಆಕೆ ಕೇರ್ ಮಾಡುತ್ತಿರಲಿಲ್ಲ. ಸಾಧ್ಯವಾದಷ್ಟೂ ತನ್ನೆಲ್ಲಾ ಭಾವನೆಗಳನ್ನೂ ಮಾತುಗಳಲ್ಲಿ ವ್ಯಕ್ತಪಡಿಸಲೇಬೇಕು ಎಂಬ ಹಠ ಆಕೆಯದ್ದು. ಹಾಗಾಗಿ ಸಾಕಷ್ಟು ಮಾತು, ಮಾತು ಮತ್ತು ಮಾತು.

ಬೆಂಗಳೂರಿಗಿಂತ ಚಿಕ್ಕ ಪಟ್ಟಣದಿಂದ ಇಲ್ಲಿಗೆ ಬಂದಿದ್ದ ಆಕೆಯ ತಂದೆಯದ್ದು ಆಂಧ್ರದ ಗಡಿ ಭಾಗದ್ದೊಂದು ಹಳ್ಳಿ. ಇದೀಗ ಬೆಂಗಳೂರೊಳಗೆ ಪೂರಾ ಬೆರೆತಿದ್ದರೂ, ತನ್ನೂರಿನ ಭಾಷೆಯ ಸೊಗಡನ್ನು ಪೂರಾ ಬಿಟ್ಟಿರದಿದ್ದುದಕ್ಕೆ ಕಾರಣವಿತ್ತು. ತನ್ನ ಮನೆ, ತಾನಿಷ್ಟ ಪಡುವ ಸಂಸ್ಕೃತಿ, ತಾನಿರುವ ರೀತಿಯ ಬಗ್ಗೆ ಆಕೆಗೆ ಸದಾ ಹೆಮ್ಮೆ. ಅವೆಲ್ಲವನ್ನೂ ಉಳಿಸಿಕೊಂಡೇ ಬೆಂಗಳೂರಿನ ಸೊಗಸು, ಸುಮ್ಮಾನಗಳನ್ನೂ ಒಳಗೊಳ್ಳುತ್ತೇನೆಂಬ ಕುರಿತು ಖಚಿತ ನಿಲುವು. ಬೆಂಗಳೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಕೆಯ ವ್ಯಕ್ತಿತ್ವವನ್ನು ಮೆಚ್ಚುವ ಸಣ್ಣ ಗುಂಪಿನಲ್ಲಿ ಸದಾ ತನ್ನ ಮಾತಿನಿಂದ, ನಗೆಯಿಂದ ಕ್ರಿಯಾಶೀಲೆ.

ಎಲ್ಲರಿಗೂ ಅಚ್ಚರಿಯಾಗಿದ್ದು ಆಕೆ ತನ್ನ ಸ್ವಭಾವಕ್ಕೆ ತದ್ವಿರುದ್ಧವಾಗಿದ್ದ ಆತನನ್ನು ಮೆಚ್ಚಿದ ಸಂಗತಿ. ಆತನ ಮುಖದ ಮೇಲೆ ಕಂಡೂ ಕಾಣದಂತೆ ಮಂದಹಾಸವೊಂದು ಇರುತ್ತಿತ್ತಾದರೂ, ತುಟಿ ಬಿರಿದು ನಗುವುದು ವಿರಳ. ಭಾವವನ್ನು, ಭಾವನೆಗಳನ್ನು ವ್ಯಕ್ತಪಡಿಸಲು ಮಾತುಗಳನ್ನು ಸುರಿಯುವುದು ಆತನಿಗೊಗ್ಗದು. ತನ್ನ ಭಾವನೆಗಳು ಇರಬೇಕಾದ್ದು ತನ್ನೊಳಗೇ ಹೊರತು ಅದನ್ನು ಹೊರಗೆ ಎಲ್ಲರಿಗೂ ತೋರುವ ಅಗತ್ಯವೇನು ಎಂಬಂತೆ ಮೌನಿ. ತನ್ನದೇ ಶೈಲಿಯ ಕೆಲವು ಜೋಕ್‌ಗಳನ್ನು ಹೇಳುವುದು ಬಿಟ್ಟರೆ ಮಿಕ್ಕಂತೆ ಚುಟುಕು ಮಾತು. ಈರ್ವರ ವ್ಯಕ್ತಿತ್ವದಲ್ಲೂ ಢಾಳಾಗಿ ಕಾಣುತ್ತಿದ್ದ ವಿರುದ್ಧ ಅಂಶಗಳೇ ಪರಸ್ಪರ ಆಕರ್ಷಣೆಗೆ ಕಾರಣವಾಯ್ತೇನೋ? ಮೆಚ್ಚಿದರು; ಮದುವೆ ಸುಲಭವಿರಲಿಲ್ಲ. ಜಾತಿಯ ವ್ಯತ್ಯಾಸ ದೊಡ್ಡದಿರಲಿಲ್ಲ, ಆದರೆ ಹುಡುಗನ ಮನೆಯವರಿಗೆ ಅಷ್ಟು ಬೇಗ ಮದುವೆ ಮಾಡುವುದು ಬೇಕಿರಲಿಲ್ಲ. ಅದಕ್ಕಿಂತ ಹೆಚ್ಚಾಗಿ, ಅವರು ಆತನಿಗಿಂತ ಹೆಚ್ಚು ಮೌನದಿಂದ ಹಲವು ದಶಕಗಳ ಕಾಲ ಸಂಸಾರ ನಡೆಸಿದ್ದರು. ಇಷ್ಟು ಬೇಗ ಆ ಕುಟುಂಬಕ್ಕೆ ಅಪರಿಚಿತ ಮಾತಿನ ಮಲ್ಲಿಯನ್ನು ಒಳಬಿಟ್ಟುಕೊಳ್ಳುವುದು ಅವರಿಗೆ ಸುಲಭದ್ದಾಗಿರಲಿಲ್ಲ. ಆಕೆಗೂ ಅದು ಮಾತುಗಳಿಲ್ಲದ ಉಸಿರುಗಟ್ಟಿಸುವ ಗೂಡಾಗುವ ಎಲ್ಲಾ ಸಾಧ್ಯತೆಯಿತ್ತು.

ಘನತೆಯ, ಅಚ್ಚುಕಟ್ಟಾದ ಮೌನ ಜೀವನ ಮತ್ತು ಕ್ರಿಯಾಶೀಲ, ವಾಚಾಳಿ ಯೌವ್ವನ ಒಟ್ಟಾಗಿ ಬಾಳುವುದು ಕಷ್ಟವಾಗಿತ್ತು. ಅದಕ್ಕಿಂತ ಕಷ್ಟವಾದದ್ದು ಸ್ವಂತ ಬದುಕನ್ನು ರೂಪಿಸಿಕೊಳ್ಳುವ ಸವಾಲು. ತಮ್ಮ ಮದುವೆಯನ್ನು ಪೂರ್ಣ ಮನಸ್ಸಿನಿಂದ ಒಪ್ಪಿರದ ಕುಟುಂಬದಿಂದ ನೆರವು ಪಡೆದುಕೊಳ್ಳುವುದು ಇಬ್ಬರ ಸ್ವಾಭಿಮಾನಕ್ಕೆ ಒಗ್ಗಲಿಲ್ಲ. ಈ ತೀರ್ಮಾನ ಬಹಳ ಕಷ್ಟಕರವಾದುದಾಗಿತ್ತು. ಸ್ನಾತಕೋತ್ತರ ಕೋರ್ಸಿನಲ್ಲಿ ಸಿಗುತ್ತಿದ್ದ ಸ್ಟೈಫಂಡ್ ಇಬ್ಬರನ್ನು ಸಾಕಲು ಸಾಲುತ್ತಿರಲಿಲ್ಲ. ಸಾಲ ಮಾಡುವುದು ಅನಿವಾರ್ಯವಾಯಿತು. ಇಡೀ ಪ್ರಪಂಚ ಆರ್ಥಿಕ ಬಿಕ್ಕಟ್ಟಿನಿಂದ ನಲುಗಿ 'ಜಾಬ್ ಮಾರ್ಕೆಟ್ ಡೌನ್' ಆಗಿದ್ದ ಸಂದರ್ಭದಲ್ಲೇ ಇವರೀರ್ವರ ಪ್ರೇಮ ಮದುವೆಯಲ್ಲಿ ಮುಂದುವರೆದಿತ್ತು. ಇನ್ನೂ ಮುಂದುವರೆಯಬೇಕಿದ್ದ ಬಾಳಬಂಡಿಗೆ ತೈಲದ ಕೊರತೆ ತೀವ್ರವಾಯಿತು. ಅನಿವಾರ್ಯವಾಗಿ ತೈಲರಾಷ್ಟ್ರದೆಡೆಗೆ ಉದ್ಯೋಗ ಹುಡುಕಿ ಹೊರಟಾಗ ಆಕೆ ಗರ್ಭಿಣಿ.

ಆಕೆಯ ಮಾತು, ಆತನ ಮೌನದ ನಡುವೆ ಸಂವಾದ, ಯೋಜನೆ, ಮರು ಯೋಜನೆ, ಅಳು, ನಗು, ಮಾತು, ಮೌನ, ಸುಲಭಕ್ಕೆ ಕೈಗೂಡದ ಆಶಯಗಳ ನಡುವೆ ಮಗ ಅವತರಿಸಿದ. ಇನ್ನೂ ತೀರಿಸಬೇಕಾದ ಸಾಲ, ಬದುಕು ಕಟ್ಟಿಕೊಳ್ಳಬೇಕಾದ ಜವಾಬ್ದಾರಿ, ನೆಮ್ಮದಿಯ ಜೀವನದ ಆಶಯಗಳ ನಡುವೆ ಹುಟ್ಟಿದ ಕುಡಿ. ಇಬ್ಬರಿಗೂ ಸಂತಸ ಹಾಗೂ ಆತಂಕಗಳೆರಡೂ ಒಟ್ಟಿಗೇ ಸೇರಿಕೊಂಡಿದ್ದವು. ಆಕೆ ಒಂದಷ್ಟು ಮಾತಾಡಿಕೊಂಡಳು; ಆತ ಕೇಳಿಸಿಕೊಂಡ. ಈ ಮಧ್ಯೆ ಮಗನಿಗೆ ಜ್ವರ ಬಂತೆಂದು ತೋರಿಸಲು ಆಸ್ಪತ್ರೆಗೆ ಹೋದಾಗ, ಹೊಟ್ಟೆಯಲ್ಲಿ ಜನ್ಮತಃ ಬೆಳೆದುಕೊಂಡಿದ್ದ ಗಡ್ಡೆ ಪತ್ತೆಯಾಯಿತು. ಕೆಲವು ಲಕ್ಷಗಳನ್ನು ಖರ್ಚು ಮಾಡಿದರೆ ಅದನ್ನು ತೆಗೆಯಬಹುದು, ಮಗ ಸಾಕಷ್ಟು ಗುಣವಾಗುತ್ತಾನೆ; ಆದರೆ ಜೀವನದುದ್ದಕ್ಕೂ ಒಂದಷ್ಟು ನಿಗಾ ವಹಿಸುವುದು ಅಗತ್ಯ ಇದ್ದೇ ಇರುತ್ತದೆ ಎಂದು ವೈದ್ಯರು ಹೇಳಿದರು. ಮುದ್ದಾಗಿದ್ದ, ಚುರುಕಾಗಿದ್ದ ಅಪ್ಪನನ್ನೂ ಮುದ್ದಿಗೆ ಹಚ್ಚುತ್ತಿದ್ದ ಮಗನ ಹೊಟ್ಟೆಯೊಳಗಿನ ಗಡ್ಡೆ ಗುಡ್ಡದಂತೆ ಕಾಡತೊಡಗಿತ್ತು. ಈ ಹೊತ್ತಿಗೆ ಉದ್ಯೋಗದ ಮಾರುಕಟ್ಟೆ ಮತ್ತಷ್ಟು ದುರ್ಬಲವಾಗಿತ್ತು. ಯೂರೋಪ್ ಮತ್ತು ಅಮೆರಿಕಾಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಇಂಜಿನಿಯರ್‌ಗಳು ಏಷ್ಯಾದ ರಾಷ್ಟ್ರಗಳಿಗೆ ಹಿಂತಿರುಗುತ್ತಿದ್ದರು. ಇವರಿದ್ದ ಕೊಲ್ಲಿ ದೇಶಗಳಲ್ಲೂ ಕೆಲಸ ಕಳೆದುಕೊಳ್ಳುವ ಭೀತಿ ಉಂಟಾಯಿತು.

ಆಗೀಗ ಆಕೆಯ ಮನೆಯವರು ಕೈ ಹಿಡಿದರು. ಕೆಲವು ಸ್ನೇಹಿತರು ನೆರವಿಗೆ ಬಂದರು. ಕೆಲವರು ಸುಮ್ಮನೇ ಕೇಳಿಸಿಕೊಂಡು ಸಂತೈಸಿದರು. ಆದರೆ ಈರ್ವರನ್ನೂ ಕಾಪಿಟ್ಟು ಕಾದಿದ್ದು ಪ್ರೀತಿಯೇ. ಒಬ್ಬರಿಗೊಬ್ಬರು ಇಡೀ ಜೀವನ ಜೊತೆಯಾಗಿರಲು ತೀರ್ಮಾನಿಸಿದ್ದೇವೆ. ಈ ಕೆಲವು ಸಂಗತಿಗಳಲ್ಲಿ ನಾನು ಇರುವುದು ಹೀಗೆಯೇ, ಅದನ್ನು ಬಿಟ್ಟರೆ ನಿನ್ನ ನೆಮ್ಮದಿಗಾಗಿ ನಾನು ಮತ್ತಷ್ಟು ಕಷ್ಟಪಡಲು ಸಿದ್ಧನಿದ್ದೇನೆ ಎಂದು ಆತ ಭರವಸೆ ಇತ್ತ. ಆಡಿದ್ದು ನಾಲ್ಕೇ ವಾಕ್ಯಗಳಾದರೂ, ಆತನಾಡಿದಷ್ಟು ಮಾತುಗಳನ್ನೂ ಉಳಿಸಿಕೊಳ್ಳುತ್ತಾನೆ ಎಂಬುದು ಆಕೆಗೆ ಗೊತ್ತಿತ್ತು. ಮಗುವನ್ನೆತ್ತಿಕೊಂಡು ಸೀದಾ ಬೆಂಗಳೂರಿಗೆ ವಾಪಸಾದಳು. ಆತ ಡಬಲ್ ಶಿಫ್ಟ್‌ನಲ್ಲಿ ದುಡಿಯಲು ಸಿದ್ಧನಾಗಿ ಸಾಲ ತೀರಿಸಲು ಆರಂಭಿಸಿದ.

ಆತ ಅಲ್ಲಿ ದೂರದಲ್ಲಿ, ಈಕೆ ಇಲ್ಲಿ ಮಗುವಿನೊಂದಿಗೆ. ಅವರ ಮದುವೆ ದಿನ ಫೇಸ್‌ಬುಕ್‌ನ ತನ್ನ ವಾಲ್‌ನಲ್ಲಿ ಬರೆದುಕೊಂಡಳು 'ಪ್ರಿಯಾ, 12 ವರ್ಷಗಳ ಸಾಂಗತ್ಯ, 8 ವರ್ಷಗಳ ಮದುವೆ, ನಿನ್ನೊಂದಿಗಿನ ಪಯಣ ಅದ್ಭುತವಾಗಿದೆ. ಪದವಿ, ಪದವೀ ನಂತರದ ಕೋರ್ಸುಗಳು, ಅಲೆದಾಟ, ಕಾಣದ ದೇಶದಲ್ಲಿ ಸಂಸಾರ, ಮಗು, ನಗು, ಆತಂಕ ಎಲ್ಲವೂ. ಪ್ರಯಾಣವು ತುಂಬಾ ಏರುಪೇರುಗಳೊಂದಿಗೆ ಕೂಡಿತ್ತು, ಆದರೆ ನಾನು ಕಂಡುಕೊಂಡಿದ್ದಿಷ್ಟು. ನೀನೊಂದು ವಿಸ್ಮಯ ಮತ್ತು ನಾನು ಅದೃಷ್ಟವಂತೆ. ಮದುವೆ ದಿನದ ಶುಭಾಶಯಗಳು. ಈ ದಿನ ನಾವಿಬ್ಬರೂ ಜೊತೆಗಿದ್ದಿದ್ದರೆ ಇನ್ನೆಷ್ಟು ಚೆಂದವಿರುತ್ತಿತ್ತು?'

ಕಥೆ ಇಷ್ಟೇ. ಇನ್ನೂ ದೂರವೇ ಇದ್ದಾರೆ. 12 ವರ್ಷಗಳ ಹಿಂದೆ ಆರಂಭವಾದ ಪ್ರೀತಿಯ ಭದ್ರತೆ ಮತ್ತು ಬದುಕಿನ ಅಭದ್ರತೆಯ ಕೊಂಡಿ ಇನ್ನೂ ಪೂರ್ಣ ಕಳಚಿಲ್ಲ, ಒಂದು ಇನ್ನೊಂದನ್ನು ಪೊರೆಯುತ್ತಿದೆ. ಪ್ರಪಂಚದ ಮಾರುಕಟ್ಟೆಯ ಏಳುಬೀಳುಗಳು ಈಗ ಅವರನ್ನು ಅಷ್ಟಾಗಿ ಕಾಡುತ್ತಿಲ್ಲ, ಮಾತು ಮತ್ತು ಮೌನದ ನಡುವಿನ ಸಂಸಾರ ಗೂಡು ಕಟ್ಟಿಕೊಳ್ಳುತ್ತಿದೆ. ನೆಮ್ಮದಿಯು ಸ್ಥಿರವಾದ ಸಂಗತಿಯಲ್ಲ; ಚಲನೆ ಹಾಗೂ ವೈರುಧ್ಯದ ಜೊತೆಗೇ ಅದೂ ಸಂಗಾತಿಯಾಗಿರಬಲ್ಲುದು ಎಂಬುದನ್ನು ಆಕೆ ಅರ್ಥಮಾಡಿಕೊಂಡಿದ್ದಾಳೆ. ಈಗ ಫೇಸ್‌ಬುಕ್ಕಿನ ಜೊತೆಗೂ ಮಾತನಾಡಿಕೊಳ್ಳುತ್ತಾಳೆ. ತನಗನ್ನಿಸಿದ್ದು, ತನ್ನ ಭಾವನೆಗಳನ್ನು ನಾಲ್ಕಕ್ಕಿಂತ ಹೆಚ್ಚು ಜನರಿಗೆ ತಲುಪಿಸಲು ಅದೊಂದು ತೆರೆದ ಪುಸ್ತಕವಾಗಿದೆ.

ಇಷ್ಟೇ ಆದರೆ ವಿಶೇಷವೇನು? ಎಷ್ಟೋ ಜೋಡಿಗಳ ಪ್ರೇಮದಲ್ಲಿ ಇನ್ನೂ ರೋಚಕವಾದ, ಸಿಹಿ–ಕಹಿ ಸಂಗತಿಗಳು ಇರುತ್ತವೆ; ಇದು ಮಾತ್ರ ಅಪೂರ್ವ ಪ್ರೇಮ್‌ಕಹಾನಿ ಹೇಗೆ ಆದೀತು ಎಂದೆನಿಸಬಹುದು. ಅವರ ಮಟ್ಟಿಗೆ ಅದು ಅಪೂರ್ವವಾದದ್ದೇ. ದಶಕಗಳ ಹಿಂದೆಯೇ ಕೆ.ಎಸ್.ನರಸಿಂಹಸ್ವಾಮಿಯವರು ಬರೆದಿಲ್ಲವೇ 'ಒಂದು ಗಂಡಿಗೊಂದು ಹೆಣ್ಣು, ಹೇಗೋ ಸೇರಿ ಹೊಂದಿಕೊಂಡು. ಕಾಣದಂಥ ಕನಸ ಕಂಡು, ಮಾತಿಗೊಲಿಯದಮೃತವುಂಡು. ದುಃಖ ಹಗುರ ಎನುತಿರೇ, ಪ್ರೇಮವೆನಲು ಹಾಸ್ಯವೇ?'.

ಆದರೆ ಆಕೆ ಬರೆದ ಆ 'ಆನಿವರ್ಸರಿ ಸ್ಪೆಷಲ್' ಮಾತನ್ನು ಗೆಳೆಯನೊಬ್ಬ ತೀವ್ರವಾಗಿ ಆಕ್ಷೇಪಿಸಿ ಫೇಸ್‌ಬುಕ್ಕಿನಲ್ಲೇ ಕಮೆಂಟಿಸಿದ. ನಿಮ್ಮಿಬ್ಬರ ಕಿವಿಗಳೊಳಗೆ ಮಾತ್ರ ಪಿಸುಗುಡಬೇಕಾದ್ದನ್ನು ನಮಗೇಕೆ ಉಣಬಡಿಸುತ್ತೀರಿ ಎಂಬುದು ಆತನ ತಕರಾರು ಆಗಿತ್ತು. ತುಂಬ ಖುಷಿಯಿಂದ, ನಿರಾಳತೆಯಿಂದ, ಸಾರ್ಥಕತೆಯಿಂದ ತಾನು ಬರೆದದ್ದಕ್ಕೆ ಬಂದ ಈ ಕಮೆಂಟನ್ನು ಓದಿ 'ಈತನೊಂದಿಗೆ ಚರ್ಚೆ ನಡೆಸುವುದೇ ಅಸಂಬದ್ಧ' ಎಂದು ಬಗೆದು ಡಿಲಿಟ್ ಮಾಡಿ ಸುಮ್ಮನಾದಳು. ಇವರ ಜೋಡಿ ಜೀವನ, ಅಪೂರ್ವದ್ದೆಂದು ಭಾವಿಸಿದ್ದ ಆ ಗೆಳೆಯ ಅವರ ಸಾರ್ವಜನಿಕ ಮಾತುಗಳನ್ನು ಅಪದ್ಧವೆಂದು ಕರೆದು, ತಾನೂ ಅಪದ್ಧವಾಡಿದ್ದ. ವಾಸ್ತವದಲ್ಲಿ ನಿಜಕ್ಕೂ ಆಕೆ ಬರೆದ ಮಾತುಗಳು ಅವರ ಬದುಕಿನ ವಾಸ್ತವದ ಪ್ರತಿಬಿಂಬವಾಗಿದ್ದವು.

ಕೆ.ಎಸ್.ನರಸಿಂಹಸ್ವಾಮಿಯವರ ಕಾಲದಲ್ಲಿ ಕವನವಾಗಿ ಬರೆದು, ಅಚ್ಚು ಹಾಕಿಸುವುದಷ್ಟೇ ಸಾಧ್ಯವಿತ್ತು. ಆಗೀಗ, ಅಲ್ಲಲ್ಲಿ ನಡೆಯಬಹುದಾಗಿದ್ದ ಕವಿಗೋಷ್ಠಿಗಳಲ್ಲಿ ಓದಬಹುದಿತ್ತು, ಹೆಚ್ಚೆಂದರೆ ಗೆಳೆಯರ ಬಳಗಗಳಲ್ಲಿ ಆಗಾಗ್ಗೆ ವಾಚಿಸಬಹುದಿತ್ತೇನೋ? ಆದರೆ ಕ್ಯಾಸೆಟ್ ಕಾಲ ಬಂದಮೇಲೆ ಅದು ಇನ್ನಷ್ಟು ಜನರನ್ನು ತಲುಪಿತು. ಕೆಎಸ್‌ನ 'ಮನೆ ಮಾತಾದದ್ದು' ಆಗಲೇ ಅಲ್ಲವೇ? ಈಗ ಬರೆದ ಕ್ಷಣದಲ್ಲೇ ಫೇಸ್‌ಬುಕ್‌ನಲ್ಲಿ ಪೋಸ್ಟಿಸಿ ಆಗಿಂದಾಗಲೇ ಅದಕ್ಕೆ ಕಾಮೆಂಟುಗಳ ಸುರಿಮಳೆ ಸಾಧ್ಯ. ಅಲ್ಲೇ ಕವಿ ಯಾ ಕವಯತ್ರಿ ಧನ್ಯವಾದಗಳನ್ನೂ ಅರ್ಪಿಸಿಬಿಡಬಹುದು. ಇನ್ಯಾರಾದರೂ ಸ್ವರ ಸಂಯೋಜನೆ ಮಾಡಿ, ಹಾಡಿ ಆಡಿಯೋವನ್ನೂ ಅಪ್‌ಲೋಡ್ ಮಾಡಬಹುದು. ಎಲ್ಲವೂ ಪಬ್ಲಿಕ್ಕೇ.

ಅಲೆಗ್ಸಾಂಡರ್ ಗ್ರಹಾಂಬೆಲ್ ಟೆಲಿಫೋನನ್ನು ಕಂಡುಹಿಡಿದಾಗ ಅದರ ಬಳಕೆಯ ಸಾಧ್ಯತೆಗಳ ಬಗ್ಗೆ ಜನರಿಗೆ ನಂಬಿಕೆಯಿರಲಿಲ್ಲವಂತೆ. ಆಗ ಗ್ರಹಾಂಬೆಲ್ ಹೇಳಿದ್ದು 'ನೋಡುತ್ತಿರಿ, ಒಂದು ಕಾಲ ಬರುತ್ತದೆ. ಆಗ ಅಕ್ಕಪಕ್ಕದ

ಮನೆಗಳಲ್ಲಿರುವವರು ಎದ್ದು ಹೋಗಿ ಮಾತನಾ
ಫೋನಿನಲ್ಲಿ ಮಾತನಾಡಿಕೊಳ್ಳುತ್ತಾರೆ' ಎಂದು.
ಮನೆಯ ಬೇರೆ ಕೋಣೆಗಳಲ್ಲಿರುವವರು ಅಥವಾ
ಮಹಡಿಗಳಲ್ಲಿರುವವರು ಫೋನಿನಲ್ಲಿ ಮಾತನಾಡಿಕೊ
ಮಾಮೂಲಾಗಿರುವ ಕಾಲದಲ್ಲಿ ನಾವಿದ್ದೇವೆ. ಗ್ರಹಾ
ಮಾತನ್ನೂ ಹಿಂದಿಕ್ಕಿ!

ತಂತ್ರಜ್ಞಾನವು ಮನುಷ್ಯ ಸಂಬಂಧಗಳನ್ನು, ಸಂಸ್ಕೃ
ಮಾತು ಮತ್ತು ಮೌನದ ಅಭ್ಯಾಸವನ್ನು ಬದಲಿಸುತ್ತ
ಅದು ಶತಮಾನಗಳ ಕಾಲ ನಡೆದುಕೊಂಡು
ಅಭ್ಯಾಸಗಳಿಗೆ ಹೊಸ ತಿರುವನ್ನು ನೀಡುತ
ತಿರುಚುತ್ತದೆಯೋ? ಟಿ.ವಿ ಒಂದು ಹೊಸ ಸಂಸ್ಕೃ
ಹುಟ್ಟು ಹಾಕಿದೆ. ನಂತರ ಮೊಬೈಲ್‌ಗಳು.
ಇಂಟರ್ನೆಟ್‌ನೊಳಗಣ ಸಾಮಾಜಿಕ ತಾಣಗಳು ಇನ
ಬಗೆಯ ಸಂಸ್ಕೃತಿಯನ್ನು.

ಖಾಸಗಿಯನ್ನು ಸಾರ್ವಜನಿಕವಾಗಿಸುವ ಕೆಲ
ಅತ್ಯಂತ ವಿಕೃತವಾಗಿ ನಮ್ಮ ಟಿ.ವಿ. ಮಾಧ್ಯ
ಮಾಡುತ್ತಲಿವೆ. ಇಂದಿಗೂ ಅತ್ಯಂತ ಹೆಚ್ಚು ಟಿ
ಇರುವ ಪ್ರಾದೇಶಿಕ ಭಾಷಾ ಚಾನೆಲ್‌ಗಳಲ್ಲಿ
ಕಾರ್ಯಕ್ರಮಗಳು ಸಾಕಷ್ಟು ಪ್ರಸಾರವಾ
ಯಾರದ್ದೋ, ಗಂಡ-ಹೆಂಡತಿ ಜಗಳ
ಬೀದಿಯಲ್ಲಿ, ಟಿವಿ ಸ್ಟುಡಿಯೊ
ಹರಾಜಿಗಿಡುವುದು ಮಾತ್ರವಲ್ಲದೇ,
ಕ್ಯಾಮೆರಾ ಇಡುವ ಬಿಗ್‌ಬಾಸ್‌ನಂತಹ ರಿಯ
ಷೋಗಳು ಸಹ 'ಜನಪ್ರಿಯತೆ' ಗಳಿಸಿವೆ.
ಸಾಮಾಜಿಕ ಜಾಲತಾಣಗಳಲ್ಲಿ ಅವರವರು ಅ
ಬಂದದ್ದನ್ನು, ಇಷ್ಟ ಬಂದ ರೀತಿ
ಸಾರ್ವಜನಿಕಗೊಳಿಸುತ್ತಿದ್ದಾರೆ.

ಯಾರಿಗೋ ಯಾತಕ್ಕೋ ಖುಷಿಯಾ
ಅವರು ಅದು ಇಡೀ ಜಗತ್ತಿಗೆ ಗೊತ್ತಾಗಬೇ
ಬಯಸುತ್ತಾರೆ ಮತ್ತು ಜಗಜ್ಜಾಹೀರುಗೊಳಿಸ
ತಪ್ಪೇನು? ಪಿಸುಮಾತಿನಲ್ಲೇ ಅವರಿಬ್ಬರು ಕಿ
ಮಾತ್ರ ಹಂಚಿಕೊಳ್ಳಬೇಕಾದ್ದು ಎಂದು
ಕೊಡಿಸಲು ನೀವ್ಯಾರು ಎಂಬುದು ಅ
ಹೊರಡುವ ವಾದ. ಹಾಗೆ ನೋಡಿದರೆ ಸಾ
ಜಾಲತಾಣಗಳಲ್ಲಿ ಸುಂದರವಾದ, ಮಧು
ಸಾಮಾಜಿಕ ಆರೋಗ್ಯಕ್ಕೆ ಅಗತ್ಯವಾದ,
ಜಗತ್ತಿನ ವಿವಿಧ ಕೋನಗಳಲ್ಲಿ
ಬಿಟ್ಟಿರುವವರನ್ನು ಒಂದುಗೂಡಿಸಬಲ್ಲ ನ
ಸಂಗತಿಗಳು ಹಂಚಿಕೆಯಾಗುತ್ತವೆ. ಹಾಗೆಯೆ
ಜಗತ್ತಿನ ಅಧಿಕಾರ, ಉದ್ದಿಮೆ, ರಾಚನಿಕ ಶ್ರೇಣಿ
ಮೌಲ್ಯ ಪ್ರಜ್ಞೆಗಳು ಇಲ್ಲೂ ಹರಡಿಕೊಂಡಿ
ಪ್ರಭಾವಶಾಲಿಯಾಗಿರುತ್ತವೆ. ಟಿವಿ, ಮೊಬೈಲ್ ಫೋ
ತಮ್ಮದೇ ಪರಿಣಾಮ ಬೀರುವುದನ್ನು ಹೇಗೆ ತಡ
ಸಾಧ್ಯವಾಗಲಿಲ್ಲವೋ, ಹಾಗೆಯೇ ಇವನ್ನೂ
ತಡೆಯಲಾಗದು. ಮೊಬೈಲ್ ಫೋನ್ ಮುಟ್ಟಲಾರೆ
ಘೋಷಿಸಿ, ಇದುವರೆಗೂ ಮು
ಉಳಿದುಕೊಂಡಿರುವವರು ಬಹಳ ಕಡಿಮೆ ಜನರು

ಹಾಗಿದ್ದ ಮೇಲೆ ಎಲ್ಲಾ ಸಾಮಾಜಿಕ ತಾಣ
(ವಾಸ್ತವದ ಮತ್ತು ನೆಟ್ ಲೋಕದ) ಚೆಂದಗಾಣಿಸು
ಇಂದು ಉಳಿದುಕೊಂಡಿರುವ ಸಾಧ್ಯತೆ. ಪ್ರತೀ
ಮೌಲ್ಯ ಪ್ರಜ್ಞೆ ಹೊಸ ರೀತಿಯಲ್ಲಿಯೇ ನವೀಕರಣಗೊ
ಸಮಾಜದಲ್ಲಿ ಯಾವ ಶಕ್ತಿಗಳು ಪ್ರಬಲವಾಗಿರು
ಅವೇ ಈ ಮೌಲ್ಯ ಪ್ರಜ್ಞೆಯು ನವೀಕರಣಗೊಳ್ಳು
ಮತ್ತು ರೀತಿಯನ್ನೂ ಪ್ರಭಾವಿಸುತ್ತವೆ. ಮನುಷ್ಯರ
ಕಿರಿದುಗೊಳಿಸುವ ಕೆಲಸವನ್ನು ನವಉದಾ
ಮಾರುಕಟ್ಟೆಯು ಮಾಡುತ್ತಿದೆ; ಜನರನ್ನು ಜೀವ
ಭಾವಗಳಿಲ್ಲದ ಯಂತ್ರಗಳಿಗೆ ಕಟ್ಟಿ ಹಾಕುತ್ತಿದೆ
ಅದೇ ಸಂದರ್ಭದಲ್ಲೇ, ಅವೇ ಯಂತ್ರಗಳ
ಜನರನ್ನು ಹತ್ತಿರ ತರುತ್ತಿರುವುದೂ ಹೌದು. ಹತ್ತಿ
ಕಾರಣವಾಗಿರುವ ಸಂಗತಿಗಳು ಯಾವುವು,
ಮುಂದಿನ ತಾರ್ಕಿಕ ನಡೆ ಮತ್ತು ಪರಿಣಾಮ
ನಾವು ತಲೆಕೆಡಿಸಿಕೊಳ್ಳಬೇಕಾದ ಅಂಶಗಳಾಗಿರು

ನಾವು ಬಯಸಲಿ ಅಥವಾ ಬಯಸದಿರಲಿ, ತಂ
ಹೊಸದೊಂದು ಸಾಧ್ಯತೆಯನ್ನು ತೆರೆದಿಟ್ಟಿದೆ.
ಹೊಸ ಸಾಂಸ್ಕೃತಿಕ ಧೋರಣೆಯನ್ನು ರ
ಹೊಣೆಗಾರಿಕೆ ಯಾರೋ ಕೆಲವರ ಮೇಲಿರುವುದು
ಆದರೆ, ಸ್ವಸ್ಥ ಸಮಾಜವನ್ನು ಬಯಸುವವರು, ಈ ಲ
ಕೇವಲ ಭ್ರಾಮಕ ಲೋಕವೆಂದು ಬಗೆದು
ನಿಲ್ಲುವುದೂ ಅಸಾಧ್ಯ.



'ಅಚ್ಛೆ' ದಿನಗಳಲ್ಲ, ಕೇಡುಗಾಲದ ಆರಂಭ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಪ್ರಧಾನಿ ಆದನಂತರ ಮೋದಿ ಸಂಯಮದಿಂದ ತನಾಡುತ್ತಿದ್ದಾನೆ, ಚಿಕ್ಕ ಮತ್ತು ಚೊಕ್ಕ ಸರ್ಕಾರ ನಡೆಸಲು ಯತ್ನಿಸುತ್ತಿದ್ದಾನೆ, ಮೋದಿ ಈ ದೇಶಕ್ಕೆ ತಕ್ಕದಾದ ಯಕನಾಗುವ ಹಾದಿಯಲ್ಲಿದ್ದಾನೆ, ಆತನ ಬಗ್ಗೆ ತ್ಯತೀತರಲ್ಲಿ ಮತ್ತು ಪ್ರಗತಿಪರರಲ್ಲಿ ಇದ್ದ ಆತಂಕಗಳನ್ನೆಲ್ಲ ಳ್ಳು ಮಾಡುತ್ತಾನೆ ಎಂದೆಲ್ಲ ಹಲವರು ಅಲ್ಲಲ್ಲಿ ತನಾಡುತ್ತಿದ್ದಾರೆ. ಆದರೆ ಇದೆಲ್ಲ ನಿಜವೇ? ಆತ ವಾಗಲೂ ತನ್ನ ನರಹಂತಕ ಅವತಾರವನ್ನು ತೊರೆದು ಒಬ್ಬ ಜನಪರ, ಅಭಿವೃದ್ಧಿಪರ, ಸಂವಿಧಾನಬದ್ಧ ಯಕನಂತೆ ನಡೆದುಕೊಳ್ಳುತ್ತಿದ್ದಾನೆಯೇ?

ಚುನಾವಣೆಯನ್ನು ಗೆದ್ದ ನಂತರ ಮೋದಿ ಸಂಸತ್ತಿನ ಟ್ರಲ್ ಹಾಲ್‌ನಲ್ಲಿ ಮಾಡಿದ ಭಾವನಾತ್ಮಕ ಭಾಷಣವನ್ನು ೀದಿ ಅಭಿಮಾನಿಗಳು ಕೊಂಡಾಡಿದರು. ಅದರಲ್ಲೂ ತ್ತು ಆತ "ನಾನು ಪ್ರಧಾನಿಯಾಗಿ ಈ ದೇಶದ ಬಡವರ ತ್ತು ದಮನಿತರ ಪರವಾಗಿ ವಿಶ್ರಾಂತಿ ಇಲ್ಲದೆ ಕೆಲಸ ಡುತ್ತೇನೆ" ಎಂದದ್ದನ್ನು ಮೆಚ್ಚಿಕೊಂಡರು. ಆದರೆ ಈ ಮಾನಿಗಳಿಗೆ ಒಂದು ಅಂಶ ಕಾಣಿಸಲಿಲ್ಲ. ಅದೇನೆಂದರೆ ರ ಹಿಂದಿನ ದಿನ ಮೋದಿ ಅಹಮದಾಬಾದಿನಿಂದ ಲಿಗೆ ಬಂದದ್ದು ತನ್ನ ಉದ್ಯಮಿ ಮಿತ್ರ ಅದಾನಿಯ ಗಿ ವಿಮಾನದಲ್ಲಿ. ಬಡವರ ಮತ್ತು ದಮನಿತರ ಪರವಾಗಿ ಸುತ್ತೇನೆನ್ನುವ ಮನುಷ್ಯ ಅದ್ಯಾಕೆ ಅದಾನಿ ಎಂಬ ಟ್ಯಾಧಿಪತಿಯ ಹಂಗಿನಲ್ಲಿರುವಂತೆ ಆತನ ಖಾಸಗಿ ಾನವನ್ನೇರಿದ?

ಇನ್ನು ಪ್ರಧಾನಿ ಆದನಂತರ ಸಂಸತ್ತಿನ ಮೆಟ್ಟಿಲುಗಳನ್ನು ವ ಮುನ್ನ ಅದಕ್ಕೆ ಬಾಗಿ ನಮಸ್ಕರಿಸಿದ ರೀತಿಯನ್ನಂತೂ- ತಹ ಸಿನಿಕರನ್ನು ಹೊರತುಪಡಿಸಿ –ಹೊಗಳದೆ ಇದ್ದವರೇ ವೇನೋ. ಅಂತರಜಾಲದಲ್ಲಂತೂ "ನೋಡಿ ಪ್ರಭುತ್ವದ ಬಗ್ಗೆ ಮೋದಿಗೆ ಅದೆಷ್ಟು ಗೌರವ" ಮ ಎಲ್ಲರೂ ಕೊಂಡಾಡಿದ್ದೇ ಕೊಂಡಾಡಿದ್ದು. ಆದರೆ ಿ ಪ್ರಜಾಪ್ರಭುತ್ವಕ್ಕೆ 'ಗೌರವ' ಸಲ್ಲಿಸಿದ ಮೋದಿಯ ದ್ರ ಸರ್ಕಾರ ಆದಾದ ಕೆಲವೇ ದಿನಗಳಲ್ಲಿ ಮಾಡಿದ್ದು ನ್ನು ಎಂದು ನೋಡಿದರೆ ಆಘಾತವಾಗುತ್ತದೆ.

ಕಳೆದವಾರ ಇದೇ ಪುಟದಲ್ಲಿ ಹರಿಯಾಣದ ಭಾಗಾನ ಎ ಹಳ್ಳಿಯಲ್ಲಿ ಜಾಟ್ ಯುವಕರಿಂದ ಅತ್ಯಾಚಾರಕ್ಕೆ ಯಾದ ನಾಲ್ವರು ದಲಿತ ಯುವತಿಯರು, ಅವರ ಪಕರು ಮತ್ತು ಭಾಗಾನದ ಇತರೆ ಹತ್ತಾರು ದಲಿತರು ನ ಎರಡು ತಿಂಗಳುಗಳಿಂದ ರಕ್ಷಣೆ ಮತ್ತು ನ್ಯಾಯ ತ್ತಾ ದೆಹಲಿಯ ಜಂತರ್‌ಮಂತರ್‌ನಲ್ಲಿ ನಿರಶನ ಡಿದ್ದಾರೆಂದು ಬರೆದಿದ್ದೆ. ಆದರೆ ಕಳೆದ ಬುಧವಾರ ಏನಾಯಿತೆಂದರೆ ದೆಹಲಿ ಪೊಲೀಸರು ನಿರಶನ ಡಿದ್ದವರ ಮೇಲೆ ದಾಳಿ ಮಾಡಿ, ಅವರು ತಂಗಲು ಕೊಂಡಿದ್ದ ಚಿಕ್ಕಪುಟ್ಟ ಟೆಂಟ್‌ಗಳನ್ನು ನಾಶ ಮಾಡಿ, ರೆಲ್ಲರನ್ನು ಜಂತರ್‌ಮಂತರ್‌ನಿಂದ ಒದ್ದೋಡಿಸಿದರು. ದೆಹಲಿಯಲ್ಲಿ ಈ ಬಡ ಮತ್ತು ಅಸಹಾಯಕ ದಲಿತರಿಗೆ ಸಿಗುವುದಾದರೂ ಎಲ್ಲಿ ಮತ್ತು ಹೇಗೆ? ಆಗ ರ ಬೆಂಬಲಕ್ಕೆ ಹಲವು ಮಹಿಳಾ ಮತ್ತು ದಲಿತ ಘಟನೆಗಳು ನಿಂತು ಎಲ್ಲರೂ ಸಂಸತ್ ಭವನದ ಮಲ್ಲಿರುವ ಪೊಲೀಸ್ ಠಾಣೆಗೆ ಹೋಗಿ ಅಲ್ಲೊಂದು ವಿ ಸಲ್ಲಿಸಲು ಪ್ರಯತ್ನಿಸಿದರು. ಆ ಮನವಿಯಲ್ಲಿ ಆ ಹಾಯಕ ದಲಿತರು ಹೆಚ್ಚಿನದ್ದೇನನ್ನೂ ಕೇಳಿರಲಿಲ್ಲ. ಅವರು ದ್ದು ಇಷ್ಟೇ: "ದೆಹಲಿಯಲ್ಲಿ ನಮಗೆ ಉಳಿದುಕೊಳ್ಳಲು ವ ಜಾಗವೂ ಇಲ್ಲ, ಆದ್ದರಿಂದ ನಮಗೆ ತರ್‌ಮಂತರ್‌ನಲ್ಲೇ ಇರಲು ಅನುವು ಮಾಡಿಕೊಡಿ." ಈ ಮನವಿಯನ್ನು ಸ್ವೀಕರಿಸಲೂ ಪೊಲೀಸ್ ಕಾರಿಗಳು ಸಿದ್ಧರಿರಲಿಲ್ಲ. ಮಹಿಳೆಯರು ಮತ್ತು ದಲಿತರು ಯ ಮಾಡಿದಾಗ ರೊಚ್ಚಿಗೆದ್ದ ಪೊಲೀಸರು ಅಲ್ಲಿದ್ದ ರ ಮೇಲೆ ಲಾಠಿ ಪ್ರಹಾರ ಮಾಡಿದರಲ್ಲದೆ ಕೆಲವು ಳೆಯರ ಖಾಸಗಿ ಜಾಗಗಳಿಗೆ ಕೈಹಾಕಿ ಅಶ್ಲೀಲವಾಗಿ ಸಿದ್ದಾರೆ. ಒಬ್ಬ ಹಿರಿಯ ಪೊಲೀಸ್ ಅಧಿಕಾರಿಯಂತೂ ರಿಗೆ ಲಾಠಿ ರುಚಿ ತೋರಿಸಿದರೆ ಸಾಕಾಗುವುದಿಲ್ಲ ವಾಗಿ ಲಾಠಿಯನ್ನು ಅವರ ಯೋನಿಯೊಳಗೆ ಸಬೇಕು" ಎಂದೆಲ್ಲ ಅರಚಿದ್ದಾನೆ.

ನೆನಪಿಡಿ, ನಮ್ಮ ಪ್ರಜಾಪ್ರಭುತ್ವ ದೇಶದಲ್ಲಿ ದೆಹಲಿಯ ತರ್‌ಮಂತರ್ ಎಂಬುದು ಈಗ ಪ್ರತಿಭಟನೆಗಳಿಗೆಂದೇ ನಿಗದಿ ಆಗಿರುವ ಸ್ಥಳ. ಅಲ್ಲೂ ದಮನಿತ ದಲಿತರಿಗೆ ನಿರಶನ ಮಾಡುವ ಅವಕಾಶ ಇಲ್ಲದಿದ್ದರೆ ಅವರೆಲ್ಲ ಎಲ್ಲಿಗೆ ಹೋಗಬೇಕು? ಮೋದಿ ಸಂಸತ್ತಿನ ಮೆಟ್ಟಿಲಿಗೆ ನಮಸ್ಕರಿಸುತ್ತಾನೆ, ಅದೇ ಸಂಸತ್ತು ಭವನದ ರಸ್ತೆಯಲ್ಲಿರುವ ಪೊಲೀಸ್ ಠಾಣೆಯ ಅಧಿಕಾರಿ ಲಾಠಿಯನ್ನು ಮಹಿಳೆಯರ ವಿರುದ್ಧ ಹೇಗೆ ಪ್ರಯೋಗಿಸಬೇಕೆಂದು ತನ್ನ ಖಾಕಿ ತಂಡಕ್ಕೆ ಹೇಳುತ್ತಾನೆ. ಮೋದಿ ದಮನಿತರ ಪರವಾಗಿ ವಿಶ್ರಾಂತಿ ಇಲ್ಲದೆ ಕೆಲಸ ಮಾಡುತ್ತೇನೆ ಎನ್ನುತ್ತಾನೆ, ಆದರೆ ಆತ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ದಮನಿತ ದಲಿತರ ಮೇಲೆಯೇ ಪೊಲೀಸ್ ದಾಳಿ ನಡೆಯುತ್ತದೆ. (ಅಂದಹಾಗೆ ಪೊಲೀಸರು ಮಾಡಿದ ದಾಳಿಗೂ ಯಾಕೆ ಮೋದಿಯ ಹೆಸರನ್ನು ತಗಲು ಹಾಕುತ್ತೀರಿ ಎಂದು ಕೇಳುವ ಬಿಜೆಪಿ ಅಭಿಮಾನಿಗಳಿಗೆ ಇಲ್ಲೊಂದು ಸ್ಪಷ್ಟೀಕರಣ: ಅಣ್ಣಾ ಹಜಾರೆಯ ಪ್ರತಿಭಟನೆಯ ವಿರುದ್ಧ ಪೊಲೀಸರು ದಾಳಿ ಮಾಡಿದಾಗ ಅದಕ್ಕೆ ಕಾಂಗ್ರೆಸ್ ಸರ್ಕಾರ ಜವಾಬ್ದಾರಿ ಎಂದು ಮೋದಿ ಅಭಿಮಾನಿಗಳು ಹೇಗೆ ಹೇಳಿದ್ದರೋ ಅದೇ ಮಾನದಂಡವನ್ನು ನಾನು ಇಲ್ಲಿ ಅನುಸರಿಸಿದ್ದೇನೆ) ಮೋದಿಯ ಮಾತಿಗೂ ಆತನ ನಡೆಗೂ ಇರುವ ವ್ಯತ್ಯಾಸ ಹೆಚ್ಚಿನವರಿಗೆ ಕಾಣಿಸದೆ ಇರುವುದು ದುರಾದೃಷ್ಟ.

ಇನ್ನು ಮೋದಿಯ ಗೆಲುವಿಗೆ ಸಂಘಪರಿವಾರದ ವಿವಿಧ ಅಂಗಸಂಸ್ಥೆಗಳು ಕೆಲಸ ಮಾಡಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಅಂತಹ ಅಂಗಸಂಸ್ಥೆಗಳಲ್ಲಿ ಹಿಂದೂ ರಾಷ್ಟ್ರಸೇನೆ ಎಂಬ ಗುಂಪೂ ಒಂದು. ಈ ಗುಂಪಿನ ಸಿದ್ಧಾಂತಕ್ಕೂ ಆರೆಸ್ಸೆಸ್ ಸಿದ್ಧಾಂತಕ್ಕೂ ವ್ಯತ್ಯಾಸವೇನಿಲ್ಲ. ಇತ್ತೀಚೆಗೆ ಈ ಗುಂಪು ಪುಣೆಯಲ್ಲಿ ಅಮಾಯಕ ಮುಸ್ಲಿಮ್ ಯುವಕನೊಬ್ಬನನ್ನು ಕೊಂದು ಹಾಕಿದ್ದೂ ಈಗ ಎಲ್ಲರಿಗೂ ಗೊತ್ತು.

ಆದರೆ ಇದೆಲ್ಲ ಶುರುವಾಗಿದ್ದು ಹೇಗೆ ಎಂಬುದನ್ನು ಆನಂದ್ ತೇಲ್ತುಂಬ್ಡೆಯವರು ಒಂದು ಲೇಖನದಲ್ಲಿ ಬಿಡಿಸಿದ್ದಾರೆ. ಅವರು ಹೇಳುವ ಪ್ರಕಾರ "ಶಿವಸೇನೆಯ ಸಂಸ್ಥಾಪಕ ಬಾಳ್ ಠಾಕ್ರೆ ಮತ್ತು ಛತ್ರಪತಿ ಶಿವಾಜಿಯವರ ಚಿತ್ರಗಳನ್ನು ಮಾರ್ಫ್ ಮಾಡಿದ್ದ ಫೋಟೊ ಒಂದು, ಕಳೆದ ಒಂದು ವರ್ಷದಿಂದ ಅಂತರಜಾಲದಲ್ಲಿ ಚಾಲ್ತಿಯಲ್ಲಿದ್ದು ಅದನ್ನು ಸುಮಾರು 50,000 ಜನ 'ಲೈಕ್' ಮಾಡಿದ್ದರು. ಆದರೆ ಅದನ್ನೇ ಬಳಸಿಕೊಂಡು ಕೋಮು ಪ್ರಚೋದನೆಗೆ ಹಿಂದೂ ರಾಷ್ಟ್ರಸೇನೆ ಮುಂದಾಯಿತು. ಆ ಚಿತ್ರವನ್ನು ನಿಹಾಲ್ ಖಾನ್ ಎಂಬ ಮುಸ್ಲಿಮ್ ಯುವಕ ಸೃಷ್ಟಿಸಿದ್ದಾನೆಂದು ಅಪಪ್ರಚಾರ ಶುರುಹಚ್ಚಿಕೊಂಡರು. ಆದರೆ ಪೊಲೀಸರ ಪ್ರಕಾರ ಅದನ್ನು ಸೃಷ್ಟಿಸಿದ್ದು ನಿಖಿಲ್ ಟಿಕೋನೆ ಎಂಬ ಹಿಂದೂ ಯುವಕ. ಆದರೂ ಇದನ್ನೇ ದುರುಪಯೋಗಮಾಡಿಕೊಂಡು ಹಿಂದೂ ರಾಷ್ಟ್ರ ಸೇನೆ ಗಲಭೆಗೆ ತಯಾರಿ ನಡೆಸುತ್ತಿದ್ದುದ್ದನ್ನು ಕಂಡು ಮೇ 30ರಂದೇ ಅಂತರಜಾಲದಿಂದ ತೆಗೆದುಹಾಕಲಾಯಿತು. ಅದು ಹಿಂದೂ ರಾಷ್ಟ್ರ ಸೇನೆಯವರಿಗೆ ಗೊತ್ತಿದ್ದರೂ ಅವರು ಜೂನ್ 2 ರಂದು ತಮ್ಮ ಪ್ರತಿಭಟನೆಯನ್ನು ಪ್ರಾರಂಭಿಸಿದರು. ಅವತ್ತು ಸಂಜೆ ಪೂಣೆಯ ಹೊರವಲಯದಲ್ಲಿ ಬೈಕ್ ಮೇಲೆ ಹೋಗುತ್ತಿದ್ದ ಯುವಕನನ್ನು ತಡೆದು, ಆತನ ತಲೆಗೆ ಮತ್ತು ದೇಹಕ್ಕೆ ಹಾಕಿ ಸ್ಟಿಕ್ಸ್‌ಗಳಿಂದ ಮತ್ತು ಕಲ್ಲುಗಳಿಂದ ಬಡಿದರು. ಆತ ಕೊನೆಯುಸಿರೆಳೆಯಲು ಅಲ್ಲೇ ಬಿಟ್ಟು ತಮ್ಮ ದಾಂಧಲೆಯನ್ನು ಮುಂದುವರಿಸಿದರು. ಅಂದು ಅವರಿಗೆ ಬಲಿಯಾದ ಟೆಕ್ಕಿ ಮೋಹ್ಸಿನ್ ಸಾದಿಕ್ ಶೈಕ್‌ಗೂ ಮಾರ್ಫ್ ಮಾಡಲಾಗಿದ್ದ ಫೋಟೋಗೂ ಸಂಬಂಧವೇ ಇರಲಿಲ್ಲ. ಆದರೂ ಆತ ಗಡ್ಡ ಬಿಟ್ಟಿದ್ದ ಮತ್ತು ಪಠಾನಿ ಕುರ್ತ ಹಾಕಿದ್ದ ಎಂಬುದೇ ಕೊಲೆಗಡುಕರಿಗೆ ಸಾಕಾಗಿತ್ತು. ಶೈಕ್ ಜೊತೆಗಿದ್ದ ಸಂಬಂಧಿಯೊಬ್ಬ ಅಲ್ಲಿಂದ ಪಾರಾದರೂ 30 ವರ್ಷ ವಯಸ್ಸಿನ ಅಮೀಶ್ ಶೈಕ್ ಮತ್ತು 25 ವರ್ಷ ವಯಸ್ಸಿನ ಇಜಾಜ್ ಯೂಸುಫ್ ಎಂಬ ಇನ್ನಿಬ್ಬರು ಹಿಂದೂ ರಾಷ್ಟ್ರ ಸೇನೆಯ ಗೂಂಡಾಗಳ ದಾಳಿಯಲ್ಲಿ ಗಾಯಗೊಂಡರು. ಎಂದಿನಂತೆ ಪೊಲೀಸರು ಮೊದಲು ಹಿಂದೂ ರಾಷ್ಟ್ರ ಸೇನೆಯ ಗೂಂಡಾಗಳ ಪರ ನಿಂತರು. ಶಿವಾಜಿ ಪ್ರತಿಮೆಗೆ ಅವಮಾನ ಮಾಡಲಾಗಿದೆ ಎಂದೂ, ಹಿಂದೂ ಯುವತಿಯೊಬ್ಬಳ ಮೇಲೆ ಮುಸ್ಲಿಮ್ ಯುವಕರು ಅತ್ಯಾಚಾರ ಎಸಗಿದ್ದಾರೆ ಎಂದೂ ರೂಮರ್‌ಗಳು ಹಬ್ಬಿದ್ದರಿಂದ ಹಿಂದೂ ರಾಷ್ಟ್ರ ಸೇನೆಯವರು ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದರು ಎಂಬ ಸಬೂಬು ಕೊಡುವ ಮೂಲಕ ಅಮಾಯಕ ಮುಸಲ್ಮಾನನ ಕೊಲೆಯನ್ನು ಸಮರ್ಥಿಸಲು ಯತ್ನಿಸಿದ್ದರು.

ಶೈಕ್ ಕೊಲೆಯ ತರುವಾಯ ಮೊಬೈಲ್‌ಗಳಲ್ಲಿ ಭಯಸೂಚಕ ಎಸ್‌ಎಂಎಸ್ ಒಂದು ಹರಿದಾಡಲಾರಂಭಿಸಿತು. ಮರಾಠಿ ಭಾಷೆಯಲ್ಲಿದ್ದ ಆ ಎಸ್‌ಎಂಎಸ್‌ನಲ್ಲಿ 'ಮೊದಲ ವಿಕೆಟ್ ಬಿತ್ತು' ಎಂದಿತ್ತು. ಈ ಎಸ್‌ಎಂಎಸ್ ಮತ್ತು ಕೊಲೆಗೆ ಬಳಸಿದ ಅಸ್ತ್ರಗಳನ್ನು ನೋಡಿದರೆ ಇದೊಂದು ಪೂರ್ವಯೋಜಿತ ಕೊಲೆ ಎಂಬುದು ಸ್ಪಷ್ಟವಾಗುತ್ತದೆ...

ಆಟ ಶುರುವಾಗಿದೆ. ಇದರಲ್ಲಿ ಮೋದಿ ಯಾವ ಪಾತ್ರ ವಹಿಸುತ್ತಾನೆಂದು ಕಾದು ನೋಡಬೇಕಿದೆ."

* * *

ಇದೇ ಸಮಯದಲ್ಲಿ ಇನ್ನೊಂದೆರಡು ಅಪಾಯಕಾರಿ ಬೆಳವಣಿಗೆಗಳೂ ಸಂಭವಿಸಿವೆ. ಅವುಗಳಲ್ಲಿ ಒಂದು ಮಾನವ ಸಂಪನ್ಮೂಲ ಇಲಾಖೆಯ ಸಚಿವೆಯಾಗಿರುವ ಸ್ಮೃತಿ ಇರಾನಿ "ಶಾಲಾ ಪಠ್ಯಪುಸ್ತಕಗಳಲ್ಲಿ ಹಿಂದೂ ದೃಷ್ಟಿಕೋನವನ್ನು ಸೇರಿಸುತ್ತೇವೆ" ಎಂದಿರುವುದು. ಈ 'ಹಿಂದೂ ದೃಷ್ಟಿಕೋನ' ಎಂದರೆ ಪುರೋಹಿತಶಾಹಿ ಸಿದ್ಧಾಂತ ಮತ್ತು ಪಠ್ಯಪುಸ್ತಕಗಳನ್ನು ಕೇಸರಿಮಯವಾಗಿಸುವುದು ಆರೆಸ್ಸೆಸ್ ಅಜೆಂಡಾ ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ.

ಈಗ ಸ್ಮೃತಿ ಇರಾನಿ ಜೊತೆ ದನಿಗೂಡಿಸಿರುವವನು ದೀನಾನಾಥ್ ಬತ್ರಾ ಎಂಬುವವನು. ಈ ಬತ್ರಾ ಎಂಬುವವನು ಬೇರೆ ಯಾರೂ ಅಲ್ಲ, ಈ ಹಿಂದೆ ಮುರಳಿ ಮನೋಹರ್ ಜೋಷಿ ಮಾನವ ಸಂಪನ್ಮೂಲ ಸಚಿವನಾಗಿದ್ದಾಗ ಇಂತಹದ್ದೇ ಕೇಸರೀಕರಣಕ್ಕೆ ಸಜ್ಜಾಗಿದ್ದಾಗ ಆತನ ಬೆನ್ನಿಗೆ ನಿಂತಿದ್ದವನೂ ಇದೇ ಬತ್ರಾ. ಇದೇ ಬಾತ್ರ ಇತ್ತೀಚೆಗೆ ಇತಿಹಾಸ ತಜ್ಞೆ ವೆಂಡಿ ಡಾನಿಗರ್ ಅವರ 'ದಿ ಹಿಂದೂಸ್- ಆನ್ ಆಲ್‌ಟರ್ನೇಟಿವ್ ಹಿಸ್ಟರಿ' ಎಂಬ ಪುಸ್ತಕವನ್ನು ಅದರ ಪ್ರಕಾಶಕ ಸಂಸ್ಥೆ ಪೆಂಗ್ವಿನ್ ಹಿಂದೆ ಪಡೆಯುವುದಲ್ಲದೆ, ಎಲ್ಲಾ ಪ್ರತಿಗಳನ್ನೂ ಪುಡಿ ಮಾಡಬೇಕೆಂದು ಬೆದರಿಕೆ ಹಾಕಿ ಅದರಲ್ಲಿ ಯಶಸ್ವಿಯೂ ಆಗಿದ್ದ. ಅಷ್ಟೇಅಲ್ಲ, ಆಕ್ಸ್‌ಫರ್ಡ್ ವಿದ್ವಾಂಸೆ ಮೇಘಾ ಕುಮಾರ್ ಎಂಬುವವರು 1969ರಿಂದ ಇಲ್ಲಿಯತನಕ ಅಹಮದಾಬಾದಿನಲ್ಲಾಗಿರುವ ಕೋಮುಗಲಭೆ ಸಂದರ್ಭಗಳಲ್ಲಿ ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯ ಕುರಿತು ಬರೆದಿರುವ ಹೊಸ ಪುಸ್ತಕವನ್ನೂ ಹಿಂದೆ ಪಡೆಯುವಂತೆ ಅದರ ಪ್ರಕಾಶಕ ಸಂಸ್ಥೆ ಓರಿಯಂಟ್ ಬ್ಲ್ಯಾಕ್‌ಸ್ವಾನ್ ಮೇಲೆ ಧಮಕಿ ಹಾಕಿ ಮತ್ತೊಮ್ಮೆ ಯಶಸ್ವಿಯಾಗಿದ್ದಾನೆ.

ಇಂತಹ ಬತ್ರಾ ಇತ್ತೀಚೆಗೆ ಸಂದರ್ಶನವೊಂದರಲ್ಲಿ "ಮೋದಿಯವರನ್ನು ನಾನು ಸದ್ಯದಲ್ಲೇ ಭೇಟಿ ಆಗುತ್ತೇನೆ. ನಮ್ಮ ಒತ್ತಾಯಗಳನ್ನು ಅವರಿಗೆ ಆಗಲೇ ತಿಳಿಸಲಾಗಿದೆ. ದೇಶದಲ್ಲಿ ಈಗ ರಾಜಕೀಯ ಬದಲಾವಣೆ ಆಗಿದೆ, ಈಗ ಶಿಕ್ಷಣ ಕ್ಷೇತ್ರದಲ್ಲೂ ಬದಲಾವಣೆ ಆಗಬೇಕಿದೆ. ನಮ್ಮ ಶಾಲಾಮಕ್ಕಳಲ್ಲಿ ರಾಷ್ಟ್ರಭಕ್ತಿ ಬಿತ್ತುವಂತಹ ಕೆಲಸ ಮಾಡಲು ಪಠ್ಯಪುಸ್ತಕಗಳನ್ನು ಪುನರ್ ರಚಿಸಲಾಗುತ್ತದೆ" ಎಂದು ಸ್ಪಷ್ಟವಾಗಿ ಹೇಳಿದ್ದಾನೆ.

ಇದೇ ಹೊತ್ತಿಗೆ 'ಹಿಂದೂ ವಾಯ್ಸ್' ಎಂಬ ಪತ್ರಿಕೆಯ ಸಂಪಾದಕ ಮೋದಿಗೆ ಒಂದು ಪತ್ರವನ್ನು ಬರೆದು ಹಲವಾರು ಸಲಹೆಗಳನ್ನು ನೀಡಿದ್ದಾನೆ. ಆತ ಕೊಟ್ಟಿರುವ ಸಲಹೆಗಳಲ್ಲಿ ಹಲವು ಇಂತಿವೆ:

"ನಮ್ಮ ಎಲ್ಲಾ ನೋಟ್‌ಗಳ ಮೇಲಿರುವ ಮಹಾತ್ಮ ಗಾಂಧಿಯ ಫೋಟೊ ತೆಗೆದು ಹಾಕಿ ಆ ಜಾಗದಲ್ಲಿ ಲಕ್ಷ್ಮೀ ದೇವಿಯ ಫೋಟೋ ಹಾಕಬೇಕು. ಹೀಗೆ ಮಾಡಿದರೆ ಕಪ್ಪುಹಣದ ಸಮಸ್ಯೆ ಬಗೆಹರಿಯುತ್ತದೆ ಯಾಕೆಂದರೆ ಪಾಕಿಸ್ತಾನದ ಐಎಸ್‌ಐ ಲಕ್ಷ್ಮಿ ಫೋಟೊ ಇರುವ ನಕಲಿ ನೋಟ್‌ಗಳನ್ನು ಮುದ್ರಿಸುವುದಿಲ್ಲ.

'ಭಾರತ ಮಾತಾ ಕಿ ಜೈ' ಮತ್ತು 'ವಂದೇ ಮಾತರಂ' ಎಂಬ ಸ್ಲೋಗನ್‌ಗಳನ್ನು ಎಲ್ಲರೂ ಕಡ್ಡಾಯವಾಗಿ ಹೇಳಬೇಕೆಂಬ ನಿಯಮವನ್ನು ಜಾರಿಗೆ ತರಬೇಕು. ಅದನ್ನು ಹೇಳದವರಿಗೆ ಯಾವುದೇ ಹಕ್ಕುಗಳನ್ನಾಗಲಿ, ಸ್ಥಾನಮಾನವನ್ನಾಗಲಿ ನೀಡಕೂಡದು.

ಅಲ್ಪಸಂಖ್ಯಾತ ಎಂಬ ಪದವನ್ನೇ ರದ್ದು ಮಾಡಬೇಕು.

'ಅಪಾಯದಲ್ಲಿರುವ ನಾಗರಿಕತೆ ರಕ್ಷಣಾ ಕಾಯಿದೆಯನ್ನು' ಜಾರಿಗೆ ತರಬೇಕು. ಆ ಮೂಲಕ ಸನಾತನ ಹಿಂದೂ ಧರ್ಮ, ಹಿಂದೂ ಸಂಸ್ಕೃತಿ, ಹಿಂದೂ ಆಚಾರವಿಚಾರಗಳನ್ನು ರಕ್ಷಿಸಬೇಕು ಮತ್ತು ಮತಾಂತರವನ್ನು ತಡೆಯಬೇಕು.

ಹಿಂದೂ ಸಂಘಟನೆಗಳಿಗೆ ನೈತಿಕ ಪೊಲೀಸ್‌ಗಿರಿ ನಡೆಸಲು ಅನುಮತಿ ಕೊಡಬೇಕು.

ಭಾರತದ ವಿರುದ್ಧ ಮಾತನಾಡುವವರ, ದೇಶವನ್ನು ವಿಭಜಿಸಬೇಕು ಎನ್ನುವವರ, ಮಾನವ ಹಕ್ಕುಗಳ ಬಗ್ಗೆ ಮಾತನಾಡುವವರ ಮತದಾನದ ಹಕ್ಕನ್ನು ಮತ್ತು ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳಬೇಕು ಮತ್ತು ಅಂತಹವರು ಯಾವುದೇ ಸವಲತ್ತುಗಳಿಲ್ಲದೆ ವಾಸಿಸುವಂತೆ ನೋಡಿಕೊಳ್ಳಬೇಕು.

ಒಬ್ಬರಿಗಿಂತ ಹೆಚ್ಚು ಮಡದಿಯರು ಮತ್ತು ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವವರಿಗೆ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಇರಕೂಡದು.




ಕೋಮುವಾದಿ ಗೂಂಡಾಗಳಿಗೆ ಬಲಿಯಾದ ಮೋಹ್ಸಿನ್



ಪೊಲೀಸ್ ಠಾಣೆಯ ಮುಂದೆ ದಲಿತ ಮಹಿಳೆಯರು ಪ್ರತಿಭಟಿಸುತ್ತಿರುವುದು



ಹಿಂದೂ ರಾಷ್ಟ್ರಸೇನೆಯ ಕಾರ್ಯಕರ್ತರು



ಕೋಮುವಾದಿ ಹಿಂದೂ ರಾಷ್ಟ್ರಸೇನೆಯ ನಾಯಕ ಧನಂಜಯ

ಮಹಿಳೆಯರ ಸಬಲೀಕರಣದ ಉದ್ದೇಶದಿಂದ ಜಾರಿಗೆ ತರಲಾಗಿರುವ ಕಾನೂನುಗಳನ್ನು ರದ್ದು ಪಡಿಸಬೇಕು ಯಾಕೆಂದರೆ ಅವು ಹಿಂದೂ ಸಂಪ್ರದಾಯಗಳನ್ನು ನಾಶ ಮಾಡುತ್ತಿವೆ.

ಮಸೀದಿಗಳಲ್ಲಿ ಮತ್ತು ಚರ್ಚ್‌ಗಳಲ್ಲಿ ಧ್ವನಿವರ್ಧಕಗಳನ್ನು ಬಳಸಕೂಡದೆಂದು ಕಾನೂನು ತರಬೇಕು.

ಸಂವಿಧಾನದಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಿ 'ಇಂಡಿಯಾ' ಬದಲಿಗೆ 'ಭಾರತ' ಪದ ಉಪಯೋಗವಾಗುವಂತೆ ನೋಡಿಕೊಳ್ಳಬೇಕು.


ಈಗ ಕ್ರಿಶ್ಚಿಯನ್ನರಿಗೆ ಅನುಕೂಲವಾಗವಂತೆ ಭಾನುವಾರ ವಾರದ ರಜಾದಿನವಾಗಿದೆ. ಇದನ್ನು ಬದಲಾಯಿಸಿ ಸೋಮವಾರ ಅಥವಾ ಮಂಗಳವಾರವನ್ನು ವಾರದ ರಜಾ ದಿನವೆಂದೇ ಘೋಷಿಸಬೇಕು.

ಶಾಲೆಗಳಲ್ಲಿ ಹೆಣ್ಣುಮಕ್ಕಳು ಈಗ ಕ್ರಿಶ್ಚಿಯನ್ನರ ನನ್‌ಗಳು ಧರಿಸುವ ಸ್ಕರ್ಟ್ ತೊಡುತ್ತಿದ್ದಾರೆ. ಅದರ ಬದಲಾಗಿ ಸಲ್ವಾರ್ ಕಮೀಜ್ ಮತ್ತು ದುಪ್ಪಟ್ಟಾವನ್ನು ಸಮವಸ್ತ್ರವಾಗಿಸಬೇಕು..."

ಹೀಗೆ ಆತನ ಅಸಂಬದ್ಧ ಸಲಹೆಗಳು ಮುಂದುವರೆಯುತ್ತವೆ....

ಒಟ್ಟಾರೆಯಾಗಿ ಮೋದಿ ಪ್ರಧಾನಿಯಾಗಿ ಇನ್ನೂ ಒಂದು ತಿಂಗಳು ಆಗಿಲ್ಲ, ಆಗಲೇ ದಲಿತರ ಮೇಲೆ ಪೊಲೀಸರ ದಬ್ಬಾಳಿಕೆ. ಹಿಂದೂತ್ವವಾದಿಗಳಿಂದ ಒಬ್ಬ ಅಮಾಯಕನ ಕೊಲೆ, ಪಠ್ಯಪುಸ್ತಕಗಳ ಕೇಸರೀಕರಣ ಮತ್ತು ದೇಶವನ್ನೇ 'ಹಿಂದೂ ರಾಷ್ಟ್ರವಾಗಿ' ಪರಿವರ್ತಿಸುವ ಹುನ್ನಾರಗಳು ನಡೆದಿವೆ.

ಭಾರತದಲ್ಲಿ 'ಅಚ್ಛೆ ದಿನಗಳು' ಪ್ರಾರಂಭವಾಗಿಲ್ಲ, ಬದಲಾಗಿ 'ಕೇಡುಕಾಲ' ಶುರುವಾಗಿದೆ ಎಂಬುದಕ್ಕೆ ಇವೆಲ್ಲ ಮುನ್ಸೂಚನೆಗಳು...



ಮುಗಿದುಹೋದ 'ಹೋರಾಟ'ದ ಹೊತ್ತಿಗೆ!

ಪ್ರೊ. ಎ.ಆರ್.ರಾಮಲಿಂಗಮ್

ಶೋಷಿತ ಸಮುದಾಯಗಳ ಧ್ವನಿಯಾಗಿ ನಿಲ್ಲುತ್ತಲೇ ತಮ್ಮ ಬದುಕನ್ನು ಸಮಾನತೆಯ ಪಾಠವಾಗಿಸಿದ್ದ ಪ್ರೊ. ಎ.ಆರ್. ರಾಮಲಿಂಗಮ್ ನಮ್ಮನ್ನೆಲ್ಲ ಅಗಲಿ ಹೋಗಿದ್ದಾರೆ. ಮೈಸೂರಿನ ವಿಜಯನಗರದಲ್ಲಿರುವ ತಮ್ಮ ಮಗಳ ಮನೆಯಲ್ಲಿ ಜೂನ್ 6ರಂದು ಅವರು ಅನಾರೋಗ್ಯದಿಂದಾಗಿ ಕೊನೆಯುಸಿರೆಳೆದಿದ್ದಾರೆ. ಆ ಮೂಲಕ ಜನಪರ ಹೋರಾಟ ಪರಂಪರೆಯ ಮತ್ತೊಂದು ಕೊಂಡಿ ಕಳಚಿಬಿದ್ದಂತಾಗಿದೆ. ಸುಮಾರು ಎರಡೂವರೆ ದಶಕಗಳ ಕಾಲ ಮೈಸೂರು ವಿಶ್ವವಿದ್ಯಾಲಯದಲ್ಲಿ ಸಸ್ಯಶಾಸ್ತ್ರ ವಿಭಾಗದ ಅಧ್ಯಾಪಕರಾಗಿ ಕೆಲಸ ಮಾಡುತ್ತಲೇ ಅನ್ಯಾಯ, ದೌರ್ಜನ್ಯಗಳನ್ನು ಗಟ್ಟಿಯಾಗಿ ಹಿಮ್ಮೆಟ್ಟಿಸುತ್ತಾ ಸಮಸಮಾಜದ ಹೊಂಗನಸು ಬಿತ್ತುವ ನಿರಂತರ ಕಾಯಕಜೀವಿಯಾಗಿದ್ದ ಅವರು ಮಾರ್ಕ್ಸ್‌ವಾದ, ಎಡಪಂಥೀಯ ಚಿಂತನೆಗಳು, ಪರಿಸರ ಕಾಳಜಿಯ ಪ್ರತೀಕವಾಗಿ ಗುರುತಿಸಿಕೊಂಡವರು; ಹೋರಾಟವನ್ನೇ ತಮ್ಮ ಉಸಿರಾಗಿಸಿಕೊಂಡವರು; ಕಟ್ಟಕಡೆಯವರೆಗೆ ತಮ್ಮೆಲ್ಲಾ ಸಿದ್ಧಾಂತಗಳಿಗೆ ಬದ್ಧರಾಗಿದ್ದವರು.

ಯಾವುದೇ ಕೆಲಸಕ್ಕೆ ಕೈ ಇಟ್ಟರೂ ಅದಕ್ಕೊಂದು ತಾರ್ಕಿಕ ಅಂತ್ಯ ಕಾಣಿಸದೆ ಹಿಮ್ಮುಖವಾಗದ ಅವರ ಧೋರಣೆ ವೃತ್ತಿ ಮತ್ತು ಖಾಸಗಿ ಬದುಕುಗಳಲ್ಲಿ ಹಲವಾರು ಏರುಪೇರುಗಳನ್ನು ತಂದಿಟ್ಟರೂ ಜಗ್ಗದೆ ಮುನ್ನುಗ್ಗುತ್ತಿದ್ದ ರಾಮಲಿಂಗಮ್ ಹಲವರ ಪಾಲಿಗೆ ನಿಷ್ಠುರವಾದಿಯಾಗಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ಮೈಸೂರು ವಿವಿ ಕ್ಯಾಂಪಸ್‌ನ ಅಕ್ರಮಗಳನ್ನೆಲ್ಲ ಬಯಲಿಗೆಳೆದು, ಅದಕ್ಕೋಸ್ಕರ ದೂರದ ಧಾರವಾಡಕ್ಕೆ ವರ್ಗವಾದಾಗಲೂ ಅವರು ತಮ್ಮ ಬದ್ಧತೆಗಳಿಂದ ವಿಚಲಿತರಾದವರಲ್ಲ. ಅವರಲ್ಲಿದ್ದ ಅನನ್ಯತೆಯೇ ಅದು. ಹೋರಾಟ ಅವರ ಸಿದ್ಧಾಂತವಾಗಿರಲಿಲ್ಲ, ಅವರ ಬದುಕೇ ಆಗಿಬಿಟ್ಟಿತ್ತು. ದಮನಿತ ಸಮುದಾಯಗಳ ಬೆನ್ನೆಲುಬಾಗಿ ನಿಲ್ಲುವುದಕ್ಕೋಸ್ಕರ ಕುಕ್ಕರಹಳ್ಳಿಯಂತಹ ದಲಿತ ಕೇರಿಯನ್ನೇ ತನ್ನ ಕಾರ್ಯಸ್ಥಾನವಾಗಿಸಿಕೊಂಡಲ್ಲಿಂದ ಆರಂಭವಾಗಿ ಶುದ್ಧ ಕುಡಿಯುವ ನೀರಿನ ಅಭಿಯಾನದವರೆಗೆ ಅವರ ಸಂಘರ್ಷದ ಹಾದಿ ಎಲ್ಲಿಯೂ ತನ್ನ ಬಿಗುವು ಕಳೆದುಕೊಂಡ ನಿದರ್ಶನಗಳಿಲ್ಲ.

ಹಾಗೆ ನೋಡಿದರೆ, ನೆಮ್ಮದಿಯ ಜೀವನ ನಡೆಸುವಷ್ಟು ಸೌಕರ್ಯಗಳನ್ನೆಲ್ಲ ಬದುಕು ಅವರಿಗೆ ಕೊಟ್ಟಿತ್ತು. 1937ರ ಜುಲೈ 25ರಂದು ಆಂಧ್ರದ ವಿಶಾಖಪಟ್ಟಣಂ ಜಿಲ್ಲೆಯ ಹೊಂಗಲ್ ಎಂಬಲ್ಲಿ ಹುಟ್ಟಿದ ಅವರದ್ದು ಮೂಲತಃ ಜಮೀನ್ದಾರ ಕುಟುಂಬ. ಸೌಲತ್ತುಗಳಿಗೆ ಹೇಳಿಕೊಳ್ಳುವಂತ ಕೊರತೆಗಳೇನೂ ಇರಲಿಲ್ಲ, ಆದರೆ ಅವರೊಳಗಿದ್ದ ಕ್ರಾಂತಿಕಾರಿ ತುಡಿತ ಐಷಾರಾಮಿ ಸೆಳೆತಗಳನ್ನೆಲ್ಲಾ ಧಿಕ್ಕರಿಸಿ ಹೋರಾಟ, ಸಂಘರ್ಷದತ್ತ ಅವರನ್ನು ಎಳೆತಂದಿತ್ತು. ಮೈಸೂರು ವಿವಿಯ ಬೋಧಕ ವೃತ್ತಿಯಲ್ಲಿದ್ದುಕೊಂಡೇ ಸಮಾಜದ ಓರೆಕೋರೆಗಳನ್ನು ತಿದ್ದುವ ಹಲವಾರು ಪ್ರಯತ್ನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ತಮ್ಮ ಶಿಷ್ಯವೃಂದದಲ್ಲೂ ಇದೇ ಬಗೆಯ ಅರಿವನ್ನು ಜಾಗೃತಗೊಳಿಸುತ್ತಾ 'ಅಚ್ಚುಮೆಚ್ಚಿನ ಮೇಷ್ಟ್ರು' ಎನಿಸಿಕೊಂಡಿದ್ದರು. ಇದು ಸಹಜವಾಗಿಯೇ ಸಮಾನ ಮನಸ್ಕರಲ್ಲದ ಅಧ್ಯಾಪಕ ವೃಂದದಲ್ಲಿ ರಾಮಲಿಂಗಮ್ ವಿರೋಧಿ ಗುಂಪೊಂದು ಹುಟ್ಟುವಂತೆ ಮಾಡಿತ್ತು.

1973ರಲ್ಲಿ ನಾಡೋಜ ದೇ. ಜವರೇಗೌಡರು ಮೈಸೂರು ವಿವಿಯ ಕುಲಪತಿಯಾಗಿದ್ದಾಗ ಸೀಟು ಹಂಚಿಕೆಯಲ್ಲಿ ಅಪಾರ ಪ್ರಮಾಣದ ಅಕ್ರಮ ನಡೆದು ದೊಡ್ಡ ಹಗರಣವೇ ಸೃಷ್ಟಿಯಾಗಿತ್ತು. ಅದನ್ನು ಪತ್ತೆ ಮಾಡಿ ಸತತ 40 ದಿನಗಳ ಕಾಲ ಅವಿರತ ಹೋರಾಟ ನಡೆಸಿದ ರಾಮಲಿಂಗಮ್ ಕೊನೆಗೂ ಜಯಶಾಲಿಯಾಗಿದ್ದರು. ಇದೇ ಕಾರಣಕ್ಕೆ ಒಮ್ಮೆ ಅವರು ತರಗತಿಯಲ್ಲಿ ಪಾಠ ಮಾಡುತ್ತಿದ್ದಾಗ ದೇಜಗೌ ಪರವಾಗಿದ್ದ ವಿದ್ಯಾರ್ಥಿ ಗುಂಪೊಂದು ಅವರ ಮೇಲೆ ಹಲ್ಲೆ ಮಾಡಲು ಮುಂದಾಗಿತ್ತು. ಕಿಂಚಿತ್ತೂ ಧೃತಿಗೆಡದ ರಾಮಲಿಂಗಮ್ 'ತಮ್ಮ ಬಳಿ ಬಾಂಬ್ ಇದೆ, ಯಾರಾದರು ಹದ್ದುಮೀರಿ ವರ್ತಿಸಿದರೆ ಸ್ಫೋಟಿಸಿಬಿಡುತ್ತೇನೆ' ಎಂದು ಗುಂಪಿಗೆ ಎದೆಗೊಟ್ಟು ಹಿಮ್ಮೆಟ್ಟಿಸಿದ್ದರು. ಎಂತಹ ಸಂದರ್ಭದಲ್ಲೂ ತಮ್ಮ ಬದ್ಧತೆಯೊಂದಿಗೆ ರಾಜಿ ಮಾಡಿಕೊಳ್ಳದ ನಿಲುವನ್ನು ಕಂಡು ಅವತ್ತು ಅವರ ಸಂಶೋಧನಾ ವಿದ್ಯಾರ್ಥಿನಿಯಾಗಿದ್ದ ಇ. ರತಿರಾವ್ ಪ್ರಯೋಗಾಲಯದಲ್ಲಿದ್ದ ಆಸಿಡ್ ತೋರಿಸಿ ಗುಂಪನ್ನು ಹಿಮ್ಮೆಟ್ಟಿಸಲು ರಾಮಲಿಂಗಮ್‌ಗೆ ನೆರವಾಗಿದ್ದರು. ಅದು 'ವಿವಿ ಆಸಿಡ್ ಪ್ರಕರಣ' ಅಂತ ಈಗಲೂ ಕ್ಯಾಂಪಸ್‌ನಲ್ಲಿ ಅಚ್ಚಳಿಯದೆ ಉಳಿದಿದೆ. ಪ್ರವೇಶಾತಿ ಹಗರಣವಲ್ಲದೆ ಸುಮಾರು 32 ಅಕ್ರಮಗಳನ್ನು ವಿವಿ ಅಂಗಳದಿಂದ ಹೊರಗೆಳೆದು ನಿರಂತರವಾಗಿ ಹೋರಾಡುತ್ತಲೇ ಬಂದಿದ್ದರು.

ಅವರೊಬ್ಬ ನಿಸ್ಪೃಹ ಜೀವಿ. ತಮ್ಮ ಹೋರಾಟದ ಪ್ರಭೆ ತಮಗೊಂದು ವರ್ಚಸ್ಸು ತಂದುಕೊಟ್ಟಿರುವುದು ಗೊತ್ತಿದ್ದರೂ ಅದನ್ನು ಯಾವತ್ತೂ ಸ್ವಂತಕ್ಕೆ ಬಳಸಿಕೊಳ್ಳಲು ಯೋಚಿಸಿದವರೇ ಅಲ್ಲ. ವಿವಿ ರಾಜಕಾರಣದಿಂದಾಗಿ ಒಮ್ಮೆ ಅವರಿಗೆ ವೇತನ ಸ್ಥಗಿತಗೊಂಡಿತ್ತು. ಆಗ ಕೆಲ ಹಿತೈಷಿಗಳು ಸಚಿವರ ಬಳಿ ಸಮಸ್ಯೆ ಹೇಳಿಕೊಂಡರೆ ಪರಿಹಾರ ಸಿಗಬಹುದೆಂಬ ಸಲಹೆ ನೀಡಿದ್ದರು. ತನ್ನನ್ನಷ್ಟೇ ಅಲ್ಲ, ತನ್ನ ಹೋರಾಟದ ಹಾದಿಯನ್ನೂ ಪರಿಶುದ್ಧವಾಗಿಟ್ಟುಕೊಳ್ಳಬೇಕೆಂಬ ನಿಲುವಿನ ಅವರು ಆ ಸಲಹೆಗೆ ಸುತರಾಂ ಒಪ್ಪಿರಲಿಲ್ಲ. ತಮ್ಮ ಬದುಕಿನ ಕೊನೇ ಘಳಿಗೆಯವರೆಗೂ ಅವರು ಸ್ವಂತಕ್ಕೆ ಅಂತ ಮಾಡಿಕೊಂಡದ್ದು ಏನೂ ಇಲ್ಲ. ಕಡೇಪಕ್ಷ ಸ್ವಂತದ್ದೊಂದು ಮನೆಯೂ ಇಲ್ಲದೆ ಬಾಡಿಗೆ ಮನೆಯಲ್ಲೇ ಬದುಕು ಸವೆಸಿದರು. ಅವರ ನಿಸ್ವಾರ್ಥ ಯಾವ ಮಟ್ಟದ್ದೆಂದರೆ ಅವರು ಮೈಸೂರು ವಿವಿ ಸಸ್ಯಶಾಸ್ತ್ರ ವಿಭಾಗಕ್ಕೆ ಬಂದಾಗ ಅಲ್ಲಿ ಮೂಲಸೌಕರ್ಯಗಳೇ ಇರಲಿಲ್ಲ. ಆಗ ರಾಮಲಿಂಗಂ ತಮ್ಮ ಸ್ವಂತ ಹಣದಲ್ಲಿ ಅಗತ್ಯ ಉಪಕರಣವೊಂದನ್ನು ವಿವಿಗೆ ಖರೀದಿಸಿ ನೀಡಿದ್ದರು.

ಜಾತಿವ್ಯವಸ್ಥೆಯನ್ನು ತೊಡೆದುಹಾಕಬೇಕು, ಮೌಢ್ಯಗಳನ್ನು ಬೇರುಸಮೇತ ಕಿತ್ತೊಗೆದು ಜನರಲ್ಲಿ ಜಾಗೃತಿ ಮೂಡಿಸಬೇಕು ಎಂಬ ಕಾರಣಕ್ಕೆ ತಮ್ಮ ವಿದ್ಯಾರ್ಥಿಗಳ ತಂಡ ಕಟ್ಟಿಕೊಂಡು ಹಳ್ಳಿಹಳ್ಳಿಗಳಿಗೆ ಸೈಕಲ್‌ಗಳಲ್ಲಿ ಹೋಗಿ ತಾವೇ ರಚಿಸಿದ 'ಬಡಪಾಯಿ ಮಾದಪ್ಪ' ಮತ್ತಿತರ ಬೀದಿ ನಾಟಕಗಳ ಮುಖೇನ ಅರಿವು ಮೂಡಿಸುತ್ತಿದ್ದುದ್ದು ಉಂಟು. ಅವರ ಹೋರಾಟ, ಆಗ್ರಹಗಳು ಕೇವಲ ಬಾಯಿ ಮಾತಿನವಾಗಿರಲಿಲ್ಲ, ಆಚರಣೆಯ ಮೂಲಕ ಪ್ರೇರೇಪಿಸುವ ಅಂತಃಶಕ್ತಿ ಅವರಲ್ಲಿತ್ತು. ಒಮ್ಮೆ ಗೋಹತ್ಯೆ ನಿಷೇಧ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡಿದ್ದ ಅವರು ಗೋಮಾಂಸದ ಅಡುಗೆ ಮಾಡಿಸಿ ಅಲ್ಲಿದ್ದ ಎಲ್ಲರೊಂದಿಗೆ ಅದನ್ನು ತಾವೂ ತಿಂದಿದ್ದರು.

ಜನಜಾಗೃತಿಯ ಹೋರಾಟಗಳನ್ನು ಹುಟ್ಟುಹಾಕಬೇಕೆಂಬ ಹಂಬಲ ಅವರಿಗಿತ್ತೇ ವಿನಃ ಆ ಹೋರಾಟಗಳ ನೆಪದಲ್ಲಿ ತಾನು ಮುಂಚೂಣಿಗೆ ಬಂದು ನೇತಾರನಾಗುವ ಕುತ್ಸಿತ ಆಸೆ ಅವರಿಗಿರಲಿಲ್ಲ.

ಅವರ ವಿಚಾರವಾದ ಕೇವಲ ವಿವಿ ಕ್ಯಾಂಪಸ್‌ಗೆ ಮಾತ್ರ ಸೀಮಿತವಾದದ್ದಲ್ಲ, ಮೈಸೂರು ಗ್ರಾಹಕ ಪರಿಷತ್ ಮೂಲಕ ತಮ್ಮ ಸಮಾಜಮುಖಿ ಸಂಚಲನವನ್ನು ನಡೆಸುತ್ತಲೇ ಬಂದಿದ್ದರು. ಮೈಸೂರು ಬಳಿಯ ರತ್ನಹಳ್ಳಿಯಲ್ಲಿ ರೇರ್ ಮೆಟಲ್ ಪ್ಲಾಂಟ್ ಸ್ಥಾಪಿಸಲು ಕೇಂದ್ರ ಸರ್ಕಾರ ಉದ್ದೇಶಿಸಿದಾಗ ಅದರಿಂದ ಪರಿಸರ ಮತ್ತು ಜನಜೀವ... ಮೇಲಾಗುವ ದುಷ್ಪರಿಣಾಮಗಳನ್ನು ಮನಗಂಡು ಪ್ರಾಧಿ... ವಿರುದ್ಧ ಪ್ರತಿಭಟನೆಗಿಳಿದ ರಾಮಲಿಂಗಮ್ ಅ... ಹೋರಾಟ ಅದೆಷ್ಟು ಪ್ರಖರವಾಗಿತ್ತೆಂದರೆ ಕೇಂದ್ರ ಸರ್ಕಾ... ಮಧ್ಯಪ್ರವೇಶಿಸಿ ತಜ್ಞರ ಸಮಿತಿಯೊಂದನ್ನು ರಚಿಸಿ ಘ... ಸ್ಥಾಪನೆಯಿಂದ ಜನರಿಗೆ ಅನನುಕೂಲವಾಗದ... ಕಾರ್ಯತಂತ್ರ ರೂಪಿಸಲು ನಿರ್ದೇಶನ ನೀಡಿತ್ತು. ಘಟಕದಿ... ಹೊರಸೂಸುವ ವಿಕಿರಣಗಳ ಅಪಾಯಕಾರಿಯತೆಯ... ಮನಗಂಡಿದ್ದ, ಅದಕ್ಕಿಂತಲೂ ಹೆಚ್ಚಾಗಿ ಸರ್ಕಾ... ಕಣ್ಣೊರೆಸುವ ನೀತಿಗಳ ಟೊಳ್ಳುತನವನ್ನು ಗಂಭೀರ... ಅರ್ಥಮಾಡಿಕೊಂಡಿದ್ದ ರಾಮಲಿಂಗಮ್ ಅಷ್ಟ... ಸುಮ್ಮನಾಗದೆ ತಮ್ಮ ಸ್ವಂತ ಖರ್ಚಿನಲ್ಲಿ ಆ ಘಟ... ಅಕ್ಕಪಕ್ಕದ ಹೊಲಗಳಲ್ಲಿ ಬೆಳೆಯುತ್ತಿದ್ದ ಬೆಳೆಗಳು ಮ... ತರಕಾರಿಗಳನ್ನು ಸಂಗ್ರಹಿಸಿಕೊಂಡು ಮುಂಬೈ ಮ... ಹೈದ್ರಾಬಾದ್‌ನ ಖಾಸಗಿ ಪ್ರಯೋಗಾಲಯಗಳಲ್ಲಿ ಪರಿ... ಒಳಪಡಿಸಿದ್ದರು. ಬೇರೆ ಕಡೆಗಳ ಬೆಳೆಗಳಿಗಿಂತ ಈ ಇಳು... ಗಳ ಗುಣಮಟ್ಟ ಮತ್ತು ಗಾತ್ರ ಗಣನೀಯ ಪ್ರಮಾಣ... ಕ್ಷೀಣಿಸಿರುವುದನ್ನು ವೈಜ್ಞಾನಿಕವಾಗಿ ದೃಢೀಕರಿಸಿಕೊ... ಸರ್ಕಾರದೊಂದಿಗೆ ಮತ್ತೊಂದು ಸುತ್ತಿನ ಸಂಘರ್ಷಕ್ಕಿಳಿದಿ...

ಹೀಗೆ ಯಾವುದೇ ಹೋರಾಟಕ್ಕಿಳಿಯಲಿ ವ್ಯವ... ಮತ್ತು ವೈಜ್ಞಾನಿಕ ರೀತಿಯಲ್ಲೇ ಅವರು ಅದ... ರೂಪಿಸುತ್ತಿದ್ದರು. ತಮ್ಮ ಮೊನಚು ಮಾತು ಮತ್ತು ಪ್ರ... ನಿಲುವುಗಳಿಂದ ಸಿಡಿಯುತ್ತಿದ್ದ ರಾಮಲಿಂಗಮ್‌ರಿಗೆ ದೊ... ಆಘಾತ ತಂದದ್ದು ಅವರ ಮಗ ವೈದ್ಯ ಅಜಯ್... ಅಕಾಲಿಕ ಸಾವು. ಹಾಗಂತ ಅವರೇನು ಖಿನ್ನರ... ಸಾರ್ವಜನಿಕ ಜೀವನದಿಂದ ವಿಮುಖರಾಗಲಿಲ್ಲ. ಅ... ಹೋರಾಟಗಳಲ್ಲಿದ್ದ ಈ ಮೊದಲಿನ ತೀಕ್ಷ್ಣತೆಗ... ಉಗ್ರತೆಗಳು ಕೊಂಚ ಕಡಿಮೆಯಾಗಿ ಆ ಹೋರಾಟಗ... ಅಭಿವೃದ್ಧಿ, ಪರಿಸರ ಕಾಳಜಿಗಳು ಹೆಚ್ಚಾಗಿ ಆಕ್ರಮಿಸಿಕೊ...ದ್ದವು. 1997ರಲ್ಲಿ ನಿವೃತ್ತರಾದ ನಂತರ ತಮ್ಮ... ಸಂಪೂರ್ಣವಾಗಿ ಸಮಾಜಮುಖಿ ಕೆಲಸಗಳಲ್ಲಿ ತೊಡ...ಕೊಂಡ ಅವರು ಮೈಸೂರಿನ ಮರಗಳ ರಕ್ಷಣೆಗೆ ಮುಂದಾ...ದ್ದರು. ಸಸ್ಯ ವಿಜ್ಞಾನಿಯಾಗಿದ್ದ ಅವರು ಕೆಲ ಮರಗಳ... ಪಾರಂಪರಿಕ ಮರಗಳೆಂದು ಗುರುತಿಸಿ ಅವುಗಳನ್ನು... ವಿಸ್ತರಣೆಯ ನೆಪದಲ್ಲಿ ಕಡಿದುಹಾಕದಂತೆ ರಕ್ಷ... ಒದಗಿಸಿದ್ದರು.

ಕುಡಿಯುವ ನೀರಿನ ಶುದ್ಧೀಕರಣದ ಸಲುವಾಗಿ ಅ... ನಡೆಸಿದ ಆಂದೋಲನ ಮೈಸೂರಿನ ಮಟ್ಟಿಗೆ ... ಸ್ಮರಣೀಯ. ತಮ್ಮ ಮಗ 'ಅಜಯ್ ಸ್ಮಾರಕ ಫೌಂಡೇಶ... ಮೂಲಕ ಹಳ್ಳಿಹಳ್ಳಿ ಸುತ್ತಿ ಜನರಲ್ಲಿ ನೈರ್ಮಲ್ಯತೆ... ಅರಿವು ಮೂಡಿಸಲು ಇಳಿ ವಯಸ್ಸಿನಲ್ಲೂ ಪಾದರಸದ... ಓಡಾಡಿದ್ದು ಮೈಸೂರಿಗರ ನೆನಪುಗಳಿಂದ ಇವತ್ತಿ... ಮಾಸಿಲ್ಲ. ಅವರ ಆ ಅಭಿಯಾನದಿಂದಾಗಿ ಮೈಸೂ... ನಗರ ಪಾಲಿಕೆ ನಿವಾರಣೋಪಾಯ ಕ್ರಮಗಳ... ಹಮ್ಮಿಕೊಂಡಿತ್ತು. ಆ ಅಭಿಯಾನದಲ್ಲಿ ತ... ಪಾಲ್ಗೊಳ್ಳುವಿಕೆಯನ್ನು ಕೇವಲ ಹೋರಾಟ ಅಥ... ಜನಜಾಗೃತಿಗೆ ಮಾತ್ರ ಸೀಮಿತವಾಗಿಸದೆ ತಮ್ಮೆಲ್ಲಾ ವೈಜ್ಞಾ...

ಮುಂದೆ ಕಲ್ಲುಮಣ್ಣಿನ ಮೇಲೂ ಮೂತ್ರ ಮಾಡುವಂತಿಲ್ಲ

"ನೀವೆಲ್ಲರೂ ಸಂಘದ ಶಿಸ್ತಿನಿಂದಿರಬೇಕು. ಅಪರಿಚಿತರ ಜೊತೆ ಅನವಶ್ಯಕವಾಗಿ ಹರಟಬಾರದು. ಅದಕ್ಕಿಂತ ಮುಖ್ಯವಾಗಿ ಅವರು ಹೇಳುವ ಮಾತುಗಳನ್ನು ಕೇಳಿಸಿಕೊಳ್ಳಬಾರದು. ಏಕೆಂದರೆ ಅವರ ಮಾನವೀಯ ಮಾತುಗಳಿಗೆ ಮತ್ತು ಸೆಕ್ಯುಲರ್ ಉಪದೇಶಗಳಿಗೆ ಮನಸೋತರೆ ನಮ್ಮ ಅಜೆಂಡಾಗಳ ಕತೆ ಮುಗಿದಂತೆಯೇ. ಆದ್ದರಿಂದ ಅವರ ಮಾತಿಗೆ ಬದಲು ನಮ್ಮ ಕಾರ್ಯಕ್ರಮದ ವಿಷಯ ಹೇಳಿ ಜಾಗ ಖಾಲಿ ಮಾಡಬೇಕು. ಅವರು ಕೊಟ್ಟ ಅರ್ಜಿಯನ್ನು ಪೂರ್ಣ ಓದಬೇಕು. ಅವರ ಸರಿಗಳನ್ನು ನಮ್ಮ ಜ್ಞಾನದ ನೆಲೆಯಿಂದ ತಿದ್ದಬೇಕು. ಅದರಲ್ಲೂ ಸರ್ಕಾರದ ಕಡತಗಳನ್ನು ಒಂದಕ್ಷರವನ್ನೂ ಬಿಡದಂತೆ ಓದಬೇಕು. ನಂತರ ಸಹಿ ಮಾಡಬೇಕು. ಹೀಗೆ ಮಾಡದೇಹೋದರೆ ಹಿಂದಿನ ಸರಕಾರದಂತೆ ನಾವೂ ಪೇಚಿಗೆ ಸಿಕ್ಕಿ ಫಜೀತಿ ಪಡಬೇಕಾಗುತ್ತದೆ. ನಂಬಿಕೆಯಿಂದ ಅನಾಹುತಗಳೇ ಜಾಸ್ತಿ. ಅದರಲ್ಲೂ ನಮ್ಮವರಲ್ಲದವರನ್ನು ನಂಬಲೇಬಾರದು. ಅಪರಿಚಿತರೊಡನೆ ಮೊಬೈಲ್‌ಗಳಲ್ಲಿ ಹೆಚ್ಚು ಹರಟಬಾರದು. ಸಾಧ್ಯವಾದರೆ ಮನೆಗೆ ಕರೆಸಿ ಆತಿಥ್ಯ ಮಾಡಿ ಕಳುಹಿಸಿ ಕೊಡಿ. ಅಲ್ಲೇ ಉಳಿಯಲು ಅವಕಾಶ ಮಾಡಿಕೊಡಬೇಡಿ. ನಮ್ಮ ವಿರೋಧಿಗಳು ಸದಾ ನಮ್ಮ ಚಲನವಲನಗಳನ್ನು ಗಮನಿಸುವುದರಿಂದ ಸದಾ ಎಚ್ಚರಿಕೆಯಾಗಿರಬೇಕು!"

ಮೇಲಿನ ಉಪದೇಶವನ್ನು ಭಾರತದ ಪ್ರಧಾನಮಂತ್ರಿ ತನ್ನ ಸಚಿವಸಂಪುಟಕ್ಕೆ ಭೋದಿಸಿದನಂತಲ್ಲಾ, ಆತ ಹೀಗೆ ಈ ಕಾಲದ ಎಂಟನೇ ತರಗತಿ ಹುಡುಗರಿಗೆ ಹೇಳಿದಂತೆ ಭೋದಿಸಬೇಕಾದರೆ, ಆ ಬೃಹಸ್ಪತಿಗಳೆಂತವರಿರಬೇಕು? ಅವರನ್ನು ಈತ ಹೇಗೆ ಗ್ರಹಿಸಿರಬೇಕು? ಎಂದು ನೆಹರು ಮತ್ತು ಶಾಸ್ತ್ರಿ ಕಾಲದ ಮಂತ್ರಿಗಳನ್ನು ಮತ್ತು ಅವರ ವಿದ್ವತ್ತನ್ನು ನೆನೆಸಿಕೊಂಡು ಎಸ್ಸೆಂ ಕೃಷ್ಣನ ಕಾಲದ ಕಾಂಗ್ರೆಸ್ಸಿಗರು ಬೊಚ್ಚುಬಾಯಿ ಮುಚ್ಚಿಕೊಂಡು ನಕ್ಕರಂತಲ್ಲಾ, ಥೂತ್ತೇರಿ!

****

ಎಸ್ಸೆಂ ಕೃಷ್ಣ ಅಂದಕೂಡಲೇ ನೆನಪಾಯ್ತು, ಯಾವ ಚಳವಳಿಯನ್ನೂ ಮಾಡದೆ, ಯಾವ ಹೋರಾಟದಲ್ಲೂ ಭಾಗವಹಿಸದೆ, ಮಂಡ್ಯ ಜಿಲ್ಲೆಯ ಯಾವ ಸಾಮಾನ್ಯನನ್ನೂ ಮನೆ ಹತ್ತಿರ ಸೇರಿಸದೆ, ಕಾಂಗ್ರೆಸ್ಸಿನ ಹಸ್ತದ ರೇಖೆಯ ದೆಸೆಯಿಂದಲೇ ಗೆಲ್ಲುತ್ತ ಬಂದು ರಾಜ್ಯದಲ್ಲಿ ಮಂತ್ರಿಯಾಗಿ, ಕೇಂದ್ರದಲ್ಲಿ ಮಂತ್ರಿಯಾಗಿ, ಮುಖ್ಯಮಂತ್ರಿಯೂ ಆಗಿ ಸಾಲದ್ದಕ್ಕೆ, ವಿದೇಶಾಂಗ ಸಚಿವರಾಗಿ ಶ್ರವಣ ಸಮಸ್ಯೆಯ ಎಡವಟ್ಟಿನಿಂದ ನೇರ ಊರಿಗೆ ಬಂದ ಕೃಷ್ಣ ಮತ್ತೆ ರಾಜ್ಯಸಭೆಗೆ ಯಯಾತಿ ವೇಷದಲ್ಲಿ ಹೊರಟಿದ್ದರಂತಲ್ಲಾ.

ಆದರೇನು ಯಯಾತಿಯ ಮುಪ್ಪನ್ನು ಸ್ವೀಕರಿಸಿದ ಪುರುವಿನಂತೆ ಮಾತನಾಡುತ್ತಿರುವ ಕೃಷ್ಣ ಭೈರೇಗೌಡ "ಎಸ್ಸೆಂಕೆಯವರಿಗೆ ಈಗ ಎಂಭತ್ತುಮೂರು. ರಾಜ್ಯಸಭೆ ಸದಸ್ಯತ್ವದ ಅವಧಿ ಮುಗಿಯುವಾಗ ಎಂಭತ್ತೊಂಭತ್ತು ವರ್ಷಗಳಾಗುತ್ತವೆ. ಅಷ್ಟರಲ್ಲಿ ಅವರ ಶ್ರವಣದ ಜೊತೆಗೆ ಇನ್ನೂ ಹಲವು ಅಂಗಗಳು ಕೈಕೊಡಬಹುದು. ಈಗಾಗಲೇ ವಯಸ್ಸಾದವರ ದೆಸೆಯಿಂದ ರೋಗಗ್ರಸ್ತವಾಗಿರುವ ಕಾಂಗ್ರೆಸ್ಸಿಗೆ ಹೊಸ ಚೈತನ್ಯ ತುಂಬಬೇಕಾದರೆ ಕೃಷ್ಣರಿಗೆ ಸಾಕಷ್ಟು ವಿಶ್ರಾಂತಿ ಕೊಡುವ ಅಗತ್ಯವಿದೆ" ಎಂದು ದೂರು ಹೇಳಿದರಂತಲ್ಲಾ.


ಈ ದೂರನ್ನು ಕೇಳಿಸಿಕೊಂಡ ಕೃಷ್ಣನಂತಹ ಇನ್ನೊಬ್ಬ ರಾಜಕಾರಣಿಯಾದ ಎಂ.ವಿ. ರಾಜಶೇಖರನ್ ಎಂಬ ಕಾಂಗ್ರೆಸ್ ಪಾಲಿಗೆ ದಿವಂಗತರಂತಿರುವ ಆಸಾಮಿ ತಮ್ಮ ಈ ವಯಸ್ಸಿನಲ್ಲಿ ಬೀದಿಗೆ ಬಂದು ಕೃಷ್ಣ ಭೈರೇಗೌಡನ ವಿರುದ್ಧ ಚಾಡಿ ಹೇಳಿದರಂತಲ್ಲಾ. ಚಾಡಿ ಕಿವಿಗೆ ಬಿದ್ದ ತಕ್ಷಣ ಕೃಷ್ಣ ಅಭಿಮಾನಿ... ಸದಾಶಿವನಗರದ ಕೃಷ್ಣ ಕುಟೀರಕ್ಕೆ ತೆರಳಿ ಭವಿಷ್ಯದಲ್ಲೊಮ್ಮೆ ನಡೆಸಬಹು... ಗುಣಗಾನವನ್ನು ಈಗಲೇ ಆರಂಭಿಸಿ, ದುಃಖತಪ್ತ ಮುಖಭಾವದಲ್ಲಿ ... ಖಾಲಿ ಮಾಡುತ್ತಿರುವಾಗ, ಎಂ.ವಿ. ರಾಜಶೇಖರನ್ ಮಾತ್ರ ಬಂದ ... ಕಿವಿಯಲ್ಲಿ ಏನೇನೊ ಗೊಣಗುತ್ತಿದ್ದರಂತಲ್ಲಾ, ಥೂತ್ತೇರಿ!!

****

"ಕೇಂದ್ರದಲ್ಲೊಂದು ಚಿಡ್ಡಿ ಸರ್ಕಾರವಿರಬೇಕಾದರೆ ರಾಜ್ಯದಲ್ಲಿ ಪಂಚೆ ಅ... ಕಂಬಳಿ ಸರ್ಕಾರವಿರುವುದು ಯಾವ ನ್ಯಾಯ? ಇದಕ್ಕೆ ಏನಾದರೂ ಮಾಡಬೇ... ಎಂದು ಹಗಲೂರಾತ್ರಿ ಚಿಂತಿಸುತ್ತಿರುವ ವಿಕೃತ ಭಟ್ಟನ ಗುಂಪು, ಸಕಾ... ಸಣ್ಣಪುಟ್ಟ ಯಡವಟ್ಟುಗಳನ್ನೆಲ್ಲಾ ಆಯ್ದುಕೊಂಡು ಹ್ಯಾಂಡ್‌ಬಿಲ್ ... ಹಂಚುತ್ತಿದೆಯಂತಲ್ಲಾ. ಸದರಿ ಹ್ಯಾಂಡ್‌ಬಿಲ್ಲನ್ನು ನೂರು ಪ್ರತಿ ... ಹಂಚಿದರೆ ನೂರು ಬ್ರಾಹ್ಮಣರಿಗೆ ಊಟ ಹಾಕಿದಷ್ಟು ಪುಣ್ಯ ಬರು... ನೂರು ಗೋವಿನ ಕ್ಷೀರ ಸೇವಿಸಿದಷ್ಟು ಶಕ್ತಿ ಬರುತ್ತದೆ, ನೂರು ... ಕಾಲ್ನಡಿಗೆಯಲ್ಲಿ ಕಾಶಿಗೆ ಹೋಗಿ ಬಂದ ಪುಣ್ಯ ಲಭಿಸುತ್ತದೆ... ಬೊಬ್ಬೆಯಿಡುವ ಭಟ್ಟ ಪಂಕ್ತಿಭೇದ ಸರಿಯೋ ತಪ್ಪೋ ಎಂಬ ಹ್ಯಾಂಡ್‌ಬಿ... ಈವರೆಗೂ ಪ್ರಿಂಟಾಕಿಲ್ಲವಂತಲ್ಲಾ. ಹೋಗಲಿ ಮಡೆ ಸ್ನಾನದಿಂದಾ... ಮಂದಮತಿತ್ವದ ಬಗ್ಗೆಯೂ ಚಕಾರವೆತ್ತಿಲ್ಲವಂತಲ್ಲಾ. ಆದರೆ... ಅನಂತಮೂರ್ತಿಗಳು ಹರೆಯದಲ್ಲಿ ಭೂತದ ಕಲ್ಲಿಗೆ ಮೂತ್ರಬಿಟ್ಟ ಘಟ... ಬಗ್ಗೆ ಭಟ್ಟನ ಗುಂಪು ಕೆರಳಿದೆಯಂತಲ್ಲಾ. ಈ ಗುಂಪಿನ ಪ್ರಕಾರ ... ದೇಶದ ಮೂಢಜನರಿಗೆ ದೇವರನ್ನು ತೋರಿಸಿಕೊಟ್ಟವರು ನಾವು. ಅ... ಕೂಡ ವಿಶ್ವಕರ್ಮರನ್ನು ಹಿಡಿದು ಅವರಿಂದ ಕಲ್ಲಿನ ಮೂರ್ತಿ ... ಪ್ರತಿಸ್ಥಾಪಿಸಿ, ಅದಕ್ಕೆ ಜೀವಕಳೆ ತುಂಬಿ, ಜನಿವಾರ ಹಾಕಿ, ನಿನ್ನ ದೇ... ಇದೇ ಅದ್ಕೆ ಬೀಳು ಹರಕೆಹೊರು, ಪ್ರದಕ್ಷಿಣೆ ಹಾಕು, ನೆಮ್ಮದಿಂ... ಬದುಕು, ಎಂದು ಹೇಳಿಕೊಟ್ಟವರು ನಾವು. ನಮ್ಮ ದೈವಕೆ... ಅನಂತಮೂರ್ತಿಗಳು ಮೂತ್ರ ಬಿಟ್ಟರಂತಲ್ಲಾ, ಇಂತಹ ಮೂರ್ತಿ ಭಂ... ಸುಮ್ಮನೆ ಬಿಡುವುದಿಲ್ಲ" ಎಂದು ಮತ್ತೆ ಗಂಟುಬಿದ್ದವಂತಲ್ಲಾ, ಥೂತ್ತೇ...

****

ನಮ್ಮ ಅನಂತಮೂರ್ತಿಯವರು ಹರೆಯದ ಉಮೇದಿನಲ್ಲಿ ದೂರದಿಂದ ಭೂತದ ಕಲ್ಲಿಗೆ ಮೂತ್ರ ಸಿಡಿಸಿದ್ದು ಆ ಕಾರಣಕ್ಕೆ



...ವನ್ನು ಬಳಸಿ ನೀರನ್ನು ಸುಲಭವಾಗಿ ಶುದ್ಧೀಕರಿಸುವ ...ನ್-ಪ್ಲೇಟ್ ಮೆಥೆಡ್ ಮತ್ತು ಕ್ಲೋರಿನೇಷನ್ ಕಿಟ್‌ಗಳನ್ನು ...ಷ್ಕರಿಸಿದ್ದು ಅವರ ನೈಜ ಕಾಳಜಿಗೆ ಸಾಕ್ಷಿ. ಇಂತಹ ...ಜೆಯನ್ನು ಅವರು ಕೊನೆಯವರೆಗೂ ಕಾಯ್ದುಕೊಂಡು ...ದ್ದರು. ಅವರು ಅನಾರೋಗ್ಯಕ್ಕೆ ತುತ್ತಾದ ನಂತರವೂ ...08ರಲ್ಲಿ ಮೈಸೂರಿನಲ್ಲಿ ನಡೆಯುತ್ತಿದ್ದ ಕಾಫಿ ...ಬೆರಕೆಯನ್ನು ಪತ್ತೆಹಚ್ಚಿ ನೂರಾರು ಕೆಜಿ ಕಲಬೆರಕೆ ...ಪುಡಿಯನ್ನು ಸಾರ್ವಜನಿಕವಾಗಿ ಸುಟ್ಟು ಹಾಕಿ ಸರ್ಕಾರ ...ತ್ತು ಜನರ ಗಮನ ಸೆಳೆದಿದ್ದರು. ಆಗ ಆಹಾರ ಇಲಾಖೆಯ ...ಕಾರಿಗಳು ಅನಿವಾರ್ಯವಾಗಿ ಕಲಬೆರಕೆ ಮಾಡುತ್ತಿದ್ದ ...ಡಿ ಮೇಲೆ ದಾಳಿ ಮಾಡಿ ವಶಕ್ಕೆ ಪಡೆದುಕೊಂಡಿದ್ದರು. ...ಹೋರಾಟದ ಯಾವುದೇ ಒಂದು ಅವಕಾಶವನ್ನು ...ರು ಕೈಚೆಲ್ಲಿದವರಲ್ಲ. ಅಸಲಿಗೆ ರಾಮಲಿಂಗಮ್ ...ದಲು ಮೈಸೂರಿಗೆ ಬಂದಾಗ ಅವರಿಗೆ ಕನ್ನಡವೇ ...ತ್ತಿರಲಿಲ್ಲ. ಆದರೆ ಜನರಲ್ಲಿ ಅರಿವು ಬಿತ್ತಿ ಹೋರಾಟದ ... ತುಂಬಬೇಕೆನ್ನುವ ತುಡಿತದಿಂದಾಗಿ ಅವರು ಕನ್ನಡವನ್ನು ...ದ್ದರು. ಮುಂದೆ ಕನ್ನಡದಲ್ಲಿ ಸಾಹಿತ್ಯ ರಚನೆ, ಬೀದಿ ...ಕಗಳ ರಚನೆ, ಜನರಿಗೆ ವೈಜ್ಞಾನಿಕ ಪ್ರಾತ್ಯಕ್ಷಿಕೆಗಳನ್ನು ...ಯುವ ಮಟ್ಟಕ್ಕೆ ಅವರ ಕನ್ನಡ ಜ್ಞಾನ ವಿಕಸನಗೊಂಡಿತ್ತು.

... ಚಿಂತನೆಗಳ ಅಭಿವ್ಯಕ್ತಿಗೆಂದು ತಾವೇ ರಚಿಸಿದ ...ಗಳನ್ನೆಲ್ಲ ಒಟ್ಟುಗೂಡಿಸಿ 'ಗಂಡು ಸೂಳೆಗಳು' ಎಂಬ ...' ಸಂಕಲನವನ್ನೂ ಅವರು ಹೊರತಂದಿದ್ದರು. ...ರ್ಕೋಸ್ಕರ ಅಧಿಕಾರ ಮತ್ತು ಆಡಳಿತಶಾಹಿಗಳ ...ಮಗಿರಿ ಮಾಡುವಂತವರನ್ನು ತಮ್ಮ ಕವನಗಳಲ್ಲಿ ...ು ಸೂಳೆಯರು ಅಂತ ರಾಮಲಿಂಗಮ್ ಕರೆದಿದ್ದರು. ...ಸಾಮಾನ್ಯವಾಗಿ ಮನುಷ್ಯ ಬದುಕಿರುವವರೆಗೆ ತನ್ನ ...ನೆ ಮತ್ತು ಬದ್ಧತೆಗಳಿಗೆ ಧ್ವನಿಯಾಗಬಲ್ಲ, ಆದರೆ ... ನಂತರವೂ ಅವುಗಳನ್ನು ಧ್ವನಿಸುವವರು ತುಂಬಾ ...ು. ಅಂತಹ ಕಡಿಮೆಯವರಲ್ಲಿ ರಾಮಲಿಂಗಮ್ ಕೂಡಾ ...ು. ತಾವು ಸತ್ತ ನಂತರ ದೇಹವನ್ನು ಸುಡುವ ಅಥವಾ ...ಸುವ ಮೂಲಕ ಅದನ್ನು ಅಪ್ರಯೋಜಕಗೊಳಿಸದೆ ...ನ್ನು ವೈದ್ಯಾಲಯಕ್ಕೆ ದಾನ ಮಾಡುವಂತೆ ಮನೆಯವರಿಗೆ ...ದ್ದರು. ಅದರಂತೆಯೇ ಜೆಎಸ್‌ಎಸ್ ವೈದ್ಯಕೀಯ ...ವಿದ್ಯಾಲಯದ ಅನಾಟಮಿ ವಿಭಾಗಕ್ಕೆ ಅವರ ...ವನ್ನು ದಾನ ಮಾಡಲಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳ ...ಕಲಿಕೆಗೆ ಅವರ ದೇಹ ಸದ್ಬಳಕೆಯಾಗಲಿದೆ. ಹೀಗೆ ... ಬದುಕಿನ ಒಂದೊಂದು ಘಳಿಗೆಯನ್ನು ಮಾತ್ರವಲ್ಲ, ... ದೇಹದ ಒಂದೊಂದು ಕಣವನ್ನೂ ತಾನು ನಂಬಿದ್ದ ...ತ, ಚಿಂತನೆಗಳಿಗೋಸ್ಕರ ಮುಡಿಪಿಟ್ಟ ರಾಮಲಿಂಗಮ್ ...ಕೆ ಪ್ರಗತಿಪರ ವಲಯದಲ್ಲಿ ದೊಡ್ಡದೊಂದು ನಿರ್ವಾತ ...ಸಿರುವುದಂತೂ ಸತ್ಯ. ಆದರೆ ನಿರ್ವಾತವನ್ನು ...ವಾಗಿಸುವ ಹೋರಾಟದ ದಾರಿಯನ್ನು ಅವರು ತಮ್ಮ ...ಕಿನುದ್ದಕ್ಕೂ ತೋರಿಸಿಕೊಟ್ಟು ಹೋಗಿದ್ದಾರೆ. ಅದನ್ನು ...ವಾಗಿಸುವುದೇ ಈ ಸಮಾಜ ಅವರಿಗೆ ಸಲ್ಲಿಸಬಹುದಾದ ...ವಾದ ಶ್ರದ್ಧಾಂಜಲಿಯಾದೀತು.....

● ಗಿರೀಶ್ ತಾಳಿಕಟ್ಟೆ

ಥೂತ್ತೇರಿ


▸ ಯಾಹೂ

...ಲಾಗಿ ನಿಜವಾಗಲೂ ಹಾಸಿಗೆಯಲ್ಲೇ ಮೂತ್ರ ...ಸಿಕೊಂಡದ್ದು ಹಳೆಯ ಕತೆ. ಯಾವಾಗ ನೆನೆಸಿಕೊಂಡರೂ ...ಮುಕ್ಕಿಸುವ ಕತೆ. ಆ ಕತೆಯನ್ನು ನಮ್ಮ ಕನ್ನಡದ ...ಮಂತ ಸಂಶೋಧಕರಾದ ಎಂ.ಎಂ. ಕಲಬುರ್ಗಿಯವರು ... ನೆನೆಸಿಕೊಂಡು ಹಾಸ್ಯದ ದಾಟಿಯಲ್ಲಿ ಹೇಳಿದ್ದರಲ್ಲಿ ...ಡಿತನವಿಲ್ಲ ಎಂದು ಹೇಗೆ ಭಾವಿಸುವುದು? ಏಕೆಂದರೆ ...ಶ್ರೀ ಪ್ರಶಸ್ತಿ ಅನಂತಮೂರ್ತಿಯವರಿಗೆ ಅನೌನ್ಸ್ ...ಗಿಸಿಂದಲೂ ಅಪಸ್ವರವೆತ್ತಿ, ಕನ್ನಡದ ನಿಜವಾದ ...ಸಿಂದ ವಿವೇಕ ಹೇಳಿಸಿಕೊಂಡ ಕಲಬುರ್ಗಿಯವರು ... ಅನಂತಮೂರ್ತಿಯವರ ಪ್ರಸ್ತಾಪ ಮಾಡಿ ಚೆಡ್ಡಿಗಳ ... ಪ್ರತಿಭಟನೆಯ ಬಾವುಟ ಕೊಡಿಸಿದ್ದಾರಲ್ಲಾ,

...ದಕ್ಕೆ ಪೂರಕವಾಗಿ ಕೇಂದ್ರದಲ್ಲಿ ಅಧಿಕಾರ ಸೂತ್ರಹಿಡಿದ ... ಗಿರಾಕಿಗಳು ದೇಶದ ಎಲ್ಲ ಸಮಸ್ಯೆಗಳನ್ನು ಬದಿಗೊತ್ತಿ ...ಗೆ ಗಂಟುಬಿದ್ದಿವೆಯಂತಲ್ಲಾ, ಅವುಗಳ ಠರಾವಿನ ಪ್ರಕಾರ ...ಗೆ ಉಗಿಯುವಂತಿಲ್ಲ, ಬೇಕಾದರೆ ಬಾಯಿಮುಕ್ಕಳಿಸ ...ದು. ಶಿಕ ಕೊಳೆಯುವಂತಿಲ್ಲ, ಬೇಕಾದರೆ ಮುಳುಗು ...ಬಹುದು. ನದಿ ದಡದಲ್ಲಿ ಮಲಮೂತ್ರ ...ಸಬಾರದು, ಬೇಕಾದರೆ ಮುಳುಗು ಹಾಕಿದಾಗಲೇ ...ಲ್ಲಾ ಮುಗಿಸಿ ಮೇಲೇಳಬಹುದು..... ಇತ್ಯಾದಿ. ಜೊತೆಗೆ ...ತಮೂರ್ತಿ ಕೃತ್ಯಕ್ಕೆ ಉತ್ತರವಾಗಿ ಇನ್ನು ಮುಂದೆ ...ೂ ಕಲ್ಲಿನ ಮೇಲೆ ಮೂತ್ರ ಮಾಡಬಾರದು. ...ಯನ್ನೂ ನಮ್ಮ ಮಾತೆಯಾದ್ದರಿಂದ ಭೂಮಿಯ ...ೂ ಮಾಡುವಂತಿಲ್ಲ, ಖಾಲಿ ಬಿಸ್ಲೇರಿ ಬಾಟಲಿಯಲ್ಲಿ ...ಸಿಬ್ಬಿಡಿ ಸಂಘದ ಕಾರ್ಯಕರ್ತರು ತೆಗೆದುಕೊಂಡು ...ಬೇಕಾದ್ರೆ ಎಂದರೂ ಅಚ್ಚರಿಯಿಲ್ಲವಲ್ಲಾ, ಥೂತ್ತೇರಿ !!

ಪಶ್ಚಿಮ ಪದವೀಧರರ ಕ್ಷೇತ್ರ:


ಚೆಡ್ಡಿಗಳ ಚಮತ್ಕಾರ V/s ಹೊರಟ್ಟಿಗಳ ಹುಮ್ಮಸ್ಸು




ಹೆಚ್.ಕೆ.ಪಾಟೀಲ್



ಎಸ್.ವಿ.ಸಂಕನೂರ್



ಬಸವರಾಜ್ ಹೊರಟ್ಟಿ



ವಸಂತ್ ಹೊರಟ್ಟಿ

ಪಶ್ಚಿಮ ಪದವೀಧರರ ಕ್ಷೇತ್ರದಲ್ಲಿ ವಿಧಾನ ಪರಿಷತ್ ಸದಸ್ಯತ್ವಕ್ಕಾಗಿ ನಡೆಯುತ್ತಿರುವ ಕದನ ಕ್ಲೈಮ್ಯಾಕ್ಸ್ ತಲುಪುತ್ತಿದೆ! ಚುನಾವಣಾ ತಂತ್ರಗಾರಿಕೆ ಎಂಬುದು ಲಿಂಗಾಯತರ ಗ್ಯಾಂಗ್ ವಾರ್ ಸುತ್ತಲೇ ಹೆಣಿಕೆಯಾಗಿದೆ. ಚೆಡ್ಡಿ ಪರಿವಾರ ಮೋದಿ ಮೇನಿಯಾದಿಂದ ಪದವೀಧರ ಮತದಾರರ ಬ್ರೈನ್‌ವಾಶ್‌ಗೆ ಹವಣಿಸುತ್ತಿದೆ. ಇದೇ ಕ್ಷೇತ್ರದ ಶಿಕ್ಷಕರ ಎಮ್ಮೆಲ್ಸಿ ಬಸವರಾಜ್ ಹೊರಟ್ಟಿಯ ಮೂರು ದಶಕದ ಮಹಿಮೆಯೇ ನೆಲೆಯಿಲ್ಲದ ಜೆಡಿಎಸ್‌ಗೆ ಆಧಾರವಾಗಿದೆ. ಆಡಳಿತಾರೂಢ ಕಾಂಗ್ರೆಸ್‌ಗೆ ಮಂತ್ರಿ- ಶಾಸಕರ ಬಲವೇ ಭಾರವಾಗಿದೆ.

ಧಾರವಾಡ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ ವ್ಯಾಪ್ತಿಯ ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ನೇರ ಹಣಾಹಣಿ ಇರುವುದು ಬಿಜೆಪಿಯ ಎಸ್.ವಿ. ಸಂಕನೂರ್ ಮತ್ತು ಜೆಡಿಎಸ್‌ನ ವಸಂತ ಹೊರಟ್ಟಿ ನಡುವೆ. ಕಾಂಗ್ರೆಸ್‌ನ ಪಿ.ಎಚ್. ನೀರಲಕೇರಿ ಈ ವೃದ್ಧ- ಯುವಕನ ಕಾಳಗದಲ್ಲಿ ಒಂಥರಾ ರೆಫ್ರಿಯಂತೆ ಕಾಣಿಸುತ್ತಿದ್ದಾರೆ. ಕಾಂಗ್ರೆಸ್‌ನ ನಾಲ್ಕು ಜಿಲ್ಲೆಯ ಮಂತ್ರಿ- ಶಾಸಕರು ತಮ್ಮ ಅಭ್ಯರ್ಥಿ ಗೆಲ್ಲುವುದಿಲ್ಲ ಎಂಬ ತೀರ್ಮಾನಕ್ಕೆ ಈಗಾಗಲೇ ಬಂದಂತೆ ವರ್ತಿಸುತ್ತಿದ್ದಾರೆ. ಕಳೆದ ಎಲೆಕ್ಷನ್‌ವರೆಗೂ ಕಾಂಗ್ರೆಸ್‌ನ ಭದ್ರ ಕೋಟೆಯಾಗಿದ್ದ ಈ ಕ್ಷೇತ್ರದಲ್ಲೀಗ 'ದೊಡ್ಡ ಮಂತ್ರಿ' ಎಚ್.ಕೆ. ಪಾಟೀಲ್ ಸಾಹೇಬರಿಗೇ ನೆಲೆ-ಬೆಲೆ ಇಲ್ಲದಂತಾಗಿದೆ.

ಪಾಟೀಲ್ ಕಳೆದ ಬಾರಿ ಬಿಜೆಪಿಯ ಮೋಹನ ಲಿಂಬಿಕಾಯಿ ಎಂಬ ಅನಾಮಧೇಯನ ಎದುರು ಎಡವಿ ಬಿದ್ದಾಗ ಆತನ ಮೂರು ದಶಕದ ಪರಿಷತ್ ಪರಾಕ್ರಮಕ್ಕೆ ಪೂರ್ಣ ವಿರಾಮ ಬಿದ್ದಿತ್ತು. ವೀರಶೈವರು ಅಂದಿನ 'ಲಿಂಗಾಯತ ಮುಖ್ಯಮಂತ್ರಿ' ಯಡ್ಡಿಯ ಜಾತಿಜಾಲದಲ್ಲಿ ಸಿಕ್ಕಿ ಬಿದ್ದಿದ್ದು ಪಾಟೀಲರಿಗೆ ಅನಿರೀಕ್ಷಿತ ಆಘಾತ ನೀಡಿತ್ತು. ಗೆದ್ದ ಲಿಂಬಿಕಾಯಿಗೂ ಸಿಕ್ಕಿದ ಅಚಾನಕ್ ಗೆಲುವು ಅರಗಿಸಿಕೊಳ್ಳಲಾಗಲೇ ಇಲ್ಲ. ತಾನು ಪದವೀಧರ ಎಮ್ಮೆಲ್ಸಿ ಎಂಬುದೇ ಆತನಿಗೆ ಅರ್ಥವಾಗದೇ ಯಡ್ಡಿಯ ಎಮ್ಮೆಲ್ಸಿ ಎಂಬಂತಾಡ ತೊಡಗಿದ್ದ. ಆತನ ಎಮ್ಮೆಲ್ಸಿಗಿರಿಯೇ ಕ್ಷೇತ್ರಕ್ಕೊಂದು ಶಾಪದಂತಾಗಿತ್ತು. ಇಂತಿಪ್ಪ ಲಿಂಬಿಕಾಯಿ ಯಡ್ಡಿ ಕೆಜೆಪಿ ಕಟ್ಟಿದ್ದಾಗ ಎಮ್ಮೆಲ್ಸಿಗಿರಿಗೆ ರಾಜಿನಾಮೆ ಬಿಸಾಕಿ ಹುಬ್ಬಳ್ಳಿಯಿಂದ ಅಸೆಂಬ್ಲಿಗೆ ಸ್ಪರ್ಧಿಸಿ ಮಕಾಡೆ ಬಿದ್ದುಬಿಟ್ಟ.

ಯಡ್ಡಿ ಗತಿಯಿಲ್ಲದೆ ಬಿಜೆಪಿ ಸೇರಿದಾಗ ಆತನ ಹಿಂಬಾಲಿಸಿದ ಈ ಗುಲಾಮ ಅಂದಿನಿಂದಲೇ ಮತ್ತೆ ಸದ್ರಿ ಕ್ಷೇತ್ರದಿಂದ ಎಮ್ಮೆಲ್ಸಿ ಆಗುವ ಹಗಲುಗನಸು ಕಾಣತೊಡಗಿದ್ದ. ಆದರೆ ತನಗೆ ಸೆಡ್ಡು ಹೊಡೆದಿದ್ದ ಈತನನ್ನು ಮಲಗಿಸುವ ಪಣ ತೊಟ್ಟಿದ್ದ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಎಸ್.ವಿ. ಸಂಕನೂರ್‌ಗೆ ಬಿಜೆಪಿ ಅಭ್ಯರ್ಥಿಯಾಗಿ ರೆಡಿ ಮಾಡತೊಡಗಿದ್ದರು. ಮಜಾಯೆಂದರೆ, ಯಡ್ಡಿಯ ಅತ್ಯಾಪ್ತ ಚೇಲ-ಮಾಜಿ ಮಂತ್ರಿ ಸಿ.ಎಂ. ಉದಾಸಿಯಂಥವರೇ ಅದ್ಯಾಕೋ ಲಿಂಬಿಕಾಯಿ ಪರವಹಿಸಲೇ ಇಲ್ಲ.

ಸಂಕನೂರ್ ಬಿಜೆಪಿ ಕ್ಯಾಂಡಿಡೇಟೆಂದು ಶೆಟ್ಟರ್- ಉದಾಸಿ ಘೋಷಿಸಿದ ಕ್ಷಣದಲ್ಲೇ ಕುದಿಯತೊಡಗಿದ್ದ ಲಿಂಬಿಕಾಯಿ ಮತ್ತವರ ಗುರು ಯಡ್ಡೀಜಿ ಇವತ್ತಿಗೂ ಒಳಗೊಳಗೇ ಬುಸುಗುಡುತ್ತಿದ್ದಾರೆ. ಚಿಕ್ಕೋಡಿಯಲ್ಲಿ ಬಿಜೆಪಿಯ ರಮೇಶ್ ಕತ್ತಿಯನ್ನು ಸೋಲಿಸಿ ತಾನು ಕೆಜೆಪಿ ಕಟ್ಟಿದಾಗ ಮೋಸ ಮಾಡಿದ್ದ ಮಾಜಿ ಮಂತ್ರಿ ಉಮೇಶ್ ಕತ್ತಿ ಮೇಲಿನ ಸೇಡು ತೀರಿಸಿಕೊಂಡಿದ್ದ ಯಡ್ಡಿ ಪಶ್ಚಿಮ ಪದವೀಧರ ಕ್ಷೇತ್ರದಲ್ಲೂ ಅಂಥದ್ದೇ ಆಟ ಆಡುತ್ತಿದ್ದಾರೆ. ಶೆಟ್ಟರ್- ಸಂಕನೂರ್‌ಗೆ ಪಾಠ ಕಲಿಸಲು ರಹಸ್ಯವಾಗಿ ಜೆಡಿಎಸ್‌ನ ಅಪ್ಪ-ಮಗನ ಪರ ಮಸಲತ್ತು ಮಾಡುತ್ತಿದ್ದಾರೆ. ಹಾಗಂತ ಬಿಜೆಪಿ ಪರಿವಾರದಲ್ಲೇ ಬಹಿರಂಗ ಗುಸು-ಗುಸು ನಡೆದಿದೆ. ಕೇಂದ್ರದಲ್ಲಿ ಮಂತ್ರಿ ಪಟ್ಟ ಪಡೆಯಲಾಗದ ಹತಾಶೆಯಲ್ಲಿರುವ ಯಡ್ಡಿಗೆ ತನ್ನ ಕಷ್ಟ-ಸುಖದ ನಿಷ್ಠ ಅನುಯಾಯಿ ಲಿಂಬಿಕಾಯಿಗೆ ಟಿಕೆಟ್ ತಪ್ಪಿಸಿರುವುದು ದೊಡ್ಡ ಅಪಮಾನವಾಗಿ ಬಾಧಿಸುತ್ತಿದೆ.

ಬಿಜೆಪಿ ಅಭ್ಯರ್ಥಿ ಸಂಕನೂರ್ ವಿಧಾನ ಪರಿಷತ್ ಸದಸ್ಯನಾಗಬೇಕೆಂದು ಸತತ ಮೂರು ದಶಕದಿಂದ ಕನಸು ಕಾಣುತ್ತಿರುವ ಮುತ್ಯಾ!! ಈತ ಎಮ್ಮೆಲ್ಸಿ ಬಸವರಾಜ್ ಹೊರಟ್ಟಿಯ ಖಾಸಾ ದೋಸ್ತ್ ಆಗಿದ್ದಾತ. ಹೊರಟ್ಟಿ ಎಲೆಕ್ಷನ್‌ಗೆ ನಿಂತಾಗೆಲ್ಲ ಈ ಸಂಕನೂರ್ ಸ್ಟ್ರಾಟಜಿಸ್ಟ್ ಆಗಿರುತ್ತಿದ್ದ. ತನಗೂ ಒಂದು ಚಾನ್ಸ್ ಎಮ್ಮೆಲ್ಸಿ ಆಗಲು ಗೆಳೆಯ ಕೊಡಬಹುದೆಂದು ಆತ ಅಂದುಕೊಂಡಿದ್ದ. ಆದರೆ ಹೊರಟ್ಟಿ ಬೆಳೆದಂತೆಲ್ಲ ಸಂಕನೂರ್ ಸಂಕಟ ಪಡುವಂತಾಯ್ತು. ಬಂಡಾಯವೆದ್ದ ಸಂಕನೂರ್ ಹೊರಟ್ಟಿ ಎದುರೇ ಎಲೆಕ್ಷನ್ ನಿಲ್ಲುವ ಪರಿಪಾಠ ಬೆಳೆಸಿಕೊಂಡು ಬಿಟ್ಟರು. ಕಳೆದ ಶಿಕ್ಷಕರ ಕ್ಷೇತ್ರದ ಚುನಾವಣೆ ಹೊತ್ತಲ್ಲಿ ಬಿಜೆಪಿ ಅಭ್ಯರ್ಥಿಯಾಗಲು ಆತ ಕಟಿಪಿಟಿ ನಡೆಸಿ ಒಂದು ಹಂತದಲ್ಲಿ ಯಶಸ್ವಿಯೂ ಆಗಿದ್ದರು. ಆದರೆ ಕೊನೆ ಘಳಿಗೆಯಲ್ಲಿ ಟಿಕೆಟ್ ಕೈತಪ್ಪಿತು. ಹೊರಟ್ಟಿ ಮತ್ತು ಬಿಜೆಪಿ ಎದುರು ಸಂಕನೂರ್ ಜಿದ್ದಾಜಿದ್ದಿಗಿಳಿದು ಪರಾಭವಗೊಂಡರು.

ಗದಗ ನಗರಸಭೆ ಸಂಯುಕ್ತ ಪದವಿಪೂರ್ವ ಕಾಲೇಜಿನ ಈ ನಿವೃತ್ತ ವಿಜ್ಞಾನ ಮಾಸ್ತರ್ 'ರಂಗ' ಬದಲಿಸಿ ಪದವೀಧರ ಕ್ಷೇತ್ರದಿಂದ ಬಿಜೆಪಿ ಹುರಿಯಾಳಾಗಿರುವುದೇ ಒಂಥರಾ ತಮಾಷೆಯಾಗಿದೆ. ಕಳೆದ ಬಾರಿ ಶಿಕ್ಷಕರ ಕ್ಷೇತ್ರದ ಟಿಕೆಟ್ ತಪ್ಪಿದಕ್ಕೆ ಬಿಜೆಪಿ ಈ ಬಾರಿ ಸಂಕನೂರ್‌ಗೆ ಪರಿಹಾರ ನೀಡಿದೆ. ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯನಾಗಿದ್ದ ಸಂಕನೂರ್‌ಗೆ ಪದವೀಧರರ ಸಮಸ್ಯೆಗಿಂತ ಶಿಕ್ಷಕರ ಕಷ್ಟಗಳ ಪರಿಚಯವೇ ಜಾಸ್ತಿ ಎಂದು ಬಿಜೆಪಿಯವರೇ ಹೇಳುತ್ತಾರೆ. ಅಷ್ಟೇ ಅಲ್ಲ, ಹೊರಟ್ಟಿ ಜತೆಗೆ ಹಲವು ಕಾಲ ಒಡನಾಡಿದರೂ ಆತನ ಪಟ್ಟುಗಳಿಗೆ ಪ್ರತಿಪಟ್ಟು ಹಾಕುವ ಚೈತನ್ಯ ಈತನಿಗಿಲ್ಲ ಎಂಬ ಭಯವೂ ಆತನ ಗಾಡ್‌ಫಾದರ್ ಶೆಟ್ಟರ್ ಗ್ಯಾಂಗಿಗೆ ಕಾಡುತ್ತಿದೆ.

ಬಿಜೆಪಿಯೊಳಗಿನ ಆಯಕಟ್ಟಿನ ಲೀಡರ್‌ಗಳ ಸಖ್ಯ ಸಂಕನೂರ್‌ಗಿಂತ ಬಸವರಾಜ್ ಹೊರಟ್ಟಿಗೇ ಹೆಚ್ಚು. ಸತತ ಐದು ಬಾರಿ ಶಿಕ್ಷಕ ಕ್ಷೇತ್ರದಿಂದ ಗೆದ್ದಿರುವ ಹೊರಟ್ಟಿಗೆ ಬಿಜೆಪಿ-ಕಾಂಗ್ರೆಸ್‌ನವರೂ ಆಪ್ತ ಮಿತ್ರರು. ಈ ಅದೃಶ್ಯ ಹಿತೈಷಿಗಳ ದಂಡೇ ಹೊರಟ್ಟಿಯ ಚೈತ್ರ ಯಾತ್ರೆಯ ರಹಸ್ಯ! ವಂಶೋದ್ಧಾರಕ ವಸಂತನನ್ನೇ ಜೆಡಿಎಸ್ ಹುರಿಯಾಳಾಗಿ ಪ್ರಯೋಗಿಸುತ್ತಿದ್ದಾರೆ. ವಸಂತ್‌ಗೆ ಜೆಡಿಎಸ್ ಅಭ್ಯರ್ಥಿತನ ಎಂಬುದು ನೆಪ ಮಾತ್ರಕ್ಕಷ್ಟೇ. ಆತನಿಗೆ ಅಪ್ಪನ ಪ್ರಭಾವಳಿಯೇ ದೊಡ್ಡ ತಾಕತ್ತು. ಹಾಗಾಗಿ ಹೋರಾಟ ನಡೆದಿರುವುದು ಎಮ್ಮೆಲ್ಸಿ ಹೊರಟ್ಟಿ ಮತ್ತಾತನ ಹಳೆಯ ಗೆಳೆಯ- ಹಾಲಿ ಶತ್ರು ಸಂಕನೂರ್ ಮಧ್ಯದಲ್ಲಿ!

ಅಪ್ಪ ಕಟ್ಟಿಕೊಟ್ಟ ಆಕ್ಸ್‌ಫರ್ಡ್ ಶಿಕ್ಷಣ ಸಂಸ್ಥೆಯ ಆಳ್ವಿಕೆ ನಡೆಸಿ ಹುಬ್ಬಳ್ಳಿ-ಧಾರವಾಡ ಏರಿಯಾದಲ್ಲಿ 'ಚಿರಪರಿಚಿತ'ನಾಗಿರುವ ವಸಂತ ಹೊರಟ್ಟಿ ಪದವೀಧರ ಕ್ಷೇತ್ರದ ಮೇಲೆ ಕಣ್ಣಿಟ್ಟು ಒಂದು ವರ್ಷದಿಂದ ಗ್ರೌಂಡ್ ವರ್ಕ್ ಮಾಡುತ್ತ ಬಂದಿದ್ದಾನೆ. ಆದರೆ ಉತ್ತರ ಕನ್ನಡ, ಹಾವೇರಿ ಮತ್ತು ಗದಗದಲ್ಲಿ ವಸಂತನಿಗಿಂತ ಬಸವರಾಜನೇ ಪಾಪ್ಯುಲರ್. ಬೆಳಗಾವಿಯ ರಾಣಿ ಕಿತ್ತೂರು ಚೆನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯನಾಗಿರುವ ವಸಂತ್‌ಗೆ ಕ್ಷೇತ್ರದಲ್ಲಿ ಹಲವು ಅನುಕೂಲತೆಗಳಿವೆ. ಆದರೆ ಸುಶಿಕ್ಷಿತ ಜನರಲ್ಲಿ ಏರಿರುವ ಮೋದಿ ಮದ ಇನ್ನೂ ಇಳಿದಿಲ್ಲ. ಇದು ಹೊರಟ್ಟಿಗಳಿಗೆ ಸವಾಲು.

ಆದರೂ ಅಪ್ಪ-ಮಗ ಧೈರ್ಯದಿಂದಿದ್ದಾರೆ. ಗೆಲ್ಲುವ ನಂಬಿಕೆಯಲ್ಲಿದ್ದಾರೆ. ಇದಕ್ಕೆ ಮುಖ್ಯ ಕಾರಣ ಕಳೆದ ನಾಲ್ಕು ದಶಕದಿಂದ ಎಮ್ಮೆಲ್ಸಿ ಹೊರಟ್ಟಿ ಗದಗದಿಂದ ಕಾರವಾರದವರೆಗಿನ ಶಿಕ್ಷಕರು ಮತ್ತು ಪದವೀಧರರೊಂದಿಗೆ ಹೊಂದಿರುವ ಸಂಪರ್ಕ; ಅದಕ್ಕಿಂತಲೂ ಹೆಚ್ಚಾಗಿ ಎದುರಾಳಿ ಪಾರ್ಟಿಗಳಲ್ಲಿರುವ ಹಿತೈಷಿ ಪಡೆ. ನಾಲ್ಕು ಜಿಲ್ಲೆಯಲ್ಲಿ ಸುಮಾರು 92 ಸಾವಿರ ಮತದಾರರಿದ್ದಾರೆ. ಈಚೆಗೆ ಹೊರಟ್ಟಿ ಬಳಗ ಹೊಸ ಪದವೀಧರ ಮತದಾರರ ನೋಂದಾಯಿಸಿದೆ. ಹೀಗಾಗಿ ಒಂದು ಲಕ್ಷದ ಗಡಿ ತಲುಪಿದೆ. ಮತದಾರರ ಸಂಖ್ಯೆ. ಇದರಲ್ಲಿ ಧಾರವಾಡ- ಹುಬ್ಬಳ್ಳಿ ಪ್ರದೇಶದಲ್ಲಿ 45 ಸಾವಿರ ಓಟರ್‌ಗಳಿದ್ದಾರೆ. ಹಾವೇರಿಯಲ್ಲಿ 18 ಸಾವಿರ, ಗದಗದಲ್ಲಿ 15 ಸಾವಿರ ಮತ್ತು ಉತ್ತರ ಕನ್ನಡದಲ್ಲಿ 16 ಸಾವಿರ ಪದವೀಧರ ಮತದಾರರಿದ್ದಾರೆ.

ಹತ್ತಿರತ್ತಿರ ಅರ್ಧ ಲಕ್ಷ ಮತದಾರರಿರುವ ಧಾರವಾಡ- ಹುಬ್ಬಳ್ಳಿ ಸುತ್ತಲೇ ಎಲ್ಲರೂ ಗಿರಕಿ ಹೊಡೆಯುತ್ತಿದ್ದಾರೆ. ಕಾಂಗ್ರೆಸ್ ಕ್ಯಾಂಡಿಡೇಟ್ ನೀರಲಕೇರಿ ಬಿಜೆಪಿ-ಜೆಡಿಎಸ್‌ನ ಮದ್ದಾನೆಗಳ ಗುದ್ದಾಟದಲ್ಲಿ ಎರಡೇ ಪ್ರಾಶಸ್ತ್ಯದ ಮತವಾದರೂ ತನ್ನನ್ನು ಗೆಲ್ಲಿಸಲಿದೆ ಎಂದು ಲೆಕ್ಕಾಚಾರ ಹಾಕಿದ್ದಾರೆ. ಮಂತ್ರಿ- ಶಾಸಕರು ಸರಿಯಾಗಿ ಕೆಲಸ ಮಾಡಿದರೆ ಕಾಂಗ್ರೆಸ್ ಗೆಲ್ಲುತ್ತದೆ. ಆದರೆ ಲಾಗಾಯ್ತಿನಿಂದಲೂ ಕಾಂಗ್ರೆಸ್‌ಗೆ ಕಾಂಗ್ರೆಸ್ಸೇ ಶತ್ರು! ಈ ತತ್ವವೇ ಸದ್ರಿ ಎಲೆಕ್ಷನ್‌ನಲ್ಲೂ ವರ್ಕ್‌ಔಟ್ ಆಗುತ್ತಿದೆ. ಜೆಡಿಎಸ್‌ನ ಬಸವರಾಜ್ ಹೊರಟ್ಟಿ ಮಗನನ್ನು ಗೆಲ್ಲಿಸಲು ಪ್ರತಿಷ್ಠೆ ಪಣಕ್ಕಿಟ್ಟು ಊರೂರು ತಿರುಗುತ್ತಿದ್ದಾರೆ. ಸದ್ಯಕ್ಕೆ ಹೊರಟ್ಟಿ ಪಡೆಯೇ ಮುಂದಿದೆ.

● ವರದಿಗಾರ

ಲಂಕೇಶ್

ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ...

ವಾರ್ಷಿಕ ಚಂದಾ ವಿವರ

ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ	: 700 ರೂ.
ಎರಡು ವರ್ಷಕ್ಕೆ	: 1400 ರೂ.
ಮೂರು ವರ್ಷಕ್ಕೆ	: 2000 ರೂ.

ಡಿಡಿ/ಚೆಕ್‌ಗಳನ್ನು 'ಲಂಕೇಶ್' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.

ಹೆಚ್ಚಿನ ಮಾಹಿತಿಗಾಗಿ: 9880302817 /080-26676427

ಕೆ.ಆರ್.ಪೇಟೆ ಸೈಟು ಹಂಚಿಕೆ ಗೋಲ್‌ಮಾಲ್

'ಮಾಜಿ'ಗಳ ಬುಡಕ್ಕೆ ಲೋಕಾಯುಕ್ತ ಬಿಸಿನೀರು

ಉಪ್ಪು ತಿಂದವರು ನೀರು ಕುಡಿಯಲೇ ಬೇಕು. ಕೆ.ಆರ್.ಪೇಟೆ ಪುರಸಭೆಯ 12 ಮಾಜಿ ಅಧ್ಯಕ್ಷರು, 14 ಮುಖ್ಯಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳಿಗೆ ಈ ಗಾದೆ ಹೇಳಿ ಮಾಡಿಸಿದಂತಿದೆ. ನಿರ್ಗತಿಕರಿಗೆ ನಿವೇಶನ ಹಂಚುವ ಬದಲು ತಾವೇ ಸ್ವಾಹಾ ಮಾಡಿದ ಇವರ ವಿರುದ್ಧ ಲೋಕಾಯುಕ್ತ ವಿಶೇಷ ನ್ಯಾಯಮೂರ್ತಿ ಇಂಗಳಗಿಯವರ ಆದೇಶದ ಮೇರೆಗೆ ಕೆ.ಆರ್.ಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ದುಡ್ಡಿದ್ದವರಿಗೆ ಬೇಕಾಬಿಟ್ಟಿ ಸೈಟು ಹಂಚಿ ದುಂಡಗಾಗಿದ್ದ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸಮೇತ ಆತನ ದಜನ್ ಗಟ್ಟಲೆ ಶಿಷ್ಯರು, ಆಜ್ಞಾಪಾಲಕರಾದ ಪುರಸಭೆ ಮುಖ್ಯಾಧಿಕಾರಿಗಳ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆದಿದ್ದೇ ಆದರೆ, ಅವರೆಲ್ಲ ಕೃಷ್ಣ ಜನ್ಮಸ್ಥಾನದಲ್ಲಿ ಕೂತು ಮುದ್ದೆ ಮುರಿಯುವ ಪರಿಸ್ಥಿತಿ ಶತಃಸಿದ್ಧ.

ಮಂಡ್ಯ ಜಿಲ್ಲೆಯಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ಪಟ್ಟಣಗಳಲ್ಲಿ ಕೆ.ಆರ್.ಪೇಟೆಯೂ ಒಂದು. ಇಲ್ಲಿನ ನಿವೇಶನದ ಬೆಲೆ ಮೈಸೂರು ನಗರಕ್ಕಿಂತಲೂ ಹೆಚ್ಚು. ಪುರಸಭೆ ವ್ಯಾಪ್ತಿಗೆ ಬಾರದ 30x40 ಸೈಟಿನ ಬೆಲೆಯೇ 12-13 ಲಕ್ಷ ರೂ.ಗಳಾಗುತ್ತದೆ. ಇನ್ನು ಪುರಸಭೆ ವ್ಯಾಪ್ತಿಗೆ ಬರುವ ಪ್ರಮುಖ ಬಡಾವಣೆಗಳಲ್ಲಿ ಇದೇ ಅಳತೆಯ ನಿವೇಶನ 15 ಲಕ್ಷ ರೂ.ಗಳಿಗೂ ಹೆಚ್ಚು. ಇಂತಹ ಕೆ.ಆರ್.ಪೇಟೆ ಪುರಸಭೆಯಲ್ಲಿ ನಡೆದಿರುವ ನಿವೇಶನ ಅವ್ಯವಹಾರ ಈಗ ಸಾಕಷ್ಟು ಸದ್ದು ಮಾಡುತ್ತಿದೆ. ಹಗರಣದ ಪ್ರಮುಖ ಸೂತ್ರಧಾರ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಇದರಿಂದ ಹೊರಬರುವ ಹುನ್ನಾರ ನಡೆಸುತ್ತಿದ್ದಾನೆ. ಕಾನೂನಿನ ಕುಣಿಕೆ ಈ ಪ್ರಕರಣದಲ್ಲಿ ಅದೆಷ್ಟು ಬಿಗಿಯಾಗಿ ಬಿಗಿದುಕೊಳ್ಳುತ್ತೋ ಕಾದುನೋಡಬೇಕು.

ಪ್ರಕರಣದ ಹಿನ್ನೆಲೆ

ಕೆ.ಆರ್.ಪೇಟೆ ಪಟ್ಟಣದ ಟಿ.ಬಿ.ಬಡಾವಣೆ ಮತ್ತು ಹೇಮಾವತಿ ಬಡಾವಣೆ ಇಂದು ಪ್ರತಿಷ್ಠಿತ ಬಡಾವಣೆಗಳೆಂದೇ ಹೆಸರುವಾಸಿ. ಇಲ್ಲಿನ ಜಾಗಕ್ಕೆ ಕೋಟ್ಯಾಂತರ ರೂ.ಮೌಲ್ಯವಿದೆ. ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಸೂರಿಲ್ಲದವರಿಗೆ ಸೂರು ಒದಗಿಸುವ ಉದ್ದೇಶದಿಂದ ಪುರಸಭೆ 1983ರಲ್ಲಿ ಅಲ್ಲಿದ್ದ ರೈತರ ಜಮೀನನ್ನು ಅತ್ಯಲ್ಪ ಬೆಲೆಗೆ ಖರೀದಿಸಿತ್ತು. ಹೇಮಾವತಿ ಬಡಾವಣೆಯ ಸರ್ವೆ ನಂ.168, 169, 171, 174, 176, 177, 178, 179, 189, 190, 191, 192ರಲ್ಲಿ ಒಟ್ಟು 51.10 ಎಕರೆ ಪ್ರದೇಶವನ್ನು ಪುರಸಭೆ ಖರೀದಿಸಿತ್ತು. ಅದರಲ್ಲಿ ಮೂರು ಎಕರೆ ಜಾಗವನ್ನು ಮಾಜಿ ಶಾಸಕ ಎಸ್.ಎಂ.ಲಿಂಗಪ್ಪರವರ ಜ್ಞಾನಭಾರತಿ ವಿದ್ಯಾಸಂಸ್ಥೆಗೆ ಮೀಸಲಿಟ್ಟು ಉಳಿದ 48.10 ಎಕರೆ ಜಾಗವನ್ನು ನಿವೇಶನಗಳಾಗಿ ಹಂಚಿಕೆ ಮಾಡಲಾಗಿತ್ತು. ಹಾಗೆಯೇ ಟಿ.ಬಿ.ಬಡಾವಣೆಯ ಸರ್ವೆ ನಂ. 180, 181, 285, 286ರಲ್ಲಿ 17.02 ಎಕರೆ ಪ್ರದೇಶದಲ್ಲಿ ನಿವೇಶನಗಳನ್ನು ಮಾಡಲಾಗಿತ್ತು. ಹೀಗೆ ಎರಡೂ ಬಡಾವಣೆಗಳಿಂದ ಸೃಷ್ಟಿಯಾದದ್ದು ಬರೋಬ್ಬರಿ 1448 ನಿವೇಶನಗಳು.

ಇವುಗಳನ್ನು ವಸತಿರಹಿತರಿಗೆ ಹಂಚಬೇಕಿತ್ತು. ಆದರೆ ಈಗಾಗಲೇ 3-4 ಮನೆಯಿರುವ ರಾಜಕಾರಣಿಗಳಿಗೆ, ಅವರ ಸಂಬಂಧಿಗಳಿಗೆ ಹಂಚಿ ಕೋಟ್ಯಾಂತರ ರೂ. ಗುಳುಂ ಮಾಡಲಾಗಿದೆ. ವಸತಿರಹಿತರಿಗೆ ನಿವೇಶನ ಕೊಡದೆ ತಾರತಮ್ಯ ಮಾಡಿದ್ದಲ್ಲದೆ, ಪುರಸಭೆಗೆ ಬರಬೇಕಿದ್ದ ಕೋಟ್ಯಾಂತರ ಲಾಭವನ್ನು ತಾವೇ ನುಂಗಿದ್ದಾರೆ. 1983ರಿಂದ 2008ರವರೆಗೆ ಹಂಚಿರುವ ಅಷ್ಟೂ ನಿವೇಶನಗಳು ಅರ್ಹರಿಗೆ ಸಿಗದೆ ದುಡ್ಡಿದ್ದವರ, ಬಲಾಢ್ಯರ ಪಾಲಾಗಿವೆ.

15.3.2000 ರಿಂದ 23.07.2001ರವರೆಗೆ ಪುರಸಭೆ ಅಧ್ಯಕ್ಷನಾಗಿದ್ದ ಅಮೀರ್‌ಜಾನ್ ಏನಿಲ್ಲವೆಂದರೂ 50ಕ್ಕೂ ಹೆಚ್ಚು ನಿವೇಶನಗಳನ್ನು ಕೆ.ಬಿ.ಚಂದ್ರಶೇಖರ್ ಆಣತಿಯಂತೆ ಸಿಕ್ಕಸಿಕ್ಕವರಿಗೆ ಹಂಚಿಬಿಟ್ಟಿದ್ದ. ಸಾರ್ವಜನಿಕ ಸ್ವತ್ತನ್ನು ಅಕ್ರಮವಾಗಿ ಮಾರಾಟ ಮಾಡಿ ಕೋಟ್ಯಾಂತರ ರೂ. ಕೊಳ್ಳೆ ಹೊಡೆಯುತ್ತಿದ್ದ ಅಧ್ಯಕ್ಷ ಹಾಗೂ ಆಯುಕ್ತರ ವಿರುದ್ಧ 2001ರಲ್ಲಿ ಅಂದಿನ ಪುರಸಭೆಯ ಸದಸ್ಯ ಕೆ.ಸಿ.ಮಂಜುನಾಥ್ ಎಂಬಾತ ಮೊದಲ ಬಾರಿ ದನಿಯೆತ್ತಿ ಹೋರಾಟ ಮಾಡಿದ್ದರು. ಆದರೆ ಆಗಿನ್ನು ಶಾಸಕನಾಗಿದ್ದ ಕೆ.ಬಿ.ಚಂದ್ರಶೇಖರ್ ದರ್ಪ, ದಬ್ಬಾಳಿಕೆಯ ನಡುವೆ ಸಿಕ್ಕಿ ಮಂಜುನಾಥ್‌ರ ಹೋರಾಟ ನಲುಗಿಹೋಗಿತ್ತು.

ಮಾಜಿ ಸ್ಪೀಕರ್ ಕೃಷ್ಣ ಮಂಜುನಾಥ್ ಹೋರಾಟಕ್ಕೆ ಸಾಥ್ ನೀಡಿದ್ದರೂ ಉಳಿದವರಿಂದ ಅಂತಹ ಬೆಂಬಲ ಸಿಕ್ಕಿರಲಿಲ್ಲ. ಯಾಕೆಂದರೆ ಅಂದು ಸದಸ್ಯರಾಗಿದ್ದ ಹಲವರು ಆ ಅಕ್ರಮ ಹಂಚಿಕೆಯ ಫಲಾನುಭವಿಗಳಾಗಿದ್ದರು. ಅದಕ್ಕಿಂತ ಹೆಚ್ಚಾಗಿ ಆಗಿನ ಸ್ಥಾಯಿ ಸಮಿತಿ ಅಧ್ಯಕ್ಷ ಕಂ ಕೆಬಿಸಿಯ ಖಾಸಾ ತಮ್ಮ ಕ್ರಿಮಿನಲ್ ಹಿನ್ನೆಲೆಯ ಕೆ.ಬಿ.ಮಹೇಶ್ ವಿರುದ್ಧ ಧ್ವನಿ ಎತ್ತುವ ಗಡಸುತನ ಅವರ್‍ಯಾರಿಗೂ ಇದ್ದಂತಿರಲಿಲ್ಲ. ಕೆ.ಬಿ.ಮಹೇಶ್ ಜೊತೆ ಕೈಜೋಡಿಸಿದ ಅಂದಿನ ಮುಖ್ಯಾಧಿಕಾರಿ ಹಾಗೂ ಅಧ್ಯಕ್ಷ ಅಮೀರ್‌ಜಾನ್ ಒಳಗೊಳಗೆ ದಾಖಲೆಗಳನ್ನು ತಿದ್ದಿ ತಮಗೆ ಬೇಕಾದವರಿಗೆ ಸೈಟು ಹಂಚಿ ತಾವು ದುಂಡಗಾಗಿದ್ದರು.





ಲೋಕಾಯುಕ್ತಕ್ಕೆ ದೂರು


ಕೆ.ಬಿ.ಚಂದ್ರಶೇಖರ್ ಹಾಗೂ ಕೆ.ಬಿ.ಮಹೇಶನ ಅಂಧಧರ್ಬಾರ್‌ನಲ್ಲಿ ಹೇಮಾವತಿ ಹಾಗೂ ಟಿ.ಬಿ.ಬಡಾವಣೆಯ 1448 ನಿವೇಶನಗಳಲ್ಲಿ ಬಹುಪಾಲು ಭಾಗ ಅವರ ಕುಟುಂಬಸ್ಥರು, ಬೆಂಬಲಿಗರು, ಹಣವಂತರ ಪಾಲಾಗುವುದರ ವಿರುದ್ಧ ಹೋರಾಟ ನಡೆಸಿದ್ದ ಕೆ.ಸಿ.ಮಂಜುನಾಥ್ ಕಟ್ಟಕಡೆಯ ಅಸ್ತ್ರವಾಗಿ ದಾಖಲೆ ಸಮೇತ ಲೋಕಾಯುಕ್ತದ ಮೆಟ್ಟಿಲೇರಿದ್ದರು. ಆದರೆ ದೂರು ನೀಡಿ ಹಲವು ವರ್ಷಗಳೇ ಕಳೆದರೂ ಪ್ರಕರಣದಲ್ಲಿ ಹೇಳಿಕೊಳ್ಳುವಂತ ಪ್ರಗತಿಯೇನೂ ಘಟಿಸಿರಲಿಲ್ಲ. ಹಾಗಾಗಿ ಕೇಸು ಮುಗಿದುಹೋಯ್ತು ಅಂತ ಖದೀಮರೆಲ್ಲಾ ನಿರುಮ್ಮಳರಾಗಿದ್ದರು. ಬರೋಬ್ಬರಿ 10 ವರ್ಷಗಳ ನಂತರ ಪ್ರಕರಣ ಈಗ ಮರುಜೀವ ಪಡೆದಿದೆ. ಲೋಕಾಯುಕ್ತ ವಿಶೇಷ ನ್ಯಾಯಮೂರ್ತಿ ಇಂಗಳಗಿಯವರು ಪ್ರಕರಣದ ತನಿಖಾಧಿಕಾರಿಯಾಗಿ ಆಯ್ಕೆಯಾಗಿದ್ದಾರೆ. ಮಂಜುನಾಥ್ ಸಲ್ಲಿಸಿದ್ದ ದಾಖಲೆಗಳನ್ನು ತಿರುವಿ ಹಾಕುತ್ತಿದ್ದಂತೆಯೇ ಅಲ್ಲಿ ಅವ್ಯವಹಾರ ನಡೆದಿರುವುದು ಇಂಗಳಗಿಯವರಿಗೆ ಮನವರಿಕೆಯಾಗಿದೆ. ತಡಮಾಡದೆ 1983ರಿಂದ 2008ರವರೆಗೆ ಅಧಿಕಾರ ನಡೆಸಿದ 12 ಮಂದಿ ಮಾಜಿ ಅಧ್ಯಕ್ಷರು, 14 ಮಂದಿ ಪುರಸಭೆ ಮುಖ್ಯಾಧಿಕಾರಿ ಹಾಗೂ ಕಾರ್ಯದರ್ಶಿಗಳ ವಿರುದ್ಧ ದೂರು ದಾಖಲಿಸುವಂತೆ ಆದೇಶ ನೀಡಿದ್ದಾರೆ.

ಅದರಂತೆ ಪುರಸಭೆ ಪ್ರಭಾರ ಮುಖ್ಯಾಧಿಕಾರಿ ಹೆಚ್.ಎಸ್.ಚಂದ್ರಶೇಖರ್ ಕಳೆದ ಏಪ್ರಿಲ್ 29ರಂದು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪೊಲೀಸರು ಸೆಕ್ಷನ್ 408, 409, 420 ಹಾಗೂ 149 ಮೊಕದ್ದಮೆ ಸದಸ್ಯ 106/14ರ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಂದಕಾಲತ್ತಿಲ್ ಅಧಿಕಾರ ನಡೆಸಿ ಇವತ್ತು ಅಡಕತ್ತರಿಗೆ ಸಿಲುಕಿರುವವರಲ್ಲಿ ಮಾಜಿ ಅಧ್ಯಕ್ಷರಾದ ಕೆ.ಎನ್.ಕೆಂಗೇಗೌಡ, ನೂರುಲ್ಲಾಖಾನ್, ಕೆ.ಬಿ.ಚಂದ್ರಶೇಖರ್ (ಮಾಜಿ ಶಾಸಕರು) ಕೆ.ಸರಸ್ವತಿ, ಕೆ.ಸಿ.ವಾಸು, ಅಮೀರ್‌ಜಾನ್, ನಾಗರಾಜು, ಪುಟ್ಟಗೌರಮ್ಮ, ಕೆ.ಟಿ.ಗಂಗಾಧರ್, ಹೆಚ್.ವಿ.ಕೃಷ್ಣೇಗೌಡ, ವರಲಕ್ಷ್ಮಿ, ಕೆ.ಬಿ.ಮಹೇಶ್ (ಕೆಬಿಸಿ ಸಹೋದರ) ಮೊದಲಾದವರ ಹೆಸರುಗಳಲ್ಲದೆ ಪುರಸ[...] ಮುಖ್ಯಾಧಿಕಾರಿಗಳಾಗಿದ್ದ ಎಸ್.ಡಿ.ನಾಗೇಂದ್[...] ಹೆಚ್.ಎಸ್.ಮಂಜುನಾಥ್, ಟಿ.ನಂಜುಂಡ, ಶಿವರುದ್ರ[...] ಕೆ.ಎ.ಶಿವಕುಮಾರ್, ಗದ್ದಣ್ಣಚಾರ್, ಬಿ.ನಂಜುಂಡ[...] ಎಸ್.ಟಿ.ಸೋಮಶೇಖರ, ಹೆಚ್.ಬಿ.ನಾಗರಾಜ[...] ಬಿ.ಹೆಚ್.ವೆಂಕಟರಾಮಯ್ಯ, ಎಂ.ದೇವರಾಜಪ್ಪ, ಶಂಕರ[...] ಹನುಮೇಗೌಡ ಮತ್ತು ವಿಲ್ಸನ್ ಹೆಸರುಗಳ[...] ತಗುಲಿಕೊಂಡಿವೆ. ಇವರಲ್ಲಿ ಪುರಸಭೆ ಮಾಜಿ ಅಧ್ಯಕ್ಷರಾ[...] ಕೆ.ಎನ್.ಕೆಂಗೇಗೌಡ ಹಾಗೂ ಅಮೀರ್‌ಜಾನ್[...] ಮುಖ್ಯಾಧಿಕಾರಿಗಳಾದ ಎಸ್.ಡಿ.ನಾಗೇಂದ್ರ, ಟಿ.ನಂಜುಂ[...] ಶಿವರುದ್ರಪ್ಪ, ನಂಜುಂಡಪ್ಪ, ಎಸ್.ಟಿ.ಸೋಮಶೇಖ[...] ಮೃತಪಟ್ಟರೋದರಿಂದ ಇನ್ನುಳಿದವರು ಕಂಬಿಯ ಭೀತಿ[...] ಸಿಲುಕಿದ್ದಾರೆ.


ಕೆ.ಬಿ.ಮಹೇಶ್


ಕೆ.ಸಿ. ನಾರಾಯಣಗೌಡ


ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್

ಹಾಲಿ ನಾಪತ್ತೆ; ಮಾಜಿ ಮೇಯುತ್ತೆ

ಪುರಸಭೆ ನಿವೇಶನ ಹಂಚಿಕೆ ಹಗರಣದಲ್ಲಿ ಭಾಗಿಯಾದವರಿಗೆ ತಕ್ಕಪಾಠ ಕಲಿಸಿ ಅರ್ಹ ಫಲಾನುಭವಿಗಳ ನೆರವಿಗೆ ನಿಲ್ಲಬೇಕಾದ ಕೆ.ಆರ್.ಪೇಟೆ ಹಾಲಿ ಶಾಸಕ ಜೆಡಿಎಸ್‌ನ ನಾರಾಯಣಗೌಡ ಕ್ಷೇತ್ರವನ್ನೇ ಮರೆತು ಮುಂಬೈನಲ್ಲಿರುವ ತನ್ನ ವ್ಯಾಪಾರ-ವಹಿವಾಟಿನಲ್ಲಿ ಮುಳುಗಿಹೋಗಿದ್ದಾರೆ. ಶಾಸಕ ನಾರಾಯಣಗೌಡರ ಈ ನಿಷ್ಕ್ರಿಯತೆಯನ್ನೇ ಬಂಡವಾಳ ಮಾಡಿಕೊಂಡಿರುವ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರವನ್ನು ಬಳಸಿಕೊಂಡು ತಾನೇ ಶಾಸಕನೆಂಬಂತೆ ಮೆರೆದಾಡುತ್ತಿದ್ದಾನೆ. ಪುರಸಭೆಯಲ್ಲಿ ಹಾಲಿ ಶಾಸಕ ನಾರಾಯಣಗೌಡರ ಮಾತಿಗಿಂತ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಮಾತಿಗೆ ಕಿಮ್ಮತ್ತು ಜಾಸ್ತಿ.

ಮೂರು ಅವಧಿಗೆ ಕೆ.ಆರ್.ಪೇಟೆ ಎಂಎಲ್‌ಎ ಆಗಿದ್ದ ಕೆ.ಬಿ.ಚಂದ್ರಶೇಖರ್ ತನ್ನ ದರ್ಪ ದೌಲತ್ತುಗಳಿಂದಲೇ ಕುಖ್ಯಾತ. ತನ್ನ ಐದು ಜನ ಸಹೋದರರನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುವ ಕೆ.ಬಿ.ಚಂದ್ರಶೇಖರನ ದರ್ಪ-ದೌಲತ್ತು, ಲೂಟಿ ಕಂಡೇ ಮತದಾರರು ರೋಸಿಹೋಗಿದ್ದರು. ಕೆಬಿಸಿ ಪುತ್ರ ಶ್ರೀಕಾಂತ್ ದಂತ ವೈದ್ಯನಾಗಿದ್ದರೂ ಮಾಡಿದ್ದು ಮಾತ್ರ ಅಕ್ರಮ ಮರಳು ದಂಧೆ. ತಂದೆ-ಮಗ, ಸಹೋದರರ ಉಪಟಳಕ್ಕೆ ಬೇಸತ್ತ ಮತದಾರರು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕೆಬಿಸಿಗೆ ಕೈಕೊಟ್ಟು ಜೆಡಿಎಸ್‌ನ ನಾರಾಯಣಗೌಡರಲ್ಲಿ ಭರವಸೆ ಇಟ್ಟು ಆರಿಸಿ ಕಳುಹಿಸಿದ್ದರು. ಜನ ತನ್ನ ಮೇಲಿಟ್ಟ ಬದಲಾವಣೆಯ ಭರವಸೆಯನ್ನು ಅರ್ಥ ಮಾಡಿಕೊಳ್ಳದ ನಾರಾಯಣಗೌಡ ಗೆದ್ದ ಒಂದು ವರ್ಷದಲ್ಲೇ ಜನರಿಗೆ ಬೇಸರ ತರಿಸಿದ್ದಾರೆ. ತಿಂಗಳಲ್ಲಿ 15 ದಿನ ಕೆ.ಆರ್.ಪೇಟೆಯಲ್ಲಿ ಇನ್ನುಳಿದ 15 ದಿನ ಮುಂಬೈನಲ್ಲಿ ತನ್ನ ವ್ಯಾಪಾರ-ವಹಿವಾಟಿನ ದೇಖಾರೇಖಿಯಲ್ಲಿ ಮುಳುಗಿಹೋಗುವ ಶಾಸಕ ನಾರಾಯಣಗೌಡರ ಮುಂದೆ ಕಷ್ಟ-ಸುಖ ಹೇಳಿಕೊಳ್ಳಲು ಜನರಿಗೆ ಸಾಧ್ಯವಾಗುತ್ತಿಲ್ಲ. ಹೋಗಲಿ ಕೈಗೆ ಸಿಗೋಲ್ಲ ಅಂದುಕೊಂಡು ನಾರಾಯಣಗೌಡರಿಗೆ ಕರೆ ಮಾಡಿದ್ರೆ ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆ ಎಂಬ ಉತ್ತರವನ್ನು ಕೇಳಿ ಕೆ.ಆರ್.ಪೇಟೆಯ ಜನ 'ಊದೋದು ಕೊಟ್ಟು ಬಾರ್‍ಸೋದು ತಂದೆವಲ್ರೀ' ಅಂತ ಗೋಳಾಡುತ್ತಿದ್ದಾರೆ. ನಿಷ್ಕ್ರಿಯ ಹಾಲಿ ಶಾಸಕನ ಬದಲು ಜನ ಮತ್ತೆ ಕೆಬಿಸಿ ಮನೆಗೆ ಎಡತಾಕುವಂತಾಗಿದೆ. ಇದನ್ನೇ ಬಂಡವಾಳ ಮಾಡಿಕೊಂಡ ಕೆಬಿಸಿ ಭರ್ಜರಿಯಾಗಿ ಮೇಯ್ದಾಡುತ್ತಿದ್ದಾನೆ. ಇನ್ನಾದರೂ ಶಾಸಕ ನಾರಾಯಣಗೌಡ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಚುನಾವಣೆಯಲ್ಲಿ ಜನರೇ ಪರ್ಮನೆಂಟಾಗಿ ಮುಂಬೈಗೆ ಕಳುಹಿಸಿಬಿಡುತ್ತಾರೆ.

ಪ್ರಕರಣ ದಾಖಲಾಗಿದ್ದೇ ಗೊತ್ತಿರಲಿಲ್ಲ

ಕಳೆದ ಏಪ್ರಿಲ್ 29ರಂದೇ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತಾದರು ವಿಷಯ ಬಹಿರಂಗವಾಗಿಯೇ ಇರಲಿಲ್ಲ. ಅಲ್ಲಿಗೆ ಖಾಕಿ ಪಡೆ ಮಾ[...] ಶಾಸಕ ಕೆಬಿಸಿಗೆ ಸಲಾಂ ಹೊಡೆಯುತ್ತಿದೆ ಎಂಬುದ[...] ಅರ್ಥವಾಗುತ್ತದೆ. ಕೊನೆಗೆ ಪತ್ರಕರ್ತರೊಬ್ಬರ ವರದಿಯಿಂ[...] ವಿಷಯ ಬೆತ್ತಲಾಗಿದೆ. ದೂರು ದಾಖಲಾಗಿ ತಿಂಗಳ[...] ಕಳೆದರೂ ತನಿಖೆಯ ಆಗುಹೋಗುಗಳೇ ಜನರಿಗೆ ಗೊತ್ತಿ[...] ಇಡೀ ಪ್ರಕರಣದಲ್ಲಿ 12 ಜನ ಮಾಜಿ ಅಧ್ಯಕ್ಷರುಗಳ[...] ಸಿಲುಕಿಕೊಂಡಿದ್ದರೂ ಮೂಲ ಸೂತ್ರಧಾರ ಕಮ್ ಮಾಸ್ಟರ್[...] ಮೈಂಡ್ ಮಾಜಿ ಶಾಸಕ ಕೆಸಿಬಿ. ಪೌರಕಾರ್ಮಿಕ ಜನಾಂಗ[...] ನಾಗರಾಜು, ಕೆ.ಸಿ.ವಾಸು, ಕೃಷ್ಣೇಗೌಡ, ಮಹಿಳೆಯರಾ[...] ವರಲಕ್ಷ್ಮಿ, ಸರಸ್ವತಿ, ಪುಟ್ಟಗೌರಮ್ಮ ಇವರೆಲ[...] ಮೀಸಲಾತಿಯಿಂದ ಅಧ್ಯಕ್ಷ ಗದ್ದುಗೆ ಏರಿದಂತವರು[...] ಇವರೆಲ್ಲಾ ಕೆಬಿಸಿ ಮತ್ತವನ ಸಹೋದರರ ಆದೇಶ ಪಾಲಿಸು[...] ಹರಕೆಯ ಕುರಿಗಳಾಗಿದ್ದವರು. ಕೆಬಿಸಿ ಸಹಿ ಹಾಕು ಎಂ[...] ಜಾಗಕ್ಕೆ ಸಹಿ ಹಾಕಿ ಸಿಕ್ಕಿಹಾಕಿಕೊಂಡಿದ್ದಾರೆ. ಇನ[...] ಕೆ.ಬಿ.ಚಂದ್ರಶೇಖರ್ 31.05.90 ರಿಂದ 07.05.96[...] ಅವಧಿಯಲ್ಲಿ ಪೂರ್ಣಾವಧಿ ಅಧ್ಯಕ್ಷನಾಗಿ ಅಧಿಕಾರ ನಡೆಸಿದ[...] ಈ ಅವಧಿಯಲ್ಲೇ ಹೆಚ್ಚಿನ ನಿವೇಶನಗಳ[...] ಬಿಕರಿಯಾಗಿರೋದು. ಅಧ್ಯಕ್ಷರಾಗಿದ್ದ ಕೆ.ಟಿ.ಗಂಗಾಧರ[...] ಕೆ.ಬಿ.ಮಹೇಶ್ ಇಂದು ಕೋಟಿಗಳಿಗೆ ತೂಗುತ್ತಾರೆ. ಒಂದ[...] ಅವಧಿಗೆ ಪುರಸಭೆಯ ಸದಸ್ಯೆಯಾಗಿದ್ದ ಕೆಬಿಸಿಯ ಸಂಬಂ[...] ಬಂಗಾರಮ್ಮ ಹೇಮಾವತಿ ಬಡಾವಣೆಯೊಂದರಲ್ಲೇ 4-[...] ಸೈಟು ಕಬಳಿಸಿದ್ದಾಳೆ. ತನ್ನಲ್ಲಿರುವ ಹಡಬಿಟ್ಟಿ ದುಡ್ಡ[...] ಬಡ್ಡಿ ದಂಧೆ ನಡೆಸುತ್ತಲೇ ಕೋಟ್ಯಾಂತರ ರೂಪಾಯಿ[...] ಗುಡ್ಡೆಹಾಕಿಕೊಂಡಿರುವ ಈಕೆ ಬಡ್ಡಿ ಬಂಗಾರಮ್ಮ ಎಂತಲೆ[...] ಕುಖ್ಯಾತಿಯಾಗಿದ್ದಾಳೆ.

ಪುರಸಭೆಯಲ್ಲಿ ಲೂಟಿಕೋರರು

ಮಂಡ್ಯ ಜಿಲ್ಲೆಯಲ್ಲಿಯೇ ಅತಿ ವೇಗವಾ[...] ಬೆಳೆಯುತ್ತಿರುವ ಕೆ.ಆರ್.ಪೇಟೆ, ಪುರಸಭೆ ಹೊಕ್ಕಿರು[...] ಲೂಟಿಕೋರರಿಂದಾಗಿ ಹಾಳುಕೊಂಪೆಯಾಗಿದ[...] ಮೂಲಭೂತ ಸೌಕರ್ಯ ಒದಗಿಸಬೇಕಾದ ಪುರಸಭೆ ಕಳ[...] ಕಾಮಗಾರಿ, ನಿವೇಶನ ಹಂಚಿಕೆ ಹಗರಣ, ಖರೀದಿಯ[...] ಅವ್ಯವಹಾರ ನಡೆಸಿ ಸಾರ್ವಜನಿಕರ ಟೀಕೆಗೆ ಗುರಿಯಾಗಿ[...] ಕೆಬಿಸಿ ಸೇರಿದಂತೆ ಅವರ ಸಹೋದರರ ಹಿಡಿತ ಪುರಸಭೆ[...] ಮೇಲಿದ್ದು ಅವರೇ ಸರ್ವಾಧಿಕಾರಿಗಳಾಗಿದ್ದಾರೆ. ಪ್ರತಿಯೊಂ[...] ಕಾಮಗಾರಿಯಲ್ಲೂ ಇವರ ಗ್ಯಾಂಗಿನದ್ದೇ ಉಪಟಳ. ಕೆಬಿ[...] ಟೀಮಿನ ದರ್ಪಕ್ಕೆ ಹೆದರಿ ಜನ ವಿಧಿಯಿಲ್ಲದೆ ಬಾಯ್ಮು[...] ಕುಳಿತಿದ್ದರೆ ಗೆದ್ದು ಸದಸ್ಯರೆನಿಸಿಕೊಂಡ ಗೆಬರಣ್ಣರು ಅಕ್ರ[...] ನಿವೇಶನ ಹಂಚಿಕೆ, ಹಕ್ಕುಪತ್ರ, ನಕಲಿ ಖಾತೆ ಮಾಡಿಸು[...] ಸಾಕಷ್ಟು ನುಂಗುತ್ತಿದ್ದಾರೆ. ಪ್ರತಿ ಕಾಮಗಾರಿಯಲ[...] ಪರ್ಸೆಂಟೇಜ್‌ಗೆ ಜೊಲ್ಲು ಸುರಿಸುವುದಷ್ಟೇ ಇವರ ಕಾಯ[...] ತಮ್ಮ ಸೈಟುಗಳಲ್ಲಿ ಮನೆ ಕಟ್ಟುವವರೂ ವಾರ್ಡಿನ ಸದಸ್ಯ[...] ಹಫ್ತಾ ಕೊಡಬೇಕು. ಇಲ್ಲದಿದ್ದರೆ ಅದು ಸರಿಯಿಲ್ಲ- ಇ[...] ಸರಿಯಿಲ್ಲ ಅಂತ ತೊಂದರೆ ಕೊಡುತ್ತಾರೆ. ಹಾಗ[...] ಜನಸಾಮಾನ್ಯರು ಈ ಖೂಳರಿಗೆ ಮುಡಿಪು ಸಲ್ಲಿಸಿ[...] ಮನೆಕಟ್ಟುವ ಹೀನಾಯ ಪರಿಸ್ಥಿತಿ ನಿರ್ಮಾಣವಾಗಿ[...] ಯಾರದೋ ನಿವೇಶನವನ್ನು ಇನ್ಯಾರದೋ ಹೆಸರಿಗೆ ಕೂ[...] ಬಲಾಢ್ಯರ ಪರವಾಗಿ ಕಡತಗಳನ್ನು ತಿದ್ದುವ ನಕಲಿ ಪ್ರವೀಣ[...] ಪುರಸಭೆಯಲ್ಲಿದ್ದಾರೆ.

ಕಡೇಪಕ್ಷ ಲೋಕಾಯುಕ್ತ ತನಿಖೆಯಾದ[...] ನಿಷ್ಪಕ್ಷಪಾತವಾಗಿ ನಡೆದು ಹಳೇ ಖದೀಮರಿಗೆ, ಹೆ[...] ಕಿರಾತಕರಿಗೆ ಒಂದು ಗತಿ ಕಾಣಿಸೀತೆ ಅಂತ ಕೆ.ಆ[...] ಪಟ್ಟಣದ ಕಾಮನ್ ಮ್ಯಾನ್ ಆಸೆಗಣ್ಣಿನಿಂದ ಕಾಯುತ್ತಿದ[...]


● ಮಂಡ್ಯ ನಾಗೇ[...]

ಹೀಗೊಂದು ಸನ್ನಿವೇಶವನ್ನು ಊಹಿಸಿಕೊಳ್ಳಿ. ನಿಮ್ಮ ...ಮನೆಯವರು ನಿತ್ಯವೂ ತಾವು ಸೃಷ್ಟಿಸುವ ತ್ಯಾಜ್ಯವನ್ನು ...ಕಾಂಪೌಂಡ್‌ಗೆ ತಂದು ಸುರಿಯುತ್ತಿರುತ್ತಾರೆ. ಪರಿಣಾಮವಾಗಿ ನಿಮ್ಮ ಮನೆ ತಿಪ್ಪೆಯಾಗಿ ಪರಿವರ್ತನೆ ಗೊಂಡು, ...ಕುಟುಂಬ ಸದಸ್ಯರು ನಾನಾ ರೋಗರುಜಿನಗಳಿಗೆ ...ಯಾಗುತ್ತಿರುತ್ತಾರೆ. ಇಂಥಾ ದುಷ್ಕೃತ್ಯ ಎಸಗುತ್ತಿರುವ ...ನೆರೆಯವರನ್ನು ನೀವು ಪ್ರಶ್ನಿಸುತ್ತೀರಿ. ಅವರಲ್ಲಿ ...ಬಲ ಮತ್ತು ಅಧಿಕಾರದ ಬಲ ಕೇಂದ್ರೀಕೃತಗೊಂಡಿದೆ. ಅಧಿಕಾರದ ಮದದಿಂದ ಮೆರೆಯುತ್ತಿರುವ ಅವರು ...ಯ ಕೇಳಿದ ನಿಮ್ಮ ಮೇಲೆಯೇ ದೌರ್ಜನ್ಯ ನಡೆಸುತ್ತಾರೆ ...ದಿಟ್ಟುಕೊಳ್ಳಿ. ಆಗ ನಿಮ್ಮ ಪರಿಸ್ಥಿತಿ ಹೇಗಿರುತ್ತದೆ? ...ಗಳೂರಿನ ನೆರೆಯಲ್ಲಿರುವ ಮಂಡೂರು ಗ್ರಾಮವಾಸಿಗಳ ...ದಿನ ಸ್ಥಿತಿ ಯಥಾವತ್ ಹೀಗೇ ಆಗಿದೆ.

ತಮ್ಮ ಊರಿನಲ್ಲಿ ಬೆಂಗಳೂರು ಮಹಾನಗರ ...ಲಿಕೆಯವರು ಕಸ ಸುರಿಯುವುದನ್ನು ವಿರೋಧಿಸಿ ಕಳೆದ ...ಡು-ಮೂರು ವಾರಗಳಿಂದ ಮಂಡೂರಿನ ಹಳ್ಳಿಗರು ...ಡು ಇಲ್ಲವೇ ಮಡಿ ಎಂಬಂತೆ ಹೋರಾಟಕ್ಕೆ ...ದಿದ್ದಾರೆ. ಕಂಡೋರ ಮನೆಯಂಗಳದಲ್ಲಿ ಕಸ ...ಯುವುದನ್ನು ತಮ್ಮ ಹಕ್ಕೆಂದು ಭಾವಿಸಿರುವ ಭ್ರಷ್ಟ ...ಕಾರಿಗಳು ಪೊಲೀಸ್ ಪಡೆಯೊಂದಿಗೆ ಹಳ್ಳಿಗರ ಮೇಲೆ ...ಗಿಬಿದ್ದಿದ್ದಾರೆ. ಖಾಕಿ ಪಡೆಗಳ ಸರ್ಪಗಾವಲಿನಲ್ಲಿ ...ಲಿಕೆಯ ಕಸದ ಲಾರಿಗಳು ಮಂಡೂರಿನಲ್ಲಿ ಕಸ ...ಯುವ ಕಾಯಕವನ್ನು ಎಂದಿನಂತೆ ಮುಂದುವರೆಸಿವೆ.

ಮಂಡೂರು ಜನತೆ ಈ ಕಸದ ಸಮಸ್ಯೆಯನ್ನು ...ಹರಿಸುವಂತೆ ಕೋರಿ ಮೇಯರ್, ಕಮಿಷನರ್, ಮಂತ್ರಿ ...ಹೋದಯರೆಲ್ಲರಿಗೂ ಹತ್ತಾರು ಬಾರಿ ಅಹವಾಲು ...ಸಿದ್ದಾರೆ. ಆದರೆ ಪ್ರತಿಬಾರಿಯೂ ಸಂಬಂಧಿತ ಅಧಿಕಾರಿ... ಮತ್ತೆ ಮೂರು ತಿಂಗಳು ಕಾಲಾವಕಾಶಬೇಕೆಂದು ...ಧಿಯನ್ನು ವಿಸ್ತರಿಸುತ್ತಾ ಕಾಲಹರಣ ಮಾಡಿದ್ದು ಬಿಟ್ಟರೆ ...ನೂ ಪ್ರಗತಿಯಾಗಿಲ್ಲ. ಕಳೆದ ಬಾರಿ ಮೂರು ತಿಂಗಳ ...ಕಾಶ ಪಡೆದಿದ್ದ ಅಧಿಕಾರಿಗಳು ಈ ಬಾರಿ ಕ್ಷಮೆ ...ಸುವ ನಾಟಕವಾಡುತ್ತಾ ಮತ್ತೆ ಅವಧಿ ವಿಸ್ತರಣೆ ...ಡುತ್ತಿದ್ದಾರೆ. ತಿಪ್ಪೆ ಸಾರಿಸುವ ಸ್ಥಳೀಯ ಪುಢಾರಿಗಳನ್ನೂ ...ರಿಸಿರುವ ಮಂಡೂರಿನ ಜನತೆ ಈ ಬಾರಿ ಸರ್ಕಾರದ ...ತನ್ನು ನಂಬಲು ಸುತರಾಂ ಸಿದ್ಧರಿಲ್ಲ. ಮಹಿಳೆಯರು, ...ವಕರೂ ನೂರಾರು ಸಂಖ್ಯೆಯಲ್ಲಿ ಬೀದಿಗಿಳಿದು ಕಸದ ...ರಿಗಳನ್ನು ತಡೆಯಲು ಮುಂದಾಗಿದ್ದಾರೆ.

ಮಂಡೂರಿನ ಜನತೆ ಹಾಗೂ ಸರ್ಕಾರದ ನಡುವೆ ...ಟೆಲ್ಲಾ ಜಟಾಪಟಿ ನಡೆಯುತ್ತಿದ್ದುದನ್ನು ಕಂಡ ಹಿರಿಯ ...ತಂತ್ರ ಹೋರಾಟಗಾರ ದೊರೆಸ್ವಾಮಿಯವರು ಹಳ್ಳಿಗರ ...ಯುತ ಬೇಡಿಕೆಗೆ ಬೆಂಬಲಿಸಿ ಕಣಕ್ಕಿಳಿದಿದ್ದಾರೆ. ಆಮ್ ... ಪಕ್ಷದ ರವಿಕೃಷ್ಣಾ ರೆಡ್ಡಿ ಕೂಡ ದನಿಗೂಡಿಸಿದ್ದಾರೆ. ... ಸುದ್ದಿ ಮಾಧ್ಯಮಗಳಿಗೂ ಆಹಾರವಾಗಿದೆ. ಬಿಬಿಎಂಪಿ ...ಕಾರಿಗಳು ತಮ್ಮ ದುರಾಡಳಿತವನ್ನು ಮುಚ್ಚಿಕೊಳ್ಳಲು ...ರದ ಕಸ ವಿಲೇವಾರಿ ಸಮಸ್ಯೆಯನ್ನು ಯಾರೂ ...ರ್ಮಾಡಿಕೊಳ್ಳಲಾಗದ, ಎಂದಿಗೂ ಬಗೆಹರಿಸಲಾಗದ ಘೋರ ವಿಪತ್ತೇನೋ ಎಂಬಂತೆ ಬಿಂಬಿಸಲು ಹೆಣಗುತ್ತಿದ್ದಾರೆ. ಬೆಂಗಳೂರಿಗಿಂತಲೂ ಅಗಾಧವಾಗಿ ಬೆಳೆದಿರುವ ದೆಹಲಿ, ಮುಂಬೈ, ಚೆನ್ನೈ, ಹೈದರಾಬಾದ್ ಮುಂತಾದ ನಗರಗಳಲ್ಲಿ ಜಟಿಲವಾಗಿರದ ಈ ಕಸ ವಿಲೇವಾರಿ ಪ್ರಕ್ರಿಯೆ ಬೆಂಗಳೂರಿನಲ್ಲಿ ಮಾತ್ರ ಬಿಕ್ಕಟ್ಟಾಗಿ ಪರಿಣಮಿಸುತ್ತಿರುವುದು ಯಾಕೆ? ಎಂಬ ಸರಳ ಪ್ರಶ್ನೆಗೆ ಅಧಿಕಾರಿಗಳ ಬಳಿ ಉತ್ತರವಿಲ್ಲ. ಇರುವುದೆಲ್ಲಾ ಕುಂಟು ನೆಪಗಳು ಮಾತ್ರ.



ಕಂಡೋರ ಕಸಕ್ಕೆ ಮಂಡೂರು ಬಲಿ

ಈ ಹಿನ್ನೆಲೆಯಲ್ಲಿ ಈ ಸಮಸ್ಯೆಯ ಆಳ ಅಗಲಗಳನ್ನು ಸಂಕ್ಷಿಪ್ತವಾಗಿಯಾದರೂ ಪರಿಶೀಲಿಸುವುದು ಒಳ್ಳೆಯದು.

ಮಂಡೂರು ಎಂಬ ಗ್ರಾಮ ಕೃಷ್ಣರಾಜಪುರದಿಂದ ಸುಮಾರು 7-8 ಕಿ.ಮೀ ದೂರದಲ್ಲಿದೆ. ಮಂಡೂರಿನ ಕಡೆ ಹೊರಟರೆ ಊರು ಇನ್ನೂ ಒಂದು ಕಿಲೋಮೀಟರ್ ದೂರ ಇದ್ದಾಗಲೇ ಸಹಿಸಲಸಾಧ್ಯವಾದ ಭಾರೀ ದುರ್ನಾತ ಆವರಿಸಿ, ಕರ್ಚೀಫಿನಿಂದ ಮೂಗು ಮುಚ್ಚಿಕೊಳ್ಳುವುದು ಕಡ್ಡಾಯ. ಹಾಗೆ ಆಜುಬಾಜಿನಲ್ಲಿ ಕಣ್ಣಾಡಾಯಿಸಿದರೆ ವಿಚಿತ್ರವಾದ ಬೆಟ್ಟದ ಸಾಲು ನಿಮ್ಮ ಗಮನ ಸೆಳೆಯುತ್ತದೆ. ನೀವು ಕುತೂಹಲದಿಂದ ಮತ್ತಷ್ಟು ಹತ್ತಿರ ಹೋದರೆ, ಬೆಂಗಳೂರು ನಗರದಿಂದ ಇಲ್ಲಿಗೆ ತಂದು ಸುರಿದಿರುವ ಕಸದ ರಾಶಿ ಇಲ್ಲಿ ಸಾಲು ಬೆಟ್ಟದಂತೆ ಹರಡಿಕೊಂಡಿರುವುದು ನಿಮ್ಮ ಗಮನಕ್ಕೆ ಬರುತ್ತದೆ.(ಫೋಟೋ ನೋಡಿ)

ಊರನ್ನು ಪ್ರವೇಶಿಸಿ ನೋಡಿದರೆ ಮತ್ತಷ್ಟು ವಿಚಿತ್ರವಾದ ಸಂಗತಿಗಳು ನಿಮ್ಮ ಕಣ್ಣಿಗೆ ಬೀಳುತ್ತವೆ. ಪ್ರಯಾಣಿಕರ ಅನುಕೂಲಕ್ಕಾಗಿ ನಿರ್ಮಿಸಲಾಗಿರುವ ಬಸ್ ನಿಲ್ದಾಣದ ತುಂಬಾ ಪೊಲೀಸರೇ ತುಂಬಿಕೊಂಡಿದ್ದಾರೆ.(ಫೋಟೋ ನೋಡಿ) ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕಂಡುಬರುವಂತೆ ಜನರು ಇಲ್ಲಿ ಗುಂಪು ಸೇರುವಂತಿಲ್ಲ. ಇಲ್ಲಿ 144 ಸೆಕ್ಷನ್ ಆದಿಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ. ಅದು ಹಾಗಿರಲಿ, ಇಲ್ಲಿ ಮಕ್ಕಳು ಮರಿಯಾದರೂ ಯಾಕೆ ಕಣ್ಣಿಗೆ ಬೀಳುತ್ತಿಲ್ಲ ಎಂಬ ಪ್ರಶ್ನೆ ನಿಮಗೆ ಮೂಡುತ್ತದೆ. ಈ ಬಗ್ಗೆ ಹಳ್ಳಿಗರನ್ನು ವಿಚಾರಿಸಿದರೆ ತಮ್ಮ ಮಕ್ಕಳನ್ನು ನೆಂಟರ ಮನೆಯಲ್ಲಿ ಬಿಟ್ಟಿರುವುದಾಗಿ ಬಹುಪಾಲು ಮಂದಿ ಉತ್ತರಿಸುತ್ತಾರೆ. ಯಾಕೆಂದರೆ ಕಸದರಾಶಿಯಿಂದ ಹರಿದುಬರುವ ನೀರು ಮತ್ತು ಗಾಳಿಯಿಂದಾಗಿ ಇಲ್ಲಿನ ಮಕ್ಕಳು ನಾನಾ ರೀತಿಯ ಕಾಯಿಲೆಗಳಿಗೆ ತುತ್ತಾಗಿದ್ದಾರೆ. ಉಸಿರಾಟದ ತೊಂದರೆ, ಅಸ್ತಮಾ, ಚರ್ಮದ ಅಲರ್ಜಿ ಮುಂತಾದ ಕಾಯಿಲೆಗಳು ಇಲ್ಲಿ ಸರ್ವೇಸಾಮಾನ್ಯ.

ಇದು ಕೇವಲ ಮಕ್ಕಳಿಗೆ ಮಾತ್ರ ಸೀಮಿತವಲ್ಲ; ಉಸಿರಾಟದ ತೊಂದರೆ ಉಲ್ಬಣಿಸಿ ಹತ್ತಾರು ಮಂದಿ ಪ್ರಾಣ ಕಳೆದುಕೊಂಡ ಉದಾಹರಣೆ ಇಲ್ಲಿದೆ. ಇನ್ನೂ ಒಂದಷ್ಟು ಮಂದಿ ಹೆಸರಿಸಲಾಗದ ಕಾಯಿಲೆಗಳಿಗೆ ಸಿಲುಕಿ ಇಂದಿಗೂ ಆಸ್ಪತ್ರೆಯಲ್ಲಿದ್ದಾರೆ.

ಕಸದ ರಾಶಿಯ ಮೇಲೆ ನೊಣ, ಸೊಳ್ಳೆ ಮುಂತಾದ ಕ್ರಿಮಿಕೀಟಗಳನ್ನು ನಿಯಂತ್ರಿಸಲು ಬಿಬಿಎಂಪಿಯವರು ಕೋಟ್ಯಾಂತರ ಖರ್ಚು ಮಾಡಿ ಆಗಾಗ್ಗೆ ಕೀಟನಾಶಕಗಳನ್ನು ಸಿಂಪಡಿಸುತ್ತಾರೆ. ಪರಿಣಾಮವಾಗಿ ಮತ್ತಷ್ಟು ವಿಷ ಇಲ್ಲಿನ ಅಂತರ್ಜಲಕ್ಕೆ ಸೇರ್ಪಡೆಯಾಗುತ್ತದೆ. ಮಂಡೂರು ಗ್ರಾಮಸ್ಥರಿಗೆ ಇರುವುದು ಎರಡೇ ಆಯ್ಕೆ, ವಿಷ ಸಿಂಪಡಣೆ ಬೇಡವೆಂದರೆ ಕಾಲರಾ, ಮಲೇರಿಯಾಗಳನ್ನು ಆರಿಸಿಕೊಳ್ಳಬಹುದು. ಮಲೇರಿಯಾ, ಕಾಲರಾ ಬೇಡವೆಂದರೆ ಮತ್ತಷ್ಟು ವಿಷವನ್ನು ಆಹ್ವಾನಿಸಬಹುದು!

ಈ ಪ್ರದೇಶದಲ್ಲಿನ ಅಂತರ್ಜಲ ಕಲುಷಿತಗೊಂಡು ಇಲ್ಲಿನ ನೀರು ಕುಡಿಯಲು ಅಯೋಗ್ಯವಾಗಿದೆ ಎಂದು ಸ್ವತಃ ಬಿಬಿಎಂಪಿ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಗಳೇ ಒಪ್ಪಿಕೊಂಡಿವೆ. ಉತ್ತಮ ಕುಡಿಯುವ ನೀರನ್ನು ಸರಬರಾಜು ಮಾಡುವುದಾಗಿ ಭರವಸೆ ನೀಡಿದ್ದ ಬಿಬಿಎಂಪಿ ಈ ಕೆಲಸವನ್ನೂ ಮತ್ತೊಬ್ಬ ಪುಢಾರಿಗೆ ವಹಿಸಿಕೊಟ್ಟಿದೆ. ಈ ಗುತ್ತಿಗೆದಾರ ತನ್ನ ಮರ್ಜಿಗೆ ಅನುಗುಣವಾಗಿ ಸ್ಥಳೀಯ ಕಲುಷಿತ ನೀರನ್ನೇ ಕೊಟ್ಟು ದುಡ್ಡು ಹೊಡೆಯುತ್ತಿದ್ದಾನೆ ಎಂಬುದು ಸ್ಥಳೀಯರ ಮತ್ತೊಂದು ದೂರು.

ಲ್ಯಾಂಡ್‌ಫಿಲ್ ಎಂದು ಕರೆಯಲಾಗುವ ಕಸದರಾಶಿಯನ್ನು ನಿರ್ವಹಣೆ ಮಾಡುವ ವಿಷಯದಲ್ಲಿ ಬಿಬಿಎಂಪಿ ಕನಿಷ್ಠ ವೈಜ್ಞಾನಿಕ ಕ್ರಮಗಳನ್ನೂ ತೆಗೆದುಕೊಂಡಿಲ್ಲ. ಕಸವನ್ನು ಡಂಪ್ ಮಾಡುವ ಮುನ್ನ ಅಂತರ್ಜಲ ಕಲುಷಿತವಾಗದಂತೆ ತಡೆಯಲು ಕನಿಷ್ಠ ಮೂರು ಅಡಿ ದಪ್ಪದ ಕಾಂಕ್ರೀಟನ್ನು ನೆಲಕ್ಕೆ ಹಾಕಬೇಕು. ಹಾಗೆಯೆ ಸುತ್ತಲೂ ದಪ್ಪನಾದ ಕಾಂಕ್ರೀಟ್ ಗೋಡೆಯಿರಬೇಕು. ಈ ತ್ಯಾಜ್ಯ ಘಟಕದಿಂದ ನೆಲ-ಜಲ-ಗಾಳಿಯನ್ನೊಳಗೊಂಡು ಸುತ್ತಲ ಪರಿಸರಕ್ಕೆ ಯಾವುದೇ ಧಕ್ಕೆಯಾಗದಂತೆ ಸುರಕ್ಷಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆದರೆ ಇಂಥಾ ನಿಯಮಗಳೇ ಇಲ್ಲಿ ಅಪ್ರಸ್ತುತ. ಮಾಲಿನ್ಯ ನಿಯಂತ್ರಣ ಮಾಡಬೇಕಿದ್ದ ಮಂಡಳಿಯ ಅಧ್ಯಕ್ಷ ಸ್ಥಾನದಲ್ಲಿ ವಾಮನಾಚಾರ್ಯ ಎಂಬ ಅಪ್ಪಟ ಆರೆಸ್ಸಿಗ, ಮಾಲಿನ್ಯ ಪ್ರೇಮಿಯೊಬ್ಬ ಪಟ್ಟಾಗಿದ್ದಾನೆ. ಜನ-ಜಾನುವಾರುಗಳ ಜೀವಕ್ಕೆ ಮಾರಕವಾಗಿರುವ ಮಾಲಿನ್ಯ ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಜರುಗಿಸುವುದನ್ನು ಬಿಟ್ಟು, ಊರು ಹತ್ತಿ ಉರಿಯುತ್ತಿರುವ ಈ ಸಂದರ್ಭದಲ್ಲಿ ಕಾಟಾಚಾರಕ್ಕಾಗಿ ಒಂದು ನೋಟೀಸ್ ಜಾರಿ ಮಾಡಿ ಕೈತೊಳೆದುಕೊಂಡಿದ್ದಾನೆ.

ಮಂಡೂರಿಗೆ ಕಸ ವರ್ಗಾವಣೆಯಾಗಿದ್ದು ಹೇಗೆ?

ಬೆಂಗಳೂರು ನಗರದಲ್ಲಿ ಪ್ರತಿದಿನ 4000 ದಿಂದ 5000 ಟನ್‌ಗಳಷ್ಟು ತ್ಯಾಜ್ಯ ಸೃಷ್ಟಿಯಾಗುತ್ತದೆ. ಬೆಂಗಳೂರು ನಗರ ಎಲ್ಲೆ ಮೀರಿ ಬೆಳೆಯುತ್ತಿರುವುದರಿಂದಾಗಿ ಕಸದ ಪ್ರಮಾಣವೂ ದಿನೇದಿನೇ ಏರಿಕೆಯಾಗುತ್ತಿದೆ. ಈ ಕಸ ವಿಲೇವಾರಿ ಕೆಲಸವನ್ನು ಬಿಬಿಎಂಪಿ ಗುತ್ತಿಗೆದಾರರಿಗೆ ವಹಿಸಿ ದಶಕಗಳೇ ಕಳೆದುಹೋಗಿವೆ. ಸದರಿ ಕಸವನ್ನು ಬಿಬಿಎಂಪಿ ಸೂಚಿತ ಪ್ರದೇಶಗಳಿಗೆ ಕೊಂಡೊಯ್ದು ಸುರಿಯುವುದು ಗುತ್ತಿಗೆದಾರರ ಕಾಯಕ. ಇಲ್ಲಿಗೆ 2-3 ವರ್ಷಗಳ

09ನೇ ಪುಟಕ್ಕೆ...

ಪರ್ಯಾಯ ಮಾರ್ಗಗಳೇನು?

ಗಾರ್ಡನ್ ಸಿಟಿ ಎಂದು ಖ್ಯಾತಿ ಪಡೆದಿದ್ದ ಬೆಂಗಳೂರು ನಗರ ಗಾರ್ಬೇಜ್ ಸಿಟಿಯಾಗಿ ಬದಲಾಗುತ್ತಿರುವುದು ...ಕೆ? ಬೆಂಗಳೂರಿಗಿಂತಲೂ ಬೃಹದಾಕಾರವಾಗಿ ಬೆಳೆದಿರುವ ಮುಂಬೈ, ಚೆನ್ನೈ, ದೆಹಲಿ, ಹೈದರಾಬಾದ್ ಮುಂತಾದ ...ಗರಗಳಲ್ಲಿ ಇಲ್ಲದ ಸಮಸ್ಯೆ ಬೆಂಗಳೂರಿಗೆ ಮಾತ್ರ ಯಾಕೆ? ಮುಂತಾದ ಪ್ರಶ್ನೆಗಳು ಉದ್ಭವಿಸುವುದು ಸಹಜ.

... ನಗರದಲ್ಲಿ ಉತ್ಪತ್ತಿಯಾಗುವ ಕಸದ ಸಮಸ್ಯೆಯನ್ನು ವೈಜ್ಞಾನಿಕವಾಗಿ ನಿರ್ವಹಿಸಿದರೆ ಇದು ಒಂದು ಸಮಸ್ಯೆಯೆನಿಸುವ ...ದಲಿಗೆ ಅಭಿವೃದ್ಧಿಗೆ ಪೂರಕವಾಗಿ ಮಾರ್ಪಡಿಸಬಹುದು ಎಂಬ ಅಂಶವನ್ನು ಹಲವಾರು ವರದಿಗಳು ಹೇಳುತ್ತವೆ. ...ಜ್ಯದಲ್ಲಿ ಸಾಮಾನ್ಯವಾಗಿ ಕಂಡುಬರುವ ಹಸಿ ತ್ಯಾಜ್ಯವನ್ನು ಬಳಸಿಕೊಂಡು ಜೈವಿಕ ಇಂಧನ ತಯಾರಿಸುತ್ತಿರುವ ...ಶಸ್ವಿ ಯೋಜನೆಗಳು ನಮ್ಮ ಮುಂದಿವೆ. ಕಾಗದ, ಪ್ಲಾಸ್ಟಿಕ್ ಮತ್ತು ಲೋಹದ ತ್ಯಾಜ್ಯಗಳನ್ನು ಸಂಸ್ಕರಿಸಿ ಪುನರ್‌ಬಳಕೆ ...ಡಬಹುದೆಂಬುದು ಶಾಲಾಬಾಲಕರಿಗೂ ತಿಳಿದಿರುವ ಸಂಗತಿ. ಇನ್ನು ಕಟ್ಟಡ ನಿರ್ಮಾಣ ತ್ಯಾಜ್ಯ ಬಳಸಿ ಇಟ್ಟಿಗೆ ...ಯಾರಿಸುವ ಸಾಧ್ಯತೆಯೂ ಇದೆ. ಹೀಗೆ ಕಸದಿಂದ ರಸ ಎಂಬ ಗಾದೆ ಮಾತಿನಂತೆ ನಾನಾಬಗೆಯ ಪರ್ಯಾಯಗಳು ...ಷ್ಟು ಮುಂದಿವೆ.

ಉದಾಹರಣೆಗೆ ಪೂನಾದಲ್ಲಿ ಚಿಂದಿ ಆಯುವ ಜನರೇ 'ಸ್ವಚ್ಛ್' ಎಂಬ ಸಂಘಟನೆ ರೂಪಿಸಿಕೊಂಡು ಇಡೀ ...ನಾದ ಕಸದ ಸಮಸ್ಯೆಯನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರಧಾರಿಗಳಾಗಿದ್ದಾರೆ. ಮಾತ್ರವಲ್ಲ; ಪುನರ್‌ಬಳಕೆ ...ಡಬಹುದಾದ ಕಾಗದ, ಪ್ಲಾಸ್ಟಿಕ್, ಕಬ್ಬಿಣ ಮುಂತಾದ ಲೋಹಗಳನ್ನು ಪ್ರತ್ಯೇಕಿಸಿ ನೂರಾರು ಕೋಟಿ ಮೌಲ್ಯದ ...ವನ್ನು ಆರ್ಥಿಕತೆಗೆ ಕೊಡುಗೆಯಾಗಿ ನೀಡುತ್ತಿದ್ದಾರೆ. ಇದರೊಂದಿಗೆ ಸುಮಾರು 3000 ಮಂದಿಗೆ ಉದ್ಯೋಗ ...ಸಿರುವುದು ಮಾತ್ರವಲ್ಲ; ಸರ್ಕಾರದ ಮೇಲೆ ಹೊರೆಯೂ ಕಡಿಮೆಯಾಗಿದೆ.

... ತಮಿಳುನಾಡಿನ ಸೇಲಂನಲ್ಲಿ 'ಹ್ಯಾಂಜೆರ್ ಬಯೋಟೆಕ್ ಎನರ್ಜೀಸ್ ಲಿಮಿಟೆಡ್' ಎಂಬ ಸಂಸ್ಥೆ ತ್ಯಾಜ್ಯದ ...ಯಿಂದಲೇ ವಿವಿಧ ವಸ್ತುಗಳನ್ನು ಪ್ರತ್ಯೇಕಿಸಿ, ಸಂಸ್ಕರಣೆ ಮಾಡುವ ಯಶಸ್ವಿ ಮಾದರಿಯನ್ನು ಅಳವಡಿಸಿಕೊಂಡಿದೆ. ...13ರ ಸೆಪ್ಟೆಂಬರ್‌ನಲ್ಲಿ ಸಚಿವ ರಾಮಲಿಂಗಾರೆಡ್ಡಿ, ಮೇಯರ್ ಸತ್ಯನಾರಾಯಣ ಒಳಗೊಂಡಂತೆ ಸುಮಾರು 150 ...ಂದಿಯ ತಂಡ ಸೇಲಂಗೆ ಭೇಟಿ ನೀಡಿ ಬಂದಿತ್ತು, ನಂತರ ಇದೇ ಮಾದರಿ ಬೆಂಗಳೂರಿಗೆ ಸೂಕ್ತ ಎಂದು ...ಘೋಷಿಸಿತ್ತು, ಆದರೆ ಇದುವರೆಗೆ ಈ ದಿಕ್ಕಿನಲ್ಲಿ ಹೇಳಿಕೊಳ್ಳುವಂಥ ಯಾವುದೇ ಪ್ರಗತಿಯಾಗಿಲ್ಲ.

... ಬೆಂಗಳೂರಿನ ಅಧಿಕೃತ ನಿಯೋಗಗಳು ಕೇವಲ ಸೇಲಂಗೆ ಮಾತ್ರವಲ್ಲ; ಕಳೆದ ಒಂದು ದಶಕದಲ್ಲಿ ದೇಶದ ...ವಾರು ನಗರಗಳಿಗೆ ಭೇಟಿ ಕೊಟ್ಟಿದ್ದು ಮಾತ್ರವಲ್ಲದೆ ದುಬೈ, ಅಮೆರಿಕ, ಬೆಲ್ಜಿಯಂ ಮುಂತಾದ ವಿದೇಶಗಳಿಗೂ ...ಹೋಗಿ ಬಂದಿವೆ. ಅದರಲ್ಲಿ ಯಾವುದಾದರೂ ಒಂದು ಸೂಕ್ತ ಮಾದರಿಯನ್ನು ಅಳವಡಿಸಿಕೊಂಡಿದ್ದರೆ ಪರಿಸ್ಥಿತಿ ...ಷ್ಟೋ ಸುಧಾರಿಸುತ್ತಿತ್ತು.

... ಹಾಗಾದರೆ ಗುತ್ತಿಗೆದಾರರಿಗೆ ಕಸ ಸಾಗಿಸುವ ಕೆಲಸವನ್ನು ಬಿಟ್ಟುಕೊಟ್ಟು, ಅವರ ಜೇಬು ತುಂಬಿಸುವ ಈಗಿನ ...ದರಿಯನ್ನು ಬರಖಾಸ್ತು ಮಾಡಬೇಕಾಗುತ್ತದೆ. ಇದಕ್ಕೆ ಗುತ್ತಿಗೆದಾರರು ಒಪ್ಪುವುದು ಹಾಗಿರಲಿ, ಹಾಲು ಹಿಂಡುವ ...ವನ್ನು ಬಿಟ್ಟುಕೊಡಲು ಅಧಿಕಾರಿಗಳೂ ಸಿದ್ಧರಿಲ್ಲ!




ಪೌರ ಕಾರ್ಮಿಕರ ಶೋಷಣೆ

ಪೌರ ಕಾರ್ಮಿಕರನ್ನು ಅಕ್ಷರಶಃ ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದ್ದ ಗುತ್ತಿಗೆದಾರರು ಅವರಿಗೆ ಕೊಡುತ್ತಿದ್ದ ಸಂಬಳ ಮಾಸಿಕ ಕೇವಲ 2500-3000ರೂ ಮಾತ್ರ! ಬಿಬಿಎಂಪಿ ಅಧಿಕಾರಿಗಳು, ಕಾರ್ಮಿಕ ಇಲಾಖೆ ಎಲ್ಲರೂ ಗುತ್ತಿಗೆದಾರರ ಋಣಕ್ಕೆ ಬಿದ್ದು ಕಣ್ಣುಮುಚ್ಚಿ ಕುಳಿತಿದ್ದರು. ಇಲ್ಲಿಗೆ ಸುಮಾರು ಒಂದು ವರ್ಷದ ಹಿಂದೆ ಕೆಲವು ಸಂಘ ಸಂಸ್ಥೆಗಳ ಪ್ರಯತ್ನದ ಫಲವಾಗಿ ಕೋರ್ಟ್ ಆದೇಶ ಹೊರಬಿದ್ದು ಕನಿಷ್ಠ ವೇತನ ನೀತಿ ಜಾರಿಯಾಗಿದೆ.

ಹೈಕೋರ್ಟ್ ಆದೇಶದ ಪ್ರಕಾರ ಈಗ ಪೌರ ಕಾರ್ಮಿಕರಿಗೆ ಮಾಸಿಕ 5,000 - 6000ರೂಗಳ ವೇತನ ಪಡೆಯುತ್ತಿದ್ದಾರೆ. ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ ಮಾಡುವ ವ್ಯವಸ್ಥೆ ಜಾರಿಗೆ ಬಂದಿದೆ. ಹೀಗಿದ್ದರೂ ಇನ್ನೂ ಕಾರ್ಮಿಕರಿಗೆ ಕನಿಷ್ಠ ಸುರಕ್ಷತಾ ಪರಿಕರಗಳು (ಗ್ಲೌಸ್, ಗಂ ಬೂಟ್, ವೈದ್ಯಕೀಯ ನೆರವು ಇತ್ಯಾದಿ) ಲಭ್ಯವಿಲ್ಲ. ಹತ್ತಾರು ವರ್ಷಗಳಿಂದ ಕಸ ಗುಡಿಸುವ ಕೆಲಸವನ್ನೇ ನಂಬಿಕೊಂಡಿದ್ದರೂ ಯಾವುದೇ ಉದ್ಯೋಗ ಭದ್ರತೆಯಿಲ್ಲ. ಆದರೆ ಗುತ್ತಿಗೆದಾರರಿಗೆ ಮಾತ್ರ ಅನಧಿಕೃತವಾಗಿ ಎಲ್ಲ ಭದ್ರತೆಯನ್ನೂ ಬಿಬಿಎಂಪಿ ಒದಗಿಸಿಕೊಟ್ಟಿದೆ.


ಅಂಬರೀಶ್


ಎಸ್.ಎಂ. ಕೃಷ್ಣ

ಪಾಳೇಗಾರರಿಬ್ಬರ ಪಜೀತಿ

ಕಾಂಗ್ರೆಸ್ ನಾಯಕ ಎಸ್.ಎಂ. ಕೃಷ್ಣರಿಗೆ ರಾಜ್ಯಸಭೆ ಟಿಕೆಟ್ಟು ತಪ್ಪಿದೆ. ಮಂಡ್ಯದ ಗಂಡು ಅಂಬರೀಶ್ ಮುಡಾ ಸೈಟು ಗೋಲ್‌ಮಾಲ್ ಹಗರಣದಲ್ಲಿ ಸಿಕ್ಕಿಬಿದ್ದಿದ್ದಾರೆ!

ಮಂಡ್ಯ ಕುರಿತಂತೆ ವಿಶೇಷವಾಗಿ ಕಾಂಗ್ರೆಸ್ಸಿಗೆ ಸಂಬಂಧಪಟ್ಟ ಈ ಎರಡು ಸುದ್ದಿಗಳೇ ಸದ್ಯ ಕರ್ನಾಟಕದ ಮಟ್ಟಿಗೆ ಕಾವೇರಿ ನಿರ್ವಹಣಾ ಮಂಡಳಿ ವಿವಿಧಕ್ಕೆ ಸರಿಸಮನಾಗಿ ಕೇಳಿಬರುತ್ತಿರುವ ಸುದ್ದಿಗಳು. ಕರ್ನಾಟಕದ ಹಿರಿಯ ರಾಜಕೀಯ ಮುತ್ಸದ್ದಿ ಎಸ್.ಎಂ. ಕೃಷ್ಣರಿಗೆ ರಾಜ್ಯಸಭೆ ಟಿಕೆಟ್ ನೀಡದ ಹೈಕಮಾಂಡ್ ವಿರುದ್ಧ ಖುದ್ದು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್‌ರೇ ನೇರಾನೇರ ಕಿಡಿಕಾರುತ್ತಾರೆಂದರೆ ಕಾಂಗ್ರೆಸ್ ಮಟ್ಟಿಗಿದು ಸಣ್ಣ ಸಂಚಲನವೇನಲ್ಲ. ಅದರಲ್ಲೂ ಕಾಂಗ್ರೆಸ್ಸಿನ ಒಕ್ಕಲಿಗರ ಕೋಟೆಯ ಮಟ್ಟಿಗಂತೂ ಮಾಮೂಲಿನ ಪ್ರಹಾರವಂತೂ ಅಲ್ಲವೇ ಅಲ್ಲ-

ಚೋದ್ಯವೆಂದರೆ ಕೃಷ್ಣನ ಕಾಲುಬುಡದಲ್ಲೇ ಕೊಳ್ಳಿಯ ಕಾವಾಗಿ ಸುಡುತ್ತಿದ್ದ ಮಂಡ್ಯದ ಗಂಡು ವಸತಿ ಮಂತ್ರಿ ಅಂಬರೀಶ್ ಕೂಡ ಇದೇ ಸಂದರ್ಭದಲ್ಲಿ ಯಡವಟ್ಟು ಮಾಡಿಕೊಂಡಿದ್ದಾರೆ. ತನ್ನ ವಾರ್ಷಿಕ ಆದಾಯವನ್ನು ಮುಚ್ಚಿಟ್ಟು ಸುಳ್ಳು ದಾಖಲೆ ಸೃಷ್ಟಿಸಿದ್ದೂ ಅಲ್ಲದೆ ಅದನ್ನಿಟ್ಟುಕೊಂಡು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಸೈಟು ಪಡೆದು ಅದನ್ನು ನಿಯಮಬಾಹಿರವಾಗಿ ಮಾರಿಕೊಂಡ ಆರೋಪಕ್ಕೆ ಬಲಿಯಾದ ಅಂಬಿಗಿದು ಅನಾರೋಗ್ಯದಷ್ಟೇ ಆಘಾತಕಾರಿ. ಬೆಂಗಳೂರಿನಲ್ಲಿ ಐಷಾರಾಮೀ ಬಂಗಲೆಯಿದ್ದೂ ತನಗೆ ಕರ್ನಾಟಕದಲ್ಲೆಲ್ಲೂ ವಾಸಕ್ಕೆ ಮನೆಯಿಲ್ಲ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸುವಷ್ಟು ದಾರಿದ್ರ್ಯ ಖಂಡಿತ ಅಂಬಿಗಿರಲಿಲ್ಲ. ಹೆಚ್ಚೂಕಮ್ಮಿಯಾದರೂ ನೇರ ಜೈಲಿಗೇ ಹೋಗಬಹುದಾದ ಇಂಥದೊಂದು ಕರ್ಮಕಾಂಡಕ್ಕೆ ಅಂಬಿಯನ್ನು ಕೆಡವಿದ ಪುಣ್ಯಾತ್ಮನಾದರೂ ಯಾರೋ?

ಮಂಡ್ಯ ಗಂಡಿನ ಪಜೀತಿ

ಮೇಲುನೋಟಕ್ಕೆ ಇವೆರಡೂ ಬೇರೆ ಬೇರೆ ಸುದ್ದಿಗಳೆ. ಕಾಂಗ್ರೆಸ್ ಮುತ್ಸದ್ದಿ ಕೃಷ್ಣರಿಗೆ ರಾಜ್ಯಸಭೆ ಟಿಕೆಟ್ ತಪ್ಪಿದ್ದಕ್ಕಾಗಲಿ ಅವರ ವಿರುದ್ಧದ ಹೈಕಮಾಂಡ್ ಅವಕೃಪೆಗಾಗಲಿ ಅಂಬರೀಶ್ ಕಾರಣರಲ್ಲ ನಿಜ. ಹಾಗೇ ಸತ್ಯ ಮುಚ್ಚಿಟ್ಟು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಮುಡಾ ಸೈಟು ಪಡೆದ ಅಂಬಿಯ ಪಜೀತಿಯಲ್ಲೂ ಕೃಷ್ಣರ ಕೈವಾಡವಾಗಲಿ ಪಿತೂರಿಯಾಗಲಿ ಇಲ್ಲ. ಮಂಡ್ಯಕ್ಕೆ ಸಂಬಂಧಪಟ್ಟದ್ದು ಎಂಬುದನ್ನು ಬಿಟ್ಟರೆ ಇವೆರಡೂ ಬೇರೆ ಬೇರೆ ಪ್ರಸಂಗಗಳೆ, ಹೆಚ್ಚೆಂದರೆ ಕಾಂಗ್ರೆಸ್ ಕೋಟೆಯೊಳಗಿನ ಗೌಡಿಕೆಗೆ ಸಂಬಂಧಪಟ್ಟ ಘಟನಾವಳಿಗಳೆನ್ನಬಹುದು. ಆದರೆ ಇವೆರಡಕ್ಕೂ ಸೂಕ್ಷ್ಮ ಸಂಬಂಧವೊಂದು ಯಾವುದೋ ಕಾರಣದಿಂದ ಬೆಸೆದಿರುವಂತಿದೆ. ನೇರಾನೇರ ಅಲ್ಲದೆ ಹೋದರೂ ಅಂಬರೀಶ್ ಮತ್ತು ಕೃಷ್ಣರ ಒಣಪ್ರತಿಷ್ಠೆಯ ಜಿದ್ದಾಜಿದ್ದಿ ಪರೋಕ್ಷವಾಗಿ ಅವರ ರಾಜಕೀಯ ವರ್ಚಸ್ಸನ್ನೇ ನುಂಗಲಾರಂಭಿಸಿದೆ. ಅವರ ರಾಜಕೀಯ ಭವಿಷ್ಯಕ್ಕೂ ಅವರಿಬ್ಬರ ಮುಸುಕಿನ ಗುದ್ದಾಟವೇ ಮುಳುಗು ನೀರಾಗುತ್ತಿದೆ. ಸದ್ಯ ಮುಡಾ ಸೈಟು ಹಗರಣದಲ್ಲಿ ಸಿಕ್ಕಿಬಿದ್ದು ತನ್ನ ಮಂತ್ರಿಗಿರಿಗೇ ಕುತ್ತು ಮಾಡಿಕೊಂಡ ಅಂಬಿಯ ಈ ದುರ್ಗತಿಗೆ ಹೇಗೆ ಕೃಷ್ಣರ ಹಗೆಯೇ ಮೂಲವಾಗಿದೆಯೋ ಅದೇರೀತಿ ಕೃಷ್ಣಗೇ ರಾಜ್ಯಸಭೆ ಟಿಕೆಟ್ ತಪ್ಪುವುದಕ್ಕೂ ಮಂಡ್ಯದ ಕಾಂಗ್ರೆಸ್ ಅಭ್ಯರ್ಥಿ ರಮ್ಯಾ ಸೋಲಿಗೂ ಮತ್ತು ಅಂಬರೀಶ್ ಬಣದ ಅಸಹಕಾರದಿಂದಾಗಿಯೇ ಮಂಡ್ಯದಲ್ಲಿ ಜೆಡಿಎಸ್ ಜಯಿಸಿದ್ದಕ್ಕೂ ಸಂಬಂಧವಿದೆ.

ಮಂಡ್ಯದ ದೌರ್ಭಾಗ್ಯವೋ ಗೌಡ ಕುಲಕ್ಕಂಟಿದ ಶಾಪವೋ ಗೊತ್ತಿಲ್ಲ. ಒಂದಾನೊಂದು ಕಾಲಕ್ಕೆ ಪಕ್ಕಾ ದೋಸ್ತಿಗಳಂತಿದ್ದ ಕೃಷ್ಣ ಮತ್ತು ಅಂಬರೀಶ್ ಜೋಡಿ ಕಂಡೇ ದೇವೇಗೌಡರು ಕೈಕೈ ಹಿಸುಕಿಕೊಳ್ಳುತ್ತಿದ್ದರು. ಮಂಡ್ಯ ಮಟ್ಟಿಗೆ ಕೃಷ್ಣ ಮತ್ತು ಅಂಬಿ ಜೋಡಿಯಾದರೆಂದರೆ ಜೆಡಿಎಸ್ ಕತೆ ಮುಗಿದಂತೆಯೇ ಎಂಬ ಆತಂಕವೂ ಕವಿದಿತ್ತು. ಅಷ್ಟಕ್ಕೂ ರಾಮನಗರದಲ್ಲಿ ಜೆಡಿಎಸ್‌ನಿಂದ ನಿಂತು ಇನ್ನಿಲ್ಲದಂತೆ ಸೋತು ಹೈರಾಣಾಗಿದ್ದ ಅಂಬಿಯನ್ನು ಕಾಂಗ್ರೆಸ್ಸಿಗೆ ಕರೆತಂದಿದ್ದೇ ಕೃಷ್ಣ. ಮಂಡ್ಯದಿಂದ ಲೋಕಸಭೆಗೆ ನಿಂತು ಅಂಬಿ ಕೇಂದ್ರ ಸಚಿವರಾಗುವಲ್ಲೂ ಕೃಷ್ಣರ ಕೈವಾಡವೇ ಮುಖ್ಯವಾಗಿತ್ತು.


ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ

ಆದರೆ ಕೃಷ್ಣ ಮುಖ್ಯಮಂತ್ರಿಯಾಗಿದ್ದೇ ಅದೇನಾಯಿತೋ ಗೊತ್ತಿಲ್ಲ, ಒಂದೇ ನಾಣ್ಯದ ಎರಡು ಮುಖಗಳಂತಿದ್ದ ಕೃಷ್ಣ ಮತ್ತು ಅಂಬಿ ಮಧ್ಯೆ ಅಸ್ಪಷ್ಟವಾಗಿದ್ದ ಬಿರುಕು ದೊಡ್ಡದಾಗುತ್ತಲೇ ಹೋಯಿತು. ಡಿ.ಕೆ. ಶಿವಕುಮಾರ್ ಪ್ರವೇಶದೊಂದಿಗೆ ಅದು ಮತ್ತಷ್ಟು ದೊಡ್ಡದಾಯಿತು. ಮಂಡ್ಯದಿಂದ ಲೋಕಸಭೆಗೆ ನಿಂತಿದ್ದ ಅಂಬಿ ಸೋಲಿನೊಂದಿಗೆ ಅದು ಇನ್ನಷ್ಟು ಗಟ್ಟಿಯಾಯಿತು: ಕೃಷ್ಣರಿಗೆ ಸಚಿವಗಿರಿ ಕೈತಪ್ಪಿ, ಅಂಬರೀಶ್ ಶ್ರೀರಂಗಪಟ್ಟಣದಿಂದ ವಲಸೆ ಬಂದು ಮಂಡ್ಯದಿಂದ ಕಣಕ್ಕಿಳಿದು, ಗೆದ್ದು ಸಿದ್ದು ಸಂಪುಟದಲ್ಲಿ ವಸತಿ ಮಂತ್ರಿಯಾದದ್ದು, ಅಧಿಕಾರವಿದ್ದಾಗಲೇ ಅನಾರೋಗ್ಯಕ್ಕೀಡಾಗಿದ್ದು, ಮಂಡ್ಯದಿಂದ ಕೃಷ್ಣರ ಮಾನಸ ಪುತ್ರಿ ರಮ್ಯಾ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು, ಅದಕ್ಕೆ ಅಂಬಿ ಬಣ ಅಡ್ಡಗಾಲಿಟ್ಟದ್ದು, ಅಂತಿಮವಾಗಿ ಅಂಬರೀಶ್ ಮತ್ತು ಕೃಷ್ಣರ ಒಣಪ್ರತಿಷ್ಠೆಯ ಕಚ್ಚಾಟದ ಫಲವಾಗಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ನಟಿ ರಮ್ಯಾ ಜೆಡಿಎಸ್ ಅಭ್ಯರ್ಥಿ ಪುಟ್ಟರಾಜು ಎದುರು ಸೋಲಬೇಕಾಗಿ ಬಂದದ್ದು ಮಂಡ್ಯದ ಪಾಳೇಗಾರರಿಬ್ಬರ ಪ್ರತಿಷ್ಠಾ ಕಾಳಗದ ಪರಿಣಾಮವಷ್ಟೆ.

ಆಕ್ಸ್‌ಫರ್ಡ್ ವಿಂಡ್ಸರ್‌ಮ್ಯಾನರ್

ವಿಕಟವೆಂದರೆ ಕೃಷ್ಣ ಮತ್ತು ಅಂಬಿ ಹೇಗೆ ಮಂಡ್ಯದ ಮಣ್ಣಿನಿಂದ ಬಂದವರೋ ಜಾತಿಯಲ್ಲಿ ಒಕ್ಕಲಿಗರೋ ಹಾಗೆಯೇ ಪ್ರವೃತ್ತಿಯಲ್ಲೂ ಪರಸ್ಪರ ಹೋಲಿಕೆಯುಳ್ಳವ... ಅದನ್ನು ಗೌಡಿಕೆಯೆನ್ನಿ, ಪಾಳೇಗಾರಿಕೆಯೆನ್ನಿ, ಉಡಾಫೆಯೆನ್ನಿ... ಅಂಬಿಯಂತೆ ಕೃಷ್ಣ ಕೂಡ ಐಷಾರಾಮಿ ಮತ್ತು ಸ್ವಭಾವದ... ಬಿಂದಾಸ್. ಯಾವುದೇ ಆದರ್ಶಗಳಿಲ್ಲ, ಯಾ... ವಿಷಯದಲ್ಲೂ ಸೀರಿಯಸ್ಸಿಲ್ಲ, ಐಷಾರಾಮದ ಸಕ... ಗುಣಗಳಾದ ಮದಿರೆ, ಮಾನಿನಿ, ಶೃಂಗಾರದಲ್ಲಿ ಇಬ್ಬರೂ ಸಾಕಷ್ಟು ಪಳಗಿದವರೆ. ಕೃಷ್ಣರದು ಆಕ್ಸ್‌ಫರ್ಡ್ ಕಲ್ಚರ್... ಅಂಬಿಯದ್ದು ವಿಂಡ್ಸರ್ ಮ್ಯಾನರ್!

ಮಂಡ್ಯದ ರೈತಾಪಿ ಜಾಯಮಾನಕ್ಕೆ ತೀರ ವ್ಯತಿರಿಕ್ತವಾದ ಫೈವ್‌ಸ್ಟಾರ್ ಕಲ್ಚರ್ ಅನ್ನೇ ರಾಜಕೀಯದಲ್ಲೂ ರೂಢಿಸಿ... ಕೊಂಡ ಎಸ್.ಎಂ. ಕೃಷ್ಣ ಹೇಗೆ ಕಾಂಗ್ರೆಸ್ ಸಂಸ್ಕೃತಿಯನ್ನು ರಕ್ತಗತ ಮಾಡಿಕೊಂಡಿದ್ದಾರೋ ಅದೇರೀತಿ ಅಂಬಿಯದು... ಸ್ಯಾಂಡಲ್‌ವುಡ್ ಪ್ರವೃತ್ತಿ, ಇಸ್ಪೀಟು, ಸಿಗರೇಟು, ಸ್ಪಿರಿಟ್ಟು ಅವರ ವ್ಯಕ್ತಿತ್ವದ ಭಾಗವಾಗೇ ಬಂದುಬಿಟ್ಟವು. ಬದುಕಿನಲ್ಲಿ ಯಾವೊಂದೂ ಸೀರಿಯಸ್ಸಲ್ಲ, ರಾಜಕಾರಣಿಯೊಬ್ಬನಿಗೆ ಇರಬೇಕಾದ ವೈಚಾರಿಕತೆ ಆದರ್ಶ, ಸಾಮಾನ್ಯ ಜ್ಞಾನ... ಏನೊಂದಕ್ಕೂ ಅಂಬಿ ಬದ್ಧರಲ್ಲ, ಅವರದ್ದು ಪಕ್ಕಾ ಮಂಡ್ಯದ ಗೌಡಿಕೆ ಮತ್ತು ಪಾಳೇಗಾರಿಕೆ.

ಹಾಗೆಯೇ ಕೃಷ್ಣ ಅಂಬಿಯ ಅಣ್ಣನಂತೆ ಕಾಣಿಸುತ್ತಾರೆ. ಮಾತು ಒರಟಲ್ಲ, ಅಂಬಿಯಷ್ಟು ಕಟುವಲ್ಲ ಎಂಬುದನ್ನು ಬಿಟ್ಟರೆ ಶೋಕಿ ಮತ್ತು ಐಷಾರಾಮದಲ್ಲಿ ಅವರಿಬ್ಬರ ಮಧ್ಯೆ ಹೆಚ್ಚು ವ್ಯತ್ಯಾಸವಿಲ್ಲ. ಎಂಥಾ ಜ್ವಲಂತ ಸಮಸ್ಯೆಯಿದ್ದರೂ ಆ ಬಗ್ಗೆ ಯಾವತ್ತೂ ಸೀರಿಯಸ್ಸಾಗುವುದಿಲ್ಲ. ಯಾರಿಗೂ ಯಾವುದೂ ಸೀರಿಯಸ್ಸಲ್ಲ ಮತ್ತು ಏನೊಂದಕ್ಕೂ ವಿಪರೀತ ತಲೆಕೆಡಿಸಿಕೊಂಡವರಲ್ಲ. ಕೃಷ್ಣರ ಇಂಥ ಆದರ್ಶಹೀನ, ನೀತಿವಿಹೀನ ಉಂಡಾಡಿ ರಾಜಕಾರಣವನ್ನು ವಿರೋಧಿಸಿ ಕೊಂಡೇ ಬಂದವರು ಮಂಡ್ಯದ ಗಾಂಧಿವಾದಿ ಮಾದೇಗೌಡ!


ಹೆಚ್ಚೂಕಮ್ಮಿ ಕೆ.ವಿ. ಶಂಕರೇಗೌಡರ ಪ್ರತಿರೂಪವೆಂಬಂತೆ ಮಂಡ್ಯದ ರಾಜಕಾರಣದಲ್ಲಿ ತನ್ನದೇ ದಾರಿ ಕೊರೆದಿದ್ದ ಮಾದೇಗೌಡರ ವಿರುದ್ಧ ಮಂಡ್ಯದ ಅಖಾಡಕ್ಕೆ ಕೃಷ್ಣ ಕರೆತಂದು ಬಿಟ್ಟದ್ದು ಅಂಬಿಯನ್ನು. ಏಕೆಂದರೆ ಅಂಬಿ ಮತ್ತು ಕೃಷ್ಣರ ಸಂಬಂಧಕ್ಕೆ ಜೆಡಿಎಸ್ ಮತ್ತು ದೇವೇಗೌಡರ ಅನುಬಂಧಕ್ಕಿಂತಲೂ ಹಳೆಯದಾದ ಕಾರಣವಿತ್ತು. ರಾಮನಗರದಲ್ಲಿ ಜೆಡಿಎಸ್‌ನಿಂದ ನಿಂತು ಹೀನಾಯವಾಗಿ ಸೋತು ಹೈರಾಣಾಗಿದ್ದ ಅಂಬಿಯನ್ನು ಕಾಂಗ್ರೆಸ್ಸಿಗೆ ಕರೆತಂದಿದ್ದೇ ಕೃಷ್ಣ, ಮಾದೇಗೌಡರ ಬದಲಿಗೆ ಮಂಡ್ಯದ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದ ಅಂಬಿಗೆ ತನ್ನನ್ನು ಅವಮಾನಿಸಿದ ದೇವೇಗೌಡರ ವಿರುದ್ಧ ಹೇಗೆ ಸೇಡು ಸೇರಿಸಿಕೊಳ್ಳಬೇಕೆಂಬ ಹಗೆಯಿತ್ತೋ ಹಾಗೇ ಕೃಷ್ಣರಿಗೂ ಅಂಬಿಯನ್ನು ದೇವೇಗೌಡರ ವಿರುದ್ಧ ಎತ್ತಿ ಕಟ್ಟುವ, ಅಂಬಿಯನ್ನು ಲೋಕಸಭೆಗೆ ಗೆಲ್ಲಿಸುವ ಮೂಲಕ ದೇವೇಗೌಡರ ವಿರುದ್ಧ ತೊಡೆತಟ್ಟುವ ಕೃಷ್ಣರ ದೂರಾಲೋಚನೆ ಮೊದಮೊದಲು ಪಸಂದಾಗಿಯೇ ಇತ್ತು.

ರಮ್ಯಾ ಎಂಟ್ರಿ

ಆದರೆ ಅಂಬಿಯದ್ದು ಉಡಾಫೆಯ ಒರಟು. ಬರಬರುತ್ತ ಕೃಷ್ಣರನ್ನು ಏಕವಚನದಲ್ಲಿ ಕರೆಯುವುದು, ಕೃಷ್ಣರ ಬಲಗೈ ಬಂಟ ದೀಕೆಯ ಮನೆಗೆ ನಡುರಾತ್ರಿ ನುಗ್ಗಿದ್ದೇ 'ಅವನ ಮಾತು ಕೇಳ್ಕೊಂಡು ನನ್‌ಮೇಲೆ ಗಾಂಚಾಲಿ ಮಾಡ್ತಿಯೇನೋ...' ಎಂದು ವಾಚಾಮಗೋಚರ ಬೈದಾಡಿದ್ದು ಇತ್ಯಾದಿಗಳೇ ಬರಬರುತ್ತ ಕೃಷ್ಣರಿಗೆ ಕಿರಿಕಿರಿಯಾದವು. ಇದರ ಫಲವೆಂಬಂತೆ ಲೋಕಸಭಾ ಚುನಾವಣೆಯಲ್ಲಿ ಅಂಬಿ ಸೋಲಬೇಕಾಯಿತು. ಜೆಡಿಎಸ್‌ನ ಚಲುವರಾಯ ಸ್ವಾಮಿ ವಿರುದ್ಧ ಅಂಬಿ ಸೋತಾಗಲೇ ಕೃಷ್ಣ-ಅಂಬಿ ಬಣಗಳ ಜಿದ್ದಾಜಿದ್ದಿ ದೊಡ್ಡ ಸುದ್ದಿಯಾಯಿತು.

ಹಾಗೆ ಸೋತ ಅಂಬಿ ಶ್ರೀರಂಗಪಟ್ಟಣದಿಂದ ವಿಧಾನಸಭೆಗೆ ನಿಲ್ಲಲು ಹೊರಟರೆ ಅಲ್ಲಿ ಅಂಬಿ ವಿರುದ್ಧ ಕತ್ತಿ ಮಸೆದ ರವೀಂದ್ರ ಶ್ರೀಕಂಠಯ್ಯ ಹೇಳಿಕೇಳಿ ಕೃಷ್ಣ...


ಕಲ್ಲಳ್ಳಿ ನಾಗೇಂದ್ರ


ಆತ್ಮಾನಂದ



ಮಂಡ್ಯದ ಸತ್ಯಾನಂದ


ರಾಜೀವ್ ಗೌಡ


ರಮ್ಯಾ

ಪರಮೇಶ್ವರ್ ಎಂಬ ತಲೆನೋವಿಗೆ ಕೃಷ್ಣ ಮದ್ದೆ?

ಕೃಷ್ಣರಿಗೆ ರಾಜ್ಯಸಭೆ ತಪ್ಪಿಸಿದ್ದು ಅವರನ್ನು ರಾಜ್ಯ ಕಾಂಗ್ರೆಸ್ ಅಧ್ಯಕ್ಷರನ್ನಾಗಿಸುವುದರ ಮುನ್ಸೂಚನೆಯೆ? ಪರಮೇಶ್ವರ್‌ರನ್ನು ಕೆಪಿಸಿಸಿ ಅಧ್ಯಕ್ಷಗಾದಿಯಿಂದ ಇಳಿಸಿ ಅಲ್ಲಿಗೆ ಕೃಷ್ಣರನ್ನು ತರುವುದು ಹೈಕಮಾಂಡ್ ಕಾರ್ಯತಂತ್ರವೆ?



ಕೃಷ್ಣರಿಗೆ ರಾಜ್ಯಸಭೆಗೆ ಟಿಕೆಟ್ ತಪ್ಪಿದ್ದೇ ತಡ, ಪ್ರಪಂಚವೇ ಮುಳುಗಿ ಹೋದಂತೆ ಗಾಬರಿ ಬಿದ್ದ ಎಂ.ವಿ. ರಾಜಶೇಖರನ್ ಹಿಂದೆಮುಂದೆನ್ನದೆ 'ಇದಕ್ಕೆಲ್ಲಾ ಕೃಷ್ಣ ಭೈರೇಗೌಡರೇ ಕಾರಣ, ಅವರು ಸಿಕ್ಸಾಪಟ್ಟೆ ವಯಸ್ಸಾಗಿದೆ ಎಂದು ರಾಹುಲ್ ಗಾಂಧಿಗೆ ಚಾಡಿ ಚುಚ್ಚಿದ್ದೇ ಕೃಷ್ಣರಿಗೆ ಟಿಕೆಟ್ ತಪ್ಪಲು ಕಾರಣ, ಎಂದುಬಿಟ್ಟರು. ಬಹುಶಃ ರಾಜಶೇಖರನ್‌ಗೆ ಗೊತ್ತಿರದ ವಾಸ್ತವವೆಂದರೆ ಕೃಷ್ಣ ಭೈರೇಗೌಡರಾಗಲಿ, ರಾಜ್ಯ ಕಾಂಗ್ರೆಸ್ಸಿನ ಮತ್ತಾರೇ ಆಗಲಿ ಹೇಳಿದ ಮಾತ್ರಕ್ಕೆ ಕೃಷ್ಣರನ್ನು ಕೈಬಿಡುವಷ್ಟು ಮೂರ್ಖತನ ಹೈಕಮಾಂಡ್‌ಗಿಲ್ಲ ಮತ್ತು ಕೃಷ್ಣ ಆ ಮಟ್ಟದ ಪುಡಿ ನಾಯಕನೂ ಅಲ್ಲ.


ರಾಜ್ಯಸಭೆ ಸ್ಥಾನವಿಲ್ಲದೆ ಹೋದರೆ ಕಾಂಗ್ರೆಸ್ ಮಟ್ಟಿಗೆ ಅತ್ಯಂತ ಉನ್ನತ ಸ್ಥಾನವೆಂದೇ ಪರಿಗಣಿಸಲ್ಪಡುವ 'ಸಿಡಬ್ಲ್ಯೂಸಿ' ಅಂದರೆ ಕೇಂದ್ರ ಕಾರ್ಯಕಾರಿಣಿ ಸದಸ್ಯ ಸ್ಥಾನ ಕೃಷ್ಣರ ಪಾಲಿಗೆ ಇದ್ದೇ ಇದೆ. ಅದು ರಾಜ್ಯಸಭಾ ಸೀಟು ತಪ್ಪಿದ ಮಾತ್ರಕ್ಕೇ ಅದು ಕೃಷ್ಣರ ರಾಜಕೀಯ ಬದುಕಿನ ಅಂತ್ಯವೆಂದು ಯಾರಾದರೂ ಭಾವಿಸುವುದಾದರೆ ಇದಕ್ಕಿಂತ ಶ್ರೇಷ್ಠವಾಗಿದ್ದ ವಿದೇಶಾಂಗ ಸಚಿವಗಿರಿಯೇ ಕೈಬಿಡಲಿಲ್ಲವೆ?

ಹಾಗೆ ನೋಡಿದರೆ ಕೃಷ್ಣರ ಅನುಭವ ಮತ್ತು ವರ್ಚಸ್ಸಿಗೆ ಹೋಲಿಸಿದರೆ ರಾಜ್ಯಸಭಾ ಸ್ಥಾನ ಏನೇನೂ ಅಲ್ಲ, ಅದಕ್ಕಿಂತ ದೊಡ್ಡ ಹೊಣೆಗಾರಿಕೆ ವಹಿಸಬೇಕೆಂಬ ದೂರದೃಷ್ಟಿಯಿಂದಲೇ ಟಿಕೆಟ್ ತಪ್ಪಿಸಲಾಗಿದೆಯೆಂದು ಏಕೆ ಭಾವಿಸಬಾರದು. ಏಕೆಂದರೆ ಕರ್ನಾಟಕದ ಖರ್ಗೆ ಈಗಾಗಲೇ ರಾಷ್ಟ್ರ ಕಾಂಗ್ರೆಸ್ ಪಾಲಿಗೆ ಅತ್ಯುನ್ನತವಾದ ದ್ವಿತೀಯ ಸ್ಥಾನ ಅಂದರೆ ವಿರೋಧಿ ನಾಯಕನ ಸ್ಥಾನವನ್ನಲಂಕರಿಸಿದ್ದಾರೆ. ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಬಿಟ್ಟರೆ ಪರಮೋಚ್ಚ ಪದವಿ ಲೋಕಸಭೆಯ ಕಾಂಗ್ರೆಸ್ ಗುಂಪಿನ ನಾಯಕ ಸ್ಥಾನವೆ. ಜಾತಿಯಲ್ಲಿ ಬಲಗೈ ದಲಿತರಾದ ಖರ್ಗೆಗೆ ಇಂಥ ಉನ್ನತ ಸ್ಥಾನ ಸಿಕ್ಕ ಮೇಲೆ ಅದೇ ಜಾತಿಗೆ ಸೇರಿದ ಪರಮೇಶ್ವರರನ್ನು ಕೆಪಿಸಿಸಿ ಅಧ್ಯಕ್ಷಗಾದಿಯಲ್ಲಿ ಮುಂದುವರಿಸುವುದು ಅಂಥ ಲಾಭಕರವೇ ಎಂಬ ನಿರ್ಧಾರಕ್ಕೆ ಹೈಕಮಾಂಡ್ ಬಂದಂತಿದೆ.

ಏಕೆಂದರೆ ಪರಮೇಶ್ವರ್ ಕೆಪಿಸಿಸಿ ಅಧ್ಯಕ್ಷರಾಗಿ ಪ್ರತಿನಿತ್ಯ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಕಾಲೆಳೆಯುವುದನ್ನೇ ಕಾಯಕ ಮಾಡಿಕೊಂಡಿರುವುದು ತನ್ನ ಚೇಲಾಗಳನ್ನು ಬಿಟ್ಟು ಉಪಮುಖ್ಯಮಂತ್ರಿಗಿರಿಗೆ ಲಾಬಿ ಶುರುವಿಟ್ಟಿದ್ದು ಸದ್ಯ ಕಾಂಗ್ರೆಸ್ ಸರ್ಕಾರದ ಪಾಲಿಗಂತೂ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಬಹಿರಂಗವಾಗೇ ಹೈಕಮಾಂಡ್ ವಿರುದ್ಧ ಕಿಡಿಕಾರುವುದಕ್ಕೂ ಹೇಸದ ಪರಮೇಶ್ವರ್ ಪಾಲಿಗೆ ಮುಖ್ಯಮಂತ್ರಿ ಹುದ್ದೆಗೆ ಸರಿಸಮನಾದ ಕೆಪಿಸಿಸಿ ಅಧ್ಯಕ್ಷಗಿರಿಗಿಂತಲೂ ಯಃಕಶ್ಚಿತ್ ಮಂತ್ರಿಗಿರಿಯೇ ದೊಡ್ಡದೆನಿಸುವಂಥ ಮೂರ್ಖತನ!

ಇಂಥ ಯಡವಟ್ಟಿನ ಪರಮೇಶ್ವರ್‌ರನ್ನು ಕೆಪಿಸಿಸಿ ಅಧ್ಯಕ್ಷಗಾದಿಯಿಂದ ಇಳಿಸಿ ಆ ಜಾಗಕ್ಕೆ ಕೃಷ್ಣರನ್ನು ತರುವ ಉದ್ದೇಶ ಹೈಕಮಾಂಡ್‌ನದ್ದೆ? ಸಿದ್ದು ಸರ್ಕಾರಕ್ಕೆ ಪ್ರತಿನಿತ್ಯ ಪರಮೇಶ್ವರ್ ತಂದೊಡ್ಡುವ ಪಜೀತಿ ಮತ್ತು ಮುಜುಗರವನ್ನು ತಪ್ಪಿಸಲೆಂದೇ ರಾಜ್ಯ ಕಾಂಗ್ರೆಸ್ ಅಧ್ಯಕ್ಷಗಾದಿಯ ತೂಕಕ್ಕೆ ತಕ್ಕಂತೆ ಇದ... ಕೃಷ್ಣರನ್ನು ತರುವ ಮುನ್ಸೂಚನೆಯೇ?

ಹಾಗೊಮ್ಮೆ ಕೆಪಿಸಿಸಿ ಅಧ್ಯಕ್ಷಗಾದಿಗೆ ಕೃಷ್ಣ ಒಪ್ಪದೆ ಹೋದರೆ ಅವರನ್ನು ರಾಷ್ಟ್ರೀಯ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸುವ ಸಾಧ್ಯತೆಯೂ ಇದೆ. ಇವೆಲ್ಲವೂ ಪುಡಿ ರಾಜ್ಯಸಭಾ ಸದಸ್ಯ ಸ್ಥಾನಕ್ಕಿಂತಲೂ ಉನ್ನತ ಹುದ್ದೆಗಳು. ಪಾಪ ಈ ಇಳಿವಯಸ್ಸಿನಲ್ಲಿ ಕೃಷ್ಣ ಇಷ್ಟೊಂದು ತೂಕ ಹೊರಬಲ್ಲರಾ ಎಂಬುದು ಅಸಲೀ ಪ್ರಶ್ನೆ.



ಮುಡಾ ಸೈಟಿಗಾಗಿ ಅಂಬಿ ಸಲ್ಲಿಸಿದ ಸುಳ್ಳು ದಾಖಲೆಗಳು

ಾತ್ಮ. ತಾನು ಗೆದ್ದು ಎಮ್ಮೆಲ್ಲೆಯಾಗಲು ುತ್ತಿರುವಾಗಲೇ ಅಂಬಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿ ದಬ್ಬಾಳಿಕೆಗೆ ರವೀಂದ್ರ ಶ್ರೀಕಂಠಯ್ಯ ಸರಿಯಾದ ಕೊಟ್ಟ. ಒಳಗೊಳಗೆ ಅಂಬಿ ವಿರುದ್ಧ ಉಲ್ಟಾ ಫಲವಾಗಿ ಅಂಬಿಗೆ ಹೀನಾಯ ಸೋಲಾಯಿತು. ಸೋಲಿನ ರೋಷಾವೇಷದಲ್ಲಿ ಕೃಷ್ಣರನ್ನು ುಗೋಚರ ಬೈದಾಡಿದ ಅಂಬಿಗೆ; ಕೃಷ್ಣ ತನ್ನ ರವೀಂದ್ರ ಶ್ರೀಕಂಠಯ್ಯನ ಮೂಲಕವೇ ತನ್ನನ್ನು ಯವಾಗಿ ಮುಗಿಸಲೆತ್ನಿಸಿದರೆಂಬ ನಂಬಿಕೆ ಮತ್ತಷ್ಟು ಯಿತು.

ಂದೆ ಶ್ರೀರಂಗಪಟ್ಟಣಕ್ಕೆ ತನ್ನ ಚೇಲಾ ಲಿಂಗರಾಜುಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿದರೆ ಆತನ ವಿರುದ್ಧ ಯ ಕಾಂಗ್ರೆಸ್ಸಿನಿಂದ ಕೃಷ್ಣರ ಬಂಟ ರವೀಂದ್ರ ನಿಂತಿದ್ದ. ಂಡ್ಯಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾದ ಅಂಬಿ ನಾನಾ ಮಾಡಿಯೇ ಗೆದ್ದರಾದರೂ ಗೆಲ್ಲುವ ಹೊತ್ತಿಗೆ ಜೇತಿಯೇ ಸಾಕುಸಾಕಾಗಿತ್ತು. ಸಹಜವಾಗೇ ವಸತಿ ಯಾದ ಅಂಬಿಗೆ ಇನ್ನೇನು ಇಡೀ ಮಂಡ್ಯಕ್ಕೆ ತಾನೇ ಾರ ಎಂದುಕೊಳ್ಳುತ್ತಿರುವಾಗಲೇ ಉಪಚುನಾವಣೆ ; ಅಲ್ಲಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು once ಕೃಷ್ಣರ ಮಾನಸಪುತ್ರಿ ರಮ್ಯಾ!

ೀಗೋ ಗೆದ್ದ ರಮ್ಯಾ ತನ್ನ ವರ್ಚಸ್ಸು, ಗ್ಲಾಮರ್, ಂನ್ನೆಲೆಯನ್ನೆಲ್ಲ ಪಣವಾಗಿಟ್ಟೆ ಜೆಡಿಎಸ್ ಕೋಟೆಯನ್ನು ಿಸಿಕೊಂಡಿದ್ದಳಾದರೂ ಅಂಬಿಯ ಪಾಲಿಗದು ಷದ ಸಂಗತಿಯಾಗಿರಲಿಲ್ಲ. ಮಂಡ್ಯಕ್ಕೆ ತಾನೇ ಅಧಿಪತಿ ವಾಗ ತನಗೆ ಪ್ರತಿಯಾಗಿ ಕೃಷ್ಣ ತನ್ನ ಮಾನಸ ನ್ನು ಅಖಾಡಕ್ಕಿಳಿಸಿದರೆಂಬ ಅನುಮಾನ ಅಂಬಿಯನ್ನು ಡಗಿತ್ತು. ಅದೇ ಹೊತ್ತಿಗೆ ಮಂಡ್ಯದ ಕಾಂಗ್ರೆಸ್ ್ಯಕ್ಕಾಗಿ ಕೃಷ್ಣ ಮತ್ತು ಅಂಬಿ ಬೆಂಬಲಿಗರ ಮಧ್ಯೆ ಷವಾಗಿತ್ತು. ಈ ಮಧ್ಯೆಯೇ ಲೋಕಸಭಾ ಚುನಾವಣೆ ಇದಿರಾಗಿದ್ದು ಅಂಬಿ ಗುಂಪಿನ ಪಾಲಿಗೆ ಮತ್ತೆ ಕತ್ತಿ ುವ ಅವಕಾಶ ಕಲ್ಪಿಸಿತ್ತು. ಅದಕ್ಕೆ ಬಲಿಯಾಗಿದ್ದು

ಸುಳ್ಳು ದಾಖಲೆ ಬಯಲು

ಂಡ್ಯ ಕಾಂಗ್ರೆಸ್ ಅಧಿಪತ್ಯವನ್ನು ಆತ್ಮಾರಿಂದ ಳ್ಳುವ ಅಂಬಿ ಬೆಂಬಲಿಗರ ಜಿದ್ದು ಲೋಕಸಭಾ ಣೆಯಲ್ಲೂ ಮುಂದುವರೆಯಿತು. ಅಂಬಿ ಬಂಟ ಗಪಟ್ಟಣದ ಲಿಂಗರಾಜು ಬಹಿರಂಗವಾಗೇ ರಮ್ಯಾ ಚುನಾವಣೆಯಲ್ಲಿ ಉಲ್ಟಾ ಹೊಡೆದರೆ ಅಂಬಿ ಗಳಾದ ಅಮರಾವತಿ ಚಂದ್ರಶೇಖರ್, ಅಂಬಿ ವಿಗಳ ಸಂಘದ ಅಧ್ಯಕ್ಷ ಬೇಲೂರು ಸೋಮ, ಶಶಿ ಇತ್ಯಾದಿಗಳೆಲ್ಲ ಒಳಗಿಂದೊಳಗೇ ರಮ್ಯಾ ಕತ್ತಿ ಮಸೆದರು. ಸಿಂಗಾಪೂರ್ ಆಸ್ಪತ್ರೆಯಿಂದ ಬಂದಂತೆ ಕಾಟಾಚಾರಕ್ಕಷ್ಟೇ ಪ್ರಚಾರ ನಡೆಸಿದ ು ಕೊಂಕುಮಾತುಗಳೇ ರಮ್ಯಾ ಸೋಲನ್ನು ್ತು.

ೀಕ್ಷೆಯಂತೆಯೇ ಜೆಡಿಎಸ್ ಗೆದ್ದು ರಮ್ಯಾ ಗಲೇ ಅಂಬಿ ವಿರುದ್ಧ ಕೃಷ್ಣ ನಿಷ್ಠರ ಪಿತ್ಥ ನೆತ್ತಿಗೇರಿತ್ತು. ಅಂಬಿ ವಿರುದ್ಧ ಕೆಂಡಾಮಂಡಲರಾದ ಕೃಷ್ಣಾನುಯಾ ಹೈ ವಕೀಲ ಸಚ್ಚಾನಂದ ಮಂಡ್ಯದ ಮಟ್ಟಿಗೆ ಲಗ್ಯ ಬಂಟನೆಂದೇ ಪ್ರಖ್ಯಾತ. ಸದ್ಯ ಕೆಪಿಸಿಸಿಯ ಜೊತೆಗೆ ಮಂಡ್ಯದ ಜಿಲ್ಲಾ ಕಾಂಗ್ರೆಸ್ ವಕ್ತಾರರೂ ಸಚ್ಚಾನಂದರಿಗೊಬ್ಬ ದಾಯಾದಿಯಿದ್ದಾನೆ. ಆತ ಆರ್‌ಟಿಐ ಕಾರ್ಯಕರ್ತ ರವೀಂದ್ರ.

, ಸೋತ ಬೆನ್ನಲ್ಲೇ ಸಚ್ಚಾನಂದರ ಜೊತೆ ಮಂಡ್ಯ ವೃದ್ಧಿ ಪ್ರಾಧಿಕಾರದ ಪುತ್ತೆಸ, ಕೈಯಿಟ್ಟಿದ್ದ ಕಳ್ಳಿ ದೊಡ್ಡ ಹಗರಣವನ್ನೇ ಬಯಲಿಗೆಳೆದಿದ್ದ, ೋಟಕ್, ಚಲುವರಾಯಸ್ವಾಮಿ, ಮಂಡ್ಯದ ಮಾಜಿ

ಶಾಸಕ ಶ್ರೀನಿವಾಸ್, ಮಂಡ್ಯದ ಹಾಲಿ ಸಂಸದ ಪುಟ್ಟರಾಜು, ರಮೇಶ್‌ಬಾಬು ಬಂಡಿಸಿದ್ದೇಗೌಡ ಮುಂತಾದವರೆಲ್ಲ ಅಕ್ರಮವಾಗಿ ಮುಡಾ ಸೈಟು ಪಡೆದ ಹಗರಣವನ್ನು ಬಯಲಿಗೆಳೆದಂತೆ ಅದು ಭಾಸವಾಗುತ್ತಿತ್ತಾದರೂ ಅವುಗಳ ಮಧ್ಯೆಯೇ ಸಚಿವ ಅಂಬರೀಶ್ ಬುಡಕ್ಕೆ ಬಾಂಬು ರೆಡಿಯಾಗಿತ್ತು. ತನಗೆ ವರ್ಷಕ್ಕೆ ಕೇವಲ 80 ಸಾವಿರ ರೂಪಾಯಿ ಆದಾಯವೆಂದೂ ತನಗೆ ಬೇರೆಲ್ಲೂ ಸ್ವಂತ ಮನೆಯಿಲ್ಲವೆಂದೂ ಅಂಬರೀಶ್ ಸಲ್ಲಿಸಿದ್ದ ಕಳ್ಳ ಪ್ರಮಾಣಪತ್ರ ನೇರವಾಗಿ ಅಂಬಿಯ ಮಂತ್ರಿಗಿರಿಯನ್ನೇ ಅಲ್ಲಾಡಿಸುವಂತಿತ್ತು.

ಹಳ್ಳಕ್ಕೆ ಬಿದ್ದ ಈರ್ವರೂ

ಇದು ಕೃಷ್ಣರ ಬಂಟರು ಅಂಬಿಯ ಬುಡಕ್ಕಿಟ್ಟ ಬೆಂಕಿ ಕೊಳ್ಳಿಯಾದರೆ ಇತ್ತ ದೆಹಲಿಯಿಂದ ಕೃಷ್ಣರ ರಾಜಕೀಯ ಬದುಕನ್ನೇ ಅಂತ್ಯ ಕಾಣಿಸುವಂತ ಸುದ್ದಿ ಬಂದಿತ್ತು. ಕೃಷ್ಣರಿಗೆ ರಾಜ್ಯಸಭೆಯ ಟಿಕೆಟ್ಟು ತಪ್ಪಿತ್ತು. ಕೃಷ್ಣರ ಬದಲಿಗೆ ರಾಜೀವ್‌ಗೌಡರಿಗೆ ಹೈಕಮಾಂಡ್ ಮಣೆ ಹಾಕಿತ್ತು. ಕಾಂಗ್ರೆಸ್ ಸರ್ಕಾರವಿದ್ದಾಗಲೇ ವಿದೇಶಾಂಗ ಸಚಿವ ಸ್ಥಾನಕ್ಕೂ ಆಪತ್ತು ಮಾಡಿಕೊಂಡಿದ್ದ ಕೃಷ್ಣರ ಪಾಲಿಗೆ ಕಾಂಗ್ರೆಸ್ ಋಣ ಸಂಬಂಧವಾಗಿ ಉಳಿದದ್ದು ರಾಜ್ಯಸಭಾ ಸ್ಥಾನವೊಂದೆ. ಮೊದಲೇ ವೃದ್ಧಾಪ್ಯ. ವಯಸ್ಸು ಎಂಬತ್ತೆರೆಡು ಎಂಬುದು ಒಂದೆಡೆಯಾದರೆ ಮತ್ತೊಂದೆಡೆ ಅನಾರೋಗ್ಯ ಬೇರೆ. ಇದೆಲ್ಲ ಲೆಕ್ಕ ಹಾಕಿಯೇ ವಿದೇಶಾಂಗ ಸಚಿವ ಸ್ಥಾನದಿಂದ ಮುಕ್ತಿಗೊಳಿಸಲಾಗಿತ್ತು.

ಪರಿಸ್ಥಿತಿ ಹೀಗಿರುವಾಗಲೇ ಗಾಯದ ಮೇಲೆ ಬರೆ ಎಳೆದಂತೆ ತಮ್ಮ ತವರು ನೆಲದಲ್ಲೇ ಕಾಂಗ್ರೆಸ್ ನೆಲಕಚ್ಚಿ ಮಾನಸ ಪುತ್ರಿಯಂತಿದ್ದ ರಮ್ಯಾರನ್ನೇ ಗೆಲ್ಲಿಸಲಾಗದ ಕಳಂಕವೂ ಕೃಷ್ಣರ ಟಿಕೆಟ್ ನಿರಾಕರಣೆಗೆ ಕಾರಣವಾಗಿತ್ತು.

ತನ್ನ ಸ್ವಕ್ಷೇತ್ರದಲ್ಲಿ ತಾನೇ ಅಖಾಡಕ್ಕಿಳಿಸಿದ ತನ್ನ ಮಾನಸಪುತ್ರಿಯನ್ನು ಗೆಲ್ಲಿಸಲಾಗದ ಕೃಷ್ಣ ಇನ್ನು ಮೈಸೂರಿನಲ್ಲಿ ವಿಶ್ವನಾಥ್ ಪರ ನಿಂತು ಒಕ್ಕಲಿಗರ ಓಟು ಸೆಳೆಯಬಹುದಿತ್ತೆಂಬುದನ್ನು ಹೇಗೆ ತಾನೇ ಹೈಕಮಾಂಡ್ ನಿರೀಕ್ಷಿಸಲು ಸಾಧ್ಯ?

ಮಂಡ್ಯದಲ್ಲಿ ರಮ್ಯಾ ಸೋಲಿಗೆ ಹೇಗೆ ಅಂಬರೀಶ್ ಕಾರಣವೋ ಹಾಗೇ ಕೃಷ್ಣರಿಗೆ ರಾಜ್ಯಸಭೆ ಟಿಕೆಟ್ ತಪ್ಪಲು ಅವರ ತವರು ನೆಲದಲ್ಲಿ ಕಾಂಗ್ರೆಸ್ ನೆಲಕಚ್ಚಿದ್ದೂ ಕಾರಣಗಳಲ್ಲೊಂದು. ವಿಪರ್ಯಾಸವೆಂದರೆ ಯಾವ ಅಂಬಿಯಿಂದಾಗಿ ಕೃಷ್ಣರಿಗೆ ಇಂತಹ ದುರ್ಗತಿ ಬಂತೋ ಅದೇ ಕೃಷ್ಣರ ಅನುಯಾಯಿಗಳಿಂದಾಗಿ ಮಂಡ್ಯದ 'ಮುಡಾ' ಸೈಟು ಹಗರಣ ಬಯಲಾಗಿದೆ ಮತ್ತು ಅಂಬಿಯ ಖೊಟ್ಟಿ ದಾಖಲೆಗಳೆ ಅವರ ಮಂತ್ರಿ ಪದವಿಗೂ ಕಂಟಕವಾಗಿವೆ. ಜೈಲಿನ ದಿಕ್ಕನ್ನೂ ತೋರತೊಡಗಿವೆ. ಕೃಷ್ಣರ ರಾಜಕೀಯ ಭವಿಷ್ಯದ ಅಂತ್ಯದೊಂದಿಗೆ ಅವರ ಪಾಲಿನ ಸೆರಗಿನ ಕೆಂಡ ಅಂಬಿಯ ಮಂತ್ರಿಗಿರಿಯೂ ಕೈತಪ್ಪುವ ಲಕ್ಷಣ ಗೋಚರಿಸುತ್ತಿವೆ.

ಒಬ್ಬ ಒರಟ ಮತ್ತೊಬ್ಬ ನಾಜೂಕಯ್ಯ. ಒಬ್ಬ ಕೇಡಿ ಕನ್ವರ್‌ಲಾಲ್ ಮತ್ತೊಬ್ಬ ಮಿಸ್ಟರ್ ನಟವರ್‌ಲಾಲ್. ಒಬ್ಬನದು ದುರಹಂಕಾರ ಮತ್ತೊಬ್ಬನದು ಒಳ ಹುನ್ನಾರ. ಇಬ್ಬರೂ ಮಂಡ್ಯದ ಗಂಡುಗಳೆ. ಒಬ್ಬರಿಗೊಬ್ಬರು ಪಾಳೇಗಾರರೆ. ಈತ ಪ್ರತಿಷ್ಠೆ ಬಿಡಲಾರ ಆತ ದರ್ಪ ಇಳಿಸಲಾರ. ಗೌಡರಿಬ್ಬರ ಸುದೀರ್ಘ ಜಿದ್ದಾಜಿದ್ದಿ ಸಹಜವಾಗೇ ಅವರ ವೃದ್ಧಾಪ್ಯ ಅನಾರೋಗ್ಯ ಮತ್ತು ಆಯುಸ್ಸಿನಲ್ಲಿ ಅಂತ್ಯ ಕಾಣುತ್ತದೆ ಎಂದೇ ಎಲ್ಲರೂ ನಿರೀಕ್ಷಿಸಿದ್ದರಲ್ಲವೆ?

ಆದರೆ ಅವಧಿಗೆ ಮೊದಲೇ ತನ್ನ ಗುಣದೋಷಗಳನ್ನು ತೋರಿಸುತ್ತಿದೆಯೆ? ಹೊಣೆಗೇಡಿತನದ ಪ್ರತಿಫಲವನ್ನು ತಮ್ಮ ಅಂತ್ಯ ಕಾಲದ ಮೊದಲೇ ಉಣ್ಣ ಹೊರಟವರಿಗಾಗಿ ಮರುಗುವವರುಂಟೆ?


● ರಾ. ಸೋಮನಾಥ್

ಕಂಡೋರ ಕಸಕ್ಕೆ ಮಂಡೂರು ಬಲಿ

07ನೇ ಪುಟದಿಂದ

ಹಿಂದಿನವರೆಗೂ ಬೆಂಗಳೂರು ಉತ್ತರ ತಾಲೂಕಿನ ಮಾವಳಿಪುರದಲ್ಲಿ ಬಹುಪಾಲು ಕಸವನ್ನು ಸುರಿಯಲಾಗುತ್ತಿತ್ತು. ಪರಿಣಾಮವಾಗಿ ಅಲ್ಲಿನ ಪರಿಸರದ ನೀರು, ಗಾಳಿ ಎಲ್ಲವೂ ಕಲುಷಿತಗೊಂಡು ಸುತ್ತಮುತ್ತಲ ಹತ್ತಾರು ಹಳ್ಳಿಗಳ ಜೀವನ ನರಕಸದೃಶವಾಗಿ ಮಾರ್ಪಟ್ಟಿತು; ನೂರಾರು ಜನರು ಹೇಳಹೆಸರಿಲ್ಲದ ನಾನಾ ರೋಗಗಳಿಗೆ ತುತ್ತಾದರು. ಸತ್ತ ಜಾನುವಾರುಗಳಿಗಂತೂ ಲೆಕ್ಕವೇ ಇಲ್ಲ.

ಲ್ಯಾಂಡ್ ಫಿಲ್‌ಗಳಲ್ಲಿ ಕಸ ತಂದು ಸುರಿಯುವ ಅಮಾನವೀಯ/ಅವೈಜ್ಞಾನಿಕ ಕ್ರಮವನ್ನು ವಿರೋಧಿಸಿ ರಾಜ್ಯ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯೊಂದನ್ನು ಮಾವಳಿಪುರದ ನಿವಾಸಿಗಳು ದಾಖಲಿಸಿದರು. ಹೈಕೋರ್ಟ್ ಸದರಿ ಪಿಐಎಲ್‌ನಲ್ಲಿದ್ದ ಹಲವಾರು ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಬಿಬಿಎಂಪಿ ಮತ್ತು ಸರ್ಕಾರಕ್ಕೆ ಸ್ಪಷ್ಟ ಆದೇಶ ನೀಡಿತು. '1.ಕಸವನ್ನು ಸಂಗ್ರಹಿಸುವ ಹಂತದಲ್ಲೇ ಒಣ ತ್ಯಾಜ್ಯ ಹಸಿ ತ್ಯಾಜ್ಯ ಹಾಗೂ ಪ್ಲಾಸ್ಟಿಕ್ ಹಾಗೂ ಲೋಹದ ತ್ಯಾಜ್ಯಗಳನ್ನು ಪ್ರತ್ಯೇಕಿಸಲು ಕ್ರಮಕೈಗೊಳ್ಳಬೇಕು. 2.ಕಸ ವಿಲೇವಾರಿ ಪ್ರಕ್ರಿಯೆಯನ್ನು ವಿಕೇಂದ್ರಿಕೃತಗೊಳಿಸಿ ಪ್ರತಿಯೊಂದು ವಾರ್ಡ್ ಮಟ್ಟದಲ್ಲೇ ವಿಲೇವಾರಿ/ಸಂಸ್ಕರಣೆಗೆ



ಯೋಜನೆ ರೂಪಿಸಬೇಕು. 3. ಈ ಪ್ರಕ್ರಿಯೆಯನ್ನು ಸೂಪರ್‌ವೈಸ್ ಮಾಡಲು ವಾರ್ಡ್ ಮಟ್ಟದಲ್ಲಿ ಸಿಟಿಜನ್ ಕಮಿಟಿಗಳನ್ನು ನೇಮಿಸಬೇಕು' ಎಂಬ ಸ್ಪಷ್ಟ ಆದೇಶ ನೀಡಿತು. ಆದರೆ ಈ ನಿಟ್ಟಿನಲ್ಲಿ ಒಂದು ಇಂಚೂ ಪ್ರಗತಿಯಾಗಲಿಲ್ಲ.

ಸರ್ಕಾರಿ ಪೋಷಿತ ಇಂಥಾ ಘೋರ ದುಷ್ಕೃತ್ಯದಿಂದ ರೋಸಿಹೋದ ಮಾವಳಿಪುರ ಮತ್ತು ಸುತ್ತಲ ಹಳ್ಳಿಗಳ ಜನತೆ ಅನಿವಾರ್ಯವಾಗಿ ಕೋರ್ಟ್ ಆದೇಶವನ್ನು ಪಾಲಿಸದ ಸರ್ಕಾರದ ವಿರುದ್ಧ ಹೋರಾಟಕ್ಕಿಳಿದರು. ಆದರೆ ಈ ನತದೃಷ್ಟ ಹಳ್ಳಿಗರ ಬಗ್ಗೆ ಸರ್ಕಾರ ನಡೆದುಕೊಂಡ ರೀತಿ ಮಾತ್ರ ತಲೆತಗ್ಗಿಸುವಂಥದ್ದು. ಎಸಿಪಿ, ಡಿಸಿಪಿಗಳು ಪೊಲೀಸ್ ಕಮಿಷನರ್ ಆದಿಯಾಗಿ ಸಾವಿರಾರು ಪೊಲೀಸ್ ಪಡೆಯನ್ನು ರಂಗಕ್ಕಿಳಿಸಿದ ಸರ್ಕಾರ ಖಾಕಿ ದೌರ್ಜನ್ಯ ನಡೆಸಿ ಪ್ರತಿಭಟನೆಯನ್ನು ತಣ್ಣಗಾಗಿಸುವ ದುಷ್ಟ ಯತ್ನ ಮಾಡಿತು. ಸರ್ಕಾರದ ಇಂಥಾ ದೌರ್ಜನ್ಯ ಮಾವಳಿಪುರದ ಜನರಲ್ಲಿ ಭಯಭೀತಿ ಹುಟ್ಟಿಸುವ ಬದಲಿಗೆ ಮತ್ತಷ್ಟು ಆಕ್ರೋಶ ಪುಟಿಯುವಂತೆ ಮಾಡಿತು. ಪರಿಣಾಮವಾಗಿ ಮಾವಳಿಪುರ ಸುತ್ತಮುತ್ತಲ ಗ್ರಾಮಗಳಲ್ಲಿ ಯುದ್ಧದ ವಾತಾವರಣ ನಿರ್ಮಾಣವಾಗಿ, ಪ್ರತಿನಿತ್ಯ ಮಾಧ್ಯಮಗಳಲ್ಲಿ ಈ ಘಟನಾವಳಿಗಳು ಬಿಸಿಬಿಸಿಯಾಗಿ ಪ್ರಚಾರ ಪಡೆದುಕೊಂಡವು.

ಕಸದ ಲಾರಿಗಳನ್ನು ತಡೆಗಟ್ಟಿದ ಪರಿಣಾಮವಾಗಿ ಕಸದ ಬಿಕ್ಕಟ್ಟಿನ ಬಿಸಿ ಬೆಂಗಳೂರು ನಗರವಾಸಿಗಳಿಗೂ ತಟ್ಟಿತು. ಬೆಂಗಳೂರಿನ ಬೀದಿಬೀದಿಗಳಲ್ಲಿ ಎಲ್ಲಿ ನೋಡಿದರೂ ಕಸದ ರಾಶಿ! ಎಲ್ಲೆಲ್ಲಿಯೂ ದುರ್ಗಂಧ! ವಿಪರ್ಯಾಸವೆಂದರೆ ಆಗ ರಾಜ್ಯದಲ್ಲಿ ಆಡಳಿತದಲ್ಲಿದ್ದ ಬಿಜೆಪಿ ಮಂದಿ ಇಂಥಾ ದುರ್ನಾತದ ನಡುವೆ ನಿಂತು ಬೆಂಗಳೂರು ಮಹಾನಗರ "ಇನ್ನಿಲ್ಲದಂತೆ ಅಭಿವೃದ್ಧಿ ಸಾಧಿಸಿದೆ" ಎಂದು ದೊಡ್ಡ ಗಂಟಲಲ್ಲಿ ಅರಚುತ್ತಿದ್ದರು!!

ಪರಿಸ್ಥಿತಿ ವಿಕೋಪಕ್ಕೆ ತಿರುಗುವುದನ್ನು ಕಂಡ ಸರ್ಕಾರ ಜನರ ಆಕ್ರೋಶ ತಣಿಯುವಂತೆ ಮಾಡಲು ಅಂದಿನ ಬಿಬಿಎಂಪಿ ಕಮಿಷನರ್ ಶಂಕರಲಿಂಗೇಗೌಡರನ್ನು ಎತ್ತಂಗಡಿ ಮಾಡಿತು. ಸುದೀರ್ಘ ನಿದ್ರೆಯಲ್ಲಿದ್ದ ಮಾಲಿನ್ಯ ನಿಯಂತ್ರಣ ಮಂಡಳಿ ಅಂತಿಮವಾಗಿ ಮಾವಳಿಪುರದಲ್ಲಿ ಕಸ ಸುರಿಯದಂತೆ ಬಿಬಿಎಂಪಿಗೆ ಆದೇಶ ಹೊರಡಿಸಿ, ಅಲ್ಲಿನ ಲ್ಯಾಂಡ್ ಫಿಲ್‌ಅನ್ನು ಮುಚ್ಚಿಸಿದ್ದರಿಂದಾಗಿ ಅಲ್ಲಿನ ನಿವಾಸಿಗಳು ನಿಟ್ಟುಸಿರು ಬಿಟ್ಟಿದ್ದರು. ಆದರೆ ಯಾವುದೇ ಪರಿಣಾಮಕಾರಿ ಪರ್ಯಾಯಗಳನ್ನು ಕಂಡುಕೊಳ್ಳಲು ಯೋಗ್ಯತೆಯಿಲ್ಲದ ಬಿಬಿಎಂಪಿ ಕಸ ಸುರಿಯಲು ಮಂಡೂರು ಗ್ರಾಮವನ್ನು ಆರಿಸಿಕೊಂಡಿದೆ.

ಕಳೆದ ಬಿಜೆಪಿ ಸರ್ಕಾರ ಕಾಂಟ್ರಾಕ್ಟರ್‌ಗಳೊಂದಿಗೆ ಶಾಮೀಲಾಗಿ ಕಸ ಸಮಸ್ಯೆಯ ಬಗ್ಗೆ ಯಾವುದೇ ಪರಿಣಾಮಕಾರಿ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ಎಂಬುದು ಈಗ ಇತಿಹಾಸ. ಆದರೆ ಬಿಜೆಪಿ ದುರಾಡಳಿತದ ಪರಿಣಾಮವಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವಾದರೂ ಮಾಡುತ್ತಿರುವುದು ಏನು? ಸರ್ಕಾರ ರಚನೆಯಾಗಿ ಬರೋಬ್ಬರಿ ಒಂದು ವರ್ಷ ಪೂರೈಸಿದ್ದರೂ ಕಸದ ಸಮಸ್ಯೆಯನ್ನು ಪರಿಹರಿಸುವ ವಿಷಯದಲ್ಲಾಗಲಿ, ಕಾಂಟ್ರಾಕ್ಟರ್‌ಗಳ ದುಷ್ಟ ಕೂಟವನ್ನು ಮಟ್ಟ ಹಾಕುವ ವಿಷಯದಲ್ಲಾಗಲಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಿದೆಯೆ ಎಂದರೆ ಉತ್ತರ ನಿರಾಶಾದಾಯಕ. ಮಂಡೂರಿನ ಜನರು ರಾಜಕಾರಣಿಗಳ/ ಅಧಿಕಾರಿಗಳ ನಿಷ್ಪ್ರಯೋಜಕ ಹೇಳಿಕೆ, ಆಶ್ವಾಸನೆಗಳನ್ನು ನಂಬಿ ಕೂರುವ ಸ್ಥಿತಿಯಲ್ಲಿಲ್ಲ.

ಕಾಂಟ್ರಾಕ್ಟರ್‌ಗಳ ಲಾಬಿ

ಕಸದ ಸಮಸ್ಯೆಯಿಂದ ರೋಸಿಹೋದ ಮಂಡೂರಿನ ಜನರು 2012ರಲ್ಲಿ ಒಮ್ಮೆ ಬೀದಿಗಿಳಿದಿದ್ದರು. ಆ ಹೋರಾಟದಲ್ಲಿ ಮಧ್ಯ ಪ್ರವೇಶಿಸಿದ ಕೆಲವು ಬಲಾಢ್ಯ ಶಕ್ತಿಗಳು ನಾನಾತಂತ್ರಗಳ ಮೂಲಕ ಪ್ರತಿಭಟನೆಯನ್ನು ತಣ್ಣಗಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದವು. ಹೀಗೆ ಪ್ರತಿಭಟನೆ ತಣ್ಣಗಾದ ಕೆಲವೇ ದಿನಗಳಲ್ಲಿ ಸುಮಾರು 20 ಮಂದಿಯನ್ನು ವಿದೇಶ ಪ್ರವಾಸಕ್ಕೆ ಕಳಿಸಲಾಗಿತ್ತು. ಎರಡು ಬಸ್‌ಗಳಲ್ಲಿ ಧರ್ಮಸ್ಥಳ ಪ್ರವಾಸದ ವ್ಯವಸ್ಥೆ ಮಾಡಲಾಗಿತ್ತು. ಸ್ಥಳೀಯ ರಾಜಕಾರಣಿಯೊಬ್ಬರ ಹುಟ್ಟುಹಬ್ಬದ ನೆಪದಲ್ಲಿ ಭಾರೀ ಬಿರಿಯಾನಿ ಔತಣವನ್ನು ಏರ್ಪಡಿಸಲಾಗಿತ್ತು. ಅಷ್ಟು ಮಾತ್ರವಲ್ಲ; ಕಸ ಸಾಗಿಸುವ ಗುತ್ತಿಗೆದಾರರು ಹಣದ ಥೈಲಿ ಬಳಸಿ ಸ್ಥಳೀಯ ಪಂಚಾಯ್ತಿಯ ಕೆಲ ಪ್ರಮುಖರನ್ನು ಬುಟ್ಟಿಗೆ ಹಾಕಿಕೊಂಡು ತಮ್ಮ ದುಷ್ಕೃತ್ಯ ಮುಂದುವರೆಸಲು ಹವಣಿಸಿದ್ದಾರೆಂದು ಗ್ರಾಮಸ್ಥರು ಆರೋಪಿಸುತ್ತಿದ್ದಾರೆ.

ಇಷ್ಟೆಲ್ಲಾ ಯಾಕೆ ಗೊತ್ತೆ? ಕಸ ಸಾಗಿಸುವ ಕಾರ್ಯಕ್ಕೆ ಪ್ರತಿವರ್ಷ ಬಿಬಿಎಂಪಿ ಸುಮಾರು 400 ಕೋಟಿಗಳಷ್ಟು ಹಣವನ್ನು ಗುತ್ತಿಗೆದಾರರಿಗೆ ಪಾವತಿಸುತ್ತದೆ. ಕಸವನ್ನು ವೈಜ್ಞಾನಿಕವಾಗಿ ಸಂಸ್ಕರಿಸುವ ಪರ್ಯಾಯ ವ್ಯವಸ್ಥೆಗಳು ಜಾರಿಗೆ ಬಂದರೆ ಇದುವರೆಗೆ ನೂರಾರು ಕೋಟಿ ಗುಳುಂ ಮಾಡಿರುವ ಗುತ್ತಿಗೆದಾರರ ಕೂಟದ ದುರ್ಲಾಭಕ್ಕೆ ಸಂಚಕಾರ ಬರುತ್ತದೆ. ಆದ್ದರಿಂದ ಶತಾಯಗತಾಯ ಯಥಾಸ್ಥಿತಿ ಮುಂದುವರೆಸಬೇಕೆಂಬ ಲಾಬಿ ಪ್ರಬಲವಾಗಿದೆ.

ಆದರೆ ಇದ್ಯಾವುದೂ ಕಸದಿಂದ ಉತ್ಪತ್ತಿಯಾಗುತ್ತಿರುವ ವಿಷವನ್ನಾಗಲಿ ಅಥವಾ ದುರ್ನಾತವನ್ನಾಗಲಿ ಬಗೆಹರಿಸಲಿಲ್ಲವಾದ್ದರಿಂದ ಇಲ್ಲಿನ ಜನರು ಇಂದು ಮತ್ತೆ ಹೋರಾಟಕ್ಕೆ ಇಳಿಯಬೇಕಾದ್ದು ಅನಿವಾರ್ಯ. ಎಚ್.ಎಸ್.ದೊರೆಸ್ವಾಮಿಯವರು ಮಂಡೂರಿನ ಜನರನ್ನು ಬೆಂಬಲಿಸಿ ನೇರವಾಗಿ ರಂಗಪ್ರವೇಶ ಮಾಡಿದ್ದರಿಂದಾಗಿ ಹೋರಾಟದ ಕಾವು ಮತ್ತಷ್ಟು ತೀವ್ರಗೊಂಡಿದೆ. ಬೆಂಗಳೂರಿನ ನಾಗರಿಕರ ಪರವಾಗಿ ಕರ್ನಾಟಕ ಜನಶಕ್ತಿಯ ಸದಸ್ಯರು ಮಂಡೂರಿನ ಜನತೆಯ ಹೋರಾಟವನ್ನು ಬೆಂಬಲಿಸಿ ಟೌನ್‌ಹಾಲ್ ಮುಂದೆ ಒಂದು ಸಾಂಕೇತಿಕ ಪ್ರತಿಭಟನೆ ನಡೆಸಿದ್ದು ಸ್ವಾಗತಾರ್ಹ.

ಬಿಬಿಎಂಪಿ ಹಾಗೂ ರಾಜ್ಯ ಸರ್ಕಾರ ಮಂಡೂರು ಜನತೆಯ ಮೇಲೆ ಪಾಳೇಗಾರಿಕೆ ನಡೆಸುತ್ತಿದ್ದರೆ ಬೆಂಗಳೂರಿನ ನಾಗರಿಕರು ಸಹಜವಾಗಿ ಕುರುಕು ಮೇಯುತ್ತಾ ನಿರ್ಭಾವುಕರಾಗಿ ಈ ಸುದ್ದಿಗಳನ್ನು ಟಿವಿಗಳಲ್ಲಿ ವೀಕ್ಷಿಸುತ್ತಿದ್ದಾರೆ. ತಾವು ಸೃಷ್ಟಿಸಿದ ಕಸ ಅಮಾಯಕ ಹಳ್ಳಿಗರ ಪಾಲಿಗೆ ನರಕ ಸೃಷ್ಟಿಸಿದೆ ಎಂಬ ಅರಿವಾಗಲಿ, ಆ ಜನರ ನ್ಯಾಯಯುತ ಬೇಡಿಕೆಗೆ ಕನಿಷ್ಠ ಮಟ್ಟದಲ್ಲಾದರೂ ಸ್ಪಂದಿಸಬೇಕಾದ್ದು ನಮ್ಮ ಕರ್ತವ್ಯವೆಂದಾಗಲಿ ಅವರಿಗೆ ಅನಿಸದಿರುವುದು ವಿಷಾದದ ಸಂಗತಿ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ



ಫುಟ್‌ಬಾಲ್ ಎಂಬ 'ಯುದ್ಧ'ದ 2014 ಪೋಸ್ಟರ್


1950 ರಲ್ಲಿ ಬ್ರೆಜಿಲ್ ಸೋತ ಕ್ಷಣ

ಏರುತಿಹುದು ಫುಟ್‌ಬಾಲ್ ಫೀವರ್!

ಈ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ಇಡೀ ಜಗತ್ತನ್ನು ಸಾಂಕ್ರಾಮಿಕ ಜ್ವರದಂತೆ ಒಂದು 'ಫೀವರ್' ಆಕ್ರಮಿಸಿರುತ್ತದೆ. ಅದು ಫುಟ್‌ಬಾಲ್ ಫೀವರ್. ಇನ್ನು ಬರುವ ಒಂದು ತಿಂಗಳ ಕಾಲ ಎಲ್ಲೆಂದರಲ್ಲಿ ಆ ಫೀವರ್ ಸುತ್ತಲೇ ಚರ್ಚೆ, ವಾದವಿವಾದ, ಬೆಟ್ಟಿಂಗ್ ಇತ್ಯಾದಿಗಳು ಗಿರಕಿ ಹೊಡೆಯುತ್ತಿರುತ್ತವೆ. ಎಲ್ಲರ ಬಾಯಲ್ಲೂ- ಕೆಲವರಿಗೆ ತಲೆ ಚಿಟ್ ಅನ್ನಿಸುವ ಮಟ್ಟಿಗೆ- ಬ್ರೆಜಿಲ್ ದೇಶದಲ್ಲಿ ನಡೆಯಲಿರುವ ಫುಟ್‌ಬಾಲ್ ವಿಶ್ವ ಕಪ್ ಬಗ್ಗೆಯೇ ಗುಣಗಾನ!!

ಇದಕ್ಕೆ ಕಾರಣಗಳೂ ಇವೆ. ಫುಟ್‌ಬಾಲ್ ನಮ್ಮ ಕ್ರಿಕೆಟ್ ಆಟದಂತೆ ಬೆರಳೆಣಿಕೆಯಷ್ಟು ಮಾತ್ರ ದೇಶಗಳಲ್ಲಿ ಜನಪ್ರಿಯವಾಗಿರುವ ಆಟವಲ್ಲ, ಬದಲಾಗಿ ಅದು ಜಗತ್ತಿನಾದ್ಯಂತ ಆಟಗಾರರನ್ನು, ಅಭಿಮಾನಿಗಳನ್ನು, ಕ್ರೇಜಿ ಫ್ಯಾನ್‌ಗಳನ್ನು ಹೊಂದಿರುವ ಕ್ರೀಡೆ. ಇದರ ಜನಪ್ರಿಯತೆಗೆ ಐತಿಹಾಸಿಕ ಮತ್ತು ಸಾಮಾಜಿಕ ಆಯಾಮಗಳಿವೆ.

ರೋಮ್ ನಗರದಲ್ಲಿ ಜನಿಸಿತೆನ್ನಲಾದ ಈ ಕ್ರೀಡೆ ಬ್ರಿಟಿಷ್, ಫ್ರೆಂಚ್, ಪೋರ್ಚುಗೀಸ್ ತರಹದ ವಸಾಹತು ದೇಶಗಳ ಮೂಲಕ ಜಗತ್ತಿನಾದ್ಯಂತ ಹರಡಿಕೊಂಡಿತು. ಆರಂಭದಲ್ಲಿ ವಸಾಹತುಶಾಹಿಗಳು ಮಾತ್ರ ಆಡುತ್ತಿದ್ದ ಫುಟ್‌ಬಾಲ್ ನಿಧಾನವಾಗಿ ಸ್ಥಳೀಯರನ್ನು ಆಕರ್ಷಿಸಲಾರಂಭಿಸಿತು. ಅದಕ್ಕೆ ಮುಖ್ಯ ಕಾರಣ ಈ ಆಟಕ್ಕೆ ಬೇಕಿದದ್ದು ಒಂದು ಬಾಲ್ ಮಾತ್ರ ಎಂಬುದು. ಆಗ ಬಡವರೂ ಈ ಆಟವನ್ನು ಆಡಲಾರಂಭಿಸಿದರು. ಆನಂತರ ಈ ಆಟದಲ್ಲಿ ಪಳಗಿದವರು ಬೇಡಿಕೆಯನ್ನು ಪಡೆಯಲಾರಂಭಿಸಿದ್ದರಿಂದ ಅದು ಸಾಮಾಜಿಕವಾದ ವರ್ಗಗಳನ್ನು ಮೀರಲು ಒಂದು ಅಸ್ತ್ರವೂ ಆಯಿತು. ಇವತ್ತಿಗೂ ಜಗತ್ತಿನ ಪ್ರಚಂಡ ಫುಟ್‌ಬಾಲ್ ಆಟಗಾರರಲ್ಲಿ ಹೆಚ್ಚಿನವರು ಬಡ ಹಿನ್ನೆಲೆಯಿಂದ ಬಂದವರೇ ಆಗಿದ್ದಾರೆ. ಉದಾಹರಣೆಗೆ ಫುಟ್‌ಬಾಲ್ ವಲಯದಲ್ಲಿ 'ರಾಜಾಧಿರಾಜ' ಎಂದು ಪರಿಗಣಿಸಲಾಗಿರುವ ಜರ್ಮನಿಯ ಮಾಜಿ ಆಟಗಾರ ಫ್ರಾನ್ಜ್ ಬೆಕನ್‌ಬಾರ್, ಜಗತ್ತು ಇಲ್ಲಿಯತನಕ ಕಂಡಿರುವ ಅತಿ ಶ್ರೇಷ್ಠ ಆಟಗಾರ ಎಂದೇ ಭಾವಿಸಿರುವ ಅರ್ಜಂಟಿನಾದ ಡಿಗೊ ಮರಡೋನ, 'ಶತಮಾನದ ಆಟಗಾರ' ಎಂದು ಬಣ್ಣಿಸಲಾಗುವ ಬ್ರೆಜಿಲ್‌ನ ಪಿಲೆ, ಇವರೆಲ್ಲರೂ ಹುಟ್ಟಿದ್ದು ಬಡ ಕುಟುಂಬಗಳಲ್ಲಾದರೂ ಖ್ಯಾತಿ ಮತ್ತು ಐಶ್ವರ್ಯ ಗಳಿಸಿದ್ದು ಫುಟ್‌ಬಾಲ್ ಆಟದ ಮೂಲಕ.

ದಕ್ಷಿಣ ಅಮೆರಿಕಾ ಖಂಡದಲ್ಲಿ ಫುಟ್‌ಬಾಲ್ ಆಟ ವರ್ಗ ಮತ್ತು ವರ್ಣಗಳನ್ನು ಮೀರುವ ಆಟವಾಗಿ ಬೆಳೆದಿದೆ. ಅದರಲ್ಲೂ ಬ್ರೆಜಿಲ್ ದೇಶದಲ್ಲಿ ಈ ಕ್ರೀಡೆ ಅದೆಷ್ಟು ಜನಪ್ರಿಯವೆಂದರೆ ಅಲ್ಲಿನ ಹಳ್ಳಿಗಳಲ್ಲಿ ಇತರೆ ಸೌಲಭ್ಯಗಳಿಲ್ಲದಿದ್ದರೂ ಕಡ್ಡಾಯವಾಗಿ ಒಂದು ಫುಟ್‌ಬಾಲ್ ಮೈದಾನ ಇದ್ದೇ ಇರುತ್ತದೆ.

ಬ್ರೆಜಿಲ್ ಎರಡನೆ ಬಾರಿಗೆ ವಿಶ್ವ ಕಪ್ ಪಂದ್ಯವನ್ನು ಪ್ರಾಯೋಜಿಸುತ್ತಿದೆ. ಈಗಾಗಲೇ ಐದು ಬಾರಿ ವಿಶ್ವ ಕಪ್ ಗೆದ್ದಿರುವ ಬ್ರೆಜಿಲ್ ವಿಶ್ವ ಕಪ್‌ಗೆಂದು 14 ಮಿಲಿಯನ್ ಡಾಲರ್‌ಗಳನ್ನು ವೆಚ್ಚ ಮಾಡಿ 12 ವಿವಿಧ ನಗರಗಳಲ್ಲಿ ಹೊಸ ಸ್ಟೇಡಿಯಂಗಳನ್ನು, ಹೈವೇಗಳನ್ನು, ವಿಮಾನ ನಿಲ್ದಾಣಗಳನ್ನು ನಿರ್ಮಿಸಿದೆ. ಈ ಕಾರಣಕ್ಕೇ ಈ ಬಾರಿಯದ್ದು ಅತಿ ದುಬಾರಿ ವಿಶ್ವ ಕಪ್ ಎಂದು ಈಗಾಗಲೇ 'ಖ್ಯಾತಿ' ಗಳಿಸಿದೆ. ಅದಕ್ಕೆ ಪ್ರತಿಕ್ರಿಯೆಯಾಗಿ ಬ್ರೆಜಿಲ್‌ನ ಹಲವು ಪ್ರಜೆಗಳು "ಇಂತಹ ದುಂದು ವೆಚ್ಚ ಬೇಕಿತ್ತೇ?" ಎಂದು ರಸ್ತೆಗಿಳಿದು ಪ್ರತಿಭಟಿಸುತ್ತಿದ್ದಾರೆ.

ಕಳೆದ ಬಾರಿ ಬ್ರೆಜಿಲ್ ವಿಶ್ವ ಕಪ್ ಪಂದ್ಯವನ್ನು ಪ್ರಾಯೋಜಿಸಿದ್ದು 1950ರಲ್ಲಿ. ಆದರೆ ಬ್ರೆಜಿಲ್‌ನ ಆಗಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸಗಳಿವೆ. ಈಗ ಬ್ರೆಜಿಲ್ ದೇಶದ ಆರ್ಥಿಕ ಸ್ಥಿತಿ ಸುಧಾರಿಸಿದೆ, ಬಡತನ ಮತ್ತು ನಿರುದ್ಯೋಗ ಕಡಿಮೆಯಾಗಿದೆ, ಯೂರೋಪ್ ದೇಶಗಳಿಗಿಂತಲೂ ಹೆಚ್ಚಿನ ಪ್ರಮಾಣದ ಅಭಿವೃದ್ಧಿಯನ್ನು ಕಂಡಿದೆ. ಇದೆಲ್ಲದರ ಜೊತೆ ಜಾಗತಿಕವಾಗಿ ಅದಕ್ಕೆ ಹೆಚ್ಚು ಮಾನ್ಯತೆ ಸಿಗುತ್ತಿದೆ.

ಆದರೆ 1950ರಲ್ಲಿ ಇಂತಹ ಪರಿಸ್ಥಿತಿ ಇರಲಿಲ್ಲ. ಬ್ರೆಜಿಲ್ 1822ರಲ್ಲೇ ಯೂರೋಪಿನ ವಸಾಹತುಗಳಿಂದ ಸ್ವಾತಂತ್ರ ಪಡೆದರೂ ಸರ್ವಾಧಿಕಾರಿ ಧೋರಣೆಯ ನಾಯಕರೇ ಸೈನ್ಯದ ಬೆಂಬಲದೊಂದಿಗೆ ಆ ದೇಶವನ್ನು ಆಳುತ್ತಾ ಬಂದರು. ಸೈನ್ಯದ ಕ್ರೌರ್ಯ, ಭೂಮಾಲೀಕರ ದಬ್ಬಾಳಿಕೆ, ಜನ ಹೋರಾಟಗಳ ದಮನ... ಇವೆಲ್ಲದರಿಂದಾಗಿ ಕಿತ್ತುತಿನ್ನುವ ಬಡತನ ಆಗ ಬ್ರೆಜಿಲ್‌ನಲ್ಲಿ ತಾಂಡವವಾಡುತ್ತಿತ್ತು. ಆಗ ಫುಟ್‌ಬಾಲ್ ಕ್ರೀಡೆಯೊಂದೇ ಜನರಲ್ಲಿ ಒಂದಿಷ್ಟು ಜೀವನೋತ್ಸಾಹವನ್ನು ಕಾಪಾಡುತ್ತಿದ್ದದ್ದು ಮತ್ತು ಜನರನ್ನು ಬೆಸೆದು ಇಟ್ಟಿದ್ದು.

ಅಂತಹ ಸಮಯದಲ್ಲೇ ಫಿಫಾ ಬ್ರೆಜಿಲ್ ದೇಶಕ್ಕೆ ವಿಶ್ವ ಕಪ್ ಸ್ಪರ್ಧೆಯನ್ನು ಪ್ರಾಯೋಜಿಸುವ ಅವಕಾಶವನ್ನು ನೀಡಿತ್ತು. ಹೇಗಿದ್ದರೂ ಬ್ರೆಜಿಲ್ ಆರಂಭದಿಂದಲೂ ವಿಶ್ವ ಕಪ್ ಸ್ಪರ್ಧೆಯಲ್ಲಿ ಭಾಗವಹಿಸುತ್ತಾ ಬಂದಿದ್ದರಿಂದ ಮತ್ತು ಆ ದೇಶದ ಆಟಗಾರರು ಖ್ಯಾತಿ ಗಳಿಸಿದ್ದರಿಂದ ಆ ಬಾರಿ ತಾವೇ ಗೆಲ್ಲುತ್ತೇವೆಂಬ ನಿರೀಕ್ಷೆಯಲ್ಲಿ ಬ್ರೆಜಿಲ್ ಅತ್ಯುತ್ಸಾಹದಿಂದ ಸ್ಪರ್ಧೆಗೆ ತಯಾರಿ ನಡೆಸಿತ್ತು. ರಿಯೋ

ಪುರುಷತ್ವದ ಅದ್ಭುತ ಅಭಿವ್ಯಕ್ತಿ ಫುಟ್‌ಬಾಲ್

1994ರಲ್ಲಿ ಅಮೆರಿಕದಲ್ಲಿ ಫುಟ್‌ಬಾಲ್ ವಿಶ್ವಕಪ್ ಪಂದ್ಯ ಏರ್ಪಟ್ಟಾಗ ಪಿ. ಲಂಕೇಶ್ ಮತ್ತು ಡಾ. ಕೆ.ಎಂ. ಶ್ರೀನಿವಾಸ ಗೌಡ ಅವರು ಬರೆದಿದ್ದ ಲೇಖನಗಳನ್ನು ಇಲ್ಲಿ ಮರು ಪ್ರಕಟಿಸುತ್ತಿದ್ದೇವೆ. ಫುಟ್‌ಬಾಲ್ ಆಟದ ಮಾಂತ್ರಿಕ ಶಕ್ತಿ, ಅದರ ಸುತ್ತ ಇರುವ ಜನರ ಆಸಕ್ತಿ ಮತ್ತು ಹಾಸ್ಯವನ್ನೂ ಈ ಲೇಖನಗಳು ಸೆರೆ ಹಿಡಿದಿವೆ....



ಫುಟ್‌ಬಾಲ್ ಬಹುಶಃ ಪ್ರಪಂಚದ ಅತ್ಯಂತ ಜನಪ್ರಿಯ ಕ್ರೀಡೆ. ಅನೇಕರಿಗೆ ಅದೇ ಧರ್ಮ. ಬದುಕುವ ವಿಧಾನ. ಬದುಕಿಗೆ ಕಾರಣ ಕೂಡ. ಜನಸಾಮಾನ್ಯನ ಆಟವೆಂದರೆ ಫುಟ್‌ಬಾಲೇ. ಏಕೆಂದರೆ ಅದಕ್ಕೆ ಬೇಕಾಗಿರುವುದು ಒಂದು ಚೆಂಡು ಅಷ್ಟೇ. ದೊಡ್ಡ ಮೈದಾನ ಬೇಡ, ಗಲ್ಲಿಗಳೇ ಸಾಕು. ಗೋಲ್‌ಪೋಸ್ಟ್ ಬೇಡ, ಎರಡು ಕಲ್ಲಿದ್ದರೆ ಸಾಕು. ಫುಟ್‌ಬಾಲ್‌ನ ಥ್ರಿಲ್ ಬರೀ ಗೋಲ್ ಹೊಡೆದಾಗ ಮಾತ್ರವಲ್ಲ, ಬಾಲ್‌ಗೋಸ್ಕರ ಆಗುವ ದ್ವಂದ್ವ ಯುದ್ಧ, ಆಟಗಾರರು ಪಾಸ್‌ಗಳನ್ನು ಊಹಿಸುತ್ತಾ ಚೆಸ್ ಪಾನ್‌ಗಳಂತೆ ಒಬ್ಬರ ಸುತ್ತ ಒಬ್ಬರು, ಒಬ್ಬರ ಹಿಂದೆ ಒಬ್ಬರು ವ್ಯೂಹಗಳನ್ನು ರಚಿಸುತ್ತಾ ಜಾಗ ಹಿಡಿಯುವ ಅಂದ, ಒಬ್ಬ ಒಳ್ಳೆಯ ಗೋಲ್‌ಕೀಪರ್ ಡೈವ್ ಹೊಡೆದು ಬಾಲ್ ಹಿಡಿಯುವ ಚಂದ ಅಥವಾ ಮೇಲಕ್ಕೆಗರಿ ಬೆರಳತುದಿಗಳಿಂದ ಚೆಂಡನ್ನು ಗೋಲ್‌ನ ಕ್ರಾಸ್‌ಬಾರ್ ಮೇಲೆ ಟಿಪ್ ಮಾಡುವ ಸುಂದರ ದೃಶ್ಯ- ಇವೆಲ್ಲ ಹುಚ್ಚು ಹಿಡಿಸುವಂಥವೆ.

ಉದಾಹರಣೆ: ಅಲ್ಬೇನಿಯ ಒಂದು ಸಣ್ಣ ಬಾಲ್ಕನ್ ದೇಶ. ಅಲ್ಲಿನ ಟಿರಾನ ಎಂಬ ಊರಿನ ಹೋಟೆಲ್

ಪೋಪ್‌ಗೂ ಫುಟ್‌ಬಾಲ್ ಇಷ್ಟ!



ಈಗ ಇಟಲಿಯಲ್ಲಿ ಹುಟ್ಟುತ್ತಿರುವ ಗಂಡು ಮಕ್ಕಳಿಗೆಲ್ಲ ರಾಬರ್ಟೋ ಎಂದು ಹೆಸರಿಡುತ್ತಿದ್ದಾರೆ. ಅವನ ಬಗ್ಗೆ ಈಗ ತಾನೇ ಬರೆದಿರುವ ದಂತಕಥೆಯ ಪ್ರಕಾರ- ಇದಕ್ಕೆ ಹಿನ್ನೆಲೆಯೆಂದರೆ. ಒಂದೆರಡು ವರ್ಷಗಳ ಹಿಂದೆ ರಾಬರ್ಟೋ ಬ್ಯಾಗಿಯೋ ಬೌದ್ಧ ಮತಸ್ಥನಾಗಿ ಮತಾಂತರ ಹೊಂದಿದ್ದಾನೆ- ರಾಬರ್ಟೋನ ತಾಯಿ ಕ್ರೈಸ್ತರ ಧರ್ಮಗುರು ಪೋಪ್‌ನನ್ನು ಭೇಟಿ ಮಾಡಿ "ಏನಾದರೂ ಮಾಡಿ ನನ್ನ ಮಗ ಮತ್ತೆ ರೋಮನ್ ಕ್ಯಾಥೊಲಿಕ್ ಕ್ರಿಶ್ಚಿಯನ್ ಆಗಲು ಸಹಾಯ ಮಾಡಬೇಕು" ಎಂದು ಕೇಳಿಕೊಂಡಳಂತೆ. ಆಗಲಿ ಎಂದು ಹೇಳಿದ ಪೋಪ್ ಜಾನ್ ಪಾಲ್ ಎರಡು ಕಂಡೀಷನ್ ಹಾಕಿದರಂತೆ. ಮೊದಲನೆಯದು "ರಾಬರ್ಟೋ ಇಟಲಿ ವಿಶ್ವಕಪ್ ಗೆಲ್ಲಲು ಸಹಾಯ ಮಾಡಬೇಕು" ಎಂದರಂತೆ ಪೋಪ್.

"ಹಾಗಾಗುವಂತೆ ಮಾಡಲು ನಾನು ಪ್ರಾರ್ಥಿಸುತ್ತೇನೆ, Holy Father" ಎಂದಳಂತೆ ರಾಬರ್ಟೋನ ತಾಯಿ.

"ಎರಡನೆಯದಾಗಿ ನನಗೆ ಫೈನಲ್ಸ್‌ಗೆ ಎರಡು ಟಿಕೆಟ್ ಬೇಕು" ಎಂದದಕ್ಕೆ ಆಕೆ, "ಅಯ್ಯೋ ಪವಿತ್ರವಾದ ತಂದೆಯೇ ಅದು ನನಗೆ ಗೊತ್ತಿಲ್ಲ, ಹಾಗಾದರೆ ನನ್ನ ರಾಬರ್ಟೋ ಬೌದ್ಧ ಮತದಲ್ಲೇ ಇರಬೇಕಾಗಬಹುದು" ಎಂದಳಂತೆ!


ಮಾಲೀಕ ಜರ್ಮನ್ ತಂಡದ ಅಭಿಮಾನಿ. ಜರ್ಮನಿಯ ತಂಡ ವಿಶ್ವಕಪ್ ಫೈನಲ್ಸ್ ತಲುಪುವ ಸಮಯ ಪ್ರಶಸ್ತವಾದ ಸಮಯವೆಂದು ತಿಳಿದು ತನ್ನ ಮದುವೆ ಫಿಕ್ಸ್ ಮಾಡಿದ್ದ. ನೆಂಟರಿಷ್ಟರು, ಬಂಧುಬಳಗದವರೆಲ್ಲ ಬಂದು ಸೇರಿದ್ದರು. ಆದರೆ ಜರ್ಮನಿ ಬಲ್ಗೇರಿಯ ತಂಡದ ವಿರುದ್ಧ ಸೋತಾಗ ಈತನಿಗೆ ಎಂತಹ ಆಘಾತವಾಯಿತೆಂದರೆ, ಮದುವೆ ಕ್ಯಾನ್ಸಲ್ ಮಾಡಿ ಬಂದ ಅತಿಥಿಗಳನ್ನೆಲ್ಲಾ ವಾಪಸ್ ಕಳಿಸಿ, ತಲೆಮೇಲೆ ಕೈಹೊತ್ತು ಯಾರಾದರೂ ಸತ್ತಾಗ ಉತ್ತರಕ್ರಿಯೆಗಳಲ್ಲಿ ಹಾಕುವ ಸಂಗೀತವನ್ನು ಹಾಕಿ ಕೇಳುತ್ತಾ ಕೂತ!

ಉದಾಹರಣೆ: ಏಷ್ಯಾ ಖಂಡದಿಂದ ಜಪಾನ್ ತಂಡ ಅರ್ಹತೆ ಪಡೆಯಲಿಲ್ಲ, ಜಪಾನ್‌ನಲ್ಲಿ ಈಗ ಫುಟ್‌ಬಾಲ್ ಜ್ವರ ಹಿಡಿದಿದೆ. ಈ ನಾಲ್ಕೈದು ವರ್ಷಗಳಲ್ಲಿ ಜಪಾನಿಯರು ಯಥೇಚ್ಛವಾಗಿ ಹಣ ಖರ್ಚು ಮಾಡಿ ಅವರ ದೇಶದಲ್ಲಿ ಫುಟ್‌ಬಾಲ್ ಚೆನ್ನಾಗಿ ಬೇರೂರುವಂತೆ ವ್ಯವಸ್ಥೆ ಮಾಡುತ್ತಿದ್ದಾರೆ. ಅರ್ಹತಾ ಪಂದ್ಯಗಳ ಕೊನೆಯಲ್ಲಿ ಜಪಾನ್ ವಿಫಲವಾದಾಗ ಒಬ್ಬ ಅಭಿಮಾನಿ ಆತ್ಮಹತ್ಯೆ ಮಾಡಿಕೊಂಡ.

ಏಷ್ಯನ್ ವಲಯದಿಂದ ಅರ್ಹತೆ ಪಡೆದ ಎರಡು ತಂಡಗಳು- ಸೌದಿ ಅರೇಬಿಯಾ ಮತ್ತು ದಕ್ಷಿಣ ಕೊರಿಯಾ ಸೋತು ಟೂರ್ನಮೆಂಟ್‌ನಿಂದ ಹೊರಗಾಗಿದ್ದರೂ ಸ[...] ಇಡೀ ಏಷ್ಯಾಗೆ ಫುಟ್‌ಬಾಲ್ ಜ್ವರ ಬಿಟ್ಟಿಲ್ಲ. ಪ್ರಪಂಚ[...] ಈ ಭಾಗದಲ್ಲಿ ಮಧ್ಯ ರಾತ್ರಿ ಬೆಳಗಿನ ಜಾವದ ಸಮಯದ[...] ಟೆಲಿಕಾಸ್ಟ್ ಆಗುವ ಈ ಪಂದ್ಯಗಳನ್ನು ನೋಡಲು ನಿ[...] ಕೆಡುವ ದೆಸೆಯಿಂದ ಫ್ಯಾಕ್ಟರಿಗಳಲ್ಲಿ, ಆಫೀಸ್‌ಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಕೆಲಸಗಳು ಕಡಿಮೆಯಾಗಿದೆ. ಉತ್ಪ[...] ಕಡಿಮೆಯಾಗಿದೆ. ಬಾಂಗ್ಲಾದೇಶದಲ್ಲಿ ಯಾವಾಗಲೂ ಜಗಳವಾಡುವ ಅಧ್ಯಾಪಕರು, ವಿದ್ಯಾರ್ಥಿಗಳ[...] ಮೊಟ್ಟಮೊದಲ ಬಾರಿಗೆ ಒಪ್ಪಂದಕ್ಕೆ ಬಂದಿದ್ದಾರೆ- ಏನೆಂದ[...] ವಾರ್ಷಿಕ ಪರೀಕ್ಷೆಗಳನ್ನು ಒಂದು- ಒಂದೂವರೆ ತಿಂಗಳ ಮುಂದಕ್ಕೆ ಹಾಕಬೇಕೆಂದು.

ಆರ್ಥಿಕವಾಗಿ ಹಿಂದುಳಿದಿರುವ ದಕ್ಷಿಣ ಅಮೆರಿಕಾದ[...] ಫುಟ್‌ಬಾಲ್ ಅತ್ಯಂತ ಜನಪ್ರಿಯ. ಬೀದಿಗಳಲ್ಲಿ, ಗಲ್ಲಿಗಳ[...] ಹುಡುಗರು ಫುಟ್‌ಬಾಲ್ ಆಡುವುದಲ್ಲದೆ, ಈ ಆಟ[...] ಅವರ ಜೀವನಕ್ಕೆ ಅರ್ಥಕೊಡುವಂತೆ ನಡೆದುಕೊಳ್ಳುತ್ತಾ[...] ಇದಕ್ಕೆ ಭಿನ್ನವಾಗಿ ಆರ್ಥಿಕವಾಗಿ ಮುಂದಿರುವ ಅನೇ[...] ಯೂರೋಪಿಯನ್ ದೇಶಗಳಲ್ಲೂ ಆ ಆಟದ ಹು[...]

12ನೇ ಪುಟಕ್ಕೆ



ಈ ವರ್ಷದ ವಿಶ್ವ ಕಪ್ ಪಂದ್ಯಗಳನ್ನು ವೀಕ್ಷಿಸಲು 3.2 ಮಿಲಿಯನ್ ಜನ ಟಿಕೆಟ್‌ಗಳನ್ನು ಖರೀದಿಸಿದ್ದಾರೆ.

ಸುಮಾರು ಆರು ಲಕ್ಷ ಜನ ವಿವಿಧ ದೇಶಗಳಿಂದ ವಿಶ್ವ ಕಪ್‌ಗಾಗಿ ಬ್ರೆಜಿಲ್‌ಗೆ ಪ್ರಯಾಣಿಸುತ್ತಿದ್ದಾರೆ.

ಈ ಪಂದ್ಯವನ್ನು ಪ್ರಾಯೋಜಿಸಲು ಬ್ರೆಜಿಲ್ ದೇಶ 14 ಮಿಲಿಯನ್ ಡಾಲರ್‌ಗಳನ್ನು ವೆಚ್ಚ ಮಾಡಿದ್ದು ಅದರಲ್ಲಿ 11 ಮಿಲಿಯನ್ ಡಾಲರ್‌ಗಳನ್ನು ಸಂಪಾದಿಸುವ ನಿರೀಕ್ಷೆ ಹೊಂದಿದೆ.

ಈ ಬಾರಿ ಉಪಯೋಗಿಸಲಾಗುತ್ತಿರುವ ಫುಟ್‌ಬಾಲ್‌ಗೆ ಬ್ರಜುಕ ಎಂದು ಹೆಸರಿಡಲಾಗಿದೆಯಲ್ಲದೆ ಒಂದು ಬಾಲ್ ಬೆಲೆ ಬರೋಬ್ಬರಿ ನೂರು ಡಾಲರ್‌ಗಳು.

ಜಾಹೀರಾತುಗಳ ಮೂಲಕ ಫಿಫಾ ಗಳಿಸಲಿರುವ ಆದಾಯ 5.5 ಬಿಲಿಯನ್ ಯೂರೋಗಳು.

2010ರ ವಿಶ್ವ ಕಪ್ ಸಂದರ್ಭದಲ್ಲಿ 7,50,000 ಲೀಟರ್ ಬಿಯರ್ ಮಾರಾಟವಾಗಿತ್ತು, ಆ ದಾಖಲೆ ಈ ವರ್ಷ ಮುರಿದುಬೀಳಲಿದೆ.

ಕಳೆದ ಬಾರಿ ಜಗತ್ತಿನ ಶೇ 46.4 ಜನ ಟಿವಿ ಮೂಲಕ ವಿಶ್ವ ಕಪ್ ಪಂದ್ಯಗಳನ್ನು ವೀಕ್ಷಿಸಿದ್ದರು. ಆ ದಾಖಲೆಯೂ ಮುರಿಯಲಿದೆ.

ಇಲ್ಲಿಯತನಕ ನಡೆದಿರುವ ಒಟ್ಟು 19 ವಿಶ್ವ ಕಪ್ ಸ್ಪರ್ಧೆಗಳಲ್ಲಿ ದಕ್ಷಿಣ ಅಮೆರಿಕ ಖಂಡದ ತಂಡಗಳು ಒಂಭತ್ತು ಬಾರಿ ಗೆದ್ದಿದ್ದರೆ ಯೂರೋಪ್ ಖಂಡದ ತಂಡಗಳು ಹತ್ತು ಬಾರಿ ಗೆದ್ದಿವೆ. ಅಂದರೆ ಇವತ್ತಿನವರೆಗೂ ಬೇರೆ ಖಂಡಗಳ ದೇಶಗಳು ಈ ಪಂದ್ಯವನ್ನು ಗೆದ್ದೇ ಇಲ್ಲ.

ವಿಶ್ವ ಕಪ್ ಫುಟ್‌ಬಾಲ್ ಮತ್ತು ವಿಶ್ವ ಕಪ್ ಕ್ರಿಕೆಟ್- ಈ ಎರಡೂ ಪ್ರತಿಷ್ಠಿತ ಪಂದ್ಯಗಳಲ್ಲಿ ಆಡಿರುವ ಏಕೈಕ ಆಟಗಾರ ವಿವ್ ರಿಚರ್ಡ್ಸ್.



...ನೆರೋ ನಗರದಲ್ಲಿ ಬೃಹತ್ತಾದ ಮರಕನ ಫುಟ್ ... ಸ್ಟೇಡಿಯಂ ನಿರ್ಮಿಸಲು ಹತ್ತು ಸಾವಿರ ಕೆಲಸಗಾರರು ... ವರ್ಷಗಳ ಕಾಲ ದುಡಿದರು. 1,78,000 ...ಗಳನ್ನು ಮತ್ತು 42,000 ಜನರು ನಿಂತು ...ಬಹುದಾದಷ್ಟು ವಿಸ್ತಾರವಾದ ಜಾಗವನ್ನು ...ದಿರುವ ಈ ಸ್ಟೇಡಿಯಂನಲ್ಲಿ ಬ್ರೆಜಿಲ್ ಮೊದಲ ...ೆ ವಿಶ್ವ ಕಪ್ ಗೆಲ್ಲುವ ಉತ್ಸಾಹದಲ್ಲಿತ್ತು.

... ವರ್ಷ ಫೈನಲ್ ಪಂದ್ಯಕ್ಕೂ ಮುನ್ನ ಬ್ರೆಜಿಲ್ ... ಎಲ್ಲ ಆಟಗಳಲ್ಲೂ ಉತ್ತಮ ಪ್ರದರ್ಶನ ನೀಡಿತ್ತು. ... ಹೋಲಿಸಿದರೆ ಬ್ರೆಜಿಲ್ ಜೊತೆ ಫೈನಲ್‌ಗೆ ...ಪಡೆದ ಉರುಗ್ವೆ ದೇಶದ ತಂಡ ಆ ಹಂತವನ್ನು ...ಾಡುತ್ತಾ ತಲುಪಿತ್ತು, ಆದಕ್ಕಿಂತ ಮುಖ್ಯವಾಗಿ ಆಗಿನ ... ನಿಯಮಗಳ ಪ್ರಕಾರ ಅಂತಿಮ ಪಂದ್ಯ ...ಭವಾಗುವ ಮುನ್ನವೇ ಬ್ರೆಜಿಲ್ ತಂಡ ಉರುಗ್ವೆ ...ಂತ ಒಂದು ಹೆಚ್ಚಿಗೆ ಪಾಯಿಂಟ್‌ಅನ್ನು ಗಳಿಸಿದ್ದರಿಂದ ...್ ಮೇಲುಗೈ ಹೊಂದಿತ್ತು. ಅಂದರೆ ಫೈನಲ್ ...ದಲ್ಲಿ ಬ್ರೆಜಿಲ್ ಸೊನ್ನೆ ಮತ್ತು ಉರುಗ್ವೆ ಒಂದು ...ನ್ನು ಹೊಡೆದಿದ್ದರೂ ಬ್ರೆಜಿಲ್ ತಂಡವೇ ಗೆಲ್ಲುತ್ತಿತ್ತು. ...ಲ್ಲ ಕಾರಣಗಳಿಂದಾಗಿ ಫೈನಲ್ ಪಂದ್ಯ ನಡೆಯುವ ...ವೇ ಬ್ರೆಜಿಲ್ 'ವಿಶ್ವ ಚಾಂಪಿಯನ್' ಎಂದೇ ಆ ...ರ ಜನ ಸಂಭ್ರಮಿಸಲು ಶುರುಮಾಡಿದ್ದರು. ಹಲವು ಬ್ರೆಜಿಲ್ ಆಟಗಾರರು 'ನಾವೇ ಚಾಂಪಿಯನ್ಸ್' ಎಂದು ಆಟೋಗ್ರಾಫ್‌ಗಳಿಗೆ ಸಹಿ ಹಾಕುವಷ್ಟು ಧೈರ್ಯ ತೋರಿದ್ದರು.

ಆದರೆ ಅವತ್ತು ಬ್ರೆಜಿಲ್‌ನ ಫುಟ್‌ಬಾಲ್ ಪ್ರಿಯರಿಗೆ ಒಂದು ಆಘಾತ ಕಾದಿತ್ತು, ಉರುಗ್ವೆ ತಂಡದ ಜುವಾನ್ ಅಲ್‌ಬರ್ತೊ ಎಂಬ ಆಟಗಾರ ಮೊದಲು ಒಂದು ಗೋಲ್ ಬಾರಿಸಿದ. ಆದರೂ ಬ್ರೆಜಿಲ್ ತಂಡ ಆತಂಕಗೊಂಡಿರಲಿಲ್ಲ. ಆದರೆ ಪಂದ್ಯದ ಅಂತ್ಯಕ್ಕೆ ಇನ್ನು ಹನ್ನೊಂದು ನಿಮಿಷಗಳು ಮಾತ್ರ ಉಳಿದಿದ್ದಾಗ ಉರುಗ್ವೆ ತಂಡದ ಅಲಿಸಿಡ್ ಘಿಗಾ ಎಂಬ ಮತ್ತೊಬ್ಬ ಆಟಗಾರ ಬ್ರೆಜಿಲ್ ಸೈಡಿಗೆ ನುಸುಳಿ ಎರಡನೆ ಗೋಲ್ ಬಾರಿಸಿದ!

ಮರುಕ್ಷಣವೇ ಇಡೀ ಮರಕನ ಸ್ಟೇಡಿಯಂ ಶಾಕ್‌ನಿಂದ ತತ್ತರಿಸಿತು. ಹಲವರ ಪ್ರಕಾರ ಎರಡು ಲಕ್ಷ ಹತ್ತು ಸಾವಿರ ಜನರು ಕಿಕ್ಕಿರಿದಿದ್ದ ಆ ಸ್ಟೇಡಿಯಂ ಸ್ಮಶಾನದಂತೆ ಮೌನವಾಯಿತು. (ಈ ಗಳಿಗೆಯ ಬಗ್ಗೆ ಘಿಗಾ ಆನಂತರ ನೆನಪಿಸಿಕೊಂಡಿದ್ದು ಹೀಗೆ: "ಮರಕನ ಸ್ಟೇಡಿಯಂನಲ್ಲಿ ಎರಡು ಲಕ್ಷ ಜನರು ನಿಶಬ್ದರಾಗುವಂತೆ ಮಾಡಿರುವವರು ಮೂರು ಜನ ಮಾತ್ರ. ಫ್ರಾಂಕ್ ಸಿನಾಟ್ರಾ (ಖ್ಯಾತ ಹಾಡುಗಾರ), ಎರಡನೆ ಪೋಪ್ ಜಾನ್ ಪಾಲ್ ಮತ್ತು ನಾನು ಮಾತ್ರ!")

ಬ್ರೆಜಿಲ್ ದೇಶ ತನ್ನ ಇತಿಹಾಸದಲ್ಲೇ ಕಂಡಿರುವ ಅತಿ ದುರಂತಮಯ ದಿನ ಯಾವುದೆಂದು ಪ್ರಶ್ನಿಸಿದರೆ ಈಗಲೂ ಬ್ರೆಜಿಲ್ ಪ್ರಜೆಗಳು "1950ರ ಜುಲೈ 16" ಎಂದೇ ಉತ್ತರಿಸುತ್ತಾರೆ.

ಇಂತಹ ಬ್ರೆಜಿಲ್ ಈಗ ಎರಡನೆ ಬಾರಿಗೆ ಫುಟ್‌ಬಾಲ್ ಕ್ರೀಡೆಯಲ್ಲಿ ಅತಿ ಶ್ರೇಷ್ಠವಾದ ವಿಶ್ವಕಪ್ ಪಂದ್ಯವನ್ನು ಪ್ರಾಯೋಜಿಸುತ್ತಿದೆ. ಅಂದಿನ ಸೋಲಿನ ನಂತರ ಇಲ್ಲಿಯತನಕ ಬ್ರೆಜಿಲ್ ಇತರೆ ಎಲ್ಲ ತಂಡಗಳಿಗಿಂತ ಹೆಚ್ಚು ಬಾರಿ ವಿಶ್ವ ಕಪ್ ಗೆದ್ದಿರುವುದರಿಂದ ಈ ಬಾರಿ ಗೆದ್ದು ಸಾಧಿಸುವುದು ಅಷ್ಟು ಮುಖ್ಯವಾಗಿಲ್ಲ. ಬದಲಾಗಿ ತನ್ನ ದೇಶದಲ್ಲಿ ಆಗಿರುವ ಬದಲಾವಣೆಗಳನ್ನು ಜಗತ್ತಿಗೆ ಪ್ರದರ್ಶಿಸಲು ಸಜ್ಜಾಗಿದೆ.

ಜಗತ್ತಿನ ಫುಟ್‌ಬಾಲ್ ಪ್ರಿಯರು ಇವತ್ತು ಬ್ರೆಜಿಲ್‌ನತ್ತಲೇ ದಿಟ್ಟಿಸುತ್ತಿದ್ದಾರೆ...

● ಅಶೋಕ್

ವಿಶ್ವಕಪ್ ಜ್ವರ



...ಇವತ್ತು ಸೋಮವಾರ. ನಿನ್ನೆ ರಾತ್ರಿ ಒಂದು ...ಯುವರೆಗೆ ಎಚ್ಚರಿರಬೇಕೆಂದು ತೀರ್ಮಾನಿಸಿ ಓದುತ್ತಾ ...ದ್ದಾಗ ಹಾಗೆಯೇ ನಿದ್ದೆ ಬಂತು. ಎದ್ದಾಗ ನಡುರಾತ್ರಿ ...ೂವರೆ. ನನ್ನಂತೆಯೇ ನಮ್ಮ ಬಡಾವಣೆಯ ಇತರರೂ ...ಫುಟ್‌ಬಾಲ್ ಹುಚ್ಚರಿರಬಹುದೇ ಎಂದು ಬಾಲ್ಕನಿಗೆ ...ಗಿ ನೋಡಿದೆ. ಕಗ್ಗತ್ತಲು, ಮೋಡಗಳು ಮತ್ತು ...ವಾಗಿ ಬೀಸುವ ಗಾಳಿ. ಬೆದೆಗೆ ಬಂದಿರಬಹುದು, ... ಬೇಗ ಮತ್ತೆ ಗರ್ಭ ಧರಿಸುವುದು ಬೇಡ ಎಂದು ...ನ್ನು ತೋಟದಿಂದ ಮನೆಗೆ ಕರೆದು ತಂದಿದ್ದೆವು. ...ಯಲ್ಲಿ ಸದ್ದಾದೊಡನೆ ಮಿಂಚಿನ ವೇಗದಲ್ಲಿ ಓಡಿ ... ಬಡಿಯತೊಡಗಿದಳು. ಅವಳನ್ನು ಒಳಗೆ ಬಿಟ್ಟು ...ದರೆ ಇಟಲಿ, ಬ್ರೆಜಿಲ್ ಆಟ ಸಾಗಿತ್ತು. ಇಬ್ಬರೂ ... ಗೋಲ್; ಎರಡನೆಯ ಮುಕ್ಕಾಲು ಗಂಟೆ ಕೂಡ ...ಯುತ್ತಾ ಬಂತು. ಇಡೀ ಜಗತ್ತು ನೋಡುತ್ತಿರುವಾಗ ... ನಿಧಾನದ, ಸ್ಫೂರ್ತಿ ಇಲ್ಲದ, ಸ್ವಾರ್ಥಮಯವಾದ ...ಗೆಲ್ಲಲೇಬೇಕೆಂಬ ಎಂಥ ನೀಚ ಹಟ? ಗೆಲ್ಲುವುದಕ್ಕಾಗಿ ...ಮಾಡಿಕೊಳ್ಳಲು ಎಂಥ ಸಣ್ಣತನದ ಆಶೆ! -ಸಿಟ್ಟಿನಿಂದ ... ನೋಡತೊಡಗಿದೆ. ಸ್ಟೆಫಿ ತನ್ನ ಬಿಸ್ಕತ್ ತಿನ್ನುತ್ತ ...ನಿ.

...ಗ ನನ್ನ ಮನಸ್ಸು ಈ 1994ರ ವಿಶ್ವಕಪ್ ...ಮುದತ್ತ ಹರಿಯಿತು. ಎಲ್ಲ ಸಲದಂಥಲ್ಲ ಈ ಸಲದ ...್ ಫುಟ್‌ಬಾಲ್. ಕಳೆದ ಸಲ ಈ ಸ್ಪರ್ಧೆ 1990ರಲ್ಲಿ ...ನ್‌ನಲ್ಲಿ ನಡೆದಾಗ ಜನ ಅದನ್ನು ನೋಡಿ ನಿದ್ರಿಸಿದ್ದೇ ...ಮ್ಮ, ಗೆಲ್ಲುವುದಕ್ಕಾಗಿ ಡ್ರಾ; ತಾವು ಗೋಲ್ ...ಡೆಯದಿದ್ದರೂ ಪರವಾಗಿಲ್ಲ, ಎದುರಾಳಿ ಖಂಡಿತ ...ಯಕೂಡದು, ಪ್ರತಿಸ್ಪರ್ಧಿಗಳಲ್ಲಿ ಜೋರಾಗಿರುವವರಿಗೆ ... ಕೊಟ್ಟು ಬೀಳಿಸಬೇಕು. ಅಕಸ್ಮಾತ್ ತಮ್ಮ ಕಡೆ ... ಒಂದು ಗೋಲ್ ಆದರೂ ಆ ಹೆಚ್ಚುಗಾರಿಕೆಯನ್ನು ...ಕೊಳ್ಳಲು ಆಟಗಾರನೊಬ್ಬನಿಗೆ ಗಾಯವಾದರೆ, ...ಾದರೆ ಬೇಕಂತಲೇ ವೇಳೆ ವ್ಯರ್ಥ ಮಾಡಬೇಕು. ...ೈ, ಹೊಡೆದ ಬಾಲ್ ಬೇಗ ತಂದು ಆಟಕ್ಕೆ ...ಸಬಾರದು. ಫ್ರೀ ಕಿಕ್ ಸಿಕ್ಕರೆ ಆದಷ್ಟೂ ವೇಳೆ ...ಕೊಳ್ಳಬೇಕು. ಅವರನ್ನು ಕೇಳುವವರಾರು? ಇದನ್ನೆಲ್ಲ ...ಸಲು ಈ ಸಲ ಫುಟ್‌ಬಾಲ್ ಅಸೋಸಿಯೇಷನ್ ...ಸಿತು. ಒಂದು ಗೋಲ್‌ಗೆ ಎರಡು ಪಾಯಿಂಟು ...ತ್ತಿದ್ದರು, ಈಗ ಮೂರು ಪಾಯಿಂಟ್; ಚುರುಕಾಗಿ ...ವಸ ಹರಹಾಗಿ ರೆಫರಿಗಳು; ಬೇಕಂತಲೆ ಎದುರಾಳಿಗೆ ...ಹೊಡೆದರೆ ಕೆಂಪು ಕಾರ್ಡ್. ಅಂದರೆ ಆತ ಅಲ್ಲಿಂದ ...ಬೇಕು. ಈ ನಡುವೆ ಎಚ್ಚರಿಕೆ ನೀಡಲು ಹಳದಿ ... ಡ್ರಾ ಮಾಡಿಕೊಂಡ ಟೀಮ್ ಪಾಯಿಂಟ್‌ಗಳಿಲ್ಲದೆ ... ಸ್ಪರ್ಧೆಯಿಂದ ಹೊರಹೋಗುವಂತೆ ವಿಧಾನ... ...ಾಗಿ ಗೋಲ್ ಹೊಡೆಯುವುದು, ಚುರುಕಾಗಿ ... ಅನಿವಾರ್ಯವಾಯಿತು; ಸುಮ್ಮನೇ ಬಾಲ್ ಒದೆಯುತ್ತಾ ಕಾಲ ಕಳೆಯುವವರು ಕಷ್ಟಕ್ಕೆ ಸಿಕ್ಕಿಕೊಂಡರು. ನೈಜೀರಿಯಾ ಇಟಲಿಯ ಮೇಲೆ ಗೋಲ್ ಹೊಡೆದಿತ್ತು, ಗೆದ್ದೇಬಿಟ್ಟೆವು ಎಂದು ಆಟವನ್ನೇ ಆಡದೆ ರಕ್ಷಿಸಿಕೊಳ್ಳುತ್ತಿದ್ದ ಇವರ ಮೇಲೆ ದಾಳಿ ಮಾಡಿದ ಇಟಲಿಯ ಬ್ಯಾಗಿಯೋ ಒಂದಾದ ಮೇಲೆ ಒಂದರಂತೆ ಎರಡು ಗೋಲ್ ಹೊಡೆದು ಇಟಲಿಯನ್ನು ಸ್ಪರ್ಧೆಯಲ್ಲಿ ಮುಂದಕ್ಕೆ ನಡೆಸಿದ. ನೈಜೀರಿಯಾ ಮಣ್ಣುಮುಕ್ಕಿತು. ತಾವು ಅಜೇಯ ಟೀಮ್ ಎಂದು ಜರ್ಮನಿ ರುಮೇನಿಯಾ ಮೇಲೆ ಆಡತೊಡಗಿ ಬೆಚ್ಚಿತು- ರುಮೇನಿಯಾ ಹೋದಸಲದ ಈ ಛಾಂಪಿಯನ್ ಜರ್ಮನಿಯನ್ನು ಸೋಲಿಸಿತು. ಮೊತ್ತ ಮೊದಲ ಬಾರಿಗೆ ವಿಶ್ವಕಪ್‌ನಲ್ಲಿ ಭಾಗವಹಿಸುವ ಅವಕಾಶ ಪಡೆದ ಸೌದಿ ಅರೇಬಿಯಾದ ಹುಡುಗ ಓವೈರನ್ ಬಗ್ಗೆ ಹೇಳಬೇಕು. ಈತ ತನ್ನ ಪ್ರಚಂಡ ಸ್ಫೂರ್ತಿಯ ವೇಳೆಯಲ್ಲಿ ಬಾಲ್ ಒದೆಯುತ್ತಾ ಎದುರಾಳಿ (ಬೆಲ್ಜಿಯಂ)ಯ ಗೋಲ್‌ನತ್ತ ಮಿಂಚಿನ ವೇಗದಲ್ಲಿ ಹೊರಟ. ಎದುರು ಪಕ್ಷದ ನಾಲ್ವರು ರಕ್ಷಕರು ತಡೆಯಲು ಬಂದರೂ ಈ ಓವೈರನ್ ಅದೃಶ್ಯನಾದವನಂತೆ ಓಡುತ್ತಾ ಚೆಂಡು ಸಾಗಿಸಿದ. ಚೆಂಡು ಎದುರಾಳಿಗಳಿಗೆ ಕಾಣಿಸುವಷ್ಟರಲ್ಲಿ ಈ ಹುಡುಗ ಗೋಲ್ ಹೊಡೆದಿದ್ದ... ಎಂದೂ ದೊಡ್ಡ ಮ್ಯಾಚ್ ಗೆಲ್ಲದಿದ್ದ ಬಲ್ಗೇರಿಯಾ ಸೆಮಿಫೈನಲ್ಸ್‌ನಲ್ಲಿ ಗರ್ಜಿಸಿತು. ಯೂರೋಪಿನ ಬಡದೇಶವಾದ ಐರ್ಲೆಂಡ್ ಘಟಾನುಘಟಿಗಳ ಮೇಲೆ ಗೋಲ್ ಬಾರಿಸಿ ದಿಗ್ವಿಜಯವನ್ನು ಹಬ್ಬವಾಗಿ ಆಚರಿಸಿತು. ಮಾಫಿಯಾಗಳಿಂದ ಪೋಷಿತವಾದ ಕೊಲಂಬಿಯಾ ಟೀಮ್ ಮೊದಲ ಸುತ್ತುಗಳಲ್ಲೇ ತಿರಸ್ಕರಿಸಲ್ಪಟ್ಟು ಹೀಲೆಯ ಭವಿಷ್ಯವನ್ನು ಸುಳ್ಳು ಮಾಡಿತು.

* * *

ನಡುರಾತ್ರಿ ನೋಡುತ್ತಿದ್ದೇನೆ; ಬಾಲ್‌ನಲ್ಲಿ ಜೀವವೇ ಇರುವಂತಿಲ್ಲ, ನಿಜವಾಗಿಯೂ ಕ್ರೀಡೆಯಲ್ಲಿ ತೊಡಗಿರುವವರ ಕಾಲಲ್ಲಿರುವ ಬಾಲ್‌ಗೆ ಜೀವ ಬಂದಿರುತ್ತದೆ; ತೀರಾ ಎಚ್ಚರದಿಂದ ಒದೆಯುವುದಿಲ್ಲ, ಹಿಂಜರಿಕೆಯ ಪಾಸ್ ಕೊಡುವುದಿಲ್ಲ. ಎದುರಾಳಿಗಳನ್ನು ನಿಭಾಯಿಸಿಕೊಂಡು ಮುಂದೆ ಹೋಗುವಾಗ ಕೂಡ ರಿಸ್ಕ್ ತೆಗೆದುಕೊಳ್ಳುತ್ತಾರೆ. ಇದು ಆಟ. ತೀರಾ ಗಂಭೀರವಾಗಿ ದೇವರ ಲೀಲೆ ಎಂದು ಕರೆದರೂ, ಇದು ಎರಡು ಕಾಲು ಎರಡು ಕೈ ಇರುವ ಹನ್ನೊಂದು ಜನರು ಉಸಿರುಕಟ್ಟುವಂತೆ ಆಡುವ ಆಟ ಮಾತ್ರ. ಇಟಲಿಯ ಟೀಮ್ ಕಷ್ಟದಲ್ಲಿದೆ; ಜಗತ್ತಿನ ಎಲ್ಲ ಅನುಭವಿಗಳೂ ಬ್ರೆಜಿಲ್ ಗೆಲ್ಲುವುದಾಗಿ ಹೇಳಿದ್ದಾರೆ. ಕೋಟ್ಯಂತರ ಜನ ಮಿಲಿಯನ್‌ಗಟ್ಟಲೆ ಹಣವನ್ನು ಬ್ರೆಜಿಲ್ ಮೇಲೆ ಕಟ್ಟಿದ್ದಾರೆ. ಬ್ರೆಜಿಲ್‌ಗೆ ವಿಪರೀತ ಜವಾಬ್ದಾರಿ ಇದೆ. ದಕ್ಷಿಣ ಅಮೆರಿಕಾದ ಜನ, ಅದರಲ್ಲೂ ಬ್ರೆಜಿಲ್‌ನವರು ಜೀವ ಹಿಡಿದುಕೊಂಡಿರುವುದೇ ಫುಟ್‌ಬಾಲ್‌ನಿಂದಾಗಿ; ಇದು ಬ್ರೆಜಿಲ್ ಆಟಗಾರರಿಗೆ ಸಾವು ಬದುಕಿನ ಪ್ರಶ್ನೆ, ಇಟಲಿಗೆ ಅಷ್ಟು ಸೆಡವು (tension) ಇಲ್ಲ, ಬ್ಯಾಗಿಯೋ ಹಲ್ಲು ಮುರಿದುಕೊಂಡು ಕಾಲು ರಿಪೇರಿ ಮಾಡಿಸಿಕೊಂಡು ಬಂದಿದ್ದಾನೆ; ಇಟಲಿಯ ಹುಡುಗರು ಬೇಗ ಸುಸ್ತಾಗುತ್ತಾರೆಂದು ಅವರ ಕೋಚ್ ಹೇಳಿಬಿಟ್ಟಿದ್ದಾನೆ. ಇದರಿಂದ ಅವರಿಗೆ ಅಳುಕು- ಈ ತರಹದ ಅಳುಕು ಅಥವಾ ಹೆದರಿಕೆ ಇದ್ದರೆ ಏನಾಗುತ್ತದೆಂಬುದಕ್ಕೆ ಭಾನುವಾರದ ಫೈನಲ್ಸ್ ಉದಾಹರಣೆಯಾಯಿತು. ಬ್ರೆಜಿಲ್ ನುಗ್ಗಿ ಆಡುವುದಿಲ್ಲ, ಯಾಕೆಂದರೆ ಆಡಿ ತಪ್ಪಿದರೆ ಸೋಲಬೇಕಾಗುತ್ತದೆ. ಇಟಲಿ ನುಗ್ಗುವುದಿಲ್ಲ- ಯಾಕೆಂದರೆ ಸೋಲುವ ಭಯವಿದೆ. ಇದರಿಂದಾಗಿ ಎರಡು ಟೀಮ್‌ಗಳೂ ಎಚ್ಚರವಾಗಿ, ತಮ್ಮ ವಿರುದ್ಧ ಗೋಲು ತಪ್ಪಿಸಿಕೊಳ್ಳುತ್ತಾ ಆಡಿದರು. ಒಂದೂವರೆ ಗಂಟೆ ಆಡಿದರೂ ಎರಡರಲ್ಲಿ ಒಂದು ಟೀಮೂ ಗೋಲ್ ಹೊಡೆದಿರಲಿಲ್ಲ. ಮೇಲುನೋಟಕ್ಕೆ ಬ್ರೆಜಿಲ್ ಇಟಲಿಗಿಂತ ಉತ್ತಮವಾಗಿ ಆಡುತ್ತಿದೆ; ಆದರೆ ಗೋಲು ಹೊಡೆಯುವ ದಿಟ್ಟತನವಿಲ್ಲ. ಬಾಲ್ ಇಟಲಿಯ ಗೋಲ್ ಸುತ್ತವೇ ಆಡುತ್ತಿದೆ; ರೋಮಾರಿಯೋ ಕೂಡ ಗೋಲಿನಿಂದ ಹೊರಗೆ ಬಾಲ್ ಕಳಿಸುತ್ತಿದ್ದಾನೆ. ಅದು ಯುದ್ಧ ಕತ್ತಿಯುದ್ಧದಲ್ಲಿ parrying ಎನ್ನುವಂಥ ನುಸುಳಿಕೊಳ್ಳುವ, ಉಳಿದುಕೊಳ್ಳುವ ಯುದ್ಧ. ಹೀಗಾಗಿ ಮತ್ತೆ 30 ನಿಮಿಷ ಎಕ್ಸ್‌ಟ್ರಾ ಟೈಮ್ ಆಡಿದರೂ ಯಾರೂ ಗೋಲ್ ಹೊಡೆಯಲಾಗಲಿಲ್ಲ.

ಶೂಟ್-ಔಟ್ ಅನಿವಾರ್ಯವಾಯಿತು. ಇದು ಅನ್ಯಾಯ. ತಿಂಗಳಿಂದ ಆಡಿ ಬೆವರು ಸುರಿಸಿ, ಕಲಾತ್ಮಕತೆ ತೋರಿರುವ ಎಲ್ಲ ತರುಣರಿಗೆ ಅವಮಾನ. ಯಾಕೆಂದರೆ ಇದು ಟೆನ್ನಿಸ್‌ನ ಟೈಬ್ರೇಕರ್‌ಗಿಂತ ಸರಳ ಮತ್ತು ಪೆದ್ದು. ಗೋಲಿನ ಎದುರಿಗೆ ಬಾಲ್ ಇಟ್ಟು ಈ ಕಡೆಯ ಐದು ಜನ ಐದು ಸಲ, ಈ ಕಡೆಯ ಐವರು ಐದು ಸಲ ಹೊಡೆಯಬೇಕು. ಇಲ್ಲಿ ಇಟಲಿಯ ದಿಗಿಲು ಕಂಡುಬಂತು. ಇಬ್ಬರೂ ಒಂದು ಬಾಲ್ ಗೋಲಿನಲ್ಲಿ ಕಳಿಸುವಲ್ಲಿ ಸೋತರು; ಇಟಲಿಯ ಹೀರೋ ಬ್ಯಾಗಿಯೋ ಗೋಲಿನಿಂದ ಮೇಲೆ ಹೊಡೆದ. ಒಂದು ಗೋಲ್ ಆಗುವುದನ್ನು ಬ್ರೆಜಿಲ್ ಗೋಲಿ ತಪ್ಪಿಸಿದ. ಬ್ರೆಜಿಲ್‌ನ ರೋಮಾರಿಯೋ ಆ ತಪ್ಪು ಮಾಡಲಿಲ್ಲ. ಕೊನೆಗೂ 3-2 ಗೋಲಿನಿಂದ ಬ್ರೆಜಿಲ್ ಗೆದ್ದಿತು.


ಎಲ್ಲರಿಗೆ ಬೇಸರ. ಈ ಪೆನಾಲ್ಟಿ ಶೂಟ್‌ಔಟ್‌ನಲ್ಲಿ ಗೆಲ್ಲುವುದು, ಸೋಲುವುದು ಎರಡೂ ವಿವರ್ಣಮಯ; ಅಷ್ಟೊಂದು ಸೊಗಸಾಗಿ ಆಡಿದ ಹುಡುಗರ ಕಲೆ ಮತ್ತು ಕಸುಬುದಾರಿಕೆಗೇ ಅವಮಾನ.

ಅದೇನೇ ಇದ್ದರೂ ಇದು ಬ್ರೆಜಿಲ್ ಗೆಲುವು- ಶ್ರೇಷ್ಠ ಟೀಮ್‌ಗೆ ಗೆಲುವು. ತಮ್ಮ ರೋಮಾರಿಯೋ ಶ್ರೇಷ್ಠ ಆಟಗಾರ ಮಾತ್ರವಲ್ಲ, ಅವನೊಬ್ಬ ಯೋಗಿ, ಸಂತ ಅನ್ನುತ್ತಿದ್ದ ಬ್ರೆಜಿಲ್ ಜನಕ್ಕೆ ಹಬ್ಬ. ರಾಜಕೀಯವಾಗಿ ಸಾಂಸ್ಕೃತಿಕವಾಗಿ ದೊಡ್ಡ ತೊಂದರೆಯಲ್ಲಿರುವ ಬ್ರೆಜಿಲ್‌ಗೆ ಇದು ಅಮೃತಪಾನ.

ಇಟಲಿಯಲ್ಲಿ ಹತಾಶೆ. ಯೂರೋಪಿನ ದೊಡ್ಡ ಫುಟ್‌ಬಾಲ್ ರಾಷ್ಟ್ರಕ್ಕೆ ಮುಖಭಂಗ- ನೋಡುತ್ತಿದ್ದ ನಮ್ಮೆಲ್ಲರಿಗೆ ಖುಷಿ, ಅಚ್ಚರಿ; ನಮ್ಮ ಭಾರತದ ಹುಡುಗರ ಕ್ರಮಿಸ್ಥಿತಿ ನೆನೆದು ತೀವ್ರ [illegible]

● ಪಿ. ಲಂಕೇಶ್





ಪುರುಷತ್ವದ ಅದ್ಭುತ ಅಭಿವ್ಯಕ್ತಿ ಫುಟ್‌ಬಾಲ್

10ನೇ ಪುಟದಿಂದ

ಇದೆ. ಇಂಗ್ಲೆಂಡ್, ಐರ್ಲೆಂಡ್, ಫ್ರಾನ್ಸ್, ಇಟಲಿ, ಜರ್ಮನಿ, ಸ್ಪೇನ್, ಸ್ವೀಡನ್ ಈ ಎಲ್ಲ ದೇಶಗಳಲ್ಲೂ ಅತಿಹೆಚ್ಚಿನ ಸಂಖ್ಯೆಗಳಲ್ಲಿ ಅಭಿಮಾನಿಗಳು ಇದ್ದಾರೆ. ಈ ಅಭಿಮಾನಿಗಳ ವೈಶಿಷ್ಟ್ಯವೇನೆಂದರೆ ಇವರಲ್ಲಿ ಅನೇಕರು ರೌಡಿಗಳು. ಇವರ ಹುಚ್ಚಿನಿಂದ ಫುಟ್‌ಬಾಲ್ ಪಂದ್ಯಗಳನ್ನು ನೋಡುವಾಗಲೇ ಜನ ಸತ್ತಿದ್ದಾರೆ, ಗಾಯಗೊಂಡಿದ್ದಾರೆ ಮತ್ತು ಇತ್ತೀಚೆಗೆ ಇವರನ್ನು ಹತೋಟಿಯಲ್ಲಿಡಲು ಹೊಸ ಹೊಸ ನಿಯಮಗಳನ್ನೇ ಅಲ್ಲಿನ ಸರ್ಕಾರಗಳು ಅನುಷ್ಠಾನಕ್ಕೆ ತರುತ್ತಿವೆ. ಈ ಅಭಿಮಾನಿಗಳು ಯಾವುದಾದರೊಂದು ತಂಡವನ್ನು ದತ್ತು ತೆಗೆದುಕೊಂಡಂತಿರುತ್ತಾರೆ. ಈ ತಂಡ ಎಲ್ಲಿ ಆಡಿದರೂ ಸರಿ ಅಲ್ಲಿಗೆ ಗುಂಪು ಕಟ್ಟಿಕೊಂಡು ಹೋಗಿ ಗಲಾಟೆ ಮಾಡುತ್ತಾರೆ. ಒಂದೊಂದು ಬಾರಿ ಪರಿಸ್ಥಿತಿ ವಿಕೋಪಕ್ಕಿಟ್ಟುಕೊಳ್ಳುತ್ತದೆ.

ಇಂಗ್ಲಿಷ್ ಮತ್ತು ಯೂರೋಪಿಯನ್ ಲೀಗ್‌ಗಳಲ್ಲಿ ಪ್ರಪಂಚದ ಎಲ್ಲಾ ಕಡೆಗಳಿಂದ ಅತ್ಯುತ್ತಮ ಆಟಗಾರರನ್ನು ಆಮದು ಮಾಡಿಕೊಳ್ಳುತ್ತಾರೆ. ದಕ್ಷಿಣ ಅಮೆರಿಕಾದ ಬಡ ದೇಶಗಳಿಂದ ಬರುವ ಅತ್ಯುತ್ತಮ ಆಟಗಾರರೆಲ್ಲ ವರ್ಷವಿಡೀ ಯೂರೋಪ್‌ನಲ್ಲೇ ಆಡುವುದು. ಈ ಆಟಗಾರರನ್ನು ತಂಡದಿಂದ ತಂಡಕ್ಕೆ ವರ್ಗಾಯಿಸಿಕೊಳ್ಳಲು ಲಕ್ಷಾಂತರ ಡಾಲರ್‌ಗಳನ್ನು ಈ ತಂಡಗಳ ಮಾಲೀಕರುಗಳು ಖರ್ಚು ಮಾಡಲು ಸದಾ ಸಿದ್ಧರಾಗಿರುತ್ತಾರೆ.

ಈ ಹಿನ್ನೆಲೆಯಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಈ ಬಾರಿಯ ವಿಶ್ವಕಪ್ ನಡೆದದ್ದೇ ಹೆಚ್ಚು, ಉತ್ತರ ಅಮೆರಿಕನ್ನರಿಗೆ ಫುಟ್‌ಬಾಲ್ ಬಗ್ಗೆ ಪ್ರೀತಿ ಕಡಿಮೆ. 1930ರಿಂದ ಈ ದೇಶದಲ್ಲಿ ಫುಟ್‌ಬಾಲ್ ಆಡುವ ಜನ ಇದ್ದರೂ ಸಹ- ಬೇರೆ ದೇಶಗಳಿಂದ ವಲಸೆ ಬಂದ ಬಡಜನಕ್ಕೆ ಇದ್ದ ಆಟ ಇದೇ- ಈ ಆಟಕ್ಕೆ ಎರಡನೇ ದರ್ಜೆಯ ಸ್ಥಾನಮಾನಗಳನ್ನೆ ಅಮೆರಿಕನ್ನರು ದಯಪಾಲಿಸಿದ್ದರು. 1968ರ ಹೊತ್ತಿಗೆ ಈ ವಲಸೆ ಬಂದ ಜನರ ಹತ್ತಿರ ಹಣ ಸೇರಿತ್ತು, ತಮ್ಮ ಪ್ರೀತಿಯ ಕ್ರೀಡೆಗೆ ಏನಾದರೂ ಮಾಡಲೇಬೇಕೆಂದು ಈ ಜನ 1968ರಿಂದ ಹಿಡಿದು ಒಂದು ವ್ಯವಸ್ಥಿತ ಕಾರ್ಯಕ್ರಮ ಹಾಕಿಕೊಂಡರು. ವಿಶ್ವದ ಅತ್ಯುತ್ತಮ ಆಟಗಾರರನ್ನು ಕೇಳಿಕೊಂಡು, ಅವರು ಕೇಳಿದ ಫೀಸ್ ಕೊಟ್ಟು ಬ್ರೆಜಿಲ್‌ನ ಪೀಲೆ, ಜರ್ಮನಿಯ ಫ್ರಾನ್ಸ್ ಬೆಕೆನ್‌ಬಾರ್, ಇಟಲಿಯ ಜರ್ಜಿಯೋ ಚಿನಾಗ್ಲಿಯ, ಹಾಲೆಂಡ್‌ನ ಯೊಹಾನ್ ಕ್ರೈಯಫ್ ಮುಂತಾದವರನ್ನೆಲ್ಲಾ ಕರೆಸಿಕೊಂಡು ಫುಟ್‌ಬಾಲ್‌ನಲ್ಲಿ ಅಮೆರಿಕನ್ ಯುವಕರ ಆಸಕ್ತಿ ಕೆರಳುವಂತೆ ಮಾಡುವುದರಲ್ಲಿ ಸಫಲರಾದರು. ಈಗ ಸುಮಾರು 16 ಮಿಲಿಯನ್ ಜನಗಳು ಈ ಆಟದಲ್ಲಿ ಭಾಗವಹಿಸುತ್ತಾರೆ. ಆದರೂ ಸಹ ಅಮೆರಿಕನ್ ಫುಟ್‌ಬಾಲ್ ಎಂದು ಕರೆಯಲ್ಪಡುವ, ಬಾಲನ್ನು ಕೈಯಲ್ಲಿ ಹಿಡಿದುಕೊಂಡು ಓಡುವ ಆಟದ ಬಗ್ಗೆಯೇ ಅಮೆರಿಕನ್ನರಿಗೆ ಹೆಚ್ಚು ಆಸಕ್ತಿ ಇದ್ದುದರಿಂದ ವಿಶ್ವದ ಫುಟ್‌ಬಾಲ್ ಕಂಟ್ರೋಲ್ ಮಾಡುವ FIFA ಗೆ ಈ ದೇಶಕ್ಕೆ ವಿಶ್ವಕಪ್ ನಡೆಸುವ ಅವಕಾಶ ಮಾಡಿಕೊಟ್ಟು, ಅಲ್ಲಿನ ಜನ ನಿರಾಸಕ್ತಿ ತೋರಿಸಿದರೆ ತಾವು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಈ ಕ್ರೀಡೆಗೇ ಅವಮಾನ ಮಾಡಿದಂತಾಗಬಹುದೆಂಬ ಅಳುಕು ಇದ್ದೇ ಇತ್ತು. ಈ ಪರಿಸ್ಥಿತಿ ಬದಲಾಗಿದ್ದು 1984ರಲ್ಲಿ ಅಮೆರಿಕಾ ಒಲಂಪಿಕ್ ಕ್ರೀಡೆಗಳನ್ನು ಲಾಸ್‌ಏಂಜಲ್ಸ್‌ನಲ್ಲಿ ನಡೆಸಿದಾಗ.

ಈ ಒಲಂಪಿಕ್ ಕ್ರೀಡೆಗಳ ಫುಟ್‌ಬಾಲ್ ಫೈನಲ್ಸ್ ಲಾಸ್‌ಏಂಜಲ್ಸ್ ಹತ್ತಿರದ ಪಾಸಡೆನಾದ ರೋಸ್ ಬೌಲ್‌ನಲ್ಲಿ ನಡೆಯಿತು. ಈ ಪಂದ್ಯ ನೋಡಲು 1,03,000 ಜನ ಕ್ರೀಡಾಭಿಮಾನಿಗಳು ಬಂದಾಗ, ತಾವು ಬೆಂಬಲಿಸುತ್ತಿದ್ದ ತಂಡವನ್ನು ಗೆಲ್ಲಿಸಲು ಅತ್ಯುತ್ಸಾಹದಿಂದ ಚೀರಾಡುತ್ತಿದ್ದರೂ ಒಟ್ಟಿನ ಮೇಲೆ ಶಿಸ್ತು ಸಂಯಮದಿಂದ ನಡೆದುಕೊಂಡಾಗ, FIFA ದ ದೊರೆಗಳು ಎಚ್ಚೆತ್ತುಕೊಂಡರು. 1987ರಲ್ಲಿ FIFA ದ ಅಧ್ಯಕ್ಷ ಜೋಹಾವಲಾಂಜ್ ಅಮೆರಿಕನ್ ಅಧ್ಯಕ್ಷ ರೋನಾಲ್ಡ್ ರೇಗನ್‌ನನ್ನು ಭೇಟಿ ಮಾಡಿದ. ರೇಗನ್ ವಿಶ್ವಕಪ್ ಪಂದ್ಯಗಳನ್ನು ಅಮೆರಿಕದಲ್ಲಿ ನಡೆಸಲು ಅವಕಾಶ ಮಾಡಿಕೊಟ್ಟರೆ ಅದಕ್ಕೆ ಅಮೆರಿಕಾ ಸರ್ಕಾರದ ಬೆಂಬಲ ಪ್ರೋತ್ಸಾಹ ಇರುವುದೆಂದು ಆಶ್ವಾಸನೆ ಕೊಟ್ಟ ನಂತರ 1988ರ ಜುಲೈ 4ರಂದು (ಅಮೆರಿಕಾದ ಸ್ವಾತಂತ್ರ್ಯ ದಿನೋತ್ಸವ) ಅಧಿಕೃತವಾಗಿ ಪರವಾನಗಿ ದೊರೆಯಿತು.

ಇಷ್ಟೆಲ್ಲ ಆದರೂ ಸಹ ಈ ಟೂರ್ನಮೆಂಟ್ ಹೋದ ಜೂನ್ 17ರಂದು ಪ್ರಾರಂಭವಾದಾಗ ಅನೇಕರು (ಅಮೆರಿಕನ್ನರು) ಮೂಗು ಮುರಿದಿದ್ದರು. ಇದೆಂಥ ಆಟ? ಬಾಲನ್ನು ಕಾಲಿನಿಂದ ಒದೆಯುತ್ತಾರೆ? ಎಂದು ಅಮೆರಿಕನ್ ಫುಟ್‌ಬಾಲ್ ಪ್ರೇಮಿಯೊಬ್ಬ ಹೇಳಿದರೆ, ಆಡಲು ಬಂದಿದ್ದ ಮೆಕ್ಸಿಕೋ ತಂಡದ ಕೋಚ್ ಈ ಅಮೆರಿಕನ್ ಫುಟ್‌ಬಾಲ್ ಪಂದ್ಯವೊಂದನ್ನು ನೋಡಲು ಹೋಗಿ ಬಂದು "ಈ ಆಟವನ್ನು ಫುಟ್‌ಬಾಲ್ ಎಂದು ಏಕೆ ಕರೆದು ನಮ್ಮ ನಿಜವಾದ ಫುಟ್‌ಬಾಲ್‌ಗೆ ಅವಮಾನ ಮಾಡುತ್ತಿದ್ದಾರೆ? ನನಗೆ ಅಳು ಬರುತ್ತಿದೆ" ಎಂದು ಕಣ್ಣೀರು ಹಾಕಿದ!!

ಅಮೆರಿಕನ್ ಆಟಗಾರರು ಹಿಂದೆ ಬಿದ್ದು ಬ್ರಿಟನ್‌ನ ಕಾಲಿನ್ ಮಾಂಟ್‌ಗಾಮಿರಿ ಮತ್ತು ದಕ್ಷಿಣ ಆಫ್ರಿಕಾದ ಎರ್ನಿ ಎಲ್ಸ್ ಮುಂದೆ ಹೋಗುತ್ತಿದ್ದಂತೆ, ಆತಿಥೇಯ ರಾಷ್ಟ್ರವಾಗಿದ್ದರಿಂದ ಅರ್ಹತೆ ಪಡೆದಿದ್ದ ಅಮೆರಿಕಾ ತಂಡ ವಿಶ್ವಕಪ್ ಫುಟ್‌ಬಾಲ್‌ನಲ್ಲಿ ಪಂದ್ಯಗಳನ್ನು ಗೆದ್ದು ಎರಡನೇ ಹಂತದ ಕಡೆ ಧಾವಿಸುತ್ತಿದ್ದಂತೆ, ಅಮೆರಿಕನ್ನರಿಗೆ ಈ ಆಟದ ಮಾಂತ್ರಿಕತೆ ಅರ್ಥವಾಗತೊಡಗಿತು. ಅತ್ಯುತ್ತಮ ಆಟಗಾರರು ಜೋರಾಗಿ ಓಡುತ್ತಿರುವಾಗಲೂ ಅವರಿಗಿರುವ ಸ್ಥಿರತೆ, ಚೆಂಡಿನ ಮೇಲಿರುವ ಹತೋಟಿ, ಒಂದು ದಿಕ್ಕಿನಲ್ಲಿ ಹೋಗುವಂತೆ ಬಾಗಿ ಇನ್ನೊಂದು ಕಡೆ ದೌಡಾಯಿಸುವ ಕೃತಿಮತೆ, ಯಾವುದೋ ಮೂಲೆಯಲ್ಲಿ ಒಬ್ಬಂಟಿಯಾಗಿ ಹೊಂಚುಹಾಕುತ್ತಿರುವ ತಮ್ಮ ಕಡೆಯ ಆಟಗಾರರನ್ನು ಗುರುತಿಸಿ ಚೆಂಡನ್ನು ಗಾಳಿಯಲ್ಲಿ ಬಾಗುವಂತೆ ಒದ್ದು ಅವನನ್ನು ತಲುಪುವಂತೆ ಹಾಕುವ ಪಾಸ್‌ಗಳು, ಬೇರೆ ದೇಶಗಳಿಂದ ಈ ಪಂದ್ಯಗಳನ್ನು ನೋಡಲು ಬಂದಿದ್ದ ಹದಿನೈದು ಲಕ್ಷ ಜನಗಳ ಜತೆ ತಮ್ಮ ಜನಗಳೂ ಸೇರಿ ಈ ಪಂದ್ಯಗಳನ್ನು ನೋಡುತ್ತಿದ್ದ ಕಿಕ್ಕಿರಿದ ಜನಸ್ತೋಮ ಇವೆಲ್ಲವೂ ಕ್ರಮೇಣವಾಗಿ ಅಮೆರಿಕನ್ನರ ಮನಸ್ಸನ್ನು ಸೂರೆಗೊಂಡವು. ಈಗ ಫುಟ್‌ಬಾಲ್ ಕ್ರೀಡೆ ಅಮೆರಿಕಾದಲ್ಲೂ ಭದ್ರವಾಗಿ ಬೇರೂರಿದೆ.

● ಡಾ.ಕೆ.ಎಂ.ಶ್ರೀನಿವಾಸ ಗೌಡ

ಬಂದೂಕು ಬೇಕಿದೆ ನನಗೆ.. ಸಂತೆ ವಿಳಾಸ ತಿಳಿಸಿ..



ಬಂದೂಕು ಬೇಕಿದೆ ನನಗೆ
ಸಂತೆ ವಿಳಾಸ ತಿಳಿಸಿ..
ಅಂತಿಂತ ಬಂದೂಕಲ್ಲ
ಜಾತಿ ಪುರುಷ ಅಧಿಪತ್ಯವ
ಮೇಲುಕೀಳು ಸಂಪ್ರದಾಯಗಳ
ಸುಟ್ಟು ಬೂದಿಮಾಡುವ ಗುಂಡಿನ ಬಂದೂಕು...

ಅತ್ತ ಕಡೆ ಬ್ರಾಹ್ಮಣ
ಇತ್ತ ಕಡೆ ಬಂಡವಾಳ
ನಡುವೆ ನನ್ನವರ ಹಿಂಡಿ
ರಕ್ತ ನೆತ್ತಿ ಮಾಂಸ ಮುಕ್ಕಿದವರೆಷ್ಟೊ..
ಸೊಣಗಳಿಗೂ ಬಿಟ್ಟಿಲ್ಲ ಮುತ್ತಲು ಈ ಪಾಪಿಗಳು
ಅದಕೆ
ಬಂದೂಕು ಬೇಕಿದೆ ನನಗೆ
ಸಂತೆ ವಿಳಾಸ ತಿಳಿಸಿ..

ಬೆಲ್ಚಿಯ ನನ್ನಜ್ಜಂದಿರ, ಕಂಬಾಲಪಲ್ಲಿಯ ಬಂಧುಗಳ
ನಾಗಲಾಪಲ್ಲಿಯ ನನ್ನವ್ವ ಖೈರ್ಲಾಂಜಿಯ ಅಕ್ಕಂದಿರ
ಗುಲ್ಬರ್ಗದ ನನ್ನ ತಮ್ಮ, ಉತ್ತರ ಪ್ರದೇಶದ ತಂಗಿಯರ
ಬೆತ್ತಲಾಗಿಸಿ ಮುಕ್ಕಿ, ಬೆಂಕಿಯ ಕಕ್ಕಿ
ಎದೆಯ ಸೀಳಿ ಉಸಿರ ಮೂಲ ಹರಿದು
ತೀರ್ಪಿಲ್ಲದೆ ನೇಣಿಗೇರಿಸಿದರು ಪಿಶಾಚಿಗಳು
ಅದಕೆ
ಬಂದೂಕು ಬೇಕಿದೆ ನನಗೆ
ಸಂತೆಯ ವಿಳಾಸ ತಿಳಿಸಿ..

ಗಾಂಧಿವಾದ ಅಹಿಂಸಾವಾದ
ಆ ವಾದ ಈ ವಾದ
ನಿಲ್ಲಲಿಲ್ಲ ಇಂದಿಗೂ ನನ್ನವರ ನರಮೇಧ
ಕಾಡೆಮ್ಮೆಗಳ ಗುಂಪು ನೋಡಿ ಸಾಕಾಯಿತು
ಕೊಂಬು ಮುರಿದು ಶರಣಾಗುತಿವೆ
ಒಮ್ಮೆಯಾದರೂ ಹುಲಿಯಾಗಿಬಿಡಲೆ?
ಗೋವು ತಿಂದು ಗೋವಿನಂತಿರುವವನು
ಮನುಷ್ಯರ ಕೊಂದು ಮನುಷ್ಯನಾಗಿಬಿಡಲೆ?
ಅದಕೆ
ಬಂದೂಕು ಬೇಕಿದೆ ನನಗೆ
ಸಂತೆಯ ವಿಳಾಸ ತಿಳಿಸಿ..

● ವಿಕಾಸ ಆರ್ ಮೌರ್ಯ ಬೆಂಗಳೂರು

ಲಂಕೇಶ್ ಪ್ರಕಾಶನದ ಪುಸ್ತಕಗಳು

ಕರ್ನಾಟಕದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದೆ.
ಹೆಚ್ಚಿನ ಮಾಹಿತಿಗಾಗಿ ಫೋನ್: 080-26676427

ನೀಲು ಕಾವ್ಯ -ಸಂಗ್ರಹ 1	150.00
ನೀಲು ಕಾವ್ಯ -ಸಂಗ್ರಹ 2	150.00
ನೀಲು ಕಾವ್ಯ -ಸಂಗ್ರಹ 3	200.00
ಚಿತ್ರ ಸಮೂಹ	90.00
ಅಕ್ಷರ ಹೊಸ ಕಾವ್ಯ	250.00
ಮರೆಯುವಮುನ್ನ-ಸಂಗ್ರಹ1	150.00
ಮರೆಯುವಮುನ್ನ-ಸಂಗ್ರಹ2	150.00
ಮರೆಯುವಮುನ್ನ-ಸಂಗ್ರಹ3	150.00
ಮನಕೆ ಕಾರಂಜಿಯ ಸ್ಪರ್ಶ	150.00
ಈ ನರಕ ಈ ಪುಲಕ	125.00
ಆಟ-ಜೂಜು-ಮೋಜು!	150.00
ಟೀಕೆ-ಟಿಪ್ಪಣಿ 1	200.00
ಟೀಕೆ-ಟಿಪ್ಪಣಿ 2	200.00
ಟೀಕೆ-ಟಿಪ್ಪಣಿ 3	200.00
ಸಾಹಿತಿ-ಸಾಹಿತ್ಯ	300.00
ರೂಪಕ ಲೇಖಕರು	70.00
ಕಂಡದ್ದು ಕಂಡಹಾಗೆ	100.00
ಪ್ರಸ್ತುತ	80.00
ಹುಳಿ ಮಾವಿನ ಮರ	250.00
ಮುಸ್ಸಂಜೆಯ ಕಥಾ ಪ್ರಸಂಗ	250.00
ಕೆರೆಯ ನೀರನು ಕೆರೆಗೆ ಚೆಲ್ಲಿ	50.00
ಉಲ್ಲಂಘನೆ	80.00
ಪಾಪದ ಹೂಗಳು	60.00
ಬಿರುಕು	40.00
ಸಂಕ್ರಾಂತಿ	45.00
ತೆರೆಗಳು	50.00
ಈಡಿಪಸ್ ಮತ್ತು ಅಂತಿಗೊನೆ	60.00
ಟಿ. ಪ್ರಸನ್ನನ ಗೃಹಸ್ಥಾಶ್ರಮ	50.00
ಗುಣಮುಖ	30.00
ಕ್ರಾಂತಿ ಬಂತು ಕ್ರಾಂತಿ	40.00
ಕಪ್ಪು ಮಲ್ಲಿಗೆ	75.00
ಕಂಡಹಾಗೆ ಭಾಗ-1	125.00
ಕಂಡಹಾಗೆ ಭಾಗ-2	150.00
ದರವೇಶಿ ಕತೆಗಳು	90.00
ಬಸವರಾಜಮಾರ್ಗ	40.00
ಬೆನಜೀರ್	25.00
ಆವರಣ ಎಂಬ ವಿ-ಕೃತಿ	100.00
ಜೈಲೆಂಬ ಲೋಕದಲ್ಲಿ	75.00
ವೇದಾಂತ ರೆಜಿಮೆಂಟ್	60.00
ಕಳೆದುಕೊಂಡವಳು	45.00
ನೂರುಸ್ವರ	60.00
ಟ್ರೇನ್ ಟು ಪಾಕಿಸ್ತಾನ್	125.00
ಮಿಡತೆಗಳ ಬರವಿಗೆ....	100.00
ಡಿಸೆಂಬರ್ 13	150.00
ಮನುಸ್ಮೃತಿ	20.00
ಆರೋಗ್ಯ ಮತ್ತು ಜೀವನ	125.00

...ಂಕೇಶ್ ಮತ್ತು ಡಿ.ಆರ್ ಎಂಬ ಸುಡುಬೆಳಕಿನ ಕಾವು

ಪುಸ್ತಕ ವಿಮರ್ಶೆ


• ಅರುಣ್ ಜೋಳದಕೂಡ್ಲಿಗಿ

...ನ್ನಡ ಸಾಂಸ್ಕೃತಿಕ ಲೋಕಕ್ಕೆ 'ಇಂತಿ ನಮಸ್ಕಾರಗಳು' ...ವಿಶಿಷ್ಟ ಕೃತಿಯೊಂದು ಪ್ರವೇಶಿಸಿದೆ. ಈ ಕೃತಿಯನ್ನು ...ತ್ತಾಹೋದಂತೆ, ಲಂಕೇಶ್ ಡಿ.ಆರ್ ಎಂಬ ...ಬೆಳಕಿನ ಕಾವು ತಾಕುತ್ತದೆ. ಚುರ್‌ಗುಟ್ಟಿಸಿ ...ಗಿಸುತ್ತದೆ. ನಮ್ಮೊಳಗನ್ನು ಎಚ್ಚರಿಸುತ್ತದೆ. ಮನದಲ್ಲಿ ...ದ್ದಂತೆ, ಎಲ್ಲರಿಗೂ ಕೇಳುವಂತೆ ಅಥವಾ ನಾವೇ ...ಕೊಂಡು ಸುಖಿಸುವ ಹಾಗೆ ದೊಡ್ಡಧ್ವನಿಯಲ್ಲಿ ...ಂತೆ ಕೃತಿ ಕೆಣಕುತ್ತದೆ. ಆಗ ನಟರಾಜ್ ಹುಳಿಯಾರ್ ...ನ ಧ್ವನಿಯಲ್ಲಿ ವಿಶಿಷ್ಟ ಮ್ಯಾನರಿಸಮ್ ಬಳಸಿ ...ದ ಕೇಳುಗರಂತೆ ಭಾವಿಸಿ ಮಾತನಾಡುತ್ತಾರೆ. ಮುದ್ರಿತ ...ಒಂದು ಆಡಿಯೋ ಬುಕ್‌ನ ಅನುಭವವನ್ನು ...ತ್ತದೆ.

...ಡ ಸಾಹಿತ್ಯ ಲೋಕದಲ್ಲಿ ಲಂಕೇಶ್ ಎನ್ನುವ ಹೆಸರೇ ...ರೋಚನಗೊಳಿಸುವಂತದ್ದು. ಕನ್ನಡದ ಮನಸ್ಸನ್ನು ತಿದ್ದಿದ, ...ತಿಕ ಲೋಕದ ಗ್ರಹಿಕೆಗಳನ್ನು ಮೊನಚಾಗಿಸಿದ ...ಕೇಶ್ ಸೂಜಿಗಲ್ಲಿನಂತಹ ವ್ಯಕ್ತಿತ್ವದವರು. ಅಂತೆಯೇ ...ಬುದ್ಧಿಮತ್ತೆಯ ಕಾರಣಕ್ಕೆ ಬೌದ್ಧಿಕ ವಲಯದಲ್ಲಿ ...ರ್ ಎಂದರೆ ಭಯದ ಅಲೆಗಳನ್ನು ...ಎಲ್ಲವರಾಗಿದ್ದವರು. ರಾಷ್ಟ್ರೀಯ ಅಂತಾರಾಷ್ಟ್ರೀಯ ... ವಲಯವನ್ನು ಪ್ರವೇಶಿಸಿದ್ದರು. ಈ ಇಬ್ಬರನ್ನು ...ಮುಖಿ ಮಾಡುವ ಮೂಲಕ ಕಿಡಿಗಳನ್ನು ಹೊತ್ತಿಸಿ ...ಬೆಳಕಲ್ಲಿ ವಿಶ್ವಾತ್ಮಕ ಸಾಹಿತ್ಯ ಮತ್ತು ಸಂಸ್ಕೃತಿಯ ...ಳನ್ನು ಹುಡುಕಲೆತ್ನಿಸಿದ ಪ್ರಯತ್ನವೇ 'ಇಂತಿ ...ಕಾರಗಳು' ಕೃತಿ.

...ಂಕೇಶ್ ಸೃಜನಶೀಲ ಬರಹಕ್ಕೆ ಹೊಸಬಗೆಯ ...ತಿಕೆ ಕೊಟ್ಟರೆ, ಡಿ.ಆರ್. ಕನ್ನಡದ ಬೌದ್ಧಿಕ ...ಯನ್ನು ಬಹು ಎತ್ತರಕ್ಕೆ ಹೊಯ್ದವರು. ಈ ಇಬ್ಬರ ...ಕ್ಕವರಂತೆ ಹುಳಿಯಾರ್ ಸೃಜನಶೀಲತೆ ಮತ್ತು ...ತೆಯ ನಾಡಿ ಹಿಡಿಯಲು ಪ್ರಯತ್ನಿಸಿದಂತಿದೆ. ಈ ...ಗುರುಗಳ ಸಾಮೀಪ್ಯ ಮತ್ತು ಒಡನಾಟದ ಕಾರಣಕ್ಕೆ ...ಕಾಣದ ಲಂಕೇಶ್ ಮತ್ತು ಡಿ.ಆರ್ ಹುಳಿಯಾರರಿಗೆ ...ದ್ದಾರೆ. ಹಾಗಾಗಿ ಈ ಇಬ್ಬರ ಸಾಹಿತ್ಯಿಕ, ಸಾಂಸ್ಕೃತಿಕ ...ಗಳ ಜತೆ ದಿನಬದುಕಿನ ಪಯಣದ ಮಜಲುಗಳೂ ...ಹೊಸದೊಂದು ನಿರೂಪಣೆ ಇಲ್ಲಿ ಸಾಧ್ಯವಾಗಿದೆ. ...ಹುಳಿಯಾರರೇ ಹೇಳುವಂತೆ ಆಧುನಿಕೋತ್ತರ ...ತಿಕ ಕಾದಂಬರಿ ಎಂದರೂ ಆಗುತ್ತೆ.

...ನ್ನಡದ ಸಂದರ್ಭಕ್ಕೆ ಇದೊಂದು ವಿಶಿಷ್ಟ ಕೃತಿ. ...ಶ್ ಡಿ.ಆರ್ ನಾಗರಾಜ್ ಬಗ್ಗೆ ಬರೆಯುತ್ತಾ ಇಡೀ ಕನ್ನಡ ಸಾಂಸ್ಕೃತಿಕ ಲೋಕದ ಚಹರೆಗಳನ್ನು ವಿಶಿಷ್ಟ ಒಳನೋಟಗಳ ಮೂಲಕ ಹುಳಿಯಾರ್ ಕಾಣಿಸುತ್ತಾರೆ. ವಿಶ್ವದ ಸಾಂಸ್ಕೃತಿಕ ಚಿಂತನೆಯ ಪ್ರಖರ ಎಳೆಗಳನ್ನು ಹಿಡಿದು ಈ ಇಬ್ಬರೂ ಲೇಖಕರ ತಿಳಿವನ್ನು ಒರೆಗಚ್ಚಿದ್ದಾರೆ. ಹಾಗಾಗಿ ಕನ್ನಡ ನೆಲದ ಈ ಇಬ್ಬರು ಲೇಖಕರು ಯಾವ ಯಾವ ನೆಲೆಗಳಿಂದ ಜ್ಞಾನವನ್ನು ಪಡೆದರು, ಬರಹವನ್ನು ಜೀವಂತಗೊಳಿಸಿಕೊಳ್ಳಲು ಎಲ್ಲೆಲ್ಲಿಂದ ಸ್ಫೂರ್ತಿಯನ್ನು ಪಡೆದರು ಎನ್ನುವುದನ್ನು ಗಮನಿಸಿದರೆ ಅಚ್ಚರಿಯಾಗುತ್ತದೆ.



ಇಂತಿ ನಮಸ್ಕಾರಗಳು
ಲಂಕೇಶ್ ಹಾಗೂ ಡಿ.ಆರ್ ನಾಗರಾಜ್
ಕುರಿತ ಸೃಜನಶೀಲ ಕಥಾನಕ
ನಟರಾಜ್ ಹುಳಿಯಾರ್
ಪು: 236, ಬೆಲೆ: 180 ರೂ.,
ಪಲ್ಲವ ಪ್ರಕಾಶನ, ಚನ್ನಪಟ್ಟಣ
ಸಂಪರ್ಕ: 9480353507

ಲಂಕೇಶರ ವಿಮರ್ಶೆ ಬಗ್ಗೆ ಬರೆಯುತ್ತಾ ಹುಳಿಯಾರರು ಪಶ್ಚಿಮದ ಶ್ರೇಷ್ಠ ವಿಮರ್ಶಕನೆಂದು ಗುರುತಿಸುವ ಸ್ಯಾಮುಯಲ್ ಜಾನ್ಸನ್ ಪ್ರಭಾವಗಳನ್ನು ಗುರುತಿಸುತ್ತಾರೆ. ಜಾನ್ಸನ್ ಲೇಖಕರ ಜೀವನ ವಿವರಗಳನ್ನು ಅವರ ಕೃತಿಗಳ ಓದಿಗೆ ಬಳಸಿ ಪ್ರಖರ ನೈತಿಕತೆಯಲ್ಲಿ ವಿಮರ್ಶೆಯನ್ನು ರೂಪಿಸಿದಾತ. ಹುಳಿಯಾರರ 'ಇಂತಿ ನಮಸ್ಕಾರಗಳು' ಕಥಾನಕವನ್ನು ಓದುತ್ತಾ ಹೋದಂತೆ, ಜಾನ್ಸನ್ ವಿಮರ್ಶಾ ಮಾದರಿಯ ನಿಯೋ ಕ್ರಿಟಿಸಿಸಮ್ ಎನ್ನುವಂತಿದೆ. ಹಾಗೆ ನೋಡಿದರೆ ಸ್ವತಃ ಹುಳಿಯಾರರು ಕೂಡ ಸ್ಯಾಮುಯಲ್ ಜಾನ್ಸನ್ ಪ್ರಭಾವದಿಂದ ಪೂರ್ಣ ಪ್ರಮಾಣದಲ್ಲಿ ಬಿಡಿಸಿಕೊಂಡಂತೆ ಕಾಣುವುದಿಲ್ಲ.

ಕೆಲವೆಡೆ ಲಂಕೇಶ್ ಮತ್ತು ಡಿ.ಆರ್ ಬಗೆಗಿನ ಮಾತುಗಳು ಬಲೂನಿನಂತೆ ಹುಬ್ಬುತ್ತಿವೆ ಎನ್ನುವುದು ಅನುಭವಕ್ಕೆ ತಾಕಿದ ಕ್ಷಣವೇ ಮುಂದಿನ ಸಾಲಲ್ಲಿ ಈ ಬಲೂನುಗಳಿಗೆ ಸೂಜಿ ಚುಚ್ಚಿ ಒಡೆಯುವ ಕೆಲಸವನ್ನು ಹುಳಿಯಾರ್ ಮಾಡಿದ್ದಾರೆ. ಹಾಗಾಗಿ ಅಲ್ಲಲ್ಲಿ ಉಳಿದು ಹಾರಬಹುದಾಗಿದ್ದ ಬಣ್ಣಬಣ್ಣದ ಬಲೂನುಗಳು ಹೊಡೆದು ಜೋತುಬಿದ್ದು ವಿಷಾದದ ಮುಖವೊತ್ತು ಓದುಗರನ್ನು ಎದುರಾಗುತ್ತವೆ. ಹೀಗೆ ಬಲೂನು ಉಬ್ಬಿಸಿ ಸೂಜಿಚುಚ್ಚಿ ಮಜನೋಡುವ ಈ ಗುಣ ಒಟ್ಟಾರೆ ಹುಳಿಯಾರರ ಮಾತು ಮತ್ತು ಬರಹದ ಲಕ್ಷಣವೂ ಹೌದು.

ಈ ಕೃತಿಯ ಶೀರ್ಷಿಕೆಯಲ್ಲಿ ಮೇಲುನೋಟಕ್ಕೆ ಲಂಕೇಶ್ ಮತ್ತು ಡಿ.ಆರ್ ಕುರಿತ ಸೃಜನಶೀಲ ಕಥಾನಕ ಎಂದಿದೆ. ಈ ಕೃತಿಯನ್ನು ಓದಿ ಮುಗಿಸಿದಾಗ ಈ ಇಬ್ಬರನ್ನು ಹೊರತುಪಡಿಸಿದಂತೆ ಕನ್ನಡ ವಿಮರ್ಶೆಯ ಮತ್ತೊಬ್ಬರ ವ್ಯಕ್ತಿತ್ವ ಮತ್ತು ಚಿಂತನೆಯ ಎಳೆಗಳು ವಿಶಿಷ್ಟವಾಗಿ ಅನಾವರಣಗೊಳ್ಳುತ್ತದೆ. ಅವರು ಲಂಕೇಶ್ ಡಿ.ಆರ್ ಕನ್ನಡಕ್ಕೆ ದಕ್ಕಿದ ಮತ್ತು ಕನ್ನಡದ ಕಸುವನ್ನು ಹೆಚ್ಚಿಸಿದ್ದನ್ನು ತೀಕ್ಷ್ಣವಾಗಿ ಕಟ್ಟಿಕೊಡುತ್ತಾರೆ. ಈ ಇಬ್ಬರ ಮನುಷ್ಯಸಹಜ ಕೀಳರಿಮೆಯನ್ನು, ಅಸೂಯೆಯನ್ನು, ಪ್ರೀತಿ ಜೀವನೋತ್ಸಾಹವನ್ನು, ತಹತಹವನ್ನು ವಿವರಿಸುತ್ತಲೇ ಅವರನ್ನು ಬೆಸೆಯುವ ಬೇರ್ಪಡುವ ಸಂಗತಿಗಳನ್ನು ಸಮತೋಲನದಲ್ಲಿ ತೋರಿಸುತ್ತಾರೆ. ಈ ಇಬ್ಬರ ಒಡನಾಟದಲ್ಲಿಯೇ ತನ್ನ ತಿಳಿವನ್ನು ಸದಾ ಮೊನಚುಗೊಳಿಸಿಕೊಳ್ಳುತ್ತಲೇ, ಇವರನ್ನು ಅರಿಯಲು ಅಪಾರ ಓದಿಗೆ ತೆರೆದುಕೊಳ್ಳುತ್ತಾರೆ. ಈ ಅರಿವಿನ ಪಯಣದಲ್ಲಿ ತಾವೊಬ್ಬ ಕನ್ನಡದ ಸೂಕ್ಷ್ಮಜ್ಞ, ನಿಷ್ಠುರ ವಿಮರ್ಶಕರಾಗಿ ರೂಪುಗೊಳ್ಳುತ್ತಾರೆ. ಅವರು ಮತ್ಯಾರು ಅಲ್ಲ ಈ ಕೃತಿಯ ಲೇಖಕರು.

ಲಂಕೇಶ್ ಮತ್ತು ಡಿ.ಆರ್. ಮೂಲಕ ಪರೀಕ್ಷಿಸುವ ಕನ್ನಡದ ಸಾಂಸ್ಕೃತಿಕ ಸಾಹಿತ್ಯಿಕ ಲೋಕವು ಹುಳಿಯಾರರ ಆಯ್ಕೆಯ ಓದಿನ ಮಿತಿಯಲ್ಲಿದೆ. ಕನ್ನಡದ ಓದಿಗಿಂತ ಕನ್ನಡೇತರ ಓದಿನ ವ್ಯಾಪ್ತಿ ಹೆಚ್ಚಿರುವಂತೆ ಕಾಣುವುದರಿಂದ, ಕನ್ನಡ ಸಾಹಿತ್ಯದ ಓದಿನ ಚೌಕಟ್ಟಿನಲ್ಲಿ ವಿವರಿಸುವ ಭಾಗಗಳಿಗಿಂತ, ವಿಶ್ವ ಸಾಹಿತ್ಯದ ನೆಲೆಯಲ್ಲಿ ವಿಶ್ಲೇಷಿಸುವ ಭಾಗಗಳು ಹೆಚ್ಚು ಆಳವಾಗಿವೆ ಅನ್ನಿಸುತ್ತದೆ. ಹಾಗಾಗಿ ಹುಳಿಯಾರರ ಕನ್ನಡ ಸಂದರ್ಭದ ವಿಶ್ಲೇಷಣೆಯ ಮಿತಿಯಲ್ಲಿ ಲಂಕೇಶ್ ಮತ್ತು ಡಿ.ಆರ್ ಅವರನ್ನು ಪರಿಭಾವಿಸುವ ಅಗತ್ಯವಿಲ್ಲ, ಅದರಾಚೆಯೂ ಹೊರಚಾಚಲು ಸಾಧ್ಯವಿದೆ. ಅಚ್ಚರಿಯೆಂದರೆ ಇಂತಹ ಹೊರಚಾಚುವಿಕೆಯ ದಾರಿಗಳನ್ನೂ ಹುಳಿಯಾರರೆ ಸೂಕ್ಷ್ಮವಾಗಿ ಕಾಣಿಸುತ್ತಾರೆ. ಶಂಬಾ ಅವರ ಸಾಂಸ್ಕೃತಿಕ ಅಧ್ಯಯನದ ಕಣ್ಣೋಟದಿಂದ ವಿಶ್ಲೇಷಿಸಲು ತೊಡಗಿದರೆ ಡಿ.ಆರ್ ಅವರ ಅಧ್ಯಯನಗಳಿಗೆ ಮತ್ತೊಂದು ನೆಲೆ ಒದಗುತ್ತದೆ.

ಈ ಕೃತಿಯಿಂದಾಗಿ ಕಟುವಿಮರ್ಶೆ ವಾಗ್ವಾದಗಳಿಲ್ಲದೆ, ಕುಟುಕು ವ್ಯಂಗ್ಯದ ಮೊನಚಿಲ್ಲದೆ, ಪ್ರಖರ ವೈಚಾರಿಕ ಒಳನೋಟಗಳಿಲ್ಲದೆ ಜಡಗೊಂಡಿರುವ ಕನ್ನಡ ವಿಮರ್ಶೆಯ ಸದ್ಯದ ಸ್ಥಿತಿ ಅರಿವಿಗೆ ಬರುತ್ತದೆ. ಭಿನ್ನಾಭಿಪ್ರಾಯಗಳನ್ನು ಸಹಜವಾಗಿ ಸ್ವೀಕರಿಸುವ ಮನಸ್ಥಿತಿಯಿರದ ಬಹುಪಾಲು ಸಾಹಿತಿಗಳಿರುವ ಪ್ರಸ್ತುತ ಕಾಲಘಟ್ಟದಲ್ಲಿ ಈ ಕೃತಿ ಲೇಖಕರಲ್ಲಿ ಆತ್ಮವಿಮರ್ಶೆಯನ್ನು ಹುಟ್ಟಿಸಬೇಕಾಗಿದೆ. ಹೊಗಳಿಕೆಯಲ್ಲಿಯೆ ಸುಖಿಸುವ ಭಟ್ಟಂಗಿಗಳನ್ನು ಸಲುಹಿಕೊಂಡಿರುವ ಸದ್ಯದ ಬಹುಪಾಲು ಸಾಹಿತಿಗಳ ವಲಯವು ತಮ್ಮ ನಡೆಯನ್ನು ಪರೀಕ್ಷಿಸಿಕೊಳ್ಳಲು ಈ ಕೃತಿ ಒತ್ತಾಯಿಸುತ್ತದೆ.

ಚೂರುಪಾರು ಬರೆದು, ಮಹಾನ್ ಸಾಧನೆಗೈದವೆಂದು ತಮ್ಮ ಬಗೆಗಿನ ವಿಮರ್ಶೆಗಳನ್ನು ಬರೆಸಿಕೊಳ್ಳುವ, ಸೆಮಿನಾರುಗಳನ್ನು ಆಯೋಜಿಸಿಕೊಳ್ಳುವ ಮತ್ತು ಅಹಮ್ಮಿನಿಂದ ಫೇಸ್‌ಬುಕ್ಕಿನ ಲೈಕು ಕಾಮೆಂಟುಗಳಲ್ಲಿ ಹೀರೋಯಿಸಮ್ ಅನುಭವಿಸುವ ಕೆಲವು ಯುವ ಬರಹಗಾರ/ರ್ತಿಯರಂತೂ ಕಡ್ಡಾಯವಾಗಿ ಈ ಕೃತಿಯನ್ನು ಓದಬೇಕು. ಈ ಅರ್ಥದಲ್ಲಿ 'ಇಂತಿ ನಮಸ್ಕಾರಗಳು' ಕೃತಿ ರೂಪದಲ್ಲಿ ನಟರಾಜ್ ಹುಳಿಯಾರ್ ಈ ಕಾಲದ ಸಾಹಿತ್ಯ ವಲಯಕ್ಕೆ ಹರಡಿಕೊಂಡಿರುವ ಸಾಂಕ್ರಾಮಿಕ ರೋಗಕ್ಕೆ ಮುಲಾಮು ಹುಡುಕಿದಂತೆ ಭಾಸವಾಗುತ್ತಿದೆ. ●

...ಹುರುಳಿಲ್ಲ, ಹುರುಳಿಲ್ಲ ಲಿಂಗಾರ್ಚನೆ'

...ರೆದಡೆ ನನೆಯದು, ಮರೆದಡೆ ಬಾಡದು,
...ರುಳಿಲ್ಲ, ಹುರುಳಿಲ್ಲ ಲಿಂಗಾರ್ಚನೆ;
...ಡಲಸಂಗಮದೇವಾ, ಜಂಗಮಕ್ಕೆರೆದಡೆ ಸ್ಥಾವರ ನನೆಯಿತ್ತು.


-ಬಸವಣ್ಣನವರು

...ಷ್ಟಲಿಂಗದ ಮಹತ್ವವನ್ನು ತಿಳಿಸುವ ಈ ವಚನ ಶರಣರ ಚಳವಳಿಯ ... ಆಗಿದೆ. ವಸ್ತುಸ್ಥಿತಿಯ ಬಗ್ಗೆ ನಕಾರಾತ್ಮಕವಾಗಿ ಹೇಳುತ್ತ ಸಕಾರಾತ್ಮಕ ...ದ ಕಡೆಗೆ ಒಯ್ಯುವ ಚಿಂತನೆಯ ವೈಶಿಷ್ಟ್ಯವನ್ನು ಈ ವಚನ ಒಳಗೊಂಡಿದೆ.

...ಸವಣ್ಣನವರು ಸಮಾಜಸುಧಾರಕರು ಎಂದು ಅನೇಕ ವಿದ್ವಾಂಸರು ಕೂಡ ...ತ್ತಲೇ ಬಂದಿದ್ದಾರೆ. ಹಾಗೆ ಹೇಳುವವರು ತಮಗರಿಯದಂತೆಯೆ ...ಣ್ಣನವರಿಗೆ ಅಪಮಾನ ಮಾಡಿದ್ದಾರೆ. ಏಕೆಂದರೆ ಬಸವಣ್ಣನವರು ಹಳೆಯ ...ವ್ಯವಸ್ಥೆಯ ಸಮಾಜಕ್ಕೆ ತೇಪೆ ಹಚ್ಚುವ ವ್ಯರ್ಥ ಪ್ರಯತ್ನ ಮಾಡದೆ ವರ್ಣ ...ಜಾತಿಗಳಿಲ್ಲದ ಪರ್ಯಾಯ ಸಮಾಜವನ್ನು ಕಟ್ಟುವ ಘನಕಾರ್ಯದಲ್ಲಿ ...ಗಿದವರಾಗಿದ್ದರು. ಅಂತೆಯೆ ಹಳೆಯ ಸಮಾಜದ ಬಗ್ಗೆ ನಕಾರಾತ್ಮಕ ...ಣೆಯನ್ನು ತಾಳಿದ ಮತ್ತು ಪರ್ಯಾಯವಾಗಿ ರೂಪುಗೊಳ್ಳುತ್ತಿರುವ ...ಮಾಜದ ಬಗ್ಗೆ ಸಕಾರಾತ್ಮಕ ಧೋರಣೆಯನ್ನು ಸೃಷ್ಟಿಸಿದ ವಚನ ಇದಾಗಿದೆ.

...ಷ್ಟವು ಕ್ರಿಯೆಯ ರೂಪ ತಾಳದೆ ಇದ್ದಾಗ 'ಸ್ಥಾವರ'ವಾಗಿಯೇ ಉಳಿಯುತ್ತದೆ ...ದು ಬಸವಣ್ಣನವರ ಪ್ರತಿಪಾದನೆಯಾಗಿದೆ. ಇಷ್ಟಲಿಂಗವು ಅರಿವಿನ ...ವಾಗಿದೆ. ಇಷ್ಟಲಿಂಗ ಪೂಜಕರು ವ್ಯಷ್ಟಿಪ್ರಜ್ಞೆಯೊಂದಿಗೆ ತಮ್ಮಷ್ಟಕ್ಕೇ ...ಅನುಭಾವಿಗಳಾದೆವೆಂದು ಭ್ರಮಿಸುವುದನ್ನು ಬಸವಣ್ಣನವರು 'ಹುರುಳಿಲ್ಲ, ...ಳಿಲ್ಲ ಲಿಂಗಾರ್ಚನೆ' ಎಂದು ಅಲ್ಲಗಳೆದಿದ್ದಾರೆ. ಇಷ್ಟಲಿಂಗವು ಸಮಷ್ಟಿಪ್ರಜ್ಞೆಗೆ ...ವಾದ ಅರಿವಿನ ಕುರುಹು ಆಗಿದೆ. ನೀರೆರೆದಾಗ ಇಷ್ಟಲಿಂಗ ಅರಳುವುದಿಲ್ಲ ...ಸದೆ ಇದ್ದಾಗ ಬಾಡುವುದೂ ಇಲ್ಲ. ಕೇವಲ ಧಾರ್ಮಿಕ ಸಂಪ್ರದಾಯವಾಗಿ ...ವ ಲಿಂಗಾರ್ಚನೆ ಅರ್ಥಹೀನವಾದುದು. ಅಂಥ ಯಾಂತ್ರಿಕ ಪೂಜೆ ... ಫಲ ನೀಡದು. ಅರಿವಿನ ಫಲ ಪಡೆಯುವುದೇ ಲಿಂಗಾರ್ಚನೆಯ ... ಉದ್ದೇಶ ವಾಗಿದೆ ಎಂಬುದನ್ನು ಬಸವಣ್ಣನವರು ಈ ವಚನದಲ್ಲಿ ...ದ್ದಾರೆ.

...ಜೀವಾತ್ಮರಿಗೆ ಲೇಸನ್ನು ಬಯಸುವುದೇ ಲಿಂಗತತ್ವ. ಈ ತತ್ವವನ್ನು ...ಳಿಸುವುದೇ ಲಿಂಗತತ್ವ ಚಿಂತನೆ. ತತ್ವವನ್ನು ಆಚರಣೆಗೆ ತಾರದಿದ್ದಾಗ ...ಕೂಡ 'ಸ್ಥಾವರ' ಆಗುತ್ತದೆ ಎಂಬ ಅನನ್ಯವಾದ ಸೈದ್ಧಾಂತಿಕ ನಿಲುವನ್ನು ...ಷ್ಟಿಯ ಸಂವೇದನಾಶೀಲರಾದ ಬಸವಣ್ಣನವರು ತಾಳಿದ್ದಾರೆ. ಲಿಂಗತತ್ವ ...ವು ಪಾಠಿಸಮಂಟಪವಲ್ಲ, ಅಪೌರುಷೇಯ ಎಂದು ಕರೆಯಿಸಿಕೊಳ್ಳುವ ಗ್ರಂಥಗಳ ಬದನೆಕಾಯಿ ಅಲ್ಲ. ನಡೆ-ನುಡಿಗಳನ್ನು ಒಂದಾಗಿಸುತ್ತ ಅರಿವನ್ನು ಆಚರಣೆಯಲ್ಲಿ ತರಲು ಪ್ರೇರೇಪಿಸುವ ತತ್ತ್ವ ಅದು. ಒಂದುವೇಳೆ ಹಾಗೆ ಆಗದೆ ಇದ್ದಲ್ಲಿ, ಮಾದಾರ ಚೆನ್ನಯ್ಯನವರು ಹೇಳುವಂತೆ ನುಡಿ ಲೇಸು ನಡೆ ಅಧಮವಾಗಿ ಬಿಡಿಸಲಾಗದ ಹೊಲೆ ಆಗುತ್ತದೆ. 'ಜಂಗಮಕ್ಕೆರೆದಡೆ ಸ್ಥಾವರ ನನೆಯಿತು' ಎಂಬ ಅರಿವು ಇಷ್ಟಲಿಂಗಪೂಜಕನಿಗೆ ಆದಾಗ ಮಾತ್ರ ಲಿಂಗತತ್ತ್ವವು ಕ್ರಿಯಾರೂಪ ತಾಳಲು ಸಾಧ್ಯವಾಗುವುದು.



'ಜಂಗಮ' ಎಂಬುದು ಸೃಷ್ಟಿಕರ್ತನ ಸೃಷ್ಟಿಯಾದ ಜೀವಜಗತ್ತಾಗಿದೆ. ಕಾಯಕ ಮಾಡಿ ಬಂದುದನ್ನು ದೇವರ ಪ್ರಸಾದವೆಂದು ಸ್ವೀಕರಿಸಿ 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎನ್ನುತ್ತ ಈ ಜೀವಜಗತ್ತಿನ ಸೇವೆಯಲ್ಲಿ ತೊಡಗುವವನೇ ಲಿಂಗವಂತ. ಇದುವೇ ಜಂಗಮಕ್ಕೆರೆಯುವ ಕ್ರಿಯೆ. ಈ ಪ್ರಕಾರ ಜೀವಕಾರುಣ್ಯದೊಂದಿಗೆ ಸೇವಾಧರ್ಮವನ್ನು ಪಾಲಿಸಿದಾಗ ಲಿಂಗವು ಸಂತೃಪ್ತಿಯಿಂದ ಅರಳುವುದು. ಹೀಗೆ ಈ ವಚನವು ಅನನ್ಯ ರೂಪಕದ ಮೂಲಕ ಮಾನವರನ್ನು ವಿಶ್ವಮಾನವರನ್ನಾಗಿ ಮಾಡುವ ಕಲೆಯನ್ನು ಒಳಗೊಂಡಿದೆ.

"ಉಂಬ ಜಂಗಮ ಬಂದಡೆ ನಡೆಯೆಂಬರು; ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ", "ಸ್ಥಾವರ ಪೂಜೆ, ಜಂಗಮದ ಉದಾಸೀನ ಕೂಡಲಸಂಗಯ್ಯನೊಲ್ಲ ನೋಡಾ", "ಲಿಂಗಾರ್ಚನೆಯ ಮಾತು ಎನಗೇಕಯ್ಯಾ ಜಂಗಮಲಿಂಗವಾಗಿ ಬಂದು ನೀವಿರುತ್ತಿರಲು" ಎಂದು ಮುಂತಾಗಿ ಬಸವಣ್ಣನವರು ಹೇಳುತ್ತ ಜನಸಮುದಾಯವನ್ನು ಸಮಾಜಮುಖಿಯಾಗಿಸುವಲ್ಲಿ ತಲ್ಲೀನರಾಗಿದ್ದರು.


ಲಿಂಗಪೂಜೆಯು ಕರ್ಮಸಿದ್ಧಾಂತವನ್ನು ಅಲ್ಲಗಳೆಯುತ್ತದೆ. ಲಿಂಗಪೂಜೆ ಮಾಡಿಯೂ ಕರ್ಮ ಸಿದ್ಧಾಂತದ ಮೇಲೆ ನಂಬಿಕೆ ಇಟ್ಟವರಿಗೆ ಲಿಂಗಪೂಜೆಯ ಅವಶ್ಯಕತೆ ಇಲ್ಲ ಎಂದು ಬಸವಣ್ಣನವರು ಸಾರಿದ್ದಾರೆ. "ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ? ಕೂಡಲಸಂಗಮ ದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೊ" ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ.

ಲಿಂಗಭೇದ, ಜಾತಿಭೇದ ಮತ್ತು ವರ್ಗಭೇದ ಮಾಡುವವರಿಗೆ ಹಾಗೂ ಎಲ್ಲರ ಜೊತೆ ಒಂದಾಗದೆ ಬದುಕುವವರಿಗೆ ಲಿಂಗಪೂಜಾಫಲ ಇಲ್ಲ ಎಂದು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ.

"ಲಿಂಗವ ಪೂಜಿಸಿ ಫಲವೇನಯ್ಯಾ
ಸಮರತಿ, ಸಮಕಳೆ, ಸಮಸುಖವನರಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ
ಕೂಡಲಸಂಗಮಧೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?"

ಎಂಬುವು ಬಸವಣ್ಣನವರು ಹಾಕಿದ ಪ್ರಶ್ನೆಗಳಾಗಿವೆ.

'ಸಮರತಿ' ಎಂದರೆ ಹೆಣ್ಣುಗಂಡಿನ ಮಧ್ಯೆ ಭೇದ ಎಣಿಸದೆ ಇರುವುದು. 'ಸಮಕಳೆ' ಎಂದರೆ ಬ್ರಹ್ಮಕಳೆ, ಕ್ಷಾತ್ರಕಳೆಗಳೆಲ್ಲ ಸುಳ್ಳು; ಮಾನವ ಕಳೆ ಮಾತ್ರ ಸತ್ಯ ಎಂಬುದನ್ನು ಅರಿಯುವುದು. 'ಸಮಸುಖ' ಎಂದರೆ ಬಡವರು ಮತ್ತು ಸಿರಿವಂತರು ಸಮಾನರು. ಇದು ನಿಸರ್ಗ ನಿಯಮ. ಗಾಳಿ, ಮಳೆ, ಬಿಸಿಲು, ಬೆಳದಿಂಗಳು, ನೀರು, ಹಣ್ಣುಹಂಪಲು ಮುಂತಾದ ನೈಸರ್ಗಿಕ ಉತ್ಪನ್ನಗಳು ಬಡವರು ಮತ್ತು ಶ್ರೀಮಂತರಿಗೆ ಒಂದೇ ತೆರನಾಗಿವೆ. ಆದರೆ ಮಾನವನಿರ್ಮಿತ ಭೇದದಿಂದಾಗಿ ಶೋಷಣೆ ನಡೆಯುತ್ತಿರುವುದನ್ನು ಇಷ್ಟಲಿಂಗಪೂಜಕರು ಕ್ರಿಯಾಶೀಲರಾಗಿ ವಿರೋಧಿಸಿ ಸಮಸುಖದ ವ್ಯವಸ್ಥೆಯನ್ನು ಸ್ಥಾಪಿಸಬೇಕು. ಆ ಮೂಲಕ ನದಿಯೊಳಗೆ ನದಿ ಬೆರೆಯುವ ಹಾಗೆ ಎಲ್ಲರೊಡನೆ ಒಂದಾಗಿ ಬದುಕಬೇಕು. ಸಮಸ್ತ ಲೋಕ ಇಂಥ ಬದುಕನ್ನು ಪಡೆಯುವುದೇ ಲಿಂಗಪೂಜಾಫಲವಾಗಿದೆ.



● ರಂಜಾನ್ ದರ್ಗಾ

ವಿಶೇಷ ಲೇಖನ

ಜಾನುವಾರು ವ್ಯಾಪಾರ

ಒಂದು ಅತ್ಯಂತ ರೈತಸ್ನೇಹಿ ಜನಸ್ನೇಹಿ, ಪರಿಸರಸ್ನೇಹಿ ವ್ಯವಸ

-"ಆಕಳು ಒಂದು ಉಪಯುಕ್ತ ಪ್ರಾಣಿ, ಮಾತೆಯಲ್ಲ, ದೇವತೆಯಂತೂ ಅಲ್ಲವೇ ಅಲ್ಲ... ಹಸು ಕರುವಿಗೆ ಮಾತ್ರ ತಾಯಿ, ಹಿಂದೂಗಳಿಗಲ್ಲ... ಹಸು ಮತ್ತು ಎತ್ತು ನಮ್ಮ ಕೃಷಿಪ್ರಧಾನ ರಾಷ್ಟ್ರಕ್ಕೆ ಉಪಯುಕ್ತ ಪ್ರಾಣಿಗಳು ಎಂದು ಅವುಗಳನ್ನು ಎಷ್ಟು ಬೇಕೊ ಅಷ್ಟು ಬಳಸಿದರೆ ಸಾಕು. ಅದರ ಬದಲು ಅದು ದೇವತೆ, ಅದನ್ನು ಪೂಜಿಸುವುದನ್ನು ಧರ್ಮವೆಂದು ಪುರಾಣಗಳಲ್ಲಿ ಹೇಳಿದೆ ಎಂದು ಬೊಗಳೆ ಬಿಟ್ಟರೆ ರಾಷ್ಟ್ರಕ್ಕೆ ನೂರು ಪಟ್ಟು ಹಾನಿಯಾಗುತ್ತದೆ."

- ವಿನಾಯಕ ದಾಮೋದರ ಸಾವರ್ಕರ್

ಸ್ವಾತಂತ್ರ್ಯಾನಂತರದ ಭಾರತೀಯ ಇತಿಹಾಸದಲ್ಲಿ 1990ರ ರಥಯಾತ್ರೆ ಮತ್ತು 92ರ ಬಾಬರಿ ಮಸೀದಿ ಧ್ವಂಸ ಪ್ರಕರಣಗಳು ಎರಡು ಪ್ರಮುಖ ಮೈಲಿಗಲ್ಲುಗಳಾಗಿವೆ. ಇವೆರಡು ಘಟನೆಗಳ ಫಲವಾಗಿ ತೀವ್ರ ಬಲಪಂಥೀಯ ಸಂಘ ಪರಿವಾರಕ್ಕೆ ರಾಷ್ಟ್ರ ರಾಜಕಾರಣದ ಮುಂಚೂಣಿಗೆ ಬರಲು ಸಾಧ್ಯವಾಯಿತು. ಅಲ್ಲಿಂದ ಮುಂದೆ ಅದರ ರಹಸ್ಯ ಕಾರ್ಯಸೂಚಿಯ ಅನುಷ್ಠಾನ ಕಾರ್ಯ ಬಿರುಸುಗೊಂಡಿತು. ದೇಶದ ಬಹುಸಂಖ್ಯಾತರನ್ನು ಮತ್ತು ಅಲ್ಪಸಂಖ್ಯಾತರನ್ನು ಧ್ರುವೀಕರಿಸುವ ಪ್ರಕ್ರಿಯೆ ತೀವ್ರತೆಯನ್ನು ಪಡೆದುಕೊಂಡಿತು. ಅಲ್ಪಸಂಖ್ಯಾತರ ವಿರುದ್ಧದ ಭಾರಿ ದೊಡ್ಡ ಅಪಪ್ರಚಾರಾಂದೋಲನದ ಭಾಗವಾಗಿ ಇತಿಹಾಸದ ತಿರುಚುವಿಕೆ, ಪಠ್ಯಪುಸ್ತಕಗಳ ಕೇಸರೀಕರಣ ಇತ್ಯಾದಿ ಕಸರತ್ತುಗಳಿಗಂತೂ ಅಡೆತಡೆಗಳಿಲ್ಲವಾಯಿತು. ಕ್ರೈಸ್ತರು ಮತಾಂತರ ಮಾಡುತ್ತಿರುವುದರಿಂದ ಹಿಂದೂಗಳ ಸಂಖ್ಯೆ ಅಪಾಯಕಾರಿಯಾಗಿ ಕುಸಿಯುತ್ತಿದೆ, ಹಿಂದೂ ಯುವತಿಯರನ್ನು 'ಲವ್ ಜಿಹಾದ್' ಮೂಲಕ ಪುಸಲಾಯಿಸಿ ಮತಾಂತರಗೊಳಿಸಲಾಗುತ್ತಿದೆ, ಮುಸ್ಲಿಮರು ಗೋಹತ್ಯೆ ಮಾಡುತ್ತಿರುವುದರಿಂದ ಜಾನುವಾರುಗಳ ಸಂತತಿಯಲ್ಲಿ ವಿಪರೀತ ಇಳಿಕೆಯಾಗುತ್ತಿದೆ, ಪರಿಣಾಮವಾಗಿ ಹಿಂದೂ ಧರ್ಮ ಅಪಾಯದಲ್ಲಿದೆ ಎಂಬ ಇಲ್ಲಸಲ್ಲದ ಭೀತಿಯನ್ನು ಹರಡುವ ಕಾರ್ಯ ಚುರುಕುಗೊಂಡಿತು. ದಲಿತ ಮತ್ತು ಇತರ ಹಿಂದುಳಿದ ಜಾತಿಗಳನ್ನು ಸಂಸ್ಕೃತೀಕರಣದ ಮೂಲಕ ತಮ್ಮತ್ತ ಓಲೈಸಿ ಅವರು ಹಿಂದೂ ಸಮಾಜದ ಅಂಗಗಳೆಂದು ಬಿಂಬಿಸಿ ಅವರನ್ನು ಅಲ್ಪಸಂಖ್ಯಾತ ವಿರೋಧಿಗಳಾಗಿಸುವುದು ಈ ಆಂದೋಲನದ ಮುಖ್ಯ ಉದ್ದೇಶಗಳಲ್ಲೊಂದು.

ಗೋಹತ್ಯೆ ಯ ರಾಜಕೀಯ

ಕರ್ನಾಟಕದ ಕರಾವಳಿ ಪ್ರದೇಶ ಸಂಘ ಪರಿವಾರದ ಧ್ರುವೀಕರಣ ಕಾರ್ಯಕ್ರಮದ ಪ್ರಯೋಗಶಾಲೆಗಳಲ್ಲೊಂದು ಎಂದು ಪರಿಗಣಿತವಾಗಿದೆ. ಇಲ್ಲಿ ನಡೆದಿರುವಷ್ಟು ಕೋಮುವಾರು ಘಟನೆಗಳು ಕರ್ನಾಟಕದ ಇತರ ಯಾವುದೇ ಜಿಲ್ಲೆಯಲ್ಲಿ ನಡೆದಿಲ್ಲ. ಇಲ್ಲಿ ಕ್ರೈಸ್ತರ ಮೇಲೆ, ಮುಸ್ಲಿಮರ ಮೇಲೆ, ದಲಿತರ ಮೇಲೆ, ವಿಭಿನ್ನ ಕೋಮಿನ ಜೋಡಿಗಳ ಮೇಲೆ, ಜಾನುವಾರು ಸಾಗಾಟಗಾರರ ಮೇಲೆ ಅಸಂಖ್ಯಾತ ಹಲ್ಲೆಗಳು ವಾಡಿಕೆಯೋ ಎಂಬಂತೆ ನಿರಂತರವಾಗಿ ನಡೆಯುತ್ತಲೆ ಇವೆ. 'ಪವಿತ್ರ ಗೋವಿನ' ಹೆಸರಿನಲ್ಲಿ ಧಾರ್ಮಿಕ ಭಾವನೆಗಳನ್ನು ಕೆರಳಿಸುವುದು ಸುಲಭ ಎಂಬುದನ್ನು ಅರಿತಿರುವ ಪರಿವಾರ ಮಿಕ್ಕೆಲ್ಲದಕ್ಕಿಂತಲೂ ಹೆಚ್ಚಿನ ಪ್ರಾಧಾನ್ಯತೆಯನ್ನು ಅದಕ್ಕೆ ನೀಡಿದೆ. ಪರಿಣಾಮವಾಗಿ ಕನಿಷ್ಠ ನಾಲ್ಕೈದು ಕೊಲೆಗಳಲ್ಲದೆ ದೊಡ್ಡದೊಂದು ಕೋಮು ಗಲಭೆ ಕೂಡಾ ನಡೆದುಹೋಗಿದೆ. ಸಂಘ ಪರಿವಾರದ ಪುಂಡರು ಜಾನುವಾರು ಸಾಗಾಟಗಾರರ ಮೇಲೆ ದಾಳಿ ನಡೆಸುವಾಗ ಪೊಲೀಸರು ಮೂಕಪ್ರೇಕ್ಷಕರಾಗಿ ನಿಲ್ಲುವುದು ಅಥವಾ ಅನುಪಸ್ಥಿತರಿರುವುದು ಸರ್ವೇಸಾಮಾನ್ಯ. ಆದರೆ ಇತ್ತೀಚೆಗೆ ಜಾನುವಾರು ಸಾಗಾಟಗಾರನೊಬ್ಬ ಪೊಲೀಸರ ನಕಲಿ ಎನ್ಕೌಂಟರ್‌ಗೆ ಬಲಿಯಾಗಿರುವ ಘಟನೆ ಇಡೀ ಗೋಹತ್ಯೆ ನಿಷೇಧ ಅಭಿಯಾನಕ್ಕೆ ಒಂದು ಹೊಸ ತಿರುವನ್ನು ತಂದುಕೊಟ್ಟಿದೆ. ಇದೇ ಏಪ್ರಿಲ್ 19ರ ತಡರಾತ್ರಿ ಮಿತಿಗಿಂತಲೂ ಜಾಸ್ತಿ ಜಾನುವಾರುಗಳನ್ನು ಸಾಗಿಸುತ್ತಿದ್ದ ವಾಹನವೊಂದನ್ನು ಶೃಂಗೇರಿಯ ತನಿಕೋಡು ಅರಣ್ಯ ಚೆಕ್‌ಪೋಸ್ಟ್ ಬಳಿ ತಡೆದ ನಕ್ಸಲ್ ನಿಗ್ರಹ ದಳದ ಪೊಲೀಸರು, ಸಾಗಾಟಗಾರರಲ್ಲಿ ಒಬ್ಬನಾದ ಕಬೀರ್ ಎಂಬ ಯುವಕನನ್ನು ಬಂಧಿಸುವ ಬದಲು ಗುಂಡಿಟ್ಟು ಕೊಂದಿದ್ದಾರೆ. ಇದೊಂದು ಜಂಟಿ ಕಾರ್ಯಾಚರಣೆ ಇರಬೇಕೆಂಬ ಅನುಮಾನಕ್ಕೆ ಪುಷ್ಟಿ ಒದಗಿಸುವ ರೀತಿಯಲ್ಲಿ ತದನಂತರ ಮೃತದೇಹವನ್ನು ಕೊಂಡೊಯ್ಯಲು ಬಂದಿದ್ದ ಬಂಧುಗಳ ಮೇಲೆ ಸುಮಾರು ಹತ್ತಿಪ್ಪತ್ತು ಪುಂಡರು ಎರಗಿ ಯದ್ವಾತದ್ವಾ ಹೊಡೆದಿದ್ದಾರೆ. ಇಂಥಾದ್ದೊಂದು ಅಮಾನವೀಯ, ಬರ್ಬರ ಹಾಗೂ ಕಾನೂನುಬಾಹಿರ ಕೃತ್ಯವನ್ನು ಸಾರ್ವಜನಿಕರಾಗಲಿ ಇತರ ಸಂಸ್ಥೆಗಳಾಗಲಿ ಕನಸಿನಲ್ಲಿ ಸಹಿತ ಎಸಗಲಾರರು. ಅಂಥಾ ಧೈರ್ಯ ಮತ್ತು ಧಾರ್ಷ್ಟ್ಯ ಇರುವುದು ಕೇವಲ ಸಂಘ ಪರಿವಾರಕ್ಕೆ.

ಇತ್ತೀಚಿನ ಲೋಕಸಭಾ ಚುನಾವಣೆಗಳ ಕಾಲದಲ್ಲಿಯೂ ಗೋಹತ್ಯೆ ನಿಷೇಧವನ್ನು ಒಂದು ಪ್ರಮುಖ ವಿಚಾರವಾಗಿ ಎತ್ತಿಕೊಳ್ಳಲಾಗಿತ್ತು. 'ವಧಾಗೃಹಗಳ ಸಂಖ್ಯೆ ಹೆಚ್ಚಿದೆ. ಪರಿಣಾಮವಾಗಿ ಹಳ್ಳಿಗಳಲ್ಲಿ ದನಕರುಗಳ ಕಳ್ಳತನ ಹೆಚ್ಚಾಗಿರುವುದರಿಂದ ಗೋಹತ್ಯೆ ಹೆಚ್ಚುತ್ತಿದೆ. ಜಾನುವಾರು ಸಾಕಣೆಗೆ ಸಬ್ಸಿಡಿ ಕೊಡಲಾಗದ ಸರ್ಕಾರ ಗೋಹತ್ಯೆ ಮಾಡುವವರಿಗೆ ಸಬ್ಸಿಡಿ ಕೊಡುತ್ತಿದೆ' ಎಂಬುದು ಹಾಲಿ ಪ್ರಧಾನಿ ನರೇಂದ್ರ ಮೋದಿಯ ಚುನಾವಣಾಕಾಲದ ಕಟಕಿಗಳಲ್ಲೊಂದು. ಇತ್ತ ಕರಾವಳಿಯಲ್ಲಿ ಪೇಜಾವರ ಸ್ವಾಮೀಜಿ 'ಗೋಹತ್ಯೆ ನಿಷೇಧದಿಂದಲೆ ಸಾಮರಸ್ಯ ಸಾಧ್ಯ' ಎಂದು ಘೋಷಿಸಿದರೆ ಇನ್ನೋರ್ವ ಸ್ವಘೋಷಿತ ಕಾವಿಧಾರಿ 'ಗೋಹತ್ಯೆ ಯಾರೇ ಮಾಡಲಿ, ಹಿಂದೂ ಸಮುದಾಯ ಅವರ ಕೈಗಳನ್ನು ಕತ್ತರಿಸಬೇಕು' ಎಂದು ಫತ್ವಾ ಹೊರಡಿಸಿದ್ದಾರೆ.

ಕಳವು ಹೆಚ್ಚುತ್ತಿದೆ ಎನ್ನುವುದನ್ನು ಪೂರ್ತಿಯಾಗಿ ನಂಬುವುದು ಕಷ್ಟ. ಏಕೆಂದರೆ ರೈತರು ಪರಿವಾರ ಗಣಗಳ ತೋಳ್ಬಲ ಪ್ರದರ್ಶನಕ್ಕೆ ಅಂಜಿ ಸುಳ್ಳು ದೂರು ದಾಖಲಿಸುವ ಸಾಧ್ಯತೆಗಳೇ ಹೆಚ್ಚು. ಗೋಕಳವು ಹಾಗೂ ಗೋಹತ್ಯೆಯಿಂದಾಗಿ ಜಾನುವಾರುಗಳ ಸಂಖ್ಯೆ ಕಡಮೆಯಾಗುತ್ತಿದೆ



ಪಾಂಡವರು ಅಶ್ವಮೇಧ ಯಜ್ಞದಲ್ಲಿ ಕುದುರೆ ಬಲಿ ಕೊಡುತ್ತಿರುವು

ಎಂಬ ಆರೋಪವನ್ನು ಪಶುಸಂಗೋಪನಾ ಇಲಾಖೆ ಅಲ್ಲಗಳೆಯುತ್ತದೆ. ಇಲಾಖೆಯ ಪ್ರಕಾರ ಈ ಪರಿಸ್ಥಿತಿಗೆ ಕೂಲಿಯಾಳುಗಳ ಕೊರತೆ, ಗೋಮಾಳಗಳ ಕೊರತೆ, ಪಶು ಆಹಾರದ ಬೆಲೆಗಳೆ ಪ್ರಮುಖ ಕಾರಣ. ಹುಲ್ಲು, ಪಶು ಆಹಾರದ ಕೊರತೆ ಇರುವುದರಿಂದ ಸಂಪೂರ್ಣ ಗೋಹತ್ಯೆ ನಿಷೇಧ ಸಾಧ್ಯವೂ ಇಲ್ಲ, ಅದು ಸಾಧುವೂ ಅಲ್ಲವೆಂದು ಹೇಳಿರುವ 1954, 1976ರ ಕೃಷಿ ಇಲಾಖೆಯ ವರದಿಗಳೂ ಗೋವುಗಳನ್ನು ಗೊಡ್ಡಾಗಿಸುವಂತೆ ಮತ್ತು ಸಂಖ್ಯೆಯನ್ನು ಕಡಿಮೆ ಮಾಡುವಂತೆ ಶಿಫಾರಸು ಮಾಡಿವೆ. ಪ್ರತಿಯೊಂದು ಪಂಚವಾರ್ಷಿಕ ಯೋಜನೆಯ ವರದಿ ಕೂಡ ದೇಶದಲ್ಲಿ ಜಾನುವಾರುಗಳಿಗೆ ಸಾಕಷ್ಟು ಮೇವು, ಹಿಂಡಿಗಳಿಲ್ಲವೆಂದು ಹೇಳುತ್ತಾ ಬಂದಿದೆ.

ಇನ್ನು ಗೋಕಳವು ಹಾಗೂ ಗೋಹತ್ಯೆಯಿಂದಾಗಿ ದೇಶದ ಹೈನೋದ್ಯಮವೇನಾದರೂ ಸಂಕಟದಲ್ಲಿ ಸಿಲುಕಿದೆಯೆ ಎಂದು ನೋಡಹೊರಟರೆ ಅದೂ ನಿಜವಲ್ಲ. ದೇಶದ ಕ್ಷೀರೋದ್ಯಮದಲ್ಲಿ ಭಾರಿ ಅಭಿವೃದ್ಧಿ ಆಗುತ್ತಿರುವ ವಾಸ್ತವವನ್ನು ಸರ್ಕಾರಿ ಅಂಕಿಅಂಶಗಳೆ ನಮ್ಮ ಮುಂದೆ ತೆರೆದಿಡುತ್ತವೆ. 2001-02ರಿಂದ 2010-11ರ ತನಕದ ಹತ್ತು ವರ್ಷಗಳಲ್ಲಿ ದೇಶದಲ್ಲಿ ಗೋಮಾಂಸದ ಉತ್ಪಾದನೆ 2.6 ಪಟ್ಟು ಅಧಿಕವಾಗಿದ್ದರೆ ಹೈನೋತ್ಪನ್ನಗಳ ಪ್ರಮಾಣದಲ್ಲಿ ಶೇಕಡಾ 388ರಷ್ಟು ಬೆಳವಣಿಗೆ ಆಗಿದೆ. ಇದರಲ್ಲಿ ಬಹುಪಾಲನ್ನು ಸೌದಿ ಅರೇಬಿಯ, ಯುಎಇ, ಈಜಿಪ್ಟ್, ಥಾಯ್ಲೆಂಡ್, ವಿಯೆಟ್ನಾಂ ಮೊದಲಾದೆಡೆ ರಫ್ತು ಮಾಡುವ ಮೂಲಕ ಅಮೂಲ್ಯ ವಿದೇಶಿ ವಿನಿಮಯ ಗಳಿಸಲಾಗುತ್ತಿದೆ. ನೀವು ನಂಬಲಿಕ್ಕಿಲ್ಲ, ಇದೇ ಅವಧಿಯಲ್ಲಿ ಗುಜರಾತ್ ರಾಜ್ಯದಲ್ಲಿ ಮಾಂಸದ ಉತ್ಪಾದನೆ ಎರಡು ಪಟ್ಟು ಹೆಚ್ಚಳವಾಗಿದೆ! ಇಷ್ಟು ಸಾಕಲ್ಲವೆ ಗೋಹತ್ಯೆ ಕುರಿತ ಅಪಪ್ರಚಾರ ಸಂಪೂರ್ಣ ಸುಳ್ಳೆಂದು ಸಾಬೀತುಪಡಿಸಲು!!

ಆದರೆ ದುರಂತವೆಂದರೆ ನಮ್ಮ ಅನೇಕ ಆಧುನಿಕ, ನಗರವಾಸಿ ದಲಿತ ಮತ್ತು ಹಿಂದುಳಿದ ವರ್ಗಗಳ ಯುವಕರು 'ಪವಿತ್ರ ಗೋವಿನ ಹತ್ಯೆ' ಎಂಬ ಭಾವನಾತ್ಮಕ ಘೋಷಣೆಗೆ ಅನಾಯಾಸವಾಗಿ ಬಲಿಯಾಗಿ ಅಲ್ಪಸಂಖ್ಯಾತರನ್ನು ಶತ್ರುಗಳಂತೆ ಕಾಣತೊಡಗಿದ್ದಾರೆ. ಇವರಿಗೆಲ್ಲ ತಾವು ಪರಿವಾರದ ಮತಗಟ್ಟೆ ರಾಜಕೀಯದಾಟದ ದಾಳಗಳು ಎಂಬ ಸತ್ಯದ ಅರಿವಿದ್ದಂತಿಲ್ಲ, ತಮ್ಮನ್ನು ಅಲ್ಪಸಂಖ್ಯಾತರ ವಿರುದ್ಧ ಎತ್ತಿಕಟ್ಟುವ ಮೂಲಕ ಜಾತಿವಿನಾಶದ ಹೋರಾಟದಿಂದ ವಿಮುಖರಾಗಿಸುವ ಮೇಲ್ಜಾತಿಗಳ ಈ ಹುನ್ನಾರ ಅರ್ಥವಾದಂತಿಲ್ಲ. ಪರಿವಾರಿಗರನ್ನು ನೇರ ಅಥವಾ ಪರೋಕ್ಷವಾಗಿ ಬೆಂಬಲಿಸುತ್ತಿರುವ ಬಹುಪಾಲು ರೈತಬಾಂಧವರ ಕತೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಅವರೆಲ್ಲರೂ ತಮ್ಮ 'ಪವಿತ್ರ ಗೋವನ್ನು' ಕಡಿದು ತಿನ್ನುವವರು ಕೇವಲ ಮುಸ್ಲಿಮರು ಮತ್ತು ಕ್ರೈಸ್ತರು ಎಂಬ ಅಪಪ್ರಚಾರವನ್ನು ಕಣ್ಮುಚ್ಚಿ ನಂಬಿರುವಂತಿದೆ. ಒಂದು ಕಾಲದಲ್ಲಿ ಬ್ರಾಹ್ಮಣರೂ ಸೇರಿದಂತೆ ನಮ್ಮ ಪೂರ್ವಿಕರೆಲ್ಲರೂ ಗೋಮಾಂಸ ಪ್ರಿಯರಾಗಿದ್ದರು; ಬೌದ್ಧ ಧರ್ಮ ಹೆಚ್ಚೆಚ್ಚು ಜನಪ್ರಿಯವಾಗತೊಡಗಿದಾಗ ಅವರಲ್ಲನೇಕರು ಮಾಂಸಸೇವನೆಯನ್ನು ಕಡಿಮೆಮಾಡಿ ಅಂತಿಮವಾಗಿ ಶಾಖಾಹಾರಿಗಳಾದರೆಂಬ ಸತ್ಯವನ್ನು ಇವರೆಲ್ಲರೂ ಅರಿತುಕೊಂಡಲ್ಲಿ ತಮ್ಮ ಗ್ರಹಿಕೆ ತಪ್ಪು ಮತ್ತು ತಾವು ಮಾಡುತ್ತಿರುವುದು ಅನ್ಯಾಯವೆಂದು ತಾನಾಗಿಯೆ ತಿಳಿಯುತ್ತದೆ.

ಗೋವನ್ನು ಯಾವುದೇ ಪುರಾತನ ಹಿಂದೂ ಗ್ರಂಥದಲ್ಲಿಯೂ ದೇವತೆಯೆಂದು ಪರಿಗಣಿಸಲಾಗಿಲ್ಲ, ದೇಶದಲ್ಲಿ ಒಂದಾದರೂ ಗೋಮಂದಿರ ಇಲ್ಲದಿರುವುದೆ ಇದಕ್ಕೆ ಸಾಕ್ಷಿ. 1888ರಲ್ಲಿ ವಾಯವ್ಯ ಪ್ರಾಂತದ ನ್ಯಾಯಾಲಯ ಕೂಡ ಗೋವು ಪವಿತ್ರ ಪ್ರಾಣಿಯಲ್ಲ ಎಂದು ತೀರ್ಪು ನೀಡಿರುವುದನ್ನು ಗಮನಿಸಬೇಕು. ಭಾರತದ ಸಂವಿಧಾನದಲ್ಲಿಯೂ ಗೋವು ಪವಿತ್ರವೆಂದು ಎಲ್ಲೂ ಹೇಳಲಾಗಿಲ್ಲ. ಕೃಷಿಸೇವೆ ಮತ್ತು ಹೈನುಗಾರಿಕೆಗೆ ಬೇಕಾಗಿರುವ ಜಾನುವಾರುಗಳ ಸಂರಕ್ಷಣೆಯನ್ನು ವೈಜ್ಞಾನಿಕ ನೆಲೆಯಲ್ಲಿ ಮಾಡಬೇಕು ಎನ್ನುತ್ತದೆ ಸಂವಿಧಾನ.

ವೇದ ಮತ್ತು ವೇದೋತ್ತರ ಕಾಲಗಳಲ್ಲಿ

ಬ್ರಾಹ್ಮಣರು ಯಾರನ್ನು ತಮ್ಮ ಪೂರ್ವಜರೆಂದು ಕರೆಯುತ್ತಾರೊ ಆ ಆರ್ಯರು ಮಾಂಸಾಹಾರಿಗಳಾಗಿದ್ದರು ಮತ್ತು ಋಷಿಮುನಿಗಳಾದಿಯಾಗಿ ಎಲ್ಲರೂ ವಿಶೇಷವಾಗಿ ಗೋಮಾಂಸವನ್ನು ತುಂಬಾ ಇಷ್ಟಪಡುತ್ತಿದ್ದ ವಿಚಾರ ಅನೇಕ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದು. ಪ್ರಖ್ಯಾತ ಸಂಸ್ಕೃತಪಂಡಿತ ಲಕ್ಷ್ಮಣ ಶಾಸ್ತ್ರಿ ಜೋಶಿ ('ಪ್ರಾಚೀನ ಕಾಲದಲ್ಲಿ ಗೋವಧೆ ಮಾಡಲಾಗುತ್ತಿತ್ತೆ'), ಭಾರತರತ್ನ ಪಿ.ವಿ. ಕಾಣೆ ('ಧರ್ಮಶಾಸ್ತ್ರ') ಮೊದಲಾದವರು ವೇದಕಾಲದಲ್ಲಿ ಗೋವಧೆ ಮತ್ತು ಗೋಮಾಂಸ ಸೇವನೆ ವ್ಯಾಪಕವಾಗಿತ್ತು ಎಂಬುದನ್ನು ಆಧಾರಸಮೇತ ವಿವರಿಸಿದ್ದಾರೆ. ಬ್ರಾಹ್ಮಣರಲ್ಲಿ ಮಾಂಸಭಕ್ಷಣೆ ಸುಮಾರು 12ನೆ ಶತಮಾನದವರೆಗೂ ಪ್ರಚಲಿತವಿದ್ದುದರ ಬಗ್ಗೆ ಲಿಖಿತ ದಾಖಲೆಗಳು ಲಭ್ಯವಿವೆ.

ವೇದ, ಉಪನಿಷತ್ತು, ಬ್ರಾಹ್ಮಣ, ಗೃಹ್ಯಸೂತ್ರ, ಧರ್ಮ ಸೂತ್ರ, ಪುರಾಣ, ಯಾಜ್ಞವಲ್ಕ್ಯನ ಕಾನೂನು, ವೈದ್ಯಕೀಯ ಶಾಸ್ತ್ರ ಮನುಸ್ಮೃತಿ ಮೊದಲಾದ ಗ್ರಂಥಗಳಲ್ಲಿ ಪ್ರಾಣಿವಧೆ ಮತ್ತು ಮಾಂಸಾಹಾರ ಕುರಿತಂತೆ ಸಾಕಷ್ಟು ಉಲ್ಲೇಖಗಳಿವೆ.

ಋಗ್ವೇದ ಕಾಲದಲ್ಲಿ (ಕ್ರಿ.ಪೂ. 1500) ಮತ್ತು ಅದಕ್ಕೂ ಹಿಂದೆ ಎತ್ತು, ಗೂಳಿ, ಗೋವು, ಕುದುರೆ, ಕುರಿ ಇತ್ಯಾದಿ ಪ್ರಾಣಿಗಳನ್ನು ಯಜ್ಞಗಳಲ್ಲಿ ಬಲಿಗೊಟ್ಟು ಇಂದ್ರ, ಅಗ್ನಿ ಮೊದಲಾದ ದೇವತೆಗಳಿಗೆ ಅರ್ಪಿಸಿದ ಬಳಿಕ ಉಳಿದವರು ಸೇವಿಸುತ್ತಿದ್ದ ಪದ್ಧತಿ ಜಾರಿಯಲ್ಲಿತ್ತು. ಗೋಮೇಧ, ಅಶ್ವಮೇಧ, ರಾಜಸೂಯ, ವಾಜಪೇಯ ಮೊದಲಾದವು ಇಂತಹ ಸಾರ್ವಜನಿಕ ಪಶುಯಜ್ಞಗಳಾಗಿದ್ದವು. ಗೋವುಗಳನ್ನು ಬಲಿ ಕೊಡುವ 'ಗೋಸವ' ಕಾರ್ಯಕ್ರಮ ಮಹಾಯಾಗಗಳ ಒಂದು ಅವಿಭಾಜ್ಯ ಅಂಗವಾಗಿತ್ತು. ಕೆಲವು ಉದಾಹರಣೆಗಳು:

ಹೋಳೆಯುವ ಅಲಗಿನಿಂದ ಕೂಡಿದ ಕತ್ತಿಯನ್ನು ಹಿ ಋತ್ವಿಜನು ಪಶುವನ್ನು ತುಂಡರಿಸಲು ಸಿದ್ಧನಾದಾಗ ಯ ಮುಖ್ಯ ಅಧ್ವರ್ಯುವು ಗೋವನ್ನು ಯೂಪಕ್ಕೆ ಬಿಗಿಯು - (ಋಗ್ವೇದ 1:121-7)

ಗೋವನ್ನು ಕತ್ತಿ ಅಥವಾ ಕುಡುಗೋಲಿನಿಂದ ಮಾಡತಕ್ಕದ್ದು - (ಋಗ್ವೇದ 10:72-6)

"ಅವರು ಪ್ರತಿಯೊಬ್ಬರಿಗೆ 35 ವೃಷಭಗಳನ್ನು ಅ ಮಾಡುತ್ತಾರೆ" - ಇಂದ್ರ (ಋಗ್ವೇದ 10:86-14)

ಅಗ್ನಿಯು ತನ್ನ ಮಿತ್ರ ಇಂದ್ರನಿಗೋಸ್ಕರ 3 ಕೋಣಗಳನ್ನು ಬೇಯಿಸಿಕೊಟ್ಟನು - (ಋಗ್ವೇದ 5:29

ಈ ಆಕಳ ಹಾಲು ಮತ್ತು ಮಾಂಸ ಬ ರುಚಿಕರವಾಗಿರುತ್ತದೆ. ಇದನ್ನು ಅತಿಥಿಗಳ ಮು ತಿನ್ನಕೂಡದು - (ಅಥರ್ವ 39:6-9)

ಉಪನಿಷತ್ತುಗಳಲ್ಲಿ ಕೂಡ ಗೋಮಾಂಸ ಸೇವ ಪ್ರಸ್ತಾಪಗಳಿವೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಗೋದ ಗೋವಧೆ ಮತ್ತು ಗೋಮಾಂಸಭಕ್ಷಣೆ ಬಗ್ಗೆ ವಿಸ್ಮೃತ ಬರೆಯಲಾಗಿದೆ. ಯಾಜ್ಞವಲ್ಕ್ಯ ಮುನಿಯ ಪ್ರಕಾರ 'ಒ ಪಂಡಿತನೂ, ವಾಗ್ಮಿಯೂ, ಎಲ್ಲ ವೇದಗಳ ಅರಿಯಬಲ್ಲವನೂ, ದೀರ್ಘಾಯುಷಿಯೂ ಆದ ಮಗ ಪಡೆಯಬೇಕೆಂಬ ಇಚ್ಛೆಯುಳ್ಳವನು ಬಲಿತ ಎತ್ತಿನ ಅ ಯುವ ಹೋರಿಯ ಮಾಂಸವನ್ನು ಅನ್ನದೊಂದಿಗೆ ಬೇ ಬೆಣ್ಣೆಯಲ್ಲಿ ಕಲಸಿ ತಿನ್ನಬೇಕು' - (ಬೃಹದಾರಣ್ಯಕೋಪ 6-4-28, ಮ್ಯಾಕ್ಸ್‌ಮುಲ್ಲರ್)

ತೈತ್ತಿರೀಯ, ಐತರೇಯ, ಗೋಪಥ, ಶತಪಥ, ಆ ಬ್ರಾಹ್ಮಣಗಳಲ್ಲಿ ವಿವಿಧ ಪಶುಯಜ್ಞಗಳ ವಿವರ ಪಂಚಶರದೀಯಸವ, ಪಶುಬಂಧ, ಶೂಲಗಾವ, ಅ ಮುಂತಾದ ಯಜ್ಞಗಳಲ್ಲಿ ಗೋವುಗಳೆ ಮುಖ್ಯ ಬಲಿ ಗಳಾಗಿದ್ದವು. ಪಿತೃಶ್ರಾದ್ಧಗಳಲ್ಲಿ ಪ್ರಮುಖ ಆ ಗೋಮಾಂಸ ವಾಗಿತ್ತು ಎಂದು ಗೃಹ್ಯಸೂತ್ರಗಳ ಮ ತಿಳಿಯುತ್ತದೆ. ಒಂದು ಭಾಗವನ್ನು ಯಜ್ಞದ ಮ ದೇವತೆಗಳಿಗೆ, ಪಿತೃಗಳಿಗೆ ಸಮರ್ಪಿಸಿದ ಬಳಿಕ ಉ ಭಾಗವನ್ನು ಬಂಧುಮಿತ್ರರು ಮತ್ತು ಪುರೋಹಿ ತಿನ್ನುತ್ತಿದ್ದರು.

ವಿಷ್ಣು, ಮಾರ್ಕಂಡೇಯ, ದೇವಿ, ಸ್ಕಂದ, ಮತ್ತು ಭವಿಷ್ಯ ಪುರಾಣಗಳಲ್ಲಿಯೂ ಮಾಂಸಾ ಪ್ರಸ್ತಾಪವಿದೆ. ಮಹಾಭಾರತದಲ್ಲಿ ಒಂದೆಡೆ ಭೀ ಪಿತೃದೇವತೆ ಗಳಿಗೆ ಸಾಸಿವೆ, ಅಕ್ಕಿ ಮೊದಲಾದವುಗಳೊ ಮೀನು, ಜಿಂಕೆ, ಎಮ್ಮೆ ಮತ್ತು ಗೋಮಾಂಸ ಅರ್ಪಿಸಬೇಕೆಂದು ಹೇಳುತ್ತಾನೆ.

ರಾಮಾಯಣದಲ್ಲಿ ರಾಮ, ಸೀತೆಯರು ಮಾಂಸ ಮಾಡುತ್ತಿದ್ದ ವಿಷಯ ಹಲವಾರು ಕಡೆ ಪ್ರಸ್ತಾಪ ಸೀತೆಗೆ ಜಿಂಕೆಯ ಮಾಂಸ ಪ್ರಿಯವಾಗಿತ್ತು ಎನ್ನ ಭರದ್ವಾಜ ಮಹರ್ಷಿಯು ರಾಮನ ಸ್ವಾಗತಕ್ಕೆ ಕ ಕರುವೊಂದನ್ನು ಬಲಿ ನೀಡಿದ್ದನೆಂದು ತಿಳಿದುಬರ

ವೈದ್ಯಕೀಯ ಗ್ರಂಥಗಳಾದ ಚರಕ ಸಂಹಿತೆ, ಸಂಹಿತೆ, ವಾಗ್ಭಟನ 'ಅಷ್ಟಾಂಗ ಹೃದ್ಯಂ'ಗಳಲ್ಲಿ ರೋಗಗಳಿಗೆ ಔಷಧಿಯಾಗಿ ವಿವಿಧ ಮಾಂಸಗಳನ್ನ ಮಾಡಲಾಗಿದ್ದು ಅದರಲ್ಲಿ ಗೋಮಾಂಸವೂ ಒಂ

ಬೌದ್ಧ ಸೂತ್ರಗಳ ವಿಚಾರಕ್ಕೆ ಬಂದರೆ ಅ ಬ್ರಾಹ್ಮಣರ ಗೋಮಾಂಸ ಸೇವನೆ ಬಗ್ಗೆ ಉಲ್ಲೇಖಗಳಿರುವುದನ್ನು ಕಾಣಬಹುದು.

ರಾಜಮಹಾರಾಜರುಗಳ ಕಾಲದಲ್ಲಿ ಮನುಸ್ಮೃತಿ

ಕ್ರಿ.ಶ.200) ಎಂಬ ಧರ್ಮಸಂಹಿತೆ ಜಾರಿಯಲ್ಲಿತ್ತು, ...ಮು ಮುಳ್ಳುಹಂದಿ, ಘೇಂಡಾಮೃಗ ಮುಳ್ಳುಮೀನು, ...ಉಡ, ಮೊಲ; ಒಂಟೆ ಹೊರತುಪಡಿಸಿ ಮಿಕ್ಕೆಲ್ಲ ... ಮಾಂಸ ತಿನ್ನಬಹುದೆಂದು ಮನುಸ್ಮೃತಿ ಹೇಳುತ್ತದೆ. ...ಂಸ ನಿಷಿದ್ಧವೆಂದು ಅದೆಲ್ಲೂ ಹೇಳುವುದಿಲ್ಲ. ...ಉದಾಹರಣೆಗಳು:

...ಾತನಕಾಲದ ಯಜ್ಞಗಳಲ್ಲಿ ಹಾಗೂ ಬ್ರಾಹ್ಮಣ ... ಮಾಡಿದಂತಹ ಯಾಗಗಳಲ್ಲಿ, ಶಾಸ್ತ್ರಗಳಲ್ಲಿ ಹೇಳಿದ ...ಗಳನ್ನು ಬಲಿ ನೀಡಿ ಅವುಗಳ ಮಾಂಸದಿಂದ ...ಾಶನವನ್ನು (ಹವಿಸ್ಸನ್ನು) ಮಾಡಿದ್ದರು. (ಅಧ್ಯಾಯ-5,

...ಹ್ಮಣರಿಗೆ ಅಪೇಕ್ಷೆಯುಂಟಾದಾಗ ಯಜ್ಞವಿಧಿಗಳಲ್ಲಿ ...ಲದಿಂದ ಪ್ರೋಕ್ಷಿತವಾದ (ಪವಿತ್ರೀಕರಿಸಿದ; ಮೇಧ್ಯ; ... ಮಾಂಸವನ್ನು ಹಾಗೂ ಶಾಸ್ತ್ರವಿಧಿಗಳಲ್ಲಿ ಹೇಳಲಾದ ...ದ ಶ್ರಾದ್ಧಊಟದಲ್ಲಿ ಮಾಂಸವನ್ನು ತಿನ್ನಬಹುದು.... ...ು-5, 27)

...ಸುವ ಪಶುಪ್ರಾಣಿಗಳಿಗೆ ಚಲಿಸದಿರುವ ಹುಲ್ಲುಸಸ್ಯ ...ಹಾರ, ಕೋರೆದಾಡೆಗಳಿರುವ ಹುಲಿಸಿಂಹಗಳಿಗೆ ...ಾಡೆಗಳಿರದ ಜಿಂಕೆ ಇತ್ಯಾದಿಗಳು ಆಹಾರ, ...ವ ಮನುಷ್ಯನಿಗೆ ಕೈಗಳಿಲ್ಲದ ಪಶುಪ್ರಾಣಿಗಳು ... ಹಾಗೂ ಶೂರ, ಕ್ರೂರ ಪ್ರಾಣಿಗಳಿಗೆ ಸಾಧು, ...ಪ್ರಾಣಿಗಳು ಆಹಾರ. (ಅಧ್ಯಾಯ-5, 29)

...ಜ್ಞಕ್ಕಾಗಿ ಪಶುವನ್ನು ಕೊಂದು ಮಾಡಿದ ...ಕ್ಷಣವು "ದೈವಿಕರೀತಿ" ಎಂದು ಹೇಳಲ್ಪಟ್ಟಿದೆ. ...ು-5, 31)

...ಗೆ ಯಜ್ಞ, ಶ್ರಾದ್ಧ ಹಾಗೂ ಮಧುಪರ್ಕ ...ಪದ ಅತಿಥಿಗಳಿಗೆ ನೀಡುವ ಸತ್ಕಾರ) ಇತ್ಯಾದಿ ...ಳಿಗೆ ಮಾತ್ರ ವೇದಜ್ಞನಾದ ಬ್ರಾಹ್ಮಣನು ಪಶುವನ್ನು ... ಅವನು ತನ್ನ ಜತೆಗೆ ಆ ಪಶುವಿಗೂ ಉತ್ತಮ ...ನ್ನುಂಟುಮಾಡುತ್ತಾನೆ. (ಅಧ್ಯಾಯ-5, 42)

...ಾವನು ಪಿತೃಗಳನ್ನು ಹಾಗೂ ದೇವತೆಗಳನ್ನು ...ದ ಮೂಲಕ ಅರ್ಚಿಸದೆ ತನ್ನ ಮಾಂಸವನ್ನೆ ...ಂಸದ ಮೂಲಕ ಬೆಳೆಸಿಕೊಳ್ಳಲು ಇಚ್ಛಿಸುತ್ತಾನೊ ...ತಹ ಪಾಪಿ ಜಗತ್ತಿನಲ್ಲಿ ಇನ್ನಾವನೂ ಇರಲಾರನು. ...ು-5, 52)

...ಂಸಾಹಾರಿ ಸ್ವಾಮಿ ವಿವೇಕಾನಂದ

...ಮಿ ವಿವೇಕಾನಂದರನ್ನು ಗುತ್ತಿಗೆಗೆ ತೆಗೆದುಕೊಂಡ ... ವರ್ತಿಸುವ ಸಂಘ ಪರಿವಾರ ಅವರು ಅಪ್ಪಟ ...ಾಹಾರಿಯಾಗಿದ್ದರೆಂಬ ಸತ್ಯವನ್ನು ತನ್ನ ಅನುಯಾಯಿ ... ಮರೆಮಾಚಿದೆ. ಸ್ವಾಮೀಜಿಯ ತಾಯಿ ಭುವನೇಶ್ವರಿ ...ರಿಯಾಗಿದ್ದರೆ ತಂದೆ ವಿಶ್ವನಾಥ್ ಮಾಂಸಾಹಾರಿಯಾಗಿ ...ವಿಶ್ವನಾಥ್ ಓರ್ವ ಮುಸಲ್ಮಾನ ಬಾಣಸಿಗನನ್ನು ... ಕರೆಸಿ ತಮ್ಮಿಷ್ಟದ ಅಡುಗೆ ಮಾಡಿಸುತ್ತಿದ್ದರು. ...ನಂದರು ಮಾಂಸದಡುಗೆಯಲ್ಲಿ ಎತ್ತಿದ ಕೈ ಆಗಿದ್ದರು. ...ಷ್ಣ ಪರಮಹಂಸರ ಪತ್ನಿ ಶಾರದಾದೇವಿ ಪ್ರಕಾರ ...ನಾಥನಿಗೆ (ವಿವೇಕಾನಂದರ ಮೂಲ ಹೆಸರು) ...ಯ ಮಾಂಸ ಖಾದ್ಯದ ತಯಾರಿ ತಿಳಿದಿತ್ತು, ಚಾಪ್ಸ್, ...ಶೀಕ್ ಕಬಾಬ್, ಮೀನು, ಪುಲಾವ್ ಮುಂತಾದವು ...ಇಷ್ಟದ ತಿನಿಸುಗಳು. ಒಮ್ಮೆ ಸಿಸ್ಟರ್ ನಿವೇದಿತಾ ...ನಂದರನ್ನು ಭೆಟ್ಟಿಯಾಗಲು ಬಂದಿದ್ದಾಗ ಆಕೆಗೆ ... ಮಟನ್ ಮತ್ತಿತರ ಪದಾರ್ಥಗಳನ್ನು ತನ್ನ ಸ್ವಂತ ...ದ ಅಡುಗೆ ಮಾಡಿ ಉಣಿಸಿದ್ದರು ಸ್ವಾಮೀಜಿ. ...ಾದಲ್ಲಿದ್ದಾಗ ಚಿಪ್ಪಿನೊಳಗಿನ ಮೃದ್ವಂಗಿ (ಕ್ಲಾಮ್) ... ಕಲಿತರು. ಅಲ್ಲಿ ಅವರು ಗೋಮಾಂಸ ಸೇವಿಸಿದ್ದ ...ವನ್ನು ರೊಮೈನ್ ರೊಲಾಂಡ್ ತನ್ನ 'ದಿ ಲೈಫ್ ...ವಿವೇಕಾನಂದ ಅಂಡ್ ಯೂನಿವರ್ಸಲ್ ಗಾಸ್ಪೆಲ್' ...ಲ್ಲಿ ಪ್ರಸ್ತಾಪಿಸಿದ್ದಾರೆ.

...ಅಟಲ್ ಬಿಹಾರಿ ವಾಜಪೇಯಿ

...ಘ ಪರಿವಾರದ ಓರ್ವ ಕಟ್ಟಾ ಸ್ವಯಂಸೇವಕರಾದ ...ೇಯಿಯವರು ಪ್ರಧಾನಿಯಾಗಿದ್ದ ಕಾಲದಲ್ಲಿ ...ರು ಸಲ ವಿದೇಶಗಳಿಗೆ ಭೇಟಿ ನೀಡಿದ್ದರು. ...ಮ್ಮೆ ಸ್ವಿಜರ್‌ಲ್ಯಾಂಡ್‌ಗೆ ಹೋಗಿದ್ದಾಗ ಬೀಫ್ ...ನ್ನೆ ವಿಷಯ ತಿಳಿದ ಸುಬ್ರಹ್ಮಣ್ಯನ್ ಸ್ವಾಮಿ ಆ ...ಜಪೇಯಿಯವರನ್ನು ಪ್ರಶ್ನಿಸಿದಾಗ 'ಇದು ವಿದೇಶಿ ...ನ ಮಾಂಸ' ಎಂಬ ಉತ್ತರ ದೊರೆತಿತ್ತು!

...ಗೋಹತ್ಯೆ ಕುರಿತು ಗಾಂಧೀಜಿ

...ಮುಸಲ್ಮಾನರ ಮೇಲೆ ಒತ್ತಾಯ ಹೇರಿ ಗೋಹತ್ಯೆ ... ದೂರವಿರಿಸುವುದು ಅವರನ್ನು ಬಲಾತ್ಕಾರವಾಗಿ ... ಧರ್ಮಕ್ಕೆ ಮತಾಂತರಗೊಳಿಸಿದಂತೆಯೆ ಆಗುತ್ತದೆ. ...ಸಂಖ್ಯಾತ ಹಿಂದೂಗಳು ಗೋಹತ್ಯೆ ನಿಷೇಧವನ್ನು ...ನರ ಮೇಲೆ ಕಾಯಿದೆಗಳ ಮೂಲಕ ಕಡ್ಡಾಯವಾಗಿ ...ವುದು ಅವಿವೇಕದ ಹಾಗೂ ಅನುಚಿತ ...ವಾಗುತ್ತದೆ...' (The Collected Works ..., 19-25)

...ಮುಸಲ್ಮಾನರಿಗೆ ಸಂಪೂರ್ಣ ಗೋಹತ್ಯೆಯ ...ವನ್ನು ನೀಡುವುದನ್ನು ನಾವು ಅಂಗೀಕರಿಸುವುದು ...ಕೆಯನ್ನು ಬಲಪಡಿಸುವ ಮತ್ತು ಗೋವುಗಳನ್ನು



ಆಕಳಿನ ಉಪ ಉತ್ಪನ್ನಗಳಿಂದ ತಯಾರಾಗಿರುವ ವಸ್ತುಗಳು

ರಕ್ಷಿಸುವ ಏಕೈಕ ಹಾಗೂ ಅನಿವಾರ್ಯ ಮಾರ್ಗವಾಗಿದೆ....' (ಹರಿಜನ್ 10.4.1940)

ಸಾಮರಸ್ಯಕ್ಕೆ ಪರತ್ತು ವಿಧಿಸುವ ಸ್ವಾಮೀಜಿಯವರನ್ನು, ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ನಮಿಸುವ ಪ್ರಧಾನಿಯವರನ್ನು ಒಳಗೊಂಡಂತೆ ನಾವೆಲ್ಲರೂ ಗಾಂಧೀಜಿಯ ಮಾತುಗಳಿಗೆ ಕಿಂಚಿತ್ತಾದರೂ ಬೆಲೆ ಕೊಡುತ್ತಿದ್ದೇವಾ?


ಹೈನುಗಾರಿಕೆ ಮತ್ತು ರೈತನ ವ್ಯಾವಹಾರಿಕತೆ

ಕೇವಲ ಅಲ್ಪಸಂಖ್ಯಾತರ ದ್ವೇಷ ಎಂಬ ಏಕೈಕ ನೆವ ಇಟ್ಟುಕೊಂಡು ಗೋಹತ್ಯೆ ನಿಷೇಧಕ್ಕಾಗಿ ಒತ್ತಾಯಿಸುವವರಿಗೆ ನೆಲದ ವಾಸ್ತವ ತಿಳಿದಿಲ್ಲ, ದನ ಸಾಕಿ ಗೊತ್ತಿಲ್ಲ, ತಾವು ಅಂತಿಮವಾಗಿ ಹೈನೋದ್ಯಮದ ಬುಡಕ್ಕೆ ಕೊಡಲಿ ಏಟು ಹಾಕುತ್ತಿದ್ದೇವೆಂಬ ಅರಿವಿಲ್ಲ. ಅದು ಹೇಗೆಂದು ನೋಡೋಣ. ಭಾರತದ ಕ್ಷೀರಕ್ರಾಂತಿಯ ಯಶಸ್ಸಿನ ಹಿಂದೆ ಲಕ್ಷಾಂತರ ಸಣ್ಣಪುಟ್ಟ ರೈತರ ದೊಡ್ಡ ಕೊಡುಗೆ ಇದೆ. ಒಂದಿಷ್ಟು ಪುಡಿಗಾಸು ತಂದುಕೊಡುವ ಈ ಉಪಉದ್ಯಮ ಇವತ್ತಿಗೂ ತನ್ನ ಲಾಭದಾಯಕತೆಯನ್ನು ಉಳಿಸಿಕೊಂಡಿರುವುದೆ ನಿರುಪಯುಕ್ತ ಆಕಳುಗಳ ಮಾರಾಟದ ಮೂಲಕ. ಹಾಲು ನೀಡುವ ಗೋವನ್ನು ಪೂಜಿಸುವ ರೈತ ಅದು ನಿರುಪಯುಕ್ತವಾದಾಗ ಅದನ್ನು ಕಸಾಯಿಖಾನೆಗೆ ಮಾರುವಲ್ಲಿ ವ್ಯಾವಹಾರಿಕತೆಯನ್ನು ಮೆರೆಯುತ್ತಾನೆ. ಇದರಲ್ಲಿ ಹೊಸದೇನಿಲ್ಲ, ನೂರಾರು ವರ್ಷಗಳಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದಿರುವಂತಹ ಸಂಪ್ರದಾಯವಿದು. ನಿರುಪಯುಕ್ತ ಆಕಳುಗಳನ್ನು ಜಾನುವಾರು ವ್ಯಾಪಾರಿಗಳಿಗೆ

ಕರುಗಳಂತೂ ಪೂರ್ತಿ ನಿಷ್ಪ್ರಯೋಜಕ. ಇಂತಹ ಪರಿಸ್ಥಿತಿಗಳಲ್ಲಿ ಮಾರುವುದೊಂದೇ ದಾರಿ. ಆ ಸಂದರ್ಭದಲ್ಲಿ ರೈತನ ಸಹಾಯಕ್ಕೆ ಬರುವುದೆ ಜಾನುವಾರು ವ್ಯಾಪಾರಿ, ಸಾಗಾಟಗಾರ ಮತ್ತು ವಧಾಗೃಹಗಳನ್ನು ಒಳಗೊಂಡ ವ್ಯವಸ್ಥೆ. ರೈತನ ಕರೆಗೆ ಓಗೊಟ್ಟು ತಕ್ಷಣ ಧಾವಿಸಿ ಬರುವ, ಪ್ರತಿಯೊಂದು ಹಳ್ಳಿಯಲ್ಲೂ ಇರುವ ವ್ಯಾಪಾರಿಗಳಲ್ಲಿ ಹೆಚ್ಚಿನವರು ಮುಸ್ಲಿಮರೆ ಆಗಿದ್ದಾರೆ. ಇದನ್ನು ದನ ಸಾಕುವ ಪ್ರತಿಯೊಬ್ಬ ರೈತನೂ ಬಲ್ಲ. ಆದರೂ ವ್ಯಾಪಾರಿ ಮತ್ತು ಸಾಗಾಟಗಾರರ ಮೇಲೆ ಹಲ್ಲೆಯಾಗುವಾಗ ರೈತ ಧ್ವನಿ ಎತ್ತದಿರುವುದರ ಹಿಂದೆ ಅರಿವಿನ ಕೊರತೆ ಮತ್ತು/ಅಥವಾ ಈಗಾಗಲೆ ಹೇಳಿರುವಂತೆ ಬಾಯ್ಬಿಟ್ಟು ಹೇಳಲಾರದ ಭಯ ಇರಬಹುದು. ನಿರುಪಯುಕ್ತ ಆಕಳುಗಳ ಹತ್ಯೆಯಿಂದ ಮಾನವಕುಲಕ್ಕೆ ಏನು ಪ್ರಯೋಜನ ಎಂದು ನೋಡಹೊರಟರೆ ಮಾರುದ್ದದ ಪಟ್ಟಿಯೆ ಎದುರಾಗುತ್ತದೆ.

ನಿರುಪಯುಕ್ತ ಆಕಳಿನ ಉಪಯೋಗಗಳು

ನಿರುಪಯುಕ್ತ ಆಕಳುಗಳು ಅನೇಕ ಮಾನವರಿಗೂ ಮೃಗಾಲಯದ ಪ್ರಾಣಿಗಳಿಗೂ ಆಹಾರವನ್ನು ಒದಗಿಸುವುದಷ್ಟೆ ಅಲ್ಲ; ಇನ್ನಿತರ ಅಸಂಖ್ಯಾತ ರೀತಿಗಳಲ್ಲಿ ನಮಗೆಲ್ಲರಿಗೂ ಉಪಯುಕ್ತವಾಗುತ್ತವೆ. ನಂಬಿದರೆ ನಂಬಿ ಇಲ್ಲವಾದರೆ ಬಿಡಿ, ಇವತ್ತು ನಮ್ಮ ಅನೇಕಾನೇಕ ದಿನಬಳಕೆಯ ವಸ್ತುಗಳ ಉತ್ಪಾದನೆಯಲ್ಲಿ ಆಕಳುಗಳದ್ದೆ ಹಿರಿಯ ಪಾತ್ರ! ಗೋವಿನ ಚರ್ಮ, ಎಲುಬು ಮತ್ತು ರಕ್ತಗಳಿಂದ ಬಗೆಬಗೆಯ ಸಾಮಗ್ರಿಗಳನ್ನು ತಯಾರಿಸಲಾಗುತ್ತದೆ. ಔಷಧಿಗಳು, ಔದ್ಯಮಿಕ ಕಚ್ಚಾವಸ್ತುಗಳು,


ಆಕಳಿನ ಉಪ ಉತ್ಪನ್ನಗಳಿಂದ ತಯಾರಾಗಿರುವ ಔಷಧಿಗಳು

ಮಾರದೆ ಹಾಗೆಯೆ ಉಳಿಸಿಕೊಂಡರೆ ಅವುಗಳನ್ನು ನೋಡಿಕೊಳ್ಳುವುದು ಯಾರು, ಯಾತಕ್ಕಾಗಿ, ಎಲ್ಲಿ ಮತ್ತು ಹೇಗೆ ಎಂಬ ಪ್ರಶ್ನೆಗಳೇಳುತ್ತವೆ. ರೈತರಿಗಂತೂ ಅಸಾಧ್ಯ. ಇದಕ್ಕೆ ಹಲವು ಕಾರಣಗಳಿವೆ. ಬಹುಪಾಲು ಹಳ್ಳಿಗಳಲ್ಲಿ ಇಂದು ಗೋಮಾಳಗಳೆ ಇಲ್ಲ, ಹುಲ್ಲು, ಹಿಂಡಿಯಾದಿಯಾಗಿ ಎಲ್ಲವನ್ನೂ ದುಡ್ಡು ಕೊಟ್ಟು ಖರೀದಿಸಬೇಕಾಗಿದೆ. ಸಾಲದ್ದಕ್ಕೆ ಪಶುಆಹಾರ ದುಬಾರಿಯಾಗುತ್ತ ಸಾಗಿದೆ. ಇನ್ನೊಂದು ಕಡೆ ಕೂಲಿ ಕಾರ್ಮಿಕರ ಅಭಾವವೂ ಹೇಳತೀರದು. ಹೀಗೆ ಕರಾವಿನ ದನಗಳನ್ನೆ ಸಾಕಲು ಶ್ರಮಪಡುವ ಪರಿಸ್ಥಿತಿ ಇರುವಾಗ ನಿರುಪಯುಕ್ತ ಆಕಳುಗಳನ್ನು ಸಾಕಿ ನಷ್ಟ ಅನುಭವಿಸಲು ಯಾರು ತಾನೆ ಬಯಸುತ್ತಾರೆ? ಅದಲ್ಲದೆ ಇವತ್ತು ಬಹುತೇಕ ರೈತರ ಬಳಿ ಇರುವುದೆ ವಿದೇಶಿ ತಳಿಯ ಆಕಳುಗಳು. ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಹೆಚ್ಚಿಸುವುದಕ್ಕಾಗಿ ಸರ್ಕಾರವೇ ಕೈಗೊಂಡಿರುವ ಉಪಕ್ರಮ ಇದು. ನೂರಾರು ಕಿಲೊ ತೂಗುವ ಈ ವಿದೇಶಿ ದನಕ್ಕೆ ಎಲ್ಲಾದರೂ ಪೆಟ್ಟಾದರೆ ಅದನ್ನು ಎದ್ದು ನಿಲ್ಲಿಸಲು ಕನಿಷ್ಠ ಇಬ್ಬರು, ಮೂವರು ಕೂಲಿಯಾಳುಗಳಾದರೂ ಬೇಕು. ಆದರಲ್ಲೂ ವಾಸಿಯಾಗದಂತಹ ಪೆಟ್ಟಾದರೆ ಮುಗಿಯಿತು ಕತೆ. ಅಂತಹ ದನ ಯಾರಿಗೂ ಬೇಡ. ವಿದೇಶಿ ಗಂಡು

ಸೌಂದರ್ಯವರ್ಧಕಗಳು, ಚರ್ಮೋತ್ಪನ್ನಗಳು ಇತ್ಯಾದಿ ಇತ್ಯಾದಿ. ನಮ್ಮಲ್ಲಿ ಅನೇಕರು ಬಳಸುವ ಅತಿ ದುಬಾರಿ ಸೋಫಾ ಕವರ್‌ಗಳು ಮತ್ತು ಕಾರುಗಳ ಕುಶನ್‌ಗಳಿಗೆ ಗೋವಿನ ಚರ್ಮವೇ ಬೇಕು. ಗೋವಿನ ಗೊರಸು, ಕೋಡುಗಳಿಂದ ಜೆಲ್ಲಿಯನ್ನು ತಯಾರಿಸಲಾಗುತ್ತದೆ. ಮೂಳೆಯ ಪುಡಿ ಸಕ್ಕರೆ ಉತ್ಪಾದನೆಯಲ್ಲಿ ಬಳಕೆಯಾದರೆ ಮೂಳೆಯಿಂದ ಸಿಗುವ ಕ್ಯಾಲ್ಸಿಯಂ, ರಂಜಕಗಳನ್ನು ರಸಗೊಬ್ಬರ ಉತ್ಪಾದನೆಯಲ್ಲಿ ಉಪಯೋಗಿಸಲಾಗುತ್ತದೆ. ಶಸ್ತ್ರಚಿಕಿತ್ಸೆಯಲ್ಲಿ ಬಳಸುವ ಹೆಪಾರಿನ್, ಹೃದ್ರೋಗ ಚಿಕಿತ್ಸೆಗೆ ಬೇಕಾದ ಎಪಿನೆಫ್ರಿನ್, ಕೀಲುನೋವು ಸಂಧಿವಾತಗಳಿಗಾಗಿರುವ ಕೊಂಡ್ರಾಯಿಟಿನ್ ಸಲ್ಫೇಟ್, ಬಿ-12, ಲಿವರ್ ಎಕ್ಸ್ಟ್ರಾಕ್ಟ್, ಇನ್ಸುಲಿನ್ ಮೊದಲಾದವನ್ನು ಸಿದ್ಧಪಡಿಸುವುದೆ ಕಸಾಯಿಖಾನೆಯ ಉಪಉತ್ಪನ್ನಗಳಿಂದ. ಮಿದುಳಿನ ಶಸ್ತ್ರಕ್ರಿಯೆಗೆ ಬಳಸುವ ಕವಚ ಗೋವಿನ ಮಿದುಳಿನಿಂದ ತಯಾರಿಸಲ್ಪಡುತ್ತದೆ.

ಗೋವಿನ ಚರ್ಮದಿಂದ ಸಿಗುವ ಕೊಲಾಜೆನ್ ವೈದ್ಯಕೀಯರಂಗದಲ್ಲಷ್ಟೆ ಅಲ್ಲ, ಇತರ ಕ್ಷೇತ್ರಗಳಲ್ಲಿಯೂ ಭಾರಿ ಬೇಡಿಕೆ ಇರುವ ವಸ್ತು. ಅದನ್ನು ಅನಿಯಂತ್ರಿತ ಮೂತ್ರ ವಿಸರ್ಜನೆಗೆ ಮದ್ದಾಗಿ, ಕ್ಯಾಟರಾಕ್ಟ್ (ಕಣ್ಣಿನ ಪೊರೆ) ಶಸ್ತ್ರಕ್ರಿಯೆಗೆ ಬೇಕಾದ ಕೃತಕ ಹಾಳೆ ಕವಚದ ತಯಾರಿಯಲ್ಲಿ, ಜೆಲಿಟಿನ್ ಪುಡಿ, ಜೆಲ್ಲಿ, ಜ್ಯಾಮ್, ಸೌಂದರ್ಯವರ್ಧಕ ಕ್ರೀಮ್, ಮುಲಾಮು, ಗೋಧ್ರುನಿವಾರಕ, ಬ್ಯಾಂಡೇಜು, ಫೋಟೊ ಮತ್ತು ಸಿನಿಮಾ ಫಿಲ್ಮ್ ತಯಾರಿಯಲ್ಲಿ ಬಳಸಲಾಗುತ್ತದೆ.

ಗೋವಿನ ಪಿತ್ತಕೋಶದ ಕಲ್ಲುಗಳಿಂದ ಆಭರಣ ಹರಳುಗಳನ್ನು ಮತ್ತು ರಕ್ತದಿಂದ ಪ್ಲೈವುಡ್ ಅಂಟಿಸುವ ಗಮ್, ಅಗ್ನಿಶ್ಯಾಮಕ ನೊರೆ, ರಸಗೊಬ್ಬರ ಮತ್ತು ಬರಣ ಗುಳಿಗೆಗಳನ್ನು ತಯಾರಿಸಲಾಗುತ್ತದೆ.

ಗೋವಿನ ಮೂಳೆ ಮತ್ತು ಕೊಬ್ಬಿನಿಂದ ತೆಗೆಯುವ ಟ್ಯಾಲೊ ಎಣ್ಣೆಯನ್ನು ವಾಹನಗಳ ಬ್ರೇಕ್ ದ್ರವ, ವಿಮಾನಗಳ ಕೀಲೆಣ್ಣೆ ಗ್ಲಿಸರಿನ್, ಸಾಬೂನು, ಮೋಂಬತ್ತಿ ವಾಟರ್‌ಪ್ರೂಫ್ ಅಂಟು, ಎಣ್ಣೆಕಾಗದ, ಆಂಟಿಬಯಾಟಿಕ್‌ಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಖಾದ್ಯಯೋಗ್ಯ ಟ್ಯಾಲೊವನ್ನು ಚ್ಯೂಯಿಂಗ್ ಗಮ್, ಬೇಕರಿ ತಿನಿಸುಗಳಲ್ಲಿ ಉಪಯೋಗಿಸಲಾಗುತ್ತದೆ. ಮತ್ತೊಂದು ಉತ್ಪನ್ನವಾದ ಗ್ಲಿಸರಿನ್‌ನಿಂದ ಕಿವಿ, ಕಣ್ಣಿನ ಡ್ರಾಪ್ಸ್, ಕೆಮ್ಮಿನ ಸಿರಪ್, ಹೇರ್ ಕಂಡಿಷನರ್, ಶಾಂಪೂ, ಬಣ್ಣದ ಶಾಯಿ, ಪಾಲಿಶ್, ಆಂಟಿಫ್ರೀಜ್ ಮಿಶ್ರಣ ಇತ್ಯಾದಿಗಳನ್ನು ತಯಾರಿಸಲಾಗುತ್ತದೆ.

ರೈತಸ್ನೇಹಿ, ಜನಸ್ನೇಹಿ, ಪರಿಸರಸ್ನೇಹಿ ಜಾನುವಾರು ವ್ಯವಸ್ಥೆ

ಈ ರೀತಿ ಜಾನುವಾರು ವ್ಯಾಪಾರ ವ್ಯವಸ್ಥೆ ಎಷ್ಟೊಂದು ರೈತಸ್ನೇಹಿ, ಜನಸ್ನೇಹಿ ಮತ್ತು ಪರಿಸರಸ್ನೇಹಿಯಾಗಿದೆ ಎಂಬುದನ್ನು ತಿಳಿದುಕೊಂಡಾಗ ತಥಾಕಥಿತ ಗೋರಕ್ಷಕರ ಅಸಲಿ ಉದ್ದೇಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಗೋಹತ್ಯೆ ನಿಷೇಧಿಸಬೇಕೆನ್ನುವವರು ಇಡೀ ವ್ಯವಸ್ಥೆಯ ಸಮತೋಲನವನ್ನು ಹದಗೆಡಿಸಿ ಅದರಲ್ಲಿ ಏರುಪೇರುಗಳನ್ನು ಉಂಟುಮಾಡುತ್ತಿದ್ದಾರೆ. ಅಂತಿಮವಾಗಿ ಇದು ರೈತರು ಹೈನುಗಾರಿಕೆಯಿಂದ ಹಿಂಜರಿಯುವಂತೆ ಮಾಡುತ್ತದೆ. ಇದರ ನೇರ ಪರಿಣಾಮ ಹೈನೋದ್ಯಮದ ಮೇಲೆ ಆಗುತ್ತದೆ. ಆಗ ರಫ್ತಿನಿಂದ ಅನಾಯಾಸವಾಗಿ ಬರುವ ದೊಡ್ಡ ಪ್ರಮಾಣದ ಆದಾಯಕ್ಕೆ ಭಾರಿ ಹೊಡೆತ ಬೀಳುತ್ತದೆ. ಔಷಧ, ಔದ್ಯಮಿಕ ಕಚ್ಚಾವಸ್ತು, ಸೌಂದರ್ಯವರ್ಧಕ, ಚರ್ಮೋತ್ಪನ್ನ ಮತ್ತಿತರ ಉದ್ಯಮಗಳ ಮೇಲೂ ದುಷ್ಪರಿಣಾಮ ಉಂಟಾಗುತ್ತದೆ. ಇನ್ನೊಂದೆಡೆ ನಿರುಪಯುಕ್ತ ಜಾನುವಾರುಗಳನ್ನು ಸಾಕುವ ಹೆಚ್ಚುವರಿ ಆರ್ಥಿಕ ಹೊರೆಯನ್ನು ಹೊರುವವರಾರು ಎಂಬ ಯಕ್ಷಪ್ರಶ್ನೆ ಎದುರಾಗುತ್ತದೆ. ಖಾಸಗಿ ಗೋಆಶ್ರಮಗಳಲ್ಲಿ ಏನೆಲ್ಲ ನಡೆಯುತ್ತದೆ ಎಂಬುದನ್ನು ಬಲ್ಲವರೆ ಬಲ್ಲರು.

ಆದರೆ ಸಮಾಜ ಈ ರೈತಸ್ನೇಹಿ, ಜನಸ್ನೇಹಿ, ಪರಿಸರಸ್ನೇಹಿ ಜಾನುವಾರು ವ್ಯಾಪಾರ ವ್ಯವಸ್ಥೆಯನ್ನು ಗುರುತಿಸಿ ಗೌರವಿಸುವ ಬದಲು ಸಂಪೂರ್ಣವಾಗಿ ಕಡೆಗಣಿಸಿರುವುದು ದುರದೃಷ್ಟಕರ ಮಾತ್ರವಲ್ಲ ಶೋಚನೀಯವೂ ಆಗಿದೆ. ಆದುದರಿಂದ ಸಮಾಜ ಈಗಲಾದರೂ ಎಚ್ಚೆತ್ತುಕೊಂಡು ಜಾನುವಾರು ವ್ಯವಸ್ಥೆಯೊಳಗಿನ ಆಯಾ ವೃತ್ತಿಗಳನ್ನು ಯಾವುದೇ ಅಡ್ಡಿ, ಆತಂಕಗಳಿಲ್ಲದೆ ನಡೆಸಲು ಬೇಕಾದ ಎಲ್ಲಾ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕಾಗಿದೆ. ಉದಾಹರಣೆಗೆ ಜಾನುವಾರು ಸಾಗಾಟಗಾರರು ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆಗೆ ಕಾರಣವಾಗಿರುವುದು 'ಜಾನುವಾರು ಸಾಗಾಟ ನಿಯಮಗಳು, 1978' (TRANSPORT OF ANIMALS RULES,, 1978). ಇದರ ಪ್ರಕಾರ ಒಂದು ವಾಹನದಲ್ಲಿ ನಿರ್ದಿಷ್ಟ ಸಂಖ್ಯೆಯ ಜಾನುವಾರುಗಳನ್ನಷ್ಟೆ ಸಾಗಿಸಬಹುದಾಗಿದೆ.

ಆದರೆ ಗಗನಕ್ಕೇರಿರುವ ಇಂಧನ ಮತ್ತಿತರ ವೆಚ್ಚಗಳನ್ನು ಪರಿಗಣಿಸಿದರೆ ಈ ಮಿತಿಯ ಪ್ರಕಾರವೇ ಸಾಗಿಸುವುದು ಆರ್ಥಿಕವಾಗಿ ನಷ್ಟದಾಯಕ. ಆದುದರಿಂದಲೆ ಹತ್ತಾರು ಜಾನುವಾರುಗಳನ್ನು ತುಂಬಿ ಸಾಗಿಸಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ಎರಡನೆಯ ದೊಡ್ಡ ಸಮಸ್ಯೆಯೆಂದರೆ ಪಶುವೈದ್ಯರ ಕೊರತೆ. ಅದೇರೀತಿ ಆಧುನಿಕ ವಧಾಗೃಹಗಳ ಅಭಾವ ಇನ್ನೊಂದು ಜ್ವಲಂತ ಸಮಸ್ಯೆ. ಇವೆಲ್ಲವೂ ಪರಿವಾರದ ಹಲ್ಲೆಕೋರರಿಗೆ ಅನುಕೂಲಕರವಾಗಿ ಪರಿಣಮಿಸಿದೆ. ಸರ್ಕಾರ ಇದನ್ನೆಲ್ಲ ಅರ್ಥಮಾಡಿಕೊಂಡು ಈಗಿಂದೀಗಲೆ ಕಾರ್ಯಪ್ರವೃತ್ತವಾಗಬೇಕು. ಈ ಎಲ್ಲ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಆದಷ್ಟು ಶೀಘ್ರದಲ್ಲಿ ಕಂಡುಕೊಂಡು ಹಲ್ಲೆಗಳನ್ನು ಮತ್ತು ಅಮಾಯಕರ ಬಲಿಯನ್ನು ನಿಲ್ಲಿಸುವುದು ಸರ್ಕಾರದ ಆದ್ಯ ಕರ್ತವ್ಯ ಕೂಡ.


● ಸುರೇಶ್ ಭಟ್ ಬಾಕ್ರಬೈಲ್

ಆಧಾರ: ಸಾವರ್ಕರ್: ಒಂದು ಅಭಿನವ ದರ್ಶನ, ಚಂದ್ರಕಾಂತ ಪೋಕಳೆ; ಮನುಸ್ಮೃತಿ, ಏಕಲವ್ಯ; ಹಿಂದೂ ಧರ್ಮದಲ್ಲಿ ಗೋವು- ಸತ್ಯ ಮತ್ತು ಮಿಥ್ಯ, ಎಸ್.ಆರ್. ಭಟ್; ಗೋವು ಪವಿತ್ರ ಎಂಬ ಮಿಥ್ಯೆ, ಡಿ.ಎನ್. ಜಾ; ಆಹಾರ, ಅಹಿಂಸೆ, ಧರ್ಮ, ಡಾ।। ಎಂ.ಜಿ. ಇನಾಮದಾರ; ಗೋಹತ್ಯೆ ಒಂದು ಪರಾಮರ್ಶೆ, ನಾಗೇಶ ಹೆಗಡೆ; ಗೋಹತ್ಯೆ ನಿಷೇಧದ ಸುತ್ತಲಿನ ರಾಜಕೀಯ, ಪ್ರೊ।। ಬಿ. ಗಂಗಾಧರಮೂರ್ತಿ; THE MONK AS MAN, ಮಣಿ ಶಂಕರ್ ಮುಖರ್ಜಿ

'ಮೋದಿಗೆ ಸಂಘಟಿತ ಸಂಘರ್ಷವೇ ಪ್ರತಿರೋಧ'

ನರೇಂದ್ರ ಮೋದಿ ತನ್ನದೇ ಆದ ಸಲಹೆಗಾರರ ಮತ್ತು ಉನ್ನತಾಧಿಕಾರಿಗಳ ತಂಡವನ್ನು ಕಟ್ಟಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಕೆಲ ವಿಮರ್ಶಕರು 'ಅಂತರ್ವೇಶನ (ಒಳಗೊಳ್ಳುವಿಕೆ) ಧರ್ಮ'ವೂ ಸೇರಿದಂತೆ ನೇಮಕಾತಿಯಲ್ಲಿ ಸೂಕ್ತ ನಿಯಮಗಳನ್ನು ಪಾಲಿಸುವಂತೆ ಆತನಿಗೆ ಸಲಹೆ ನೀಡುತ್ತಿದ್ದಾರೆ. ಬಿಜೆಪಿಗೆ ಓಟು ಹಾಕದ 69% ಮತದಾರರನ್ನೂ ತಲುಪುವಂತೆ ನೇಮಕಾತಿಗಳಿರಬೇಕು ಎನ್ನುವುದು ಅವರ ಇಚ್ಛೆ. ಮುಖ್ಯವಾಗಿ, 2002ರ ಘನಘೋರ ಮಾರಣಹೋಮದ ಹೊರತಾಗಿಯೂ 'ಮೋದಿ ಆಳ್ವಿಕೆಯಲ್ಲಿ ನಾವು ಸುರಕ್ಷಿತ' ಎಂಬ ಭರವಸೆಯನ್ನು ಮುಸ್ಲಿಮರಲ್ಲಿ ಮೂಡಿಸಬೇಕೆನ್ನುವುದು ಅವರ ಹಂಬಲ.

ಮೋದಿ ಮತ್ತವನ ವ್ಯಕ್ತಿತ್ವಗಳಿಗೇ ವಿರುದ್ಧವಾದ 'ಆಗುವಿಕೆ'ಗಳನ್ನು ಅಪೇಕ್ಷಿಸುತ್ತಿರುವ ಅಂತಹ ವಿಮರ್ಶಕರು ನಿಜಕ್ಕೂ ಮುಗ್ಧರೇ ಸರಿ. ಒಂದೊಮ್ಮೆ ಮುಸ್ಲಿಮರತ್ತ ಸಂಧಾನದ ಸಂದೇಶವನ್ನು ರವಾನಿಸುವ ಉದ್ದೇಶ ಮೋದಿಗೆ



ಅಜಿತ್ ಧೋವಲ್

ನಿಜಕ್ಕೂ ಇದ್ದದ್ದೇ ಆಗಿದ್ದರೆ, 2002ರ ಮಾರಣಹೋಮಕ್ಕೆ ಪ್ರತಿಯಾಗಿ ಒಂದು ದುಃಖ ತುಂಬಿದ ಸಂತಾಪ ಹಾಗೂ ಪ್ರಾಮಾಣಿಕ ಪಶ್ಚಾತ್ತಾಪ ಸಲ್ಲಿಸಿ ಅದ್ಯಾವ ಕಾಲವೋ ಆಗಬೇಕಿತ್ತು. ಆದರೆ ಇದುವರೆಗೂ ಆತ ಆ ಕೆಲಸಕ್ಕೆ ಮುಂದಾಗಿಲ್ಲ, ಬದಲಾಗಿ 'ನಾನು ತಪ್ಪಿತಸ್ಥನಾಗಿದ್ದರೆ ನನಗೆ ಶಿಕ್ಷೆಯಾಗಲಿ, ಆದರೆ ಕ್ಷಮೆ ಕೇಳಲಾರೆ' ಎನ್ನುವ ಆತನ ಮಾತುಗಳು ವಿಷಾದದ ಸಂಭಾವ್ಯತೆಯನ್ನು ಸ್ಪಷ್ಟವಾಗಿ ಅಲ್ಲಗಳೆಯುತ್ತವೆ.

ಚುನಾವಣಾಪೂರ್ವ ಪ್ರಚಾರ ಸಭೆಗಳಲ್ಲಿ ಸಿಖ್ ಪೇಟಗಳಿಂದ ಹಿಡಿದು ಅರುಣಾಚಲದ ಕೊಂಬು-ಪುಕ್ಕ ಸಮೇತ ಟೊಪ್ಪಿಗೆಯವರೆಗೆ ಎಲ್ಲಾ ಬಗೆಯ ಮುಂಡಾಸುಗಳನ್ನೂ ತನ್ನ ತಲೆಗೆ ತೊಟ್ಟುಕೊಂಡಿದ್ದ. ಆದರೆ ಮುಸ್ಲಿಂ ತಲೆಗವಸನ್ನು ಆತ ತೊಟ್ಟ ನಿದರ್ಶನವೇ ಇಲ್ಲ. ಒಂದೆರಡು ವೇದಿಕೆಗಳಲ್ಲಿ ತೊಡಿಸಲು ಹೋದಾಗ ಮುಲಾಜಿಲ್ಲದೆ ನಿರಾಕರಿಸಿದ್ದ.

ಇನ್ನು ಮುಸ್ಲಿಮರ ಕುರಿತು ಮೋದಿ ಸರ್ಕಾರದ ನೈತಿಕ ಉದಾಸೀನತೆ ಸಂಪುಟದ ಏಕಮಾತ್ರ ಮುಸ್ಲಿಂ ಸದಸ್ಯೆ ಅಲ್ಪಸಂಖ್ಯಾತ ಕಲ್ಯಾಣ ಸಚಿವೆ ನಜ್ಮಾ ಹೆಫ್ತುಲ್ಲಾ ಬಾಯಿಂದ ಬಲು ನಾಜೂಕಾಗಿ ನುಸುಳಿ ಬಂದಿದೆ. ಸಚಿವೆಯಾದ ನಂತರದ ತನ್ನ ಮೊಟ್ಟಮೊದಲ ಸಾರ್ವಜನಿಕ ಭಾಷಣದಲ್ಲಿ ಆಕೆ 'ಭಾರತದ ಮುಸ್ಲಿಮರು ಇವತ್ತು ಅಲ್ಪಸಂಖ್ಯಾತರು ಅಂತ ಗುರುತಿಸಲಾರದಷ್ಟು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ' ಎಂದಿದ್ದಳು. ಅಸಲಿಗೆ ಸಚಿವೆಯ ಈ ಹೇಳಿಕೆ ಪಾರ್ಸಿ ಸಮುದಾಯಕ್ಕೆ ಚೆನ್ನಾಗಿ ಒಪ್ಪುತ್ತದೆ, ಯಾಕೆಂದರೆ ಅದು ದೇಶದ ಸಿರಿವಂತ ಮತ್ತು ಸುಶಿಕ್ಷಿತ ನಾಗರಿಕ ಸಮುದಾಯ.

ಇಂತಹ ಹೇಳಿಕೆ, ಬಹುಸಂಖ್ಯಾತ ಸಮುದಾಯಗಳ ನಡುವೆ ಸೌಲಭ್ಯ-ವಂಚಿತ ಧಾರ್ಮಿಕ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡಬೇಕೆನ್ನುವ ಆ ಸಚಿವಾಲಯದ ಪ್ರಜಾಪ್ರಭುತ್ವ ಉದಾರವಾದಿ ತಾರ್ಕಿಕ ತತ್ವವನ್ನೇ ಅವಮಾನಿಸುವಂತದ್ದು.

ಈಗ ಮೋದಿಯ ಅಧಿಕಾರಶಾಹಿ ನೇಮಕಾತಿ ವಿಚಾರಕ್ಕೆ ಮರಳುವುದಾದರೆ ಆತ ಪ್ರಜಾಪ್ರಭುತ್ವದ ಸಂಪ್ರದಾಯಗಳಿಗೆ ಕಿಂಚಿತ್ತೂ ಗೌರವ ತೋರಿಸಿದಂತೆ ಕಂಡುಬರುತ್ತಿಲ್ಲ. ಇದಕ್ಕೊಂದು ಸೂಕ್ತ ನಿದರ್ಶನವೆಂದರೆ ಮಾಜಿ ನಟಿ ಸ್ಮೃತಿ ಇರಾನಿಯ ಆಯ್ಕೆ, ಕ್ಯಾಬಿನೆಟ್ ದರ್ಜೆಯ, ಮಹತ್ವದ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆಗೆ ಸೂಕ್ತ ಪಾಂಡಿತ್ಯ ಹೊಂದಿರುವ, ಶೈಕ್ಷಣಿಕ ಸಂಶೋಧನೆಗಳಲ್ಲಿ ಆಸಕ್ತಿ ಹೊಂದಿರುವ ಇಲ್ಲವೇ ಭಾರತೀಯ ಶೈಕ್ಷಣಿಕ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಆಳವಾಗಿ ಅರಿತಿರುವಂತಹ ವ್ಯಕ್ತಿಗೆ ಆ ಜವಾಬ್ದಾರಿ ವಹಿಸಬೇಕಾಗಿತ್ತು, ಆದರೆ ಶಿಕ್ಷಣದ ಬಗ್ಗೆ ಆಸಕ್ತಿ ಅಥವಾ ಕುಶಲತೆಯನ್ನೇ ಹೊಂದಿರದ ಸ್ಮೃತಿ ಇರಾನಿಯನ್ನು ಮೋದಿ ಆ ಸ್ಥಾನಕ್ಕೆ ತಂದು ಕೂರಿಸಿದ್ದಾನೆ. ವಿಪರ್ಯಾಸವೆಂದರೆ ತನ್ನ ಶೈಕ್ಷಣಿಕ ಹಿನ್ನೆಲೆಯ ಬಗ್ಗೆ ಸುಳ್ಳು ಅಫಿಡವಿಟ್ ನೀಡಿದ ಕ್ರಿಮಿನಲ್ ಆರೋಪ ಆಕೆಯ ಮೇಲಿದೆ.

ಇದಕ್ಕಿಂತಲೂ ಕೆಟ್ಟ ನಡೆಯೆಂದರೆ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಕಾಯ್ದೆಯ ಮೇಲೆ ಸುಗ್ರೀವಾಜ್ಞೆ ಮಾರ್ಗದ ಮೂಲಕ ಅತಿಕ್ರಮಣ ಮಾಡಿದ್ದು. ಈ ಕಾಯ್ದೆಯು ಟ್ರಾಯ್‌ನ ಅಧ್ಯಕ್ಷ ಯಾವುದೇ ಸರ್ಕಾರಿ ಕಚೇರಿ ಹೊಂದಿರದಂತೆ ನಿರ್ಬಂಧ ಹೇರಿತ್ತು. ಪ್ರಾಧಿಕಾರದಲ್ಲಿ ಪಕ್ಷಪಾತವನ್ನು ತೊಡೆದುಹಾಕಿ, ನಿಷ್ಪಕ್ಷಪಾತ ಆಡಳಿತ ವೈಖರಿಯನ್ನು ಅನುಷ್ಠಾನಗೊಳಿಸುವುದಕ್ಕೋಸ್ಕರ ಈ ಕಾಯ್ದೆಯನ್ನು 2000ರಲ್ಲಿ ಜಾರಿಗೆ ತರಲಾಗಿತ್ತು. ವಿಚಿತ್ರದ ಸಂಗತಿ ಎಂದರೆ ಈ ಕಾಯ್ದೆ ಜಾರಿಗೆ ತಂದಿದ್ದು ಇದೇ ಎನ್‌ಡಿಎ ಸರ್ಕಾರ. ಅದನ್ನು ಮೋದಿ ಗೌರವಿಸಬೇಕಿತ್ತು. ಆದರೆ ಹಾಗಾಗಲಿಲ್ಲ!



ಅದೇರೀತಿ ಟ್ರಾಯ್‌ನ ಮಾಜಿ ಅಧ್ಯಕ್ಷ ನೃಪೇಂದ್ರ ಮಿಶ್ರಾರನ್ನು ತನ್ನ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಳ್ಳುವಲ್ಲೂ ಮೋದಿ ಅತಿಯಾದ ಆತುರ ತೋರಿದ್ದಾನೆ. ಸಂಸತ್ತು ಕಲಾಪಗೊಂಡು, ಕಾಯ್ದೆಗೆ ತಿದ್ದುಪಡಿ ತರುವವರೆಗೆ ಕಾಯುವ ವ್ಯವಧಾನ ಮೋದಿಗೆ ಇರಲಿಲ್ಲ. ಸುಗ್ರೀವಾಜ್ಞೆಯ ಕುರಿತಂತೆ 1987ರ ಪ್ರಕರಣವೊಂದರಲ್ಲಿ ಸುಪ್ರೀಮ್ ಕೋರ್ಟ್ ನೀಡಿರುವ ತೀರ್ಪನ್ನು ಮೋದಿಯ ನಡೆ ಸಂಪೂರ್ಣವಾಗಿ ಉಲ್ಲಂಘಿಸಿದೆ. ಆ ತೀರ್ಪಿನಲ್ಲಿ 'ಸುಗ್ರೀವಾಜ್ಞೆಯ ಅಧಿಕಾರ ಕೇವಲ ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಳಸಬೇಕು ಮತ್ತು ಯಾವುದೇ ಕಾರಣಕ್ಕೂ ರಾಜಕೀಯ ದುರುದ್ದೇಶದಿಂದ ಕೂಡಿರಬಾರದು' ಎಂದು ಸರ್ವೋಚ್ಚ ನ್ಯಾಯಾಲಯ ಉಲ್ಲೇಖಿಸಿತ್ತು.


ನೃಪೇಂದ್ರ ಮಿಶ್ರಾ ನೇಮಕಾತಿ ಸ್ಪಷ್ಟವಾಗಿ ರಾಜಕೀಯ ಪ್ರೇರಿತವಾದದ್ದು. ಆತ ಸಾಮಾನ್ಯ ಅಧಿಕಾರಿಯಲ್ಲ. ಮೋದಿಯ ಪ್ರಧಾನ ಕಾರ್ಯದರ್ಶಿಯಾಗುವ ಕೊನೆಯ ಘಳಿಗೆವರೆಗೂ ಆತ ನವದೆಹಲಿಯ ಚಾಣಕ್ಯಪುರಿಯಲ್ಲಿರುವ ವಿವೇಕಾನಂದ ಇಂಟರ್‌ನ್ಯಾಷನಲ್ ಫೌಂಡೇಶನ್ (ವಿಫ್)ನ ಕಾರ್ಯಕಾರಿ ಮಂಡಳಿಯಲ್ಲಿ ಸಕ್ರಿಯವಾಗಿದ್ದಂತವ. ಅಂದಹಾಗೆ, ಈ ವಿಫ್ ವ್ಯವಸ್ಥಿತ ಬಂಡವಾಳ ಹೊಂದಿರುವ ಬಲಪಂಥೀಯ ಥಿಂಕ್-ಟ್ಯಾಂಕ್!

1972ರಲ್ಲಿ ಆರೆಸ್ಸೆಸ್‌ನ ಮಾಜಿ ಕಾರ್ಯದರ್ಶಿ ಏಕನಾಥ್ ರಾನಡೆ ಸ್ಥಾಪಿಸಿದ ಈ ವಿಫ್, ವಿವೇಕಾನಂದ ಕೇಂದ್ರದ ಒಂದು ಅಂಗಶಾಖೆ. 2011ರಲ್ಲಿ ನಡೆದ ಬಾಬಾರಾಮದೇವ್ ಮತ್ತು ಅಣ್ಣಾ ಹಜಾರೆ ಭ್ರಷ್ಟಾಚಾರ ವಿರೋಧಿ ಅಭಿಯಾನಗಳಲ್ಲಿ ಈ ಫೌಂಡೇಷನ್ ಮೌನವಾಗಿದ್ದುಕೊಂಡೇ ನಿರ್ಣಾಯಕ ಪಾತ್ರ ವಹಿಸಿತ್ತು. ಇದು ಭದ್ರತೆ ಹಾಗೂ ವಿದೇಶಾಂಗ ನೀತಿಗೆ ಸಂಬಂಧಿಸಿದ ಹಲವು ಯೋಜನೆ ಮತ್ತು 'ಐತಿಹ್ಯ ಹಾಗೂ ನಾಗರಿಕತೆಯ ಅಧ್ಯಯನಗಳು' ಎಂಬ ಚಟುವಟಿಕೆಗಳನ್ನು ನಡೆಸುತ್ತಿದೆ.

ವಿಫ್‌ನ ವೆಬ್‌ಸೈಟ್ ಹೊಕ್ಕರೆ ಅಲ್ಲಿ ಹಿಂದೂತ್ವಪರ ಮತ್ತು ಉಗ್ರ-ರಾಷ್ಟ್ರೀಯವಾದದ ಹಲವಾರು ಲೇಖನಗಳು ಕಾಣಸಿಗುತ್ತವೆ. ಅಂತಹ ಒಂದು ಲೇಖನದಲ್ಲಿ ಅಮೆರಿಕಾ ಲೇಖಕಿ ವೆಂಡಿ ಡೋನಿಗರ್‌ರನ್ನು ಕುರಿತಂತೆ 'ಆಕೆಯ ಹಿಂದೂತ್ವಜ್ಞಾನ ಹೆಡ್ಡತನದಿಂದ ಕೂಡಿದೆ. ಆಕೆ ಮತ್ತು ಆಕೆಯ ಶಿಷ್ಯಂದಿರ ಬಹುಪಾಲು ಮಹಾಪ್ರಬಂಧ/ ಪುಸ್ತಕಗಳು ಅಶ್ಲೀಲ ಸಾಹಿತ್ಯಗಳಂತಲೇ ಮನ್ನಣೆ ಗಳಿಸಿವೆ' ಎಂದು ದೂರಲಾಗಿದೆ. ಇತ್ತೀಚೆಗೆ ಹಿಂದೂತ್ವದ ಮೇಲೆ ಆಕೆ ಬರೆದ ಪುಸ್ತಕವೊಂದನ್ನು ಆರೆಸ್ಸೆಸ್ ಪ್ರಾಯೋಜಿತ ಶಿಕ್ಷಾ ಬಚಾವೋ ಆಂದೋಲನ್ ಎನ್ನುವ ಸಂಸ್ಥೆ ದಾವೆ ಹೂಡಿ, ಬೆದರಿಕೆಯೊಡ್ಡಿ ಪ್ರಕಾಶನ ಸಂಸ್ಥೆಯೇ ಹಿಂಪಡೆಯುವಂತೆ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇಂತಹ ವಿಫ್‌ನ ನಿರ್ದೇಶಕ, ಇಂಟೆಲಿಜೆನ್ಸ್ ಬ್ಯೂರೋದ ಮಾಜಿ ಅಧ್ಯಕ್ಷ ಅಜಿತ್ ಧೋವಲ್‌ನನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರನನ್ನಾಗಿ ಮೋದಿ ಆಯ್ಕೆ ಮಾಡಿಕೊಂಡಿದ್ದಾನೆ. ಕೆಲ ವರ್ಷಗಳ ಕೆಳಗೆ ಒಂದು ಟಿವಿ ಸಂದರ್ಶನದಲ್ಲಿ ನನ್ನ ಗಮನಕ್ಕೆ ಬಂದಂತೆ ಈ ಅಜಿತ್ ಧೋವಲ್ 'ಮೊದಲು ಗುಂಡು ಹಾರಿಸಿ, ಆಮೇಲೆ ಪ್ರಶ್ನೆ ಕೇಳುವ ಕಾರ್ಯತಂತ್ರ ಮಾತ್ರವೇ ಭಯೋತ್ಪಾದಕರೊಡನೆ ವ್ಯವಹರಿಸುವ ಸೂಕ್ತ ಮಾರ್ಗ' ಎಂಬ ಅಭಿಪ್ರಾಯ ಹೊಂದಿರುವ ಪೊಲೀಸ್ ಕಾರ್ಯವೈಖರಿಗೆ ಸೇರಿದಂತವ.

ಕಾನೂನಾತ್ಮಕ ಮತ್ತು ಮಾನವಹಕ್ಕು ಪರಿಣಾಮ ಗಳನ್ನೆಲ್ಲಾ ಬದಿಗಿರಿಸಿ ನಕಲಿ ಎನ್‌ಕೌಂಟರ್‌ಗಳನ್ನು ಮತ್ತು ಮಾವೋವಾದಿ ಸಮಸ್ಯೆಗಳತ್ತ ಸಶಸ್ತ್ರ ಮಾರ್ಗೋಪಾಯ ಗಳನ್ನೇ ಸರ್ಕಾರದ ನೀತಿಗಳನ್ನಾಗಿಸುವ ಛಾತಿ ಅಜಿತ್ ದವೋಲ್‌ಗಿದೆ. ನೆರೆ



ಮಿಶ್ರಾ

ರಾಷ್ಟ್ರಗಳು ಭಾರತ ರಕ್ಷಣಾ ವ್ಯವಸ್ಥೆಯನ್ನು ಪತನಗೊಳಿಸುತ್ತಿವೆ ಎಂತಲೇ ನಂಬಿಕೊಂಡಿ ರುವ ಆತ, ಸದ್ಯ ಸೌಹಾರ್ದ ಸಂಬಂಧ ಹೊಂದಿರುವ ಬಾಂಗ್ಲಾದೇಶವೂ ಸೇರಿದಂತೆ ಅಕ್ಕಪಕ್ಕದ ರಾಷ್ಟ್ರಗಳತ್ತ ಗಡುಸು ನಿಲುವು ತಳೆಯುವುದರಲ್ಲಿ ಸಂಶಯವಿಲ್ಲ.

ವಿಫ್‌ನ ಬಹುಪಾಲು ಮುಂಚೂಣಿ ತಲೆಗಳು ಭಾರತ ಮತ್ತು ಪಾಕಿಸ್ತಾನದ ನಡುವೆ ಇರುವ ಪರಸ್ಪರ ಶಾಂತಿಯುತ ಹೊಂದಾಣಿಕೆಗಳು ಕಡಿತಗೊಳ್ಳಬೇಕು ಅಂತಲೇ ಬಯಸುತ್ತವೆ. ನದಿನೀರು ಹಂಚಿಕೆಯೂ ಒಳಗೊಂಡಂತೆ ಆರ್ಥಿಕ ಸಹಕಾರ, ವ್ಯಾಪಾರ, ವೀಸಾ ಮೊದಲಾದ ವಿಚಾರಗಳಲ್ಲಿ ಭಾರತ ತನ್ನ ನೆರೆ ರಾಷ್ಟ್ರಗಳೊಂದಿಗೆ ಅತಿಯಾದ ಉದಾರವಂತಿಕೆ ಪ್ರದರ್ಶಿಸುವುದನ್ನು ನಿಲ್ಲಿಸಬೇಕೆಂಬುದು ಅವರ ಒತ್ತಾಯ.

ಇಂತಹ ವಿಫ್‌ನ ಜೊತೆಗೆ ಸಂಘ ಪರಿವಾರದ ಇತರೆ ತುಕಡಿಗಳಾದ ದೀನದಯಾಳ್ ಸಂಶೋಧನಾ ಸಂಸ್ಥೆ, ನಿತಿ ಸೆಂಟ್ರಲ್, ಪಬ್ಲಿಕ್-ಪಾಲಿಸಿ ರಿಸರ್ಚ್ ಸೆಂಟರ್, ಸೆಂಟರ್ ಫಾರ್ ಪಾಲಿಸಿ ಸ್ಟಡೀಸ್ ಮತ್ತು ರಾಷ್ಟ್ರೀಯ ಸೇವಾ ಭಾರತಿ ಮೊದಲಾದವುಗಳು ಮೋದಿ ಸರ್ಕಾರಕ್ಕೆ ರಾಜನೀತಿ ಸಲಹೆಗಳನ್ನು ಕೊಡಲಿವೆ.

ಅವುಗಳ ಪ್ರಭಾವದಡಿ, ಮೋದಿಯ ಸ್ವಂತ ನಿಲುವಿಗೆ ಪೂರಕವಾಗಿ ಭಾರತದ ವಿದೇಶಾಂಗ, ಭದ್ರತಾ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೀತಿಗಳು ಲಯಬದ್ಧವಾಗಿ ಬಲಪಂಥೀಯದೆಡೆಗೆ ಧ್ರುವೀಕರಣಗೊಳ್ಳುವುದಕ್ಕೆ ನಾವೆಲ್ಲಾ ಸಾಕ್ಷಿಯಾಗಬೇಕಾಗುತ್ತದೆ. ಅದರ ಪರಿಣಾಮ ಘನಘೋರವಾಗಿರುತ್ತದೆ ಎಂಬುದರಲ್ಲಿ ಅನುಮಾನವೇ ಇಲ್ಲ.

ಅಶಕ್ತ ಮತ್ತು ಕುಗ್ಗಿಹೋಗಿರುವ ಸಂಸದೀಯ ವಿರೋಧ ಪಕ್ಷಗಳು ಈ ಆಕ್ರಮಣವನ್ನು ಅದು ಹೇಗೆ ಪ್ರತಿರೋಧಿಸುತ್ತವೆ ಎಂಬುದನ್ನು ನೋಡುವುದೇ ದುಸ್ತರವಾಗಬಹುದು. ಈಗಾಗಲೇ ಸಮಾಜವಾದಿ ಪಾರ್ಟಿಯಂತಹ ಪ್ರಾದೇಶಿಕ ಶಕ್ತಿಗಳು ಬಿಜೆಪಿಯ ಉನ್ಮಾದಿತ ಉಗ್ರ-ರಾಷ್ಟ್ರೀಯವಾದ ಮತ್ತು ಪ್ರಖರ ಕೋಮುವಾದದ ವ್ಯಾಪ್ತಿಯಲ್ಲಿ ಕನಲಿಹೋಗಿವೆ.

ಈ ಚುನಾವಣೆಗಳಲ್ಲಿ ಅತ್ಯಂತ ಕಳಪೆ ಅಂಕಿಸಂಖ್ಯೆಗಳಿಗೆ ಕುಸಿದ ಕಾಂಗ್ರೆಸ್, ಎಡಪಕ್ಷಗಳು, ಬಿಎಸ್‌ಪಿ ಮತ್ತು ಆಮ್ ಆದ್ಮಿ ಪಾರ್ಟಿಗಳು ಎಲ್ಲಿಗೆ ಬಂದು ತಲುಪಬಹುದು? ಮೊದಲೆರಡು ಪಕ್ಷಗಳಂತು ಕ್ರಮವಾಗಿ 44 ಮತ್ತು 12 (ಕೇರಳದಲ್ಲಿ ಜಯಗಳಿಸಿದ ಎಡಪಂಥೀಯ ಸಿದ್ಧಾಂತದ ಇಬ್ಬರು ಪಕ್ಷೇತರರನ್ನೂ ಸೇರಿದಂತೆ) ಲೋಕಸಭಾ ಸ್ಥಾನಗಳಲ್ಲಿ ಮಾತ್ರ ಅಸ್ತಿತ್ವ ಉಳಿಸಿಕೊಳ್ಳುವ ಮೂಲಕ ತಮ್ಮ ರಾಜಕೀಯ ಇತಿಹಾಸದ ನಿಕೃಷ್ಟ ಸೋಲಿಗೆ ತುತ್ತಾಗಿವೆ. ಡಿಸೆಂಬರ್‌ನಲ್ಲಿ ದೆಹಲಿ ಚುನಾವಣೆಯಲ್ಲಿ ಭರವಸೆ ಮೂಡಿಸಿದ್ದ ಆಪ್ ಅಂತೂ ನಾಲ್ಕೇ ನಾಲ್ಕು ಸ್ಥಾನಗಳನ್ನು ಗಳಿಸಿ ನೆಲಕಚ್ಚಿ... ಪಂಜಾಬ್ ಬಿಟ್ಟು ಹೊರಗೆಲ್ಲೂ ಅದು ಖಾತೆ ತೆರೆದೀ...

ಈ ಪಕ್ಷಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳ... ಪರದಾಡಬೇಕಾದ ಸಂದಿಗ್ಧತೆಗೆ ಸಿಲುಕಿವೆ. ಕಾಂಗ್ರೆಸ್ ಪ... ಈಗಲೂ 'ಗಾಂಧಿ ಕುಟುಂಬ' ತನ್ನನ್ನು ಮತ್ತೊಮ್ಮೆ... ಪಾರು ಮಾಡುತ್ತದೆಂಬ ಭ್ರಮೆಯಲ್ಲೇ ಇದೆ. ನಾಯಕತ್ವ... ವೈಫಲ್ಯತೆಯ ಹೊರುವುದಕ್ಕೇ ಆ ಕುಟುಂಬ ಸಿದ್ಧವಿ... ಅಷ್ಟಾದ ಮೇಲೂ ಯಾರೊಬ್ಬರು ಈ ಬೀಸುವಕಲ್ಲಿನಿಂ... ಪಕ್ಷ ಪಾರಾಗಿ, ಹೊಸತನದೊಂದಿಗೆ ಹೊಮ್ಮಬೇಕೆಂದ... ಒತ್ತಾಯಿಸುತ್ತಿಲ್ಲ.

ಅವರ ಜೀವನಾಧಾರ ಹಕ್ಕುಗಳನ್ನು ಪ್ರಚೋದಿಸು... ಮೂಲಕ ದಲಿತರು, ಆದಿವಾಸಿಗಳು, ಒಬಿಸಿಯ ಕೆಳವ... ದವರು ಮತ್ತು ನಗರವಾಸಿ ಬಡ ಜನರ ನಡುವೆ ಕಾಂಗ್ರೆ... ತನ್ನನ್ನು ಮರುಸ್ಥಾಪಿಸಿಕೊಳ್ಳದಿದ್ದರೆ ಪಕ್ಷ ಇನ್ನಷ್ಟು ಹೀನಾಯ... ಹಾಗೆನ್ನುವುದಕ್ಕಿಂತ ಬಹುತೇಕ ಅಂತ್ಯದತ್ತ ಪಯಣಿಸುವುದ... ಶತಃಸಿದ್ಧ. ಮುಂಬರಲಿರುವ ಮಹಾರಾಷ್ಟ್ರ ಮತ್ತು... ಹರ್ಯಾಣ ರಾಜ್ಯಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಇದ... ಸೋಲನ್ನು ತನ್ನ ಮೈಮೇಲೆ ಎಳೆದುಕೊಂಡರೆ ಅದ... ಅವನತಿ ಕಟ್ಟಿಟ್ಟಬುತ್ತಿ.

ಎಡಪಕ್ಷಗಳ ಅಸ್ತಿತ್ವ ಎಲ್ಲಾ ಕಡೆ ಅದುರುತ್ತಿ... ಮುಖ್ಯವಾಗಿ, ಒಂದು ಕಾಲದಲ್ಲಿ ಭದ್ರ ನೆಲೆಯಾಗಿ... ಪಶ್ಚಿಮ ಬಂಗಾಳದಲ್ಲಿ ಅದು ಬಿಜೆಪಿಗೆ ಸಮನಾದ (ಎರಡ... ಸೀಟುಗಳನ್ನಷ್ಟೇ ಗಳಿಸಿಕೊಳ್ಳಲು ಶಕ್ತವಾಗಿದೆ. ಅಸ್ತಿ... ಬರಡು ಚುನಾವಣಾ ಮೈತ್ರಿ ಆಧಾರಿತ 'ಉನ್ನ... ರಾಜಕಾರಣ' ಮಾಡುವುದನ್ನು ಬಿಟ್ಟು ಎಡಪಕ್ಷಗಳ... ಹುರುಪಿನ ಸಾಮೂಹಿಕ ಚಟುವಟಿಕೆಗಳತ್ತ ಮರಳಬೇಕಿ...

ಎಡಪಕ್ಷಗಳು ತ್ವರಿತವಾಗಿ ಸುಧಾರಿಸಿಕೊಳ್ಳದೆ ಇದ್ದ... ಆಯೋಜಿತ ದೃಷ್ಟಿಕೋನವನ್ನು ಅಪ್‌ಡೇಟ್ ಮಾಡಿಕೊ... ದಿದ್ದರೆ ಹಾಗೂ ಕೈಗಾರಿಕೆ-ಗಣಿಗಾರಿಕೆ-ಇಂಧ... ಯೋಜನೆಗಳಿಂದ ಆತಂಕಕ್ಕೆ ಈಡಾಗುತ್ತಿರು... ಜನಸಾಮಾನ್ಯರ ಆರೋಗ್ಯ ಆಹಾರ ಭದ್ರತೆ, ಉದ್ಯೋ... ಶಿಕ್ಷಣ ಮತ್ತು ರಕ್ಷಣೆಯಂತಹ ಜೀವನಾಧಾ... ಸಂಗತಿಗಳನ್ನಿಟ್ಟುಕೊಂಡು ಸಾಮೂಹಿಕ ಸಂಚಲನೆಯನ್ನ... ಹುಟ್ಟುಹಾಕದಿದ್ದರೆ ಅವೂ ಕೂಡಾ ಅವನತಿಯಂಚಿ... ಬಂದು ತಲುಪಲಿವೆ.

ಮೂಲಭೂತ, ವಿಮರ್ಶಾತ್ಮಕ ಆತ್ಮಾವಲೋಕ... ಮತ್ತು ಆರೋಗ್ಯಕರ ಚರ್ಚೆ ಹಾಗೂ ಮೂಲಭೂ... ಸಂಘರ್ಷಗಳನ್ನು ತಡೆಹಿಡಿಯುವ ಪ್ರಜಾತಾಂತ್ರಿ... ಕೇಂದ್ರೀಕರಣ ಸಾಂಸ್ಥಿಕ ಸಿದ್ಧಾಂತ ತ್ಯಜಿಸುವುದೇ ಇದಕ್ಕಿರು... ಪರಿಹಾರ. ಇದು ಕಷ್ಟದ ಕೆಲಸ, ಆದರೆ ಎಡಪಕ್ಷ... ಬೇರಾವುದೇ ಸುಲಭೋಪಾಯವೇ ಇಲ್ಲ.

ಇನ್ನು ಆಪ್‌ನ ಸಂಗತಿಗೆ ಬರುವುದಾದರೆ ಅದ... ತನ್ನನ್ನು ಪುನರ್‌ಶೋಧಿಸಿಕೊಳ್ಳಬೇಕಿದೆ; ಒಂದ... ರಾಜಕೀಯ ಪಕ್ಷವಾಗಿ ಅಲ್ಲ, ಒಂದು ರಾಜಕೀಯ... ಚಳವಳಿಯಾಗಿ. ಆ ಚಳವಳಿ ಭ್ರಷ್ಟಾಚಾರ ಅಥವ... ಬಂಡವಾಳಸ್ನೇಹಿಗಳಿಗೆ ಮಾತ್ರ ಸೀಮಿತವಾಗ... ಪಾಲ್ಗೊಳ್ಳುವಿಕೆ ಚಟುವಟಿಕೆಯಂತಹ ಹೊ... ಸಂಪ್ರದಾಯವನ್ನು ಪ್ರೋತ್ಸಾಹಿಸುವ ಹಾದಿಯಲ್ಲಿರಬೇಕು... ತಾನು ಬೋಧಿಸುವ ಪಾರದರ್ಶಕತೆ, ರಾಜಕೀಯ... ಪ್ರಾಮಾಣಿಕತೆ ಮತ್ತು ಆಂತರಿಕ ಸಮಾಲೋಚನೆಗಳ... ಆಪ್ ತನ್ನೊಳಗೇ ದೃಢೀಕರಿಸಿಕೊಳ್ಳಬೇಕಿದೆ. ಈ ಕೊರತೆಯ... ಆಪ್‌ನ ಬಿಕ್ಕಟ್ಟು ಉಲ್ಬಣಗೊಂಡು ಶಾಜಿಯಾ ಇ... ಮತ್ತು ಯೋಗೇಂದ್ರ ಯಾದವ್‌ರಂತಹವರ... ರಾಜೀನಾಮೆಯ ಅತಿರೇಕಕ್ಕೆ ಹೋಗಲು ಮುಖ್ಯ ಕಾರ... ಕೇಜ್ರಿವಾಲ್‌ಗೆ ಸ್ವಾರ್ಥಿ ಹಾಗೂ ನಂಬಿಕೆಗೆ ಅರ್ಹನಲ್ಲ... ವ್ಯಕ್ತಿ ಎನ್ನುವ ಅಪಖ್ಯಾತಿಗಳು ಮೆತ್ತಿಕೊಳ್ಳುವಲ್ಲೂ ಪಕ್ಷ... ಇಂತಹ ಎಡವಟ್ಟು ನಿರ್ಣಯಗಳ ಪಾತ್ರವಿದೆ.

ಈಗಲಾದರು ಆಪ್ ಒಂದು ದೃಢ ಸಿದ್ಧಾಂತದಿಂ... ದೂರವಿರುವ ಪರಿಪಾಠ ಬಿಡಬೇಕು. ಅ... ಬಂಡವಾಳಸ್ನೇಹಿ ವ್ಯವಸ್ಥೆಯನ್ನು ಕೋಮುವಾದ... ನವಉದಾರವಾದೀಯ ನಿರಂಕುಶವಾದದೊಂದಿಗೆ ಬೆಸೆ... ನೋಡಬೇಕಿದೆ. ಬಿಜೆಪಿ ಇವೆಲ್ಲವುಗಳನ್ನೂ ತ... ಸಿದ್ಧಾಂತಗಳೊಳಗೆ ಅಡಗಿಸಿಕೊಂಡಿದೆ. ಹಾಗಾಗಿ ಆಪ... ಅದೇ ಮುಖ್ಯ ಶತ್ರು. ಮುಂಬರುವ ದೆಹಲಿ ವಿಧಾನಸ... ಚುನಾವಣೆಯ ಮೇಲೆ ಮಾತ್ರ ಗಮನ ಕೇಂದ್ರೀಕರಿಸು... ದಕ್ಕಿಂತ ವಿಶಾಲಾರ್ಥದ ನವಉದಾರವಾದೀಯ ಹಿಂದು... ಬಂಡವಾಳಶಾಹಿ ವಿರುದ್ಧ ರಾಷ್ಟ್ರೀಯ ಅಭಿಯಾನ... ಅದು ಕಾರ್ಯೋನ್ಮುಖವಾಗಬೇಕಿದೆ. ಈ ಮಾರ್ಗ... ಆಪ್ ಮುನ್ನಡೆಯಬೇಕಿದೆ.

ಮೂಲ: ಪ್ರಫುಲ್ ಬಿದ್ವಾ...

ಕನ್ನಡಕ್ಕೆ: ಗಿರೀಶ್ ತಾಳಿಕ...



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಕುಂಡಲಿನಿ ಸಿಂಡ್ರೋಮ್

ಕುಂಡಲಿನಿಯ ಬಗ್ಗೆ ತಿಳಿದುಕೊಳ್ಳುವ ಮುನ್ನ ಕೆಲವು
ತ್ವವಿರುವ ವಿಚಾರಗಳನ್ನು ಗಮನಿಸಿಕೊಂಡರೆ ವಿಷಯ
ಗೆ ಅರ್ಥವಾಗುವುದು.

ಆತಂಕ

ಆತಂಕದಲ್ಲಿರುವ ವ್ಯಕ್ತಿಗಳನ್ನು ಗಮನಿಸಿ. ಯಾವುದೋ
ಣಕ್ಕೆ ಹೆದರಿರುತ್ತಾರೆ. ಯಾರೋ ಮನೆಗೆ ಬರಬೇಕಾದ
ಇನ್ನೂ ಮನೆಗೆ ಬಂದಿರುವುದಿಲ್ಲ, ಫೋನ್ ಸ್ವಿಚ್
ಆಗಿದೆ. ಹೊರಗೆ ಯಾವುದೊ ಕಾರಣಕ್ಕೆ
ಟೆಗಳಾಗುತ್ತಿವೆ ಅಥವಾ ಪ್ರಕೃತಿಯ ವಿಕೋಪ
ದೋರಿ ವಿಪರೀತ ಮಳೆ, ಪ್ರವಾಹ ಅಥವಾ ಮರಗಳು
ಹೋಗಿ ಅವರಿವರು ಸತ್ತಿದ್ದಾರೆ. ಕುಟುಂಬದ ಸದಸ್ಯ
ವಾ ಸಂಗಾತಿ ಇನ್ನೂ ಬಂದಿಲ್ಲದಿದ್ದಾಗ, ಹೊಟ್ಟೆಯಲ್ಲಿ
ಳ ತಳಮಳ ಪ್ರಾರಂಭವಾಗುತ್ತದೆ. ಕಿಬ್ಬೊಟ್ಟೆಯಲ್ಲಿ
ಚುಲು ಆರಂಭಿಸುತ್ತದೆ. ಹಲವು ಬಾರಿ ಮೂತ್ರ
ತ್ತ ಮಲ ವಿಸರ್ಜನೆ ಆಗುತ್ತದೆ. ಜೊತೆಯಲ್ಲಿರುವವರು
ದು ಏನು ಮಾತಾಡಿಸಿದರೂ ರೇಗುತ್ತದೆ ಅಥವಾ
ಧಾನದಿಂದ ಸ್ಪಂದಿಸಲು ಸಾಧ್ಯವಾಗುತ್ತಿಲ್ಲ. ಊಟ
ವುದಿಲ್ಲ. ಅಥವಾ ಅದೇ ಆತಂಕದಿಂದ ಪದೇ ಪದೇ
ಕಾಫಿ ಕುಡಿಯುವುದು, ಸಿಗರೇಟ್ ಸೇದುವವರಾದರೆ
ದೆಹಿಂದೆಯೇ ಸರಸರ ಸೇದಿ ಸೇದಿ ಬಿಸಾಕುವುದು,
ದಿ.

ಆತಂಕದಲ್ಲಿರುವಾಗ ಉಸಿರಾಟದ ವೇಗವೂ ಹೆಚ್ಚಾಗಿದ್ದು
ಸ್ತು ಸಲ ತಲೆ ಸುತ್ತು ಬರುವುದು, ಆಯಾಸದಿಂದ
ಯುವುದು, ಕಣ್ಣು ಕತ್ತಲಾಗುವುದು, ವಾಂತಿ
ಮಂತಾಗುವುದು ಕೂಡ ಆಗುವುದು.

ಸಂತೋಷ

ತೀರಾ ಸಂತೋಷವಿರುವಾಗ ಗಮನಿಸಿದರೆ, ಹೆಚ್ಚು
ಸಗುತ್ತಾ ಇದ್ದಷ್ಟೂ ಏನೋ ಹಗುರವಾದ ಭಾವನೆ.
ಗೆ ಆಗದಂತಹ ವಿಷಯವು ಎದುರಾದರೂ ಕೆಲವೊಮ್ಮೆ
ರವಾಗಿ ಪಕ್ಕಕ್ಕೆ ಸರಿಬಿಡುವುದು. ಊಟ ಮಾಡುವಾಗ
ಮೂಲಿಗಿಂತ ಹೆಚ್ಚು ತಿನ್ನುವುದು. ಒಂದು ವೇಳೆ
, ತಲೆನೋವು ಇತ್ಯಾದಿ ಏನಾದರೂ ಈ ಮೊದಲು
ರೂ ಅದರ ಲಕ್ಷಣಗಳೇನೂ ಕಾಣದೇ ಹೋಗುವುದು
ತ್ಯಾದಿ. ದುಃಖ ಮತ್ತು ಆತಂಕದಲ್ಲಿದ್ದಾಗ ಅಥವಾ
ಸೋಷ ದಲ್ಲಿದ್ದಾಗ ನಮ್ಮ ದೇಹದಲ್ಲಿ ಆಗುವಂತಹ
ಸಾಯನಿಕ ಬದಲಾವಣೆಗಳನ್ನು ಗಮನಿಸಿ.
ರಾತ್ಮಕವಾಗಿಯಾದರೂ, ಸಕಾರಾತ್ಮಕವಾಗಿಯಾದರೂ
ವಂತಹ ಬದಲಾವಣೆಗಳು ನಾವು ಆಗಿನ ಸಮಯದಲ್ಲಿ
ವ ರೀತಿಯ ಭಾವನೆಗಳನ್ನು ಹೊಂದಿದ್ದೆವು ಎಂಬುದರ
ಲೆ ಅವಲಂಬಿತವಾಗಿರುತ್ತದೆ.

ಒಂದು ವ್ಯಕ್ತಿ ಎಂದಮೇಲೆ ಆತನಲ್ಲಿ ಭೌತಿಕ
ಶಗಳನ್ನು, ವೈಚಾರಿಕ ಅಂಶಗಳನ್ನು ಮತ್ತು ಭಾವನಾತ್ಮಕ
ಶಗಳನ್ನು ಗುರುತಿಸಬಹುದು.

ಈ ಎಲ್ಲಾ ಅಂಶಗಳೂ ಕೂಡ ಒಂದಕ್ಕೊಂದು
ಸಕವಾಗಿಯೇ ಕೆಲಸ ಮಾಡುತ್ತದೆ.

ನೀವು ಆತಂಕಗೊಂಡಾಗ, ಹತಾಶರಾದಾಗ ನಿಮ್ಮಲ್ಲಿ
ಯು ಉಡುಗಿದರೆ, ನೀವು ಧೈರ್ಯವಾಗಿದ್ದಾಗ,
ತೋಷವಾಗಿದ್ದಾಗ ನಿಮ್ಮಲ್ಲಿ ಶಕ್ತಿಯು ಹೆಚ್ಚಿದಂತೆ
ವಾಗುತ್ತದೆ. ನಿಮ್ಮಲ್ಲಿ ಪ್ರಕಟಗೊಳ್ಳುವ ಶಕ್ತಿಯು
ಮ್ಮದೇ, ನಿಮ್ಮ ಆತಂಕವಾಗಲಿ, ಹತಾಶೆಯಾಗಲಿ,
ತೋಷವಾಗಲಿ,. ಧೈರ್ಯವಾಗಲಿ ಅವು ನಿಮ್ಮವೇ.
ವೂ ನಿಮ್ಮಲ್ಲಿಯೇ ಇರುವವು.

ಪಾತಂಜಲ ಯೋಗದರ್ಶನ

ಶರೀರ ರಾಸಾಯನಿಕ ಕ್ರಿಯೆಯ ಮೇಲೆ ಭೌತಿಕ
ದರೆ ಶಾರೀರಿಕ, ವೈಚಾರಿಕ ಅಂದರೆ ಮಾನಸಿಕ ಮತ್ತು
ನಾತ್ಮಕವಾದ ಯಾವುದೇ ರೀತಿಯ ಪ್ರಭಾವಗಳನ್ನು
ವ ಮೂಲಕ ಸಹಜವಾಗಿಯೇ ಇರುವ ಶಕ್ತಿಯನ್ನು
ಉದ್ದೀಪಿಸಿಕೊಳ್ಳುತ್ತಾನೆ ಅಥವಾ ಕಳೆದುಕೊಳ್ಳುತ್ತಾನೆ.
ಶಕ್ತಿಯ ಪತನ ಅಥವಾ ಉದ್ದೀಪನವು ನಮ್ಮಿಂದಲೇ
ದು ತಿಳಿದ ಮೇಲೆ ಪರಸ್ಪರ ಮಾನಸಿಕವಾಗಿ,
ನಾತ್ಮಕವಾಗಿ ಮತ್ತು ಶಾರೀರಿಕವಾಗಿ ಪ್ರಯೋಗಗಳನ್ನು
ಸುವುದರಿಂದ ಚೈತನ್ಯವನ್ನು ಸ್ಥಿರವಾಗಿಟ್ಟುಕೊಳ್ಳಲು
ವಾ ವಿಕಾಸ ಮಾಡಲು ಸಾಧ್ಯವೇನೋ ಎಂಬ
ಗಳನ್ನು ಗುರುತಿಸಲಾಯಿತು. ಅವುಗಳ ಪ್ರತಿಫಲವೇ
ಗ, ಮುದ್ರಾ, ಬಂಧ, ಪ್ರಾಣಾಯಾಮ, ಧ್ಯಾನ, ಧಾರಣ
ದಿ. ಈ ಎಲ್ಲವೂ ಶಕ್ತಿ ಕೇಂದ್ರಿತವಾಗಿರುವವೇ. ಈ
ಸಾಧನೆಗಳಿಂದ ಲಭಿಸುವುದು ಏನೆಂದರೆ, ಆರೋಗ್ಯ
ಸಿಕ, ದೈಹಿಕ ಮತ್ತು ಭಾವನಾತ್ಮಕ), ಸಮಚಿತ್ತ
ಸಮಭಾವ, ಶಾಂತಿ ಹಾಗೂ ಆನಂದದ ಸ್ಥಿತಿ.

ದಿಶೆಯಲ್ಲಿ 'ಪಾತಂಜಲ ಯೋಗದರ್ಶನ' ಪತಂಜಲಿ
ಯಿಂದ ರಚಿತವಾಗಿರುವ ಸೂತ್ರಗಳೆಂದು ಪ್ರಸಿದ್ಧವಾಗಿ
ರುವ ಈ ಗ್ರಂಥ ಒಂದು ಅದ್ಭುತ ಕೃತಿ. ಇದನ್ನು ಧಾರ್ಮಿಕ ಅಥವಾ ಅಧ್ಯಾತ್ಮಿಕ ಎಂದು ಅಧ್ಯಯನ ಮಾಡುವುದಕ್ಕಿಂತ ಮನಶಾಸ್ತ್ರೀಯವಾಗಿ ಅಧ್ಯಯನ ಮಾಡಿದರೆ ಹೆಚ್ಚು ವೈಜ್ಞಾನಿಕವಾಗಿ ಅರಿವಿಗೆ ನಿಲುಕುತ್ತದೆ.

ದೇಹದಲ್ಲಿ ನಡೆಯುವ ಈ ರಾಸಾಯನಿಕ ಶಕ್ತಿಯ ಪರಿಕಲ್ಪನೆಯು ಕುಂಡಲಿನಿ ಶಕ್ತಿಯೆಂದೂ, ಅದರ ಸ್ಥಾನ ಮೂಲಾಧಾರವೆಂದೂ ಕಾಲಾನುಕ್ರಮದಲ್ಲಿ ವಿವರಿಸಲಾಯಿತು.

ನಾನಿಲ್ಲಿ ಬಳಸುತ್ತಿರುವ ರಾಸಾಯನಿಕ ಎಂಬ ಪದವನ್ನು ಹಿಂದಿನ ವ್ಯಾಖ್ಯಾನಕಾರರು ಬಳಸಿಲ್ಲವಾದರೂ ಅವರ ದೃಷ್ಟಿ ಹಾಗೆಯೇ ಇದೆ.

ಸಮಾಜ, ಪರಿಸರ ಮತ್ತು ತಮ್ಮದೇ ಆದ ಆಲೋಚನೆ ಮತ್ತು ದೃಷ್ಟಿಗಳ ಪ್ರಭಾವದಿಂದ ವ್ಯಕ್ತಿಯಲ್ಲಿ ವಿವಿಧ ರೀತಿಯ ನಕಾರಾತ್ಮಕವಾದ ಭಾವನೆಗಳು ಉಂಟಾಗುತ್ತವೆ. ಈ ನಕಾರಾತ್ಮಕವಾದ ಭಾವನೆಗಳು ವೃದ್ಧಿಗೊಳ್ಳುತ್ತಾ ಅವೇ ವ್ಯಕ್ತಿತ್ವವಾಗಿ, ಚಿಂತನಾಕ್ರಮವಾಗಿ ಮತ್ತು ಧೋರಣೆಗಳಾಗಿ ರೂಪುಗೊಳ್ಳುತ್ತವೆ. ಇವುಗಳಿಂದಾಗಿ ದೇಹದಲ್ಲಿನ ರಾಸಾಯನಿಕ ಕ್ರಿಯೆಯು ವ್ಯತ್ಯಾಸವಾಗುತ್ತದೆ. ಮಾನಸಿಕವಾಗಿಯೂ ಮತ್ತು ಭಾವನಾತ್ಮಕವಾಗಿಯೂ ವ್ಯಕ್ತಿಯು ತಲ್ಲಣಗೊಳ್ಳುವುದರಿಂದ ಆತನ ಕ್ರಿಯಾತ್ಮಕ ಶಕ್ತಿಯ ಮೇಲೆ ಅಗಾಧವಾಗಿ ಪರಿಣಾಮ ಬೀರುತ್ತದೆ. ಹಾಗಾಗಿ, ನಕಾರಾತ್ಮಕವಾಗಿರುವ ಧೋರಣೆಗಳು, ಆಲೋಚನೆಗಳೆಂಬ ಅಶುದ್ಧಿಯನ್ನು (ಅಶುದ್ಧಿಯೆಂದರೆ ಸಹಜವಾಗಿ ವ್ಯಕ್ತಿಯೊಬ್ಬನಲ್ಲಿ ಇರಬಾರದಂತದ್ದು ಎಂಬು ದಾಗಿಯೇ ಹೊರತು ಅಪವಿತ್ರ ಎಂಬ ಪರಿಕಲ್ಪನೆಯಲ್ಲಿ ಅಲ್ಲ) ತೆಗೆದುಹಾಕುವ ಮೂಲಕ ನೈಸರ್ಗಿಕ ವಾದ ಶಕ್ತಿಯ ಶುದ್ಧತೆಯನ್ನು ಕಾಪಾಡಿಕೊಳ್ಳುವುದರಿಂದ ಆ ಶಕ್ತಿಯು ಕ್ರಿಯಾಶೀಲವಾಗುತ್ತದೆ.

ಪತಂಜಲಿಯ ಯೋಗಸೂತ್ರದಲ್ಲಿ ಇದನ್ನು 'ಶೌಚಾತ್ ಸ್ವಾಂಗಜುಗುಪ್ಸಾ ಪರೈರಸಂಸರ್ಗಃ (40)' ಎಂದು ವಿವರಿಸಲಾಗಿದೆ. ಶೌಚ (ಅಶುದ್ಧತೆ) ದಿಂದ ತನ್ನ ಶರೀರದ ಮೇಲೆ ಜಿಗುಪ್ಸೆಯೂ ಮತ್ತು ಇತರರೊಂದಿಗೆ ಅಸಂಪರ್ಕವೂ



ಉಂಟಾಗುತ್ತದೆ. ಈ ವಾಕ್ಯದ ಒಂದು ಸುಂದರವಾದ ಸಂದೇಶವನ್ನು ಗಮನಿಸಿ. ತನ್ನಲ್ಲಿರುವ ಅಶುದ್ಧವಾದ ಆಲೋಚನೆಯಿಂದಾಗಲಿ, ಭಾವನೆಗಳಿಂದಾಗಲಿ, ಧೋರಣೆಗಳಿಂದಾಗಲಿ ಉಂಟಾಗುವ ಮೊದಲ ಪರಿಣಾಮ ತನ್ನ ಮೇಲೆ ಉಂಟಾಗುವ ಜಿಗುಪ್ಸೆ. ನಂತರ ಆತ ಇತರ ವ್ಯಕ್ತಿಗಳೊಂದಿಗೆ ಸಂಪರ್ಕವನ್ನು ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬುದು.


ಹಾಗಾಗಿ ಬೇಡದೇ ಇರುವಂತಹ ವಿಚಾರಗಳನ್ನು ಹೇಗೆ ಹೋಗಲಾಡಿಸುವುದು ಎಂಬುದನ್ನೂ ಪತಂಜಲಿ ಚೆನ್ನಾಗಿ ಹೇಳಿಕೊಡುತ್ತಾನೆ. 'ವಿತರ್ಕಭಾವನೇ ಪ್ರತಿಪಕ್ಷಭಾವನಮ್ (33)' ಯಾವ ವಿಷಯಗಳು ವ್ಯತಿರಿಕ್ತವಾಗಿವೆಯೋ ಅವಕ್ಕೆ ವಿರುದ್ಧವಾದ ವಿಷಯಗಳನ್ನು ಭಾವಿಸಬೇಕು. ಉದಾಹರಣೆಗೆ: ಮನಸ್ಸು ದ್ವೇಷದಿಂದ ತುಂಬಿದ್ದರೆ, ಅದರ ಎಡೆಯಲ್ಲಿ ಪ್ರೇಮವನ್ನು ಭಾವಿಸುವ, ವೈಫಲ್ಯದ ಕಡೆಗೆ ಜಾರುತ್ತಿರುವ ಮನಸ್ಸಿನಲ್ಲಿ ಸಾಫಲ್ಯದ ಕಡೆಗೆ, ದುಃಖವಾಗುತ್ತಿದ್ದರೆ ಸಂತೋಷದ ಕಡೆಗೆ. ಭಾವನೆಗಳನ್ನು ನಿರ್ದೇಶಿಸಬೇಕು. ಅದರಿಂದ ನಮಗೆ ದೊರಕುವ ಲಾಭವಾದರೂ ಏನು? 'ಸಂತೋಷಾದನುತ್ತಮಃ ಸುಖಲಾಭಃ (42)' ಸಂತೋಷದಿಂದ ಶ್ರೇಷ್ಠವಾದ ಸುಖವು ಲಾಭವಾಗುತ್ತದೆ. ದುಃಖವಾದಾಗ ದುಃಖಿಸದೇ ಸಂತೋಷವನ್ನು ಭಾವಿಸಲು ಹೇಗೆ ಸಾಧ್ಯವೆಂದು ಆಲೋಚಿಸುವ ಅಗತ್ಯವಿಲ್ಲ, ಇದು ರೂಪಾಂತರದ ಪ್ರಯೋಗವನ್ನು ಹೇಗೆ ಕೈಗೊಳ್ಳಬೇಕೆಂದು ಸೂಚಿಸುತ್ತಿರುವುದೇ ಹೊರತು, ಉಂಟಾಗುವ ಭಾವನೆಗಳನ್ನು ಅದುಮಿಟ್ಟುಕೊಳ್ಳುವುದೋ ಅಥವಾ ಒತ್ತಡದಲ್ಲಿಟ್ಟು ಕೊಳ್ಳುವುದೋ ಅಲ್ಲ.

ಗುಣಗಳಿಂದ ಶಕ್ತಿ

ಬುದ್ಧನಿಗೆ ಎದುರಾದ ಕ್ರೂರಿ ಅಂಗುಲಿಮಾಲಾ ಸಾಧುವಾಗಿ ಮಾರ್ಪಾಟಾದ ಸಂಗತಿಯಲ್ಲಿರುವ ಶಕ್ತಿಯನ್ನು ಪತಂಜಲಿಯ ಸೂತ್ರವೊಂದು ಹೀಗೆ ಸೂಚಿಸುತ್ತದೆ. 'ಅಹಿಂಸಾಪ್ರತಿಷ್ಠಾಯಾಂ ತತ್ಸನ್ನಿಧೌ ವೈರತ್ಯಾಗಃ (35)'







ಅಂದರೆ, ಅಹಿಂಸೆಯಲ್ಲಿ ಪ್ರತಿಷ್ಠಾಪಿತನಾದ ಮೇಲೆ ಅವನ ಸಾನಿಧ್ಯದಲ್ಲಿ ವೈರವು ಇರುವುದಿಲ್ಲ, ಅದೇ ರೀತಿ ಹೇಳುತ್ತಾ 'ಬ್ರಹ್ಮಚರ್ಯಪ್ರತಿಷ್ಠಾಯಾಂ ವೀರ್ಯಲಾಭ (38)' ಎಂದು ಹೇಳುತ್ತದೆ. ಬ್ರಹ್ಮಚರ್ಯದಲ್ಲಿ ಅವನು ಪ್ರತಿಷ್ಠಾಪಿತನಾದ ಮೇಲೆ ಅವನಿಗೆ ವೀರ್ಯಲಾಭವಾಗುತ್ತದೆ.

ಇಲ್ಲಿಯೇ ಜನರು ದಾರಿ ತಪ್ಪಿರುವುದು. ಬ್ರಹ್ಮಚರ್ಯವೆಂದರೆ ತನ್ನ ಲೈಂಗಿಕತೆಯಿಂದ ವೀರ್ಯವನ್ನು ಅಸ್ಖಲಿತವಾಗಿ ಇಟ್ಟುಕೊಳ್ಳುವುದು ಎಂದಲ್ಲ, ಬ್ರಹ್ಮಚರ್ಯ ಎಂದರೆ ರಚನಾತ್ಮಕವಾಗಿ, ಸೃಜನಶೀಲವಾಗಿ ಅಂದರೆ ಸೃಷ್ಟಿಗೆ ಪೂರಕವಾಗಿರುವ ಚಟುವಟಿಕೆ, ಧೋರಣೆ ಮತ್ತು ಆಲೋಚನೆಗಳನ್ನು ಹೊಂದುವುದರಿಂದ ವೀರ್ಯ ಎಂದರೆ ಶಕ್ತಿಯ ಲಾಭವಾಗುತ್ತದೆ ಎಂದು. ವೀರ್ಯವೆಂದರೆ ಇಲ್ಲಿ ಶಕ್ತಿಯೇ ಹೊರತು ಪುರುಷನ ವೀರ್ಯಾಣು ಅಲ್ಲ.

ಇದೊಂದು ಸಣ್ಣ ಉದಾಹರಣೆಯೇ ಹೊರತು, ಇದರಂತೆ ಕುಂಡಲಿನಿ ಶಕ್ತಿಯ ಬಗ್ಗೆ ಬಹುವಿಧವಾದ ಮೂಢನಂಬಿಕೆಗಳು ಮತ್ತು ಅತೀಂದ್ರಿಯವಾದ ಪರಿಕಲ್ಪನೆಗಳನ್ನು ಹೊಂದಿ ವಿಚಿತ್ರವಾದ ಗೀಳಿಗೆ ಬಹುಪಾಲು ಮಂದಿ ಒಳಗಾಗುತ್ತಿದ್ದಾರೆ.

ಕುಂಡಲಿನಿ ಸಿಂಡ್ರೋಮ್

ಸರ್ಪದ ರೀತಿಯಲ್ಲಿ ಬೆನ್ನು ಮೂಳೆಯ ಕೆಳಭಾಗದಲ್ಲಿ ಮಂಡಲ ಹಾಕಿಕೊಂಡು ಮಲಗಿರುವ ಕುಂಡಲಿನಿ ಶಕ್ತಿಯು ಮೂಲಾಧಾರವೆಂಬ ಚಕ್ರದಲ್ಲಿದ್ದು, ಸಾಧನೆಗೆ ಅನುಗುಣವಾಗಿ ಮೇಲೇರುತ್ತಾ ಬರುತ್ತದೆ. ನೆತ್ತಿಯ ಸಹಸ್ರಾರಕ್ಕೆ ತಲುಪುವುದು ಅದರ ಗುರಿಯಾಗಿದ್ದು, ಮಾರ್ಗಮಧ್ಯೆ ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ, ಅಜ್ಞಾಗಳಾದಿಯಾಗಿ ಇತರ ಚಕ್ರಗಳನ್ನು ಹಾದುಹೋಗುವಾಗ ಬೇರೆ ಬೇರೆ ಇತರ ಶಕ್ತಿಗಳು, ಸಿದ್ಧಿಗಳು ಉಂಟಾಗುತ್ತದೆ. ಇದನ್ನು ಸಾಧನೆ ಮಾಡುವವನೇ ಯೋಗಿ.

ಈ ಬಗೆಯ ಸಿದ್ಧಿಗಳ ಆಸೆಗೆ ಯೋಗಿಗಳಾಗ ಹೊರಟವರೆಲ್ಲಾ ಭೋಗಿಗಳೇ ಹೊರತು ಯಥಾರ್ಥವಾಗಿ ಸಾಧಕರು ಎನಿಸಿಕೊಳ್ಳುವುದಿಲ್ಲ. "ಸಿದ್ಧಿಯ ಆಸೆ"- ಇದೇ ಒಂದು ಬಯಕೆ. ಈ ಬಯಕೆಯನ್ನು ಉಳ್ಳವನು ಸ್ವಾರ್ಥ ಉದ್ದೇಶವನ್ನು ಹೊಂದಿರುವವನಾಗಿದ್ದು ಮೊದಲನೆಯ ಹಂತದಲ್ಲಿಯೇ ಅನುತ್ತೀರ್ಣನಾಗುತ್ತಾನೆ. ಆದರೆ ಈ ಅನುತ್ತೀರ್ಣರಾದವರು ಸುಮ್ಮನಿರುವುದಿಲ್ಲ, ತಮ್ಮ ಸಾಧನೆಯು ಮುಂದುವರಿಸುತ್ತಾ, ಇತರ ಜನರಿಗೆ ಇದರ ಬಗ್ಗೆ ಗೀಳನ್ನು ಹುಟ್ಟಿಸುತ್ತಾ ಹೋಗುತ್ತಾರೆ. ಅವರ್ಣನೀಯವಾದಂತಹ, ಅತೀಂದ್ರಿಯವಾದಂತಹ ಅನುಭವಗಳ ಉನ್ಮತ್ತತೆಯನ್ನು ಹುಟ್ಟಿಸುತ್ತಾ ಕುಂಡಲಿನಿ ಧ್ಯಾನ ಶಿಬಿರಗಳಲ್ಲಿ ಅಭ್ಯರ್ಥಿಗಳನ್ನು ತುಂಬಿಸಿಕೊಳ್ಳುತ್ತಾರೆ. ಕುಂಡಲಿನಿ ಶಕ್ತಿಯ ಚಲನೆಯು ಬೆನ್ನಹುರಿಯಲ್ಲಿ ತಣ್ಣನೆಯ ಚಲನೆಯನ್ನು ಉಂಟುಮಾಡುವುದು ಎಂದೂ, ದೇಹದಲ್ಲಿ ಅನೇಕ ಏರುಪೇರು ಉಂಟಾಗುವುದು ಎಂದೂ, ಅಂಗೈಗಳಲ್ಲಿ ಮತ್ತು ಅಂಗಾಲುಗಳಲ್ಲಿ ಹದವಾದ ಬಿಸಿಗಾಳಿ ಬೀಸಿದಂತಾಗುವುದೆಂದೂ, ಇನ್ನೂ ಕೆಲವರಿಗೆ ವಿದ್ಯುತ್ ಸಂಚಾರ ಉಂಟಾಗುವುದೆಂದೂ ಹೇಳುತ್ತಾರೆ. ಆದರೆ, ಇವೆಲ್ಲವೂ ಶುದ್ಧ ಭ್ರಾಮಕ ಸ್ಥಿತಿಯೇ ಹೊರತು ಎಂತಹ ಯಾವ ಲಕ್ಷಣಗಳೂ ಉಂಟಾಗುವುದಿಲ್ಲ.

ಕೆಲವು ಅಧ್ಯಯನಗಳು ಕುಂಡಲಿನಿ ಶಕ್ತಿಯ ಸಾಧನೆಗಳಿಂದ ಉಂಟಾಗುವ ಇಂತಹ ಗುಣಲಕ್ಷಣಗಳನ್ನು ಕುಂಡಲಿನಿ ಸಿಂಡ್ರೋಮ್ ಎಂದೇ ಗುರುತಿಸುತ್ತಾರೆ.

12ನೆಯ ಶತಮಾನದ ರಾಜತರಂಗಿಣಿ ಗ್ರಂಥದಲ್ಲಿ ಮಹಾಭಾರತದ (1.4828) ಅಧ್ಯಾಯದಲ್ಲಿ, 8ನೇ ಶತಮಾನದ ತಂತ್ರಸದ್ಭಾವ ತಂತ್ರದಲ್ಲಿಯೂ ಕುಂಡಲಿಯ ಉಲ್ಲೇಖವಿದೆ.

11ನೆಯ ಶತಮಾನದಲ್ಲಿ ಕುಂಡಲಿನಿ ಶಕ್ತಿಯನ್ನು ದುರ್ಗಾ ಎಂದೋ ಅಥವಾ ಶಕ್ತಿಯೆಂದೋ ತಂತ್ರವಿದ್ಯೆಯಲ್ಲಿ ಮತ್ತು ಶಕ್ತಿವಿದ್ಯೆಗಳಲ್ಲಿ ಕರೆಯುತ್ತಿದ್ದರು ಎಂದು ಶಾರದತಿಲಕದಲ್ಲಿ ಕಂಡುಬರುತ್ತದೆ. ಈ ಕುಂಡಲಿನಿ ಪದ ವ್ಯಾಪಕವಾಗ ತೊಡಗಿದ್ದು 15ನೆಯ ಶತಮಾನದ ನಂತರ ಗೋರಕ್ಷ ಶತಕ, 'ಹಠಯೋಗ'ದಿಂದಾಗಿ ಮತ್ತು 16ನೆಯ ಶತಮಾನದ 'ಯೋಗ ಉಪನಿಷತ್ತು'ಗಳಿಂದಾಗಿ.

ಸರ್ ಜಾನ್ ವುಡ್ರಫ್ (ಅರ್ಥರ್ ಅವಲಾನ್- ಕಾವ್ಯನಾಮ) ಕೊಲ್ಕತ್ತದ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿದ್ದವರು. ಶಾಕ್ತಪಂಥ ಮತ್ತು ತಂತ್ರವಿದ್ಯೆಯಲ್ಲಿ ಅಪಾರ ಆಸಕ್ತಿಯಿದ್ದ ಇವರು ಕುಂಡಲಿನಿ ಶಕ್ತಿಯನ್ನು ಪಶ್ಚಿಮಕ್ಕೆ ಪರಿಚಯಿಸಿದ ಮೊದಲಿಗರಲ್ಲಿ ಒಬ್ಬರು. ಸರ್ಪೆಂಟ್ ಪವರ್ ಎಂದು ಕುಂಡಲಿನಿಯನ್ನು ಕರೆದಿದ್ದೇ ಅಲ್ಲದೇ ಅನೇಕ ಗ್ರಂಥಗಳನ್ನು ಬರೆದು ಪಾಶ್ಚಾತ್ಯರಲ್ಲಿ ಇದರ ಬಗ್ಗೆ ಆಸಕ್ತಿಯನ್ನು ಹುಟ್ಟಿಸಿದರು. 1919ರಲ್ಲಿ 16ನೆಯ ಶತಮಾನದ ಲಯಯೋಗ(ಕುಂಡಲಿನಿ ಯೋಗ)ವನ್ನು ಅನುವಾದಿಸಿ ಮತ್ತು ವ್ಯಾಖ್ಯಾನ ಮಾಡಿದರು.

ಕಾರ್ಲ್ ಜಂಗ್ 1932ರಲ್ಲಿ ಜುರಿಚ್‌ನಲ್ಲಿ ನಡೆದ ಕುಂಡಲಿನಿ ಯೋಗದ ಮೇಲೆ ನಡೆದ ಸೆಮಿನಾರ್‌ನಲ್ಲಿ ಕುಂಡಲಿನಿ ಶಕ್ತಿಯನ್ನು ಹೈಯರ್ ಕಾನ್ಷಸ್‌ನೆಸ್ ಎಂದು ವಿವರಿಸಿದರು. ಥಿಯಾಸಾಫಿಕಲ್ ಸೊಸೈಟಿಯ ಪ್ರಭಾವವೂ ಇವರ ಮೇಲಿತ್ತು. ಕುಂಡಲಿನಿ ಶಕ್ತಿಯ ಸಂಕೇತಗಳನ್ನು ವ್ಯಕ್ತಿಗತವಾದ ಶಕ್ತಿಯ ಪ್ರಕ್ರಿಯೆಗಳಾಗಿ ಅವರು ಗುರುತಿಸಿದರು.

ಏಥೆರಿಯಸ್ ಸೊಸೈಟಿಯ ಸಂಸ್ಥಾಪಕನಾದ ಜಾರ್ಜ್ ಕಿಂಗ್ ಕುಂಡಲಿನಿ ಶಕ್ತಿಯ ಪರಿಕಲ್ಪನೆಯನ್ನು "ಪಾಸಿಟಿವ್ ಸಮಾಧಿಕ್ ಯೋಗಿಕ್ ಟ್ರಾನ್ಸ್ ಸ್ಟೇಟ್" ಎಂದು ಗುರುತಿಸಿ, ಅದನ್ನು ತಾನೆಷ್ಟೋ ಬಾರಿ ಜೀವನದಲ್ಲಿ ಅನುಭವಿಸಿದ್ದಾಗಿಯೂ ತಿಳಿಸುತ್ತಾರೆ.

ನಮ್ಮ ದೇಶದಲ್ಲಿ ರಮಣ ಮಹರ್ಷಿ, ವಿವೇಕಾನಂದ, ಪರಮಹಂಸ ಯೋಗಾನಂದ, ಅರಬಿಂದೋ, ಓಶೋ, ಸ್ವಾಮಿ ನಿತ್ಯಾನಂದ (ಬಿಡದಿಯ ನಿತ್ಯಾನಂದ ಅಲ್ಲ), ಸ್ವಾಮಿ ಸತ್ಯಾನಂದ ಸರಸ್ವತಿ, ಈಗ ಇರುವ ಜಗ್ಗಿ ವಾಸುದೇವ; ಹೀಗೆ ಅನೇಕ ಸಾಧಕರು ಇದರ ಬಗ್ಗೆ ನಾನಾರೀತಿಯ ವ್ಯಾಖ್ಯಾನಗಳನ್ನು ಮಾಡುತ್ತಾರೆ. ಇವರ ವಿವರಣೆಗಳು ವೈಚಾರಿಕವಾಗಿಯೂ, ವೈಜ್ಞಾನಿಕವಾಗಿಯೂ ವಿಷಯ ನಮ್ಮನ್ನು ತಲುಪಲು ಸಹಕರಿಸುತ್ತವೆ.

ಯಾರು ಯಾವುದೇ ಬಗೆಯ ವಿವರಣೆಗಳನ್ನು, ಅನುಭವಗಳನ್ನು ಹಂಚಿಕೊಂಡರೂ ಕುಂಡಲಿನಿಯನ್ನು ಶಕ್ತಿಯೆಂದು ವಿವರಿಸುತ್ತಾರೆ ಮತ್ತು ನಾಡಿ (ಶಕ್ತಿಯ ನಾಳಗಳು), ಚಕ್ರಗಳು (ಮನೋಶಕ್ತಿಯ ಕೇಂದ್ರಗಳು), ಪ್ರಾಣ (ಜೀವಶಕ್ತಿ) ಮತ್ತು ಬಿಂದು (ರಸಕೇಂದ್ರ) ಇವುಗಳನ್ನು ಬಳಸುತ್ತಾರೆ. ಇವೆಲ್ಲವೂ ಶಾರೀರಿಕವಾದ, ಮಾನಸಿಕವಾದ ಹಾಗೂ ಭಾವನಾತ್ಮಕವಾದ ರಚನೆಗಳೂ ಮತ್ತು ಪರಿಕಲ್ಪನೆಗಳೂ ಆಗಿವೆಯೇ ಹೊರತು ಅತೀಂದ್ರಿಯದ ಅಭಿಲಾಷೆಗೆ ಮಾರುಹೋಗುವುದು, ಪವಾಡ ಪುರುಷರಾಗಿ ಬೆಳಗುವ ಕನಸುಗಳನ್ನು ಹೊಂದುವುದು ಮೂರ್ಖತನವೇ ಸರಿ.


ಎಲೆಕ್ಟ್ರಿಸಿಟಿಯಂತೆ ಕುಂಡಲಿನಿ ಶಕ್ತಿಯು ಸಂಚರಿಸುವಾಗ ವ್ಯಕ್ತಿಯು ಎಂತೆಂತೋ ಆಡುವುದು, ಅದರ ಶಕ್ತಿಯ ಪ್ರಭಾವಕ್ಕೆ ಪ್ರಜ್ಞೆಯನ್ನು ಕಳೆದುಕೊಳ್ಳುವುದು, ಏನೇನೋ ಮಾತಾಡುವುದು, ಕೂಗಾಡುವುದು, ಇತ್ಯಾದಿಗಳನ್ನು ಮಾಡುವುದು ಉನ್ಮತ್ತತೆಯ ಕಾರಣವೇ ಹೊರತು ಕುಂಡಲಿನಿ ಅಲ್ಲ. ಕುಂಡಲಿನಿ ಶಕ್ತಿಯೆಂಬುದು ಸಮತ್ವವನ್ನು ಸಾಧಿಸಿಕೊಳ್ಳಲಾಗುವಂತಹ ಒಂದು ಸಂಪೂರ್ಣ ಮಾನಸಿಕ ಸ್ಥಿತಿ ಮತ್ತು ಅದರ ಗತಿ.

ಮೂರು ಸೈಟಿನಷ್ಟು ಯೋಗ್ಯತೆ!

ಸ್ವಾಮಿ ಕಾರ್ಯವನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದ ಕೆಲವು ಅಧಿಕಾರಸ್ಥರು ತಮ್ಮ ತಮ್ಮ ಯೋಗ್ಯತೆಗೆ ಅನುಸಾರವಾಗಿ 'ಸ್ವಕಾರ್ಯ'ವನ್ನು ಅಚ್ಚುಕಟ್ಟಾಗಿ, ಮುಚ್ಚುಮರೆಯಲ್ಲಿ ಮಾಡುವುದು ಲಾಗಾಯ್ತಿನಿಂದಲೂ ಬಂದಿರುವ ಪದ್ಧತಿ. ಇತ್ತೀಚೆಗೆ ಆ ಪದ್ಧತಿಗೆ ತಿಲಾಂಜಲಿ ನೀಡಿದಂತಿದೆ. ಅಂದರೆ 'ಸ್ವಸೇವೆ'ಯನ್ನು ಮರೆತು 'ಸ್ವಾಮಿ-ಸೇವೆ'ಗೇ ತಮ್ಮ ಆಯಸ್ಸನ್ನು ಮುಡುಪಾಗಿಟ್ಟಿದ್ದಾರೆ ಅಂತ ಅಲ್ಲ. ಅಯ್ಯೋ ತಿನ್ನೋದು ತಿನ್ತೀವಿ, ಕದ್ದುಮುಚ್ಚಿ ಯಾಕೆ ತಿನ್ಬೇಕು ಅಂತ ಬಹುಮಂದಿ ರಾಜಾರೋಷವಾಗೇ ವ್ಯವಹರಿಸಿ ಭ್ರಷ್ಟಾಚಾರಕ್ಕೆ ಸಾಮಾಜಿಕ ಮನ್ನಣೆ ದೊರೆಯುವಂತೆ ಮಾಡುತ್ತಿದ್ದಾರೆ. ಆದರೂ ಕೆಲವರು ಇನ್ನೂ ಓಬೀರಾಯನ ಕಾಲದ ಪದ್ಧತಿಗೆ ಜೋತುಬಿದ್ದಿದ್ದಾರೆ. ಇದರಿಂದ 'ಇಂತಹ ಕೆಟ್ಟ ಕಾಲದಲ್ಲೂ ಅಷ್ಟೋ ಇಷ್ಟೋ ಮಳೆ ಬೆಳೆ ಆಗ್ತಿರೋದು ಇಂತ ಪುಣ್ಯಾತ್ಮರು ಇರೋದಕ್ಕೇನೆಯೇ' ಅಂತ ಸಮಾಧಾನಪಟ್ಟುಕೊಳ್ಳೋರಿಗೆ, ಮುಳುಗುತ್ತಿರುವವನಿಗೆ ಹುಲ್ಲುಕಡ್ಡಿ ಸಿಕ್ಕಿದಂತೆ ಸಿಕ್ಕಿರುವುದು ಅವರ ಪ್ರಾರಬ್ಧ ಪುಣ್ಯವೇ ಅನ್ನಬಹುದು. ಆದರೆ ಈ ಹಾಳಾದ ಮಾಹಿತಿ ಹಕ್ಕು ಕಾಯ್ದೆ ಬಂದು ಇಂತಹ 'ಭ್ರಮಾನಂದ'ಕ್ಕೂ ಮುಳುವಾಗಿರುವಂತಿದೆ.

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಅಂತ ಒಂದು ಅದೆ. ಅದರಲ್ಲಿರೋರು ಯಾರಿಗೆ, ಯಾವಾಗ ಹೆಂಗೆಂಗೆ ಅಭಿವೃದ್ಧಿ ಪಡಿಸಬೇಕು ಅನ್ನೊ ಕಲೇನ ಕರಗತ ಮಾಡಿಕೊಂಡಿರೋ ಹಂಗೆ ಕಾಣ್ತದೆ. ಹಿಂದೆ ಕಪಿಲ ಅನ್ನೋ ಋಷಿ ಇದ್ನಂತೆ. ಅವನು ಯಾವುದೇ ಸಿದ್ಧಾಂತವನ್ನು ಪ್ರಯೋಗಕ್ಕೆ ಒಳಪಡಿಸದೆ ಒಪ್ಪಬಾರದು ಅಂದಿದ್ದನಂತೆ. ಈ ಮೂಡಾದವರೂ ಕಪಿಲ ಸಿದ್ಧಾಂತವನ್ನು ಕುಡಿದು ಅರಗಿಸಿಕೊಂಡಿದ್ದವರು ಅಂತ ಕಾಣುತ್ತೆ, ಅವರೇನು ಮಾಡವ್ರೆ ಕೆಲವರಿಗೆ ಸೈಟು ಕೊಟ್ಟು ಅಭಿವೃದ್ಧಿ ಪಡಿಸೋಕೆ ನೋಡವ್ರೆ. ಅವ್ರು ಅಭಿವೃದ್ಧಿ ಹೊಂದವ್ರೆ. ಓಹೋ.... ಸೈಟು ಹಂಚಿದರೆ ಅಭಿವೃದ್ಧಿ ಆಯ್ತದೆ ಅನ್ನೋದು ಖಾತರಿ ಆಗದೆ. ಆಗ ಏನು ಮಾಡವ್ರೆ ಇನ್ನೊಸಿ ಜನ ಆಯ್ಕೆ ಮಾಡವ್ರೆ. ಸೈಟ್ ಹಂಚವ್ರೆ. ಅವ್ರೆಲ್ಲ ಅಭಿವೃದ್ಧಿ ಹೊಂದದ ನೋಡಿ ಸಂತೋಷ ಪಡಾನ ಅನ್ನೊ ಅಷ್ಟರಲ್ಲಿ ಏನಾಗದೆ... ಯಾವ್ನೋ ಕೆಮಿಲ್ಲದ್ದು ಮಾಹಿತಿ ಹಕ್ಕು ಕಾಯ್ದೆ ಅಡಿ ಇದರ ಜಾತಕಪಾತಕಾನೆಲ್ಲ ಪಡ್ಕೊಂಡು, ಮುಚ್ಚುಮರೇಲಿ ಸೈಟ್ ಬೇಕುಬೇಕಾದವರಿಗೆ ಹಂಚವ್ರೆ ಅಂತ ಹುಯ್ಲು ಎಬ್ಬಿಸಿದೆ.

ಇದರಿಂದೆಲ್ಲ ಏನಾಗಿದೆ ನೋಡಿ. ಹಿಂಗೆ ಸೈಟು



ಪಡೆದಿದ್ರಲ್ಲ ಅದರಲ್ಲಿ ಕೆಲವರ ಇಮೇಜಿಗೆ ಡ್ಯಾಮೇಜ್ ಆಗಿ, ಮನಸ್ಸಿಗೆ ಬಹಳ ನೋವು ತಂದಿದೆಯಂತೆ. ಯಾರಿಗೂ ತಿಳೀದಂಗೆ ಸೈಟು ಸಿಕ್ಕಿದ್ದರೆ 'ಸೈಟಾನಂದ' ಅಂತ ಅನುಭವಿಸಬಹುದಾಗಿತ್ತು, ಈಗ ಎಲ್ಲಾ ಬಟಾಬಯಲಾಗಿ 'ಸೈಟಾನಂದ' 'ಸೈಟ್ ನೋವು' ಆಗಿದೆಯಂತೆ. ಅಂತಹವರೇನು ಮಾಡಿದರಂತೆ ಅಂದ್ರೆ 'ಸೈಟ್ ಕಾನೂನು ರೀತಿಯೇ ಪಡೆದಿದ್ದೀವಿ' ಅಂತೆಲ್ಲ ಅಟಕಾಯಿಸಿದರಂತೆ: ಅಕ್ರಮ ಅಂತ ಸಾಬೀತಾಗಿದೆಯಲ್ರೀ ಅಂತ ಕೇಳಿದ್ರೆ 'ಬೇಕಾದ್ರೆ ವಾಪಸ್ಸು ಪಡೀಲಿ' ಅಂತಿದಾರಂತೆ! ಅಲ್ಲಾರಿ ಕಳ್ಳ ಸಿಗಾಕಿಕೊಂಡ ಮೇಲೆ ಕದ್ದ ಮಾಲ ಹಿಂತಿರುಗಿಸ್ತೀನಿ ನನ್ನನ್ನು ಬಿಟ್ಟುಬಿಡಿ ಅಂದಹಾಗೆ ಅದಲ್ಲ ಇದೂವೆ ಅಂತಾರೆ... ಜನ.... ಜನರ ಮಾತು ಬಿಸಾಕಿ. ಏನು ಮಾಡಿದ್ರೂ ಕೊಂಕು ನುಡಿದೇ ನುಡೀತಾರೆ....


ಸೋಜಿದಾಶ್ಚರ್ಯದ ಸಂಗತಿ ಎಂದರೆ 'ಮಂಡ್ಯದ ಗಂಡು,' 'ಕಲಿಯುಗದ ಕರ್ಣ', 'ರೆಬಲ್ ಸ್ಟಾರ್' ಇನ್ನೂ ಏನೇನೋ ಆಗಿರೋ ಅಂಬರೀಸಣ್ಣಾರ ಹೆಸರೂ ಅಕ್ರಮ ನಿವೇಶನದೊಳಗೆ ಸುಳಿದಾಡ್ತಾ ಇದೆ ಅನ್ನೋದು. ಅಂಬರೀಸು ಅಂದ್ರೆ ತಾವ್ರೆ ಎಲೆ ಅಂತ ಮನ್ಸ. ನೀರಿನ ಮಧ್ಯೇನೆ ಇದ್ರೂ, ನೀರಿನ ಸತ್ವ ಹೀರಿ ಬೆಳೆದ್ರೂ ಆ ನೀರ ಹೆಂಗೆ ಮೈಗೆ ಅಂಟಿಸಿಕೊಳ್ಳೋದಿಲ್ಲೋ ಹಂಗೇ ಇವರೂವೆ. ಜನರಿಂದ, ಜನರ ಮಧ್ಯೆ ಬೆಳೆದು ನಿಂತರೂ ಅವರ ಅಂಟಿಸಿಕೊಳ್ಳದಿರ್ರೋರು. ಅಂತೋರ ಮೇಲೇ ಅಕ್ರಮ ಸೈಟಿನ ಧೂಳ ಎರುಚ್ತಾ ಬಿದ್ದದೆ ಆ ಆರ್‌ಟಿಐ ಮ... ಅದೇನೋ ಮಾಡಿಕೊಂಡು ಹಾಳಾಗಲಿ ಅಂದ್ರೆ ಈ ಸ... ಮಾಧ್ಯಮದೋರ್‍ಗೆ ಮಾಡೋಕೆ ಕೇಮೇನೇ ಇಲ್ಲ ಅ... ಕಾಣ್ಸುತ್ತೆ, ಗಣ್ಯ ವ್ಯಕ್ತಿಗಳ ಮೇಲೆ ಆರೋಪ ಬರಲಿ... ದೇವ್ರೆ, ರೋಚಕ ಸುದ್ದಿ ಹೇಳಿದು ಟಿಆರ್‌ಪಿ ಏರಿಸಬಹುದ... ಅಂತ ರಣಹದ್ದಿನ ತರಹ ಕಾಯ್ತಾ ಇರ್ತವೆ. ಅವ... ಮಾಡವೆ ಅಂಬರೀಸಣ್ಣಾರು ಮಂಡ್ಯಾವ್ರಕೆ ಬರೋದ್ನೆ ಕಾಯ... ಕುಂತವೆ. ಕಣ್ಣಿಗೆ ಬದ್ದಿದ್ದೆ ತಡ ಈ ಸುದ್ದಿ ಎತ್ತವೆ. ಅಣ್ಣಾರೇ... ವಸಿ ಕೆರೆ ನೀರು ಕುಡಿದಿದ್ದಾರಾ. ಈ ಬಡ್ಡೆತ್ತವು ... ವಿಷಯಾನೆ ಎತ್ತೋದು ಅನ್ನೋದ ತಿಳ್ಕಂಡಿದ್ರು. ಅದ್ಕೇ... ಅವರು ಕೇಳುತ್ತಿದ್ದಂಗೆ "ಹುಂ ನನಗೆ ಯೋಗ್ಯತೆ ಇ... ಪಡ್ಕಂಡೆ" ಅಂದವ್ರೆ. ಅದನ್ನೇನು ಅಣ್ಣಾರು ಸ್ವಂತ... ಪಡಕೊಂಡಿಲ್ವಂತೆ. ಮೊದಲೇ ಕಲಿಯುಗದ ಕರ್ಣ ಅಲ... ಅದ ಉಚಿತವಾಗಿ.. ಹೂಂ ಕಣ್ರೋ ಫ್ರೀ ಆಗಿ... ಯಾರಿಗೋ... (ಯಾವುದೋ ಬಡಪಾಯಿ ಸೂರಿಗೆ ಗತಿಯಿಲ್ಲದವನೋ... ಏನು ಕತೆಯೋ ಅದ್ರ) ನೀಡವ್ರಂತೆ!! ಅಂಬರೀಸಣ್ಣಾ... ಆದ ಅಂಬರೀಸಣ್ಣಾರೆ ತಮ್ಮ ಸ್ವಂತ ಬಾಯಿಂದ ಇ... ಹೇಳಿದ್ರೂ ಜನ ನಂಬ್ತಾ ಇಲ್ವಂತೆ. ಹಂಗಾರ ಕಪ್ಪುಹ... ದಡೂಯ್ತಿ ಆಯ್ತು ಅಂತಾರಲ್ರೀ....

ಇದಾಯಿತಾ. ಹೆಂಗೋ ಆಗಿದ್ದು ಆಗಿ ಹೋಗ... ಅಂತ ಸುಮ್ಮನಿದ್ರೂ ಆಯ್ತಿತ್ತು, ಈ ಮಾಧ್ಯಮದವ್ರೆ ... ಸೂಕ್ಷ್ಮ ತಿಳೀಬೇಕಲ್ಲ. 'ಹೆಂಗೆ ಆ ಸೈಟ್ ಕೊಟ್ರು ನಿಮ... ಅಂತ ಕೇಳ್ಬಿಡೋದ. ಕೊಬ್ಬು ಆ ಬಡ್ಡೀ ಮಕ್ಕಳಿಗೆ. ಅಲ... ಅಣ್ಣಾರು ಅಂದ್ರೆ ಏನು, ವಸಿ, ವ್ಹಜನ್ನಾ ಅವುರ್‍ದು. ವಜನ್ನಾ... ಹೇಳಿದ್ರು: "ನಾನು ಕ್ರೀಡಾಪಟು, ಕಲಾವಿದ, ಸಂಸದನಾಗಿದ... ಅಂದಮೇಲೆ ಅವರೇ ಹೇಳಿಕೊಂಡಿರುವಂತೆ "ಇನ್ನೂ ಎರಡು... ನಿವೇಶನ ಪಡೆಯುವ ಯೋಗ್ಯತೆ ಇದೆ."

ಅಂಬರೀಸ್‌ಗೆ ಏನು ಯೋಗ್ಯತೆ ಇದೆ ಅಂ... ಊರೂರು, ಕೇರಿಕೇರೀವೆಲ್ಲ ಅವರ ವಿರೋಧಿಗಳು ಮೈಕ... ಹಾಕಿಕೊಂಡು ಅರುಚ್ತಾ ಬಿದ್ದವುಲ್ಲ ಅವು ಈಗ್ಲಾದ್ರೂ... ತಿಳ್ಕಳ್ಳಿ ಅವರ ಯೋಗ್ಯತೆ ಏನು ಅಂತಾವ. ಅವರ ಯೋಗ್ಯ... ಏನು ಅಂದ್ರೆ 'ಮೂರು ಸೈಟಿನಷ್ಟು!'

(ಅ) ನೀತಿ: ನಿವೇಶನ ಮಂಜೂರು ಮಾಡಲು ಸರ್ಕಾ... ಏನೇನೋ ಕಾನೂನು ಮಾಡಿದೆಯಲ್ಲ ಅವನ್ನೆಲ್ಲ ಕಸ... ಬುಟ್ಟಿಗೆ ಹಾಕಿ. 'ಯೋಗ್ಯತೆ ಕಾನೂನು' ಜಾರಿಗೆ ತನ್ನಿ!

● ಎಚ್ಚೆಲ...



ಪುರಾಣ ಹಾಗು ಉತ್ಪ್ರೇಕ್ಷೆ

"ಕರಾವಳಿಯಲ್ಲಿ ಕೋಮು ಗಲಭೆಯಾದಾಗ ಇಲ್ಲಿನ ಕಾಂಗ್ರೆಸ್ಸಿಗರು ಒಂದು ಖಂಡನಾ ಹೇಳಿಕೆಯನ್ನೂ ಕೊಡರು. ಅಂತವರಿಂದ ಇಲ್ಲಿನ ಕೋಮು ಸೌಹಾರ್ದಕ್ಕಾಗಿ ಯಾವ ನಿರೀಕ್ಷೆಯನ್ನೂ ಇಡಲಾಗದು" ಎಂದು ಮಂಜುಳಾ ಪುತ್ತೂರು ಅವರು ಬರೆದಿದ್ದಾರೆ. ಇದು ಸತ್ಯ.

ಇಲ್ಲಿನ ಬಿಜೆಪಿಯ ಭರ್ಜರಿ ಗೆಲುವಿಗೆ ಕಾಂಗ್ರೆಸ್ಸಿಗರ ನಿಷ್ಕ್ರಿಯತೆಯೇ ಕಾರಣ ಹೊರತು ಬೇರೇನಲ್ಲವೆಂಬುದು ಎಲ್ಲರಿಗೂ ತಿಳಿದದ್ದೇ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ದುರಾಡಳಿತದಿಂದಾಗಿ ಕಾಂಗ್ರೆಸ್ ಅಧಿಕಾರ ಹಿಡಿಯಿತೇ ವಿನಹ ಇವರೇ ಸುಭಗರೆಂದೇನಲ್ಲ. ಅಂದು ಅವರ ಭರ್ಜರಿ ಜಯದ ಬಳಿಕ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಮಂಗಳೂರಿನಲ್ಲಿ ಒಂದು ಸಮಾರಂಭವನ್ನು ಆಯೋಜಿಸಿತ್ತು. ಊರಲ್ಲಿದ್ದರೂ ಅದರಲ್ಲಿ ಭಾಗವಹಿಸಲು ಮನಸಿಲ್ಲದ ನಗರಾಭಿವೃದ್ಧಿ ಸಚಿವ ಸೊರಕೆ ದೂರದ ಈಶಾನ್ಯ ರಾಜ್ಯದಿಂದ ಅಸ್ಕರ್ ಬರುತ್ತಾರೆಂಬ ಕಾರಣಕ್ಕೆ ಕೊನೆಗೂ ಬಂದು ಅರೆಮನಸ್ಸಿಂದಲೇ ಅದರಲ್ಲಿ ಭಾಗವಹಿಸಿದ್ದರು.

ಇಂತಹ ಸೌಹಾರ್ದ ಸಮಾರಂಭದಲ್ಲಿ ಭಾಗವಹಿಸಲು ಮನಸ್ಸು ಬಾರದ ಈತ ಕೆಲ ದಿನಗಳ ಬಳಿಕ ಹೊಸನಗರದ ಎಡಬಿಡಂಗಿ ರಾಘವೇಶ್ವರ ಸ್ವಾಮಿಯ ಕಾರ್ಯಕ್ರಮಕ್ಕೆ ಕರೆಯದಿದ್ದರೂ ಖುದ್ದು ಹಾಜರಾಗಿದ್ದ. ಅಲ್ಲಿ ಆತ ಕೂತಿದ್ದು ಹೇಗೆ ಗೊತ್ತೆ? ಆ ಕಳ್ಳ ಸ್ವಾಮಿಯ ಎದುರು ಯಾವುದೋ ಬಿಕನಾಸಿಯಂತೆ ಬರಿಯ ನೆಲದಲ್ಲಿ. ಪ್ರಜೆಗಳನ್ನು ಪ್ರತಿನಿಧಿಸುವ ಜನಪ್ರತಿನಿಧಿಯಾಗಿ ಈ ವ್ಯಕ್ತಿ ತನ್ನತನವನ್ನಿಲ್ಲಿ ಮಾರಿಕೊಂಡಿದ್ದ. ಇಂತಹ ಅವಕಾಶವಾದಿಗಳಿಂದ ನಾವು ಸಾಮಾಜಿಕ ಕಾಳಜಿಯನ್ನು ನಿರೀಕ್ಷಿಸುವುದೇ ದೊಡ್ಡ ತಪ್ಪು.

ಅದೇರೀತಿ ಹಾಸನದ ರವಿಕುಮಾರ್ ಅವರು ಭಾರತವನ್ನೀಗ ಮೋದಿ ಮುಖವಾಡದ ನೆರಳಲ್ಲಿ ಹಲವಾರು ಪ್ರಧಾನಿಗಳು ಆಳುತ್ತಿದ್ದಾರೆ ಎಂದದ್ದು ಸರಿಯೇ ಇದೆ. ಆದರೆ ಗಡಿಬಿಡಿಯಲ್ಲಿ ಅವರು ಭಾರತವನ್ನು 333 ದೇವತೆಗಳೇ ಕಾಪಾಡಬೇಕು ಎಂದು ಬರೆದಿದ್ದರು. ಹಿಂದೂಗಳ 33 ಕೋಟಿ ದೇವತೆಗಳ ಉಪಟಳವೇ ನಮಗೆ ಸಾಕಾಗಿಹೋಗಿದೆ. ಇನ್ನು 333 ಕೋಟಿ ಎಂದರೆ?

ಇತ್ತೀಚೆಗೆ ಯೋಗೀಶ್ ಮಾಸ್ಟರ್ ತಮ್ಮ ಅಂಕಣದಲ್ಲಿ ಪುರಾಣದಲ್ಲಿ ಸಾವಿರ ಅಂದರೆ ಒಂದು ಎಂದು ಕೋಟಿ ಎಂದರೆ ಎರಡು ಎಂಬುದಾಗಿ ತಿದ್ದಿ ಓದಿಕೊಳ್ಳಬೇಕೆಂದು ಬರೆದಿದ್ದರು. ವಾಸ್ತವದಲ್ಲಿ 33 ಕೋಟಿ ದೇವರೆಂಬುದೂ ಕೂಡ ತಪ್ಪು. ಪುರಾಣದಲ್ಲೇ ಅದಕ್ಕೆ ಸ್ಪಷ್ಟ ಉತ್ತರವಿದೆ. ಹಿಂದೂ ಪುರಾಣದ ಮೂಲದೇವತೆಗಳಾದ ಅಷ್ಟ (8) ವಸುಗಳು, ಏಕಾದಶ (11) ರುದ್ರರು, ದ್ವಾದಶ (12) ಆದಿತ್ಯರು ಮತ್ತು ಒಬ್ಬೊಬ್ಬ ಇಂದ್ರ ಮತ್ತು ಪ್ರಜಾಪತಿ ಬ್ರಹ್ಮರುಗಳು ಸೇರಿ ಒಟ್ಟು 33 ದೇವತೆಗಳಾಗುತ್ತಾರೆಯೇ ಹೊರತು ಹೇಗೆ ಲೆಕ್ಕ ಹಾಕಿದರೂ 33 ಕೋಟಿಯ ಪಾಪ್ಯುಲೇಷನ್ ಇಲ್ಲವೇ ಇಲ್ಲ. ಆದರೆ ಜುಜುಬಿ 33 ಎಂಬುದನ್ನು ಹೇಳಲು ಪುರಾಣಿಕರುಗಳಿಗೆ ಮನಸ್ಸು ಬಾರದೇ 33 ಕೋಟಿ ಮಾಡಿದ್ದಾರಷ್ಟೆ.



ಷಣ್ಮುಖ ಹಾಗು ಬ್ರಹ್ಮಾದಿ ದೇವತೆಗಳಿಗೆ ಹಲವು ತಲೆಗಳು ಹಾಗು ಅನೇಕ ದೇವದೇವಿಯರಿಗೆ ಹಲವಾರು ಕೈಗಳನ್ನು ಇಂತಹ ಪೌರಾಣಿಕ ಕವಿಗಳು ಕೊಟ್ಟಿದ್ದಾರಾದರೂ ವಾಸ್ತವಿಕವಾಗಿ ಆ ರೀತಿ ಕೈ ಇದ್ದರೆ ಆತ ಓಡಾಡುವುದಲ್ಲ ಯಾವ ಕೆಲಸವನ್ನೂ ಕೂಡ ಸಲೀಸಾಗಿ ಮಾಡಲಾರ ಎಂಬುದು ಅವರಿಗೆ ಬೇಕಿಲ್ಲ, ಒಟ್ಟಾರೆ ಎಲ್ಲವನ್ನೂ ದೊಡ್ಡ ದೊಡ್ಡದಾಗಿ ಬಿಂಬಿಸಬೇಕಷ್ಟೆ.

-ಅವಿನಾಶ್ ಎಮ್ ಎಸ್, ನೆಲ್ಲಿಕಾರ್


"ಬಿಳಿಯರಿಗೆ ಪಾಠ ಕಲಿಸಲು ಅಮೆರಿಕದಲ್ಲಿ ಕಪ್ಪು ಯುವಕರು ಬಂದೂಕು ಕೈಗೆತ್ತಿಕೊಂಡಂತೆ ಭಾರತದಲ್ಲೂ ಕ್ರಿಮಿನಲ್‌ಗಳ ವಿರುದ್ಧ ಇಂತಹದೇ ಪ್ರತಿಕ್ರಿಯೆ ವ್ಯಕ್ತವಾಗಬೇಕೇ?" ಎಂಬುದಾಗಿ 18 ಜೂನ್ 2014ರ 'ಕಂಡಹಾಗೆ' ಅಂಕಣದಲ್ಲಿ ಗೌರಿ ಲಂಕೇಶ್ ಅವರು ಆನಂದ್ ತೇಲ್ತುಂಬ್ಡೆ ಅವರು ಪ್ರಶ್ನಿಸಿದ್ದಾರೆಂದು ಬರೆದಿದ್ದಾರೆ.

ಯಾತಕ್ಕೆ? ಅಮಾನುಷ ಅತ್ಯಾಚಾರ ಮತ್ತು ಬರ್ಬರ ಹತ್ಯೆಗಳನ್ನು ಕಂಡ ನಿಮ್ಮ ಹೃದಯ ಮತ್ತು ಅದೆಷ್ಟು ನೊಂದ ಮನಸ್ಸುಗಳು ಈ ಪ್ರಶ್ನೆಗಳನ್ನು ತೀರಾ ಹತಾಶರಾದಾಗ ಕೇಳಿಕೊಳ್ಳುವುದು ಸೌಭಾಗ್ಯವೇ.



ಆದರೂ ನಿಮ್ಮ ಲೇಖನಿ ಈ ವಿಚಾರಕ್ಕೆ ಆ ಪ್ರಶ್ನೆಯ ಅಕ್ಷರ ರೂಪ ಕೊಡಲೇ ಬೇಕೆಂದೇನಿರಲಿಲ್ಲ. ಅಹಿಂಸೆಯನ್ನು ಪ್ರಪಂಚಕ್ಕೆ ಭೋದಿಸಿದ ಭೂಮಿ ಇದು. ವೀರ ವನಿತೆಯರನ್ನು ಕಂಡ ನಾಡಿದು.

ಗುಜರಾತ್ ರಕ್ತದೋಕುಳಿಯನ್ನು ಕಟುವಾಗಿ ಖಂಡಿಸಿದ ಪತ್ರಿಕೆ ನಿಮ್ಮದು. ಅಷ್ಟೆಲ್ಲಾ ಯಾಕೆ, ಈ ಮೊದಲು ನಿಮ್ಮದೇ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಕೇರಳದ ಸತಿ ಸಾವಿತ್ರಿ ಸಾಹಸದ ಲೇಖನ ನಿಮಗೆ ಮರೆತಂತಿದೆ. ಅಂತಹದೊಂದು ಸಾವಿತ್ರಿಯರ ಗುಂಪು ಹುಟ್ಟಿ ಬರಲಿ.



ಅದಕ್ಕೆ ಬೇಕಾದ ವ್ಯವಸ್ಥೆಯಾಗಲಿ. ಅಂತಹ ಸಾವಿತ್ರಿಯ... ಸೃಷ್ಟಿಯಾಗಲಿ. ಆದರೆ ಬಂದೂಕು ಬೇಡವೇ ಬೇಡ...

-ಅಲ್ಲಾರಂಡ ವಿಠಲ ನಂಜಪ್ಪ, ಮಡಿಕೇ...

ಪತ್ರಿಕೆ ದಲಿತರ ಪರವಾಗಿ ಚೆನ್ನಾಗಿ ಹೋರಾ... ಮಾಡುತ್ತಿದೆ. ಲಂಕೇಶ್ ಪತ್ರಿಕೆಗೆ ನನ್ನ ಧನ್ಯವಾದಗಳ...

-ಓದು...

ಪ್ರತಿಯೊಬ್ಬ ದಲಿತನು ಹಿಂದೂ ಧರ್ಮವನ್ನು ಬಿ... ಬೌದ್ಧ ಧರ್ಮವನ್ನು ಸ್ವೀಕರಿಸಬೇಕು. ಯಾಕೆಂದರೆ ಭಾ... ಸವರ್ಣೀಯರ ದೇಶ. ಇಲ್ಲಿ ಹಿಂದೂ ಧರ್ಮದ... ಕೀಳು ಜಾತಿಯವನಾಗಿ ಹುಟ್ಟುವ ದೌರ್ಭಾಗ್ಯ ಯಾರಿಗ... ಇರಕೂಡದು.

-ಕುಮಾರ್, ಹುಬ್ಬ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿ... ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗ... ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹು...

ಮಾಧುರಿ ದೀಕ್ಷಿತ್ : ಮೋಹಕ ಕಣ್ಣುಗಳ ಮಿರಾಕಲ್

'ತೇಜಾಬ್', 'ಘರಿಂದಾ', 'ದಿಲ್', 'ಸಾಜನ್', 'ಬೇಟ', 'ಖಳ್ ನಾಯಕ್', 'ಹಮ್ ಆಪ್ಕೆ ಹೈ ಕೌನ್', 'ದಿಲ್ ತೋ ಪಾಗಲ್ ಹೈ', 'ದೇವದಾಸ್' ಸೇರಿದಂತೆ ಎಪ್ಪತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿರುವ ಮಾಧುರಿ ದೀಕ್ಷಿತ್ ಚಿತ್ರರಂಗಕ್ಕೆ ಬಂದು ಮೂವತ್ತು ವರ್ಷಗಳು ತುಂಬಿರುವ ಈ ಸಂದರ್ಭದಲ್ಲಿ ಹೀಗೊಂದು ಬರಹ...



ಕಳೆದ ಮೂರು ದಶಕಗಳಿಂದ ನಮ್ಮೆಲ್ಲರನ್ನು ರಂಜಿಸುತ್ತಿರುವ ತಾರೆ ಮಾಧುರಿ ದೀಕ್ಷಿತ್. ತನ್ನ ಆಕರ್ಷಕ ಕಣ್ಣು, ನಗು, ಕೆನ್ನೆ, ಮೈಮಾಟದ ಮೂಲಕ ಸಿನಿಪ್ರೇಮಿಗಳ ಎದೆಗಳಲ್ಲಿ ಬೆಂಕಿ ಹೊತ್ತಿಸಿದಾಕೆ ಮಾಧುರಿ ದೀಕ್ಷಿತ್. ಮಧು ಬಾಲಾ, ವಹೀದಾ ರೆಹಮಾನ್, ಹೇಮಾ ಮಾಲಿನಿ, ರೇಖಾ, ಡಿಂಪಲ್ ಕಪಾಡಿಯಾ, ಶ್ರೀದೇವಿಯರ ನಂತರ ಭಾರತ ಮಾಧುರಿ ಸಿನಿಮಾಗಳಿಗಾಗಿ ಕಾತರಿಸುತ್ತಿತ್ತು. ಆಕೆ ಬೆಳ್ಳಿಪರದೆ ಮೇಲೆ ಕಾಣಿಸಿಕೊಂಡ ನಂತರವೇ ಹೊಸಬಗೆಯ ರಸಾಸ್ವಾದನೆಯ ಸುಖ ಜನರಿಗೆ ದಕ್ಕಿದ್ದು. ಅಂದ, ಅಭಿನಯ, ನೃತ್ಯದ ಝಲಕು ದೇಶದೆಲ್ಲೆಡೆ ಸಂಚಲನ ಉಂಟುಮಾಡಿದ್ದು; ಬಾಲಿವುಡ್ ಹಿಂದಿಗಿಂತಲೂ ಹೊಸ ತಾರುಣ್ಯ ಪಡೆದಿದ್ದು; ಯುವಜನರ ಸುಪ್ತಜಗತ್ತಿನಲ್ಲಿ ಬೆಳ್ಳಿತೆರೆಯ ಚಿತ್ತಾರಗಳು ಮೂಡತೊಡಗಿದ್ದು; ಇವೆಲ್ಲವೂ ನಡೆದುಹೋದ ಸಂಗತಿಗಳು. ಅದೇರೀತಿ ಮಾಧುರಿ ದೀಕ್ಷಿತಳ ಮೋಹಕ ದಶಕಗಳೂ ಕೂಡ.

1984ರಲ್ಲಿ ತನ್ನ 16ನೇ ಪ್ರಾಯದಲ್ಲಿ ಮಾಧುರಿ ಚಿತ್ರನಟಿಯಾದಳು. 'ಅಬೋಧ್' ಮಾಧುರಿ ನಟಿಸಿದ ಮೊದಲ ಚಿತ್ರ. ಚಿತ್ರವು ಬಾಕ್ಸಾಫೀಸಿನಲ್ಲಿ ಸೋತಿತು. ಆದರೆ ಮಾಧುರಿಯ ಅಭಿನಯಕ್ಕೆ ಪ್ರೇಕ್ಷಕರಿಂದ ಹಾಗೂ ಚಿತ್ರವಿಮರ್ಶಕರಿಂದ ಸಿಕ್ಕ ಪ್ರತಿಕ್ರಿಯೆ ಸಕಾರಾತ್ಮಕವಾಗಿತ್ತು. ನಂತರ ಮಾಧುರಿ ನಟಿಸಿದ ಚಿತ್ರಗಳೆಂದರೆ 'ಆವಾರಾ ಬಾಪ್', 'ಸ್ವಾತಿ', 'ಮಾನವ್ ಹತ್ಯಾ', 'ಮೊಹರೆ', 'ಹಿಫಾಝತ್', 'ಉತ್ತರ ದಕ್ಷಿಣ್'- ಇಷ್ಟು ಚಿತ್ರಗಳ ಪೈಕಿ ಯಾವುದೇ ಒಂದು ಚಿತ್ರ ಕೂಡ ಹಿಟ್ ಎನಿಸಲಿಲ್ಲ. ಎಲ್ಲವೂ ಸೋತವು. ಹಾಗೆ ನೋಡಿದರೆ ಮಾಧುರಿ ದೀಕ್ಷಿತ್‌ಗೆ ದೊಡ್ಡದೊಂದು ಬ್ರೇಕ್ ಕೊಟ್ಟ ಚಿತ್ರ 1988ರಲ್ಲಿ ತೆರೆಕಂಡ 'ತೇಜಾಬ್'. ಎನ್.ಚಂದ್ರ ನಿರ್ದೇಶನದ ಈ ಚಿತ್ರದಲ್ಲಿ ಮಾಧುರಿ, ಅನಿಲ್ ಕಪೂರ್ ಜೊತೆ ನಟಿಸಿದ್ದಳು. ಆ ವರ್ಷದ ಸೂಪರ್ ಹಿಟ್ ಚಿತ್ರವೆನಿಸಿದ 'ತೇಜಾಬ್' ಮೂಲಕ ಮಾಧುರಿ ಪಡ್ಡೆಗಳ ಎದೆಗಳಲ್ಲಿ ಗೆಜ್ಜೆ ಸದ್ದಾದಳು. 'ಏಕ್ ದೋ ತೀನ್...' ಹಾಡಿಗೆ ಭರ್ಜರಿ ಡಾನ್ಸ್ ಮಾಡುವ ಮೂಲಕ ವಯಸ್ಕರ ಪೋಲಿಕನಸಿಗೆ ಲಗ್ಗೆ ಇಟ್ಟಳು. ಬಳುಕೊ ಮೈ, ಬಣ್ಣದ ಲಂಗ, ಎತ್ತಿ ಕಟ್ಟಿದ ತಲೆಗೂದಲುಗಳ ಮಾಧುರಿ ಅಲಿಯಾಸ್ ಮೋಹಿನಿ ಆ ಹಾಡಿನ ಮೂಲಕ ಜನರನ್ನು ಬೆಚ್ಚಿ ಬೀಳಿಸಿದ್ದು ಸುಳ್ಳಲ್ಲ. ಜಾವೇದ್ ಅಖ್ತರ್ ರಚಿಸಿದ ಈ ಹಾಡಿಗೆ ಲಕ್ಷ್ಮಿಕಾಂತ್ ಪ್ಯಾರೇಲಾಲ್ ಸಂಗೀತ ನೀಡಿದ್ದರೆ, ಅಂಥದೊಂದು ಆಲ್ ಟೈಮ್ ಸೂಪರ್ ಹಿಟ್ ಹಾಡನ್ನು ಹಾಡಿದವರು ಅಲ್ಕಾ ಯಾಗ್ನಿಕ್.

ಅಲ್ಲಿಂದಾಚೆಗೆ ಮಾಧುರಿ ಸ್ಟಾರ್ ನಟಿ ಎನಿಸಿದಳು. ಒಂದರ ಮೇಲೊಂದು ಅವಕಾಶಗಳು ಬರತೊಡಗಿದವು. ಸುಭಾಷ್ ಘಾಯ್ ನಿರ್ದೇಶನದ 'ರಾಮ್ ಲಖನ್' ಈ ಚಿತ್ರವೂ ಸೂಪರ್ ಹಿಟ್ ಆಯಿತು. ಅದರ ಹಿಂದೆಯೇ ಮಿಥುನ್ ಚಕ್ರವರ್ತಿ ಜೊತೆ 'ಪ್ರೇಮ್ ಪ್ರತಿಜ್ಞಾ' ಹಾಗೂ ರಾಜೀವ್ ರೈ ನಿರ್ದೇಶನದ 'ತ್ರಿದೇವ್' ಎಂಬ ಆವರೇಜ್ ಚಿತ್ರಗಳೂ ಬಂದವು. ಮಾಧುರಿ ನಿಜಕ್ಕೂ ಮತ್ತೆ ಮಿಂಚಿದ್ದೆಂದರೆ ವಿಧು ವಿನೋದ್ ಚೋಪ್ರಾ ನಿರ್ದೇಶನದ 'ಪರಿಂದಾ' ಚಿತ್ರದ ಮೂಲಕ ಮತ್ತೆ ಅನಿಲ್ ಕಪೂರ್ ಜೋಡಿಯಾಗಿ. ಆ ಚಿತ್ರದಲ್ಲಿ ಮಾಧುರಿಯ ಪಾತ್ರ ಚಿಕ್ಕದಾಗಿದ್ದರೂ ನೆನಪಿನಲ್ಲಿ ಉಳಿಯುವಂಥದ್ದಾಗಿತ್ತು.

90ರ ದಶಕ ಮಾಧುರಿ ಪಾಲಿಗೆ ಅದೃಷ್ಟದ ಕಾಲಘಟ್ಟ. 1990ರಲ್ಲಿ ಬಿಡುಗಡೆಯಾದ 'ದಿಲ್' ಮಾಧುರಿ ಜೋಳಿಗೆಗೆ ಮತ್ತೊಂದು ಹಿಟ್ ಸಿನಿಮಾ ಎನಿಸುವುದರ ಜೊತೆಗೆ ಚಿತ್ರದ ಅಭಿನಯಕ್ಕಾಗಿ ಆ ವರ್ಷದ ಫಿಲಂಫೇರ್ ಅವಾರ್ಡ್ ತಂದುಕೊಟ್ಟಿತ್ತು. ಅಮೀರ್ ಖಾನ್ ಜೊತೆಗಿನ 'ದಿಲ್' ಚಿತ್ರದ ನಂತರ ಮಾಧುರಿ ಬಾಲಿವುಡ್‌ನ ಟಾಪ್ ನಟಿ ಎನಿಸಿಕೊಳ್ಳುವುದರ ಜೊತೆಗೆ ಒಳ್ಳೊಳ್ಳೆಯ ಆಫರ್‌ಗಳು ಬಂದು ಆರಂಭಿಸಿದವು. 'ಸಾಜನ್' ಆ ಪೈಕಿ ಒಂದು ಪ್ರಮುಖ ಸಿನಿಮಾ. ಸಂಜಯ್ ದತ್, ಸಲ್ಮಾನ್ ಖಾನ್ ಜೊತೆ ನಟಿಸಿದ ಈ ಚಿತ್ರ ಆ ವರ್ಷದ ಟಾಪ್ ಸಿನಿಮಾ ಎಂದು ಪರಿಗಣಿತವಾಗುವುದರ ಜೊತೆಗೆ ಮಾಧುರಿ ಮತ್ತಷ್ಟು ಗಟ್ಟಿಯಾಗಿ ನಿಲ್ಲಲು ದಾರಿಮಾಡಿಕೊಟ್ಟಿತು. ಮಾಧುರಿಯ ಈ ಗೆಲುವಿನ ಪಯಣ ಹೀಗೇ ಮುಂದುವರಿದು ಅನಿಲ್ ಕಪೂರ್ ಜೊತೆಗಿನ 'ಬೇಟ' ಮೂಲಕ ಮತ್ತೊಂದು ಮೈಲಿಗಲ್ಲು ನಿರ್ಮಿಸಿದ್ದು ಈಗ ಇತಿಹಾಸ. ಈ ಚಿತ್ರದ 'ಧಕ್ ಧಕ್ ಕರನೇ ಲಗಾ...' ಎಂಬ ಮಾದಕ ಗೀತೆ ಆ ಕಾಲಕ್ಕೆ ಯುವಜನರ ಪಾಲಿಗೆ ಫೇವರಿಟ್. ಹಳದಿ ಸೀರೆಯುಟ್ಟ ಮಾಧುರಿ ಹೊಕ್ಕುಳು ಕಾಣಿಸುವಂತೆ ನೆರಿಗೆ ಸಿಕ್ಕಿಸಿಕೊಂಡು ಮೋಹಕವಾಗಿ ರಿದಂಗೆ ತಕ್ಕಂತೆ ಎದೆ, ಭುಜ, ಸೊಂಟಗಳನ್ನು ಕುಣಿಸುತ್ತಿದ್ದರೆ ಎಂಥವರ ರೋಮಕೂಪಗಳಲ್ಲೂ ಕಂಪನ ಉಂಟಾಗುತ್ತಿತ್ತು. ಉದಿತ್ ನಾರಾಯಣ್-ಅನುರಾಧಾ ಪೌಡ್ವಾಲ್ ಧ್ವನಿಯಲ್ಲಿನ ಮಾದಕತೆ ಹಾಡಿಗೆ ಮತ್ತಷ್ಟು ರಂಗು ತರುವುದರ ಜೊತೆಗೆ ಮಾಧುರಿಯ ಬಿಚ್ಚಿದ ಕೂದಲು, ನೆಲಕ್ಕೂ ಮತ್ತು ತರಿಸುವ ಮೈ ನುಲಿತಕ್ಕೆ ಮೆರಗು ತಂದಿದ್ದೂ ದಿಟ. ಸಮೀರ್ ಬರೆದ ಈ ಗೀತೆಗೆ ಆನಂದ್-ಮಿಲಿಂದ್ ಸಂಗೀತವಿತ್ತು. ಇಷ್ಟೆಲ್ಲಾ ಆಕರ್ಷಣೀಯ ಸಂಗತಿಗಳನ್ನು ತನ್ನೊಳಗೆ ಅಡಗಿಸಿಕೊಂಡಿರುವ 'ಬೇಟ' ಆಕೆಗೆ ಎರಡನೇ ಬಾರಿಗೆ ಫಿಲಂ ಫೇರ್ ಅವಾರ್ಡ್ ತಂದು ಕೊಟ್ಟಿತು.

'ಖಳ್ ನಾಯಕ್' ಮತ್ತೊಂದು ದಾಖಲೆ ನಿರ್ಮಿಸಿದ ಚಿತ್ರ. ಸುಭಾಷ್ ಘಾಯ್ ನಿರ್ದೇಶನದ ಈ ಚಿತ್ರದಲ್ಲಿ ಮಾಧುರಿ ನಟಿಸಿದ್ದು ಸಂಜಯ್ ದತ್ ಮತ್ತು ಜಾಕಿ ಶರಾಫ್ ಜೊತೆ. ಭಯೋತ್ಪಾದಕನ ಸುತ್ತ ಹೆಣೆಯಲ್ಪಟ್ಟಿರುವ ಕಥೆಯುಳ್ಳ ಈ ಚಿತ್ರ ವಿವಾದಕ್ಕೂ ಗುರಿಯಾಗುವುದರ ಜೊತೆಗೆ ಭರ್ಜರಿ ಗೆಲುವು ಕಂಡಿತ್ತು. 'ಚೋಲಿ ಕೆ ಪೀಚೆ ಕ್ಯಾ ಹೈ' ಹಾಡಿನ ಮೂಲಕ ಮಾಧುರಿ ಮತ್ತೊಮ್ಮೆ ತನ್ನ ಪವಾಡ ಮೆರೆದಿದ್ದಳು. ಆನಂದ್ ಭಕ್ಷಿ ಬರೆದ ಈ ಹಾಡು ಮತ್ತೊಮ್ಮೆ ಲಕ್ಷ್ಮಿಕಾಂತ್ ಪ್ಯಾರೇಲಾಲ್ ಸಂಗೀತದಲ್ಲಿ ಸೂಪರ್ ಹಿಟ್ ಆಗಿತ್ತು. ಈ ಗೀತೆಯನ್ನೂ ಅಲ್ಕಾ ಯಾಗ್ನಿಕ್ ಹಾಡಿದ್ದು ವಿಶೇಷ. ಲಂಬಾಣಿ ಹುಡುಗಿಯ ಗೆಟಪ್ಪಿನಲ್ಲಿ ಮಾಧುರಿಯ ಡಾನ್ಸ್ ಅದ್ಭುತ ಎನಿಸುವುದರ ಜೊತೆಗೆ ಹಾಡಿನ ಸಾಹಿತ್ಯ ಅನೇಕ ಅರ್ಥಗಳನ್ನು ಕಟ್ಟಿಕೊಟ್ಟು ಕೇಳುಗರ, ನೋಡುಗರ ಮೈ ಜುಮ್ಮೆನ್ನುವಂತೆ ಮಾಡಿತ್ತು.

ಈ ನಡುವೆ 'ಫೂಲ್', 'ದಿಲ್ ತೇರಾ ಆಶಿಕ್', 'ಆಂಸೂ ಬನೇ ಅಂಗಾರೆ' ತರಹದ ಆವರೇಜ್ ಚಿತ್ರಗಳಲ್ಲಿ ನಟಿಸಿದ ನಂತರ ಮಾಧುರಿ ದೀಕ್ಷಿತ್ 1994ರಲ್ಲಿ ಶಾರುಖ್ ಖಾನ್ ಜೊತೆ ಪ್ರಥಮಬಾರಿಗೆ ನಟಿಸಿದ 'ಅಂಜಾಮ್' ಬಾಕ್ಸಾಫೀಸಿನಲ್ಲಿ ನಿರೀಕ್ಷಿತಮಟ್ಟದಲ್ಲಿ ಗೆಲುವು ಕಾಣಲಿಲ್ಲ. ಅಲ್ಲಿಗೆ ಶಾರುಖ್-ಮಾಧುರಿ ಅಭಿನಯದ ಮೊದಲ ಸಿನಿಮಾ ಫ್ಲಾಪ್. 'ಅಂಜಾಮ್' ಸೋಲಿನ ನಂತರ ಮಾಧುರಿಗೆ ಮತ್ತೊಂದು ಸೂಪರ್ ಗೆಲುವು ತಂದುಕೊಟ್ಟ ಸಿನಿಮಾ 'ಹಮ್ ಆಪ್ಕೆ ಹೈ ಕೌನ್'. ಮಾಧುರಿ ದೀಕ್ಷಿತ್-ಸಲ್ಮಾನ್ ಖಾನ್ ಜೋಡಿಯ ಈ ಮ್ಯೂಸಿಕಲ್ ರೊಮ್ಯಾಂಟಿಕ್ ಚಿತ್ರ ಬಾಲಿವುಡ್ ಇತಿಹಾಸದಲ್ಲಿಯೇ ಅದ್ಭುತ ಗೆಲುವು ಸಾಧಿಸಿದ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಎಷ್ಟರಮಟ್ಟಿಗೆ ಎಂದರೆ, ಆ ಚಿತ್ರದೆದುರು 1975ರಲ್ಲಿ ಬಿಡುಗಡೆಯಾಗಿ ಅತಿಹೆಚ್ಚು ಬಿಸಿನೆಸ್ ಮಾಡಿದ್ದ ಚಿತ್ರ ಎಂಬ ಹಿರಿಮೆಗೆ ಪಾತ್ರವಾಗಿದ್ದ 'ಶೋಲೆ'ಯೂ ಶರಣಾಗಬೇಕಾಯಿತು. ಬಾಲಿವುಡ್ ಇತಿಹಾಸದಲ್ಲೇ ಅತಿಹೆಚ್ಚು ದುಡಿದ ಸಿನಿಮಾ ಎಂಬ 'ಶೋಲೆ'ಯ ದಾಖಲೆಯನ್ನು 'ಹಮ್ ಆಪ್ಕೆ ಹೈ ಕೌನ್' ಮುರಿದಿತ್ತು. ಆ ದಾಖಲೆಯನ್ನು ಮುರಿಯಲು 2001ರಲ್ಲಿ 'ಗದರ್-ಏಕ್ ಪ್ರೇಮ್ ಕಹಾನಿ' ಚಿತ್ರ ಬರಬೇಕಾಯಿತು. 'ಹಮ್ ಆಪ್ಕೆ ಹೈ ಕೌನ್'ನಲ್ಲಿ ಒಟ್ಟು ಹದಿನಾಲ್ಕು ಹಾಡುಗಳಿದ್ದು ಎಲ್ಲವೂ ಹಿಟ್ ಆಗಿದ್ದವು. ಚಿತ್ರದ ಲೆಂತ್ 206 ನಿಮಿಷಗಳಿದ್ದರೆ, ಅದರಲ್ಲಿ ಹಾಡುಗಳ ಪಾಲು ಬರೋಬ್ಬರಿ 71 ನಿಮಿಷ. ಲತಾ ಮಂಗೇಶ್ಕರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಕುಮಾರ್ ಸಾನು ಹಾಡಿದ್ದ ಗೀತೆಗಳಿಗೆ ರಾಮ್ ಲಕ್ಷ್ಮಣ್ ಸಂಗೀತವಿದ್ದು ಮಾಧುರಿ ದೀಕ್ಷಿತ್ ಒಂದೊಂದು ಹಾಡಿನಲ್ಲೂ ಒಂದೊಂದು ಬಗೆಯಲ್ಲಿ ಪ್ರೇಕ್ಷಕರಿಗೆ ಇಷ್ಟವಾದಳು. 'ದೀದಿ ತೇರ ದೇವರ್ ದಿವಾನಾ' ಹಾಡಿನಲ್ಲಂತೂ ಆಕೆ ಅದ್ಭುತ. ಮಾಧುರಿ ನಿರ್ವಹಿಸಿದ ಹೆಣ್ಣಿನ ಆಂತರಿಕ ಮಿಡಿತಗಳನ್ನು ಪ್ರತಿಬಿಂಬಿಸುವ ನಿಶಾ ಪಾತ್ರ ಯಾವತ್ತಿಗೂ ಸ್ಮರಣೀಯ ಎಂಬುದಕ್ಕೆ ಈ ಚಿತ್ರದ ತನ್ನ ಅಭಿನಯಕ್ಕಾಗಿ ಆಕೆಗೆ ಮೂರನೇ ಬಾರಿ ಫಿಲಂ ಅವಾರ್ಡ್ ಗಳಿಸಿದ್ದು.

ಮಾಧುರಿ ದೀಕ್ಷಿತ್ 'ಹಮ್ ಆಪ್ಕೆ ಹೈ ಕೌನ್' ನಂತರ 'ರಾಜ', 'ಯಾರಾನ', 'ಪ್ರೇಮ್ ಗ್ರಂಥ್', 'ರಾಜಕುಮಾರ್', 'ಮಹಂತ' ಒಳಗೊಂಡಂತೆ ಒಂದಿಷ್ಟು ಚಿತ್ರಗಳಲ್ಲಿ ನಟಿಸಿದರೂ ಅಷ್ಟೇನೂ ಗೆಲುವು ಕಾಣಲಾಗಲಿಲ್ಲ. ಪ್ರಕಾಶ್ ಝಾ ನಿರ್ದೇಶನದ 'ಮೃತ್ಯುದಂಡ್' ಚಿತ್ರದಲ್ಲಿ ಶಬಾನಾ ಅಜ್ಮಿ, ಓಂ ಪುರಿ ಜೊತೆಗೂಡಿ ಅದ್ಭುತವಾಗಿ ನಟಿಸಿದ್ದರೂ ಕೂಡ ಗಣನೀಯ ಮಟ್ಟದಲ್ಲಿ ಜನರನ್ನು ತಲುಪಲಿಲ್ಲ. ಹೀಗೇ ಸೋಲುಗೆಲುವು ಎರಡನ್ನೂ ಕಂಡ ಮಾಧುರಿ ಪಾಲಿಗೆ ದಕ್ಕಿದ ಮತ್ತೊಂದು ಯಶಸ್ಸು ಎಂದರೆ 'ದಿಲ್ ತೋ ಪಾಗಲ್ ಹೈ'. ಶಾರುಖ್ ಖಾನ್ ಜೊತೆಗಿನ ಮೊದಲ ಹಿಟ್ ಸಿನಿಮಾ. ಮಾಧುರಿ 'ಕೊಯ್ಲಾ'ದಲ್ಲಿ ಶಾರುಖ್ ಜೊತೆ ನಟಿಸಿದ್ದರೂ ಅದು ಬೆಚ್ಚಿಬೀಳಿಸುವಂಥ ಹಿಟ್ ಸಿನಿಮಾ ಆಗಿರಲಿಲ್ಲ. ಯಶ್ ಚೋಪ್ರಾ ನಿರ್ದೇಶನದ 'ದಿಲ್ ತೋ ಪಾಗಲ್ ಹೈ' ತನ್ನ ಹಾಡುಗಳ ಮೂಲಕ ಮೋಡಿ ಮಾಡಿತ್ತು. ಉತ್ತಮ್ ಸಿಂಗ್ ಸಂಗೀತ ನೀಡಿದ್ದ ಹಾಡುಗಳು ಹಿಟ್ ಆಗುವುದರ ಜೊತೆಗೆ ಮಾಧುರಿ ಅಭಿನಯ, ನೃತ್ಯ ಪ್ರೇಕ್ಷಕರೆದೆಯಲ್ಲಿ ಸ್ಥಿರವಾಗಿ ದಾಖಲಾದವು. ಮಾಧುರಿಗೆ ನಾಲ್ಕನೇ ಬಾರಿ ಫಿಲಂ ಫೇರ್ ಅವಾರ್ಡ್ ಬಂತು.

ಆಮೇಲೆ ಡೇವಿಡ್ ಧವನ್ ನಿರ್ದೇಶನದ 'ಬಡೇ ಮಿಯಾ ಚೋಟೆ ಮಿಯಾ' ಚಿತ್ರದಲ್ಲೊಂದು ಗೆಸ್ಟ್ ಅಪಿಯರೆನ್ಸ್ ರೋಲ್. ಅದರ ನಂತರವೇ ನಾನಾ ಪಾಟೇಕರ್ ಜೊತೆ ನಟಿಸಿದ 'ವಜೂದ್' ಎಂಬ ಚಿತ್ರ. ಅಷ್ಟೇನೂ ಬಿಸಿನೆಸ್ ಮಾಡದ ಈ ಚಿತ್ರದ ನಂತರ ಮಾಧುರಿ, ಅಕ್ಷಯ್ ಕುಮಾರ್ ಮತ್ತು ಸೈಫ್ ಅಲಿ ಖಾನ್ ಜೊತೆ 'ಆರ್ ಜೂ' ಎಂಬ ಚಿತ್ರದಲ್ಲಿ ನಟಿಸಿದಳು. 'ಆರ್ ಜೂ' ಭಾರತದಲ್ಲಿ ಅಷ್ಟೇನೂ ಸಕ್ಸಸ್ ಕಾಣದಿದ್ದರೂ ವಿದೇಶಗಳಲ್ಲಿ ತಕ್ಕಮಟ್ಟಿಗೆ ಗೆಲುವು ದಾಖಲಿಸಿತ್ತು. ಆ ಸೋಲನ್ನು ಮರೆಸಲು ಬಂದ ಚಿತ್ರವೇ ರಾಜಕುಮಾರ್ ಸಂತೋಷಿ ನಿರ್ದೇಶನದ 'ಪುಕಾರ್'. ಈ ಚಿತ್ರ ಮುಖೇನ ಮಾಧುರಿಗೆ ಮತ್ತೆ ಅನಿಲ್ ಕಪೂರ್ ಜೊತೆ ನಟನೆ. ಎ.ಆರ್.ರೆಹಮಾನ್ ಸಂಗೀತವಿದ್ದ ಈ ಚಿತ್ರದ ಹಾಡುಗಳು ತಕ್ಕಮಟ್ಟಿಗೆ ಜನರನ್ನು ತಲುಪಿದ್ದವು. ಮಾಧುರಿಯ ಡೈಲಾಗ್ ಡೆಲಿವರಿ, ಡಾನ್ಸ್, ಆಕ್ಟಿಂಗ್ ಎಲ್ಲವೂ ಈ ಚಿತ್ರದ ಹೈಲೈಟ್ಸ್. 'ಪುಕಾರ್' ನಂತರ ಮಾಧುರಿ ನಟಿಸಿದ್ದು ಸಾಕಷ್ಟು ಸುದ್ದಿ ಮಾಡಿದರೂ ಸೋತುಹೋದ ಎಂ.ಎಫ್.ಹುಸೇನ್ ನಿರ್ದೇಶನದ 'ಗಜಗಾಮಿನಿ' ಚಿತ್ರ. ಹೀಗೆ ಒಂದರ ಮೇಲೆ ಒಂದು ಅವಕಾಶ ಒದಗಿಬಂದರೂ ಮಾಧುರಿ ಪಾಲಿಗೆ ಸೋಲುಗೆಲುವು ಸಮನಾಗಿರುತ್ತಿದ್ದವು. ಅಜಯ್ ದೇವಗನ್, ಪ್ರೀತಿ ಜಿಂಟಾ ಜೊತೆ ಸ್ಕ್ರೀನ್ ಹಂಚಿಕೊಂಡ 'ಯೆ ರಾಸ್ತೆ ಹೈ ಪ್ಯಾರ್ ಕೆ' ಕೂಡ ಹೆಸರು ತಂದುಕೊಟ್ಟಿತಾದರೂ ಸಿನಿಮಾ ಓಡಲಿಲ್ಲ. ರಾಜಕುಮಾರ್ ಸಂತೋಷಿ ನಿರ್ದೇಶನದ 'ಲಜ್ಜಾ' ಕೂಡ ಅಷ್ಟೇ. ವಿದೇಶಗಳಲ್ಲಿ ತುಸು ಓಕೆ ಎನಿಸಿದರೂ ಭಾರತದಲ್ಲಿ ಸೋತು ಮಲಗಿತ್ತು. ಅದೇರೀತಿ ಶಾರುಖ್ ಖಾನ್ ಜೊತೆಗಿನ 'ಹಮ್ ತುಮ್ಹಾರೆ ಹೈ ಸನಮ್' ಚಿತ್ರವು ನೆಗೆಟಿವ್ ರಿಪೋರ್ಟ್ ಪಡೆದರೂ ಬಾಕ್ಸಾಫೀಸಿನಲ್ಲಿ ಸುಮಾರಾದ ಬಿಸಿನೆಸ್ ಮಾಡಿತ್ತು.

ಮಾಧುರಿ ಪಾಲಿಗೆ ಮತ್ತೊಮ್ಮೆ ಕ್ರೇಜ್ ಹುಟ್ಟು ಹಾಕಿದ ಚಿತ್ರವೇ ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನದ 'ದೇವದಾಸ್'. ಶಾರುಖ್ ಖಾನ್, ಐಶ್ವರ್ಯ ರೈ ಪ್ರಮುಖರಾಗಿದ್ದ ಈ ಚಿತ್ರದಲ್ಲಿ ಮಾಧುರಿ ನಟಿಸಿದ್ದು ಚಂದ್ರಮುಖಿ ಪಾತ್ರದಲ್ಲಿ. ತನ್ನ ಪೋಷಕಪಾತ್ರಕ್ಕಾಗಿ ಮಾಧುರಿ ಮತ್ತೊಮ್ಮೆ ಫಿಲಂ ಫೇರ್ ಅವಾರ್ಡ್ ಪಡೆದುಕೊಂಡಿದ್ದು ಅಭಿನಯದ ಮೇಲೆ ಆಕೆಗಿದ್ದ ಕನ್ಸಿಸ್ಟೆನ್ಸಿಯನ್ನು ತೋರುತ್ತದೆ. ಸಂಪೂರ್ಣ ಮಾಧುರಿಮಯವಾಗಿರುವ 'ಮಾರ್ ಡಾಲಾ' ಹಾಡು ಯಾವತ್ತಿಗೂ ಸಂಗೀತಾಸಕ್ತರ ಎದೆಯಲ್ಲಿ ಉಳಿದುಹೋಗುತ್ತದೆ. ದೇವದಾಸ್ ನಂತರ ಮಾಧುರಿ ದೀಕ್ಷಿತ್ ನಟಿಸಿದ್ದು ಕಡಿಮೆನೆ. 'ಆಜಾ ನಾಚ್ಲೆ', 'ಇಷ್ಕಿಯಾ' ತರಹದ ಚಿತ್ರಗಳಲ್ಲಿ ನಟಿಸಿದರೂ ಪ್ರಯೋಜನವಾಗಲಿಲ್ಲ. ಆ ಚಿತ್ರಗಳು ಓಡಲಿಲ್ಲ. 'ಬಾಂಬೆ ಟಾಕೀಸ್'ನ 'ಅಪ್ನಾ ಬಾಂಬೆ ಟಾಕೀಸ್' ಹಾಗೂ 'ಯೆ ಜವಾನಿ ಹೈ ದಿವಾನಿ'ಯ 'ಘಾಗ್ರಾ' ಹಾಡುಗಳಿಗೆ ಕುಣಿದಿದ್ದು ಹೊರತುಪಡಿಸಿದರೆ ಮಾಧುರಿ ಫುಲ್ ಟೈಮ್ ಆಗಿ ನಟಿಸಿದ್ದು 'ಗುಲಾಬ್ ಗ್ಯಾಂಗ್'ನಲ್ಲಿ ಮಾತ್ರ. ಆ ಚಿತ್ರವೂ ಬಾಕ್ಸಾಫೀಸಿನಲ್ಲಿ ಫ್ಲಾಪ್ ಎನಿಸಿಕೊಂಡಿತು.

ಈ ಬಗೆಯಲ್ಲಿ ತನ್ನ ವೃತ್ತಿ ಬದುಕಿನುದ್ದಕ್ಕೂ ಏರಿಳಿತಗಳನ್ನು ಕಾಣುತ್ತಲೇ ಬಂದ ಮಾಧುರಿ ದೀಕ್ಷಿತ್ ಕಥಕ್ ಕಲಿತಿದ್ದಾಕೆ. ಮೈಕ್ರೋ ಬಯಾಲಜಿಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಮಾಧುರಿಗೆ ನಟನೆಯಲ್ಲಿ ಆಸಕ್ತಿ ಇರಲಿಲ್ಲ. ಆಕೆ ನಟಿಯಾದದ್ದು ಆಕಸ್ಮಿಕವಷ್ಟೇ. ಕೀರ್ತಿ, ಅಂದ, ಪ್ರತಿಭೆ ಎಲ್ಲವನ್ನೂ ಹೊಂದಿದ್ದ ಮಾಧುರಿ ಮನಸು ಮಾಡಿದ್ದರೆ ಯಾವ ಸೂಪರ್ ಸ್ಟಾರನ್ನು ಬೇಕಾದರೂ ಮದುವೆಯಾಗಬಹುದಿತ್ತು. ಆದರೆ ಆಕೆ ತನ್ನ ಜೀವನಸಂಗಾತಿಯನ್ನಾಗಿ ಆಯ್ಕೆ ಮಾಡಿಕೊಂಡಿದ್ದು ವೃತ್ತಿಯಲ್ಲಿ ವೈದ್ಯರಾದ ಡಾ. ಶ್ರೀರಾಮ್ ಎಂಬಾತನನ್ನು. ಆಕೆಯೀಗ ಎರಡು ಮಕ್ಕಳ ತಾಯಿ.

ಜಗತ್ತಿನಾದ್ಯಂತ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿರುವ ಮಾಧುರಿ ದೀಕ್ಷಿತ್ ಕಂಡರೆ ಚಿತ್ರಕಾರ ಎಂ.ಎಫ್.ಹುಸೇನ್‌ಗೆ ಪ್ರಾಣ. ಹುಸೇನ್ ಆಕೆಯನ್ನು ಎಷ್ಟು ಮೆಚ್ಚಿದ್ದರೆಂದರೆ 'ಹಮ್ ಆಪ್ಕೆ ಹೈ ಕೌನ್' ಚಿತ್ರವನ್ನು ಬರೋಬ್ಬರಿ 67 ಬಾರಿ ನೋಡಿದ್ದರು. ಪ್ರೀತಿಯಿಂದ ಮಾಧುರಿಯ ಅದೆಷ್ಟೋ ಚಿತ್ರಗಳನ್ನು ಬಿಡಿಸಿದ್ದರು. ಮಾಧುರಿಯ ಜನಪ್ರಿಯತೆಗೆ ಮತ್ತೊಂದು ಉದಾಹರಣೆಯೆಂದರೆ ಶಾರ್ಜಾದಲ್ಲಿ ಕ್ರಿಕೆಟ್ ಪಂದ್ಯ ನಡೆಯುತ್ತಿದ್ದಾಗ ಪಾಕಿಸ್ತಾನಿ ಕ್ರಿಕೆಟ್ ಅಭಿಮಾನಿಗಳು 'ಹಮ್ ಆಪ್ಕೆ ಹೈ ಕೌನ್' ಚಿತ್ರದ 'ಜೂತೆ ದೇದೋ, ಪೈಸೆ ಲೇಲೋ' ಹಾಡಿನ ಧಾಟಿಯಲ್ಲಿ 'ಮಾಧುರಿ ದೇದೋ, ಕಾಶ್ಮೀರ್ ಲೇಲೋ' ಎಂದು ಹಾಡುತ್ತಿದ್ದುದ್ದನ್ನು ಸ್ವತಃ ಪಾಕಿಸ್ತಾನದ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಫ್ ನೆನಪಿಸಿಕೊಳ್ಳುತ್ತಾರೆ.

ಹೆಸರು, ಹಣ ಬರುತ್ತಿದ್ದಂತೆಯೇ ಬದಲಾಗಿಬಿಡುವ ಈ ಜಮಾನದ ಸೆಲೆಬ್ರಿಟಿಗಳ ಪೈಕಿ ಮಾಧುರಿಯ ವ್ಯಕ್ತಿತ್ವ ಬೇರೆಯದೇ ಬಗೆಯಲ್ಲಿ ಗ್ರಹಿಕೆಗೆ ಸಿಗುತ್ತದೆ. 2001ರಲ್ಲಿ 'ಕೌನ್ ಬನೇಗ ಕರೋಡ್ ಪತಿ' ಕಾರ್ಯಕ್ರಮದಲ್ಲಿ ತಾನು ಗೆದ್ದಿದ್ದ ಐವತ್ತು ಲಕ್ಷ ಬಹುಮಾನದ ಹಣವನ್ನು ಗುಜರಾತಿನಲ್ಲಿ ಭೂಕಂಪಕ್ಕೆ ತುತ್ತಾದವರಿಗೆ ಹಾಗೂ ಪುಣೆಯ ಅನಾಥಾಶ್ರಮಕ್ಕೆ ಕೊಟ್ಟುಬಿಟ್ಟಳು. 2009ರಲ್ಲಿ ಪರಿಸರ ರಕ್ಷಣೆಗಾಗಿ ಎನ್.ಡಿ.ಟಿ.ವಿ. ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕಾಗಿ ಉಚಿತವಾಗಿ ಡಾನ್ಸ್ ಮಾಡಿದ್ದಳು. ವನ್ಯಜೀವಿಗಳ ರಕ್ಷಣೆಗೆ ನಿಂತಳು. ಕ್ಯಾನ್ಸರ್ ರೋಗಿಗಳಿಗೆ ನೆರವಾದಳು- ಇವೆಲ್ಲವುಗಳ ಜೊತೆಗೆ 'ಆನ್ ಲೈನ್ ಡಾನ್ಸ್ ಅಕಾಡೆಮಿ' ಆರಂಭಿಸುವ ಮೂಲಕ ತಾನು ಪ್ರೀತಿಸುವ ನೃತ್ಯಕಲೆಯ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದ್ದಾಳೆ. ಎಲ್ಲಕ್ಕಿಂತ ಮಿಗಿಲಾಗಿ ತನ್ನ ಅಭಿನಯ, ನೃತ್ಯ ಹಾಗೂ ಇತರೆ ಕಾರ್ಯಕ್ರಮ, ಸರಳ ವ್ಯಕ್ತಿತ್ವದ ಮೂಲಕ ಅಪ್ಪಟ ಮನುಷ್ಯಳಾಗಿ ಎಲ್ಲರ ಮನಸುಗಳಲ್ಲಿ ಅಚ್ಚಳಿಯದೆ ಉಳಿದುಬಿಡುತ್ತಾಳೆ. 'ಮಾಧುರಿ ದೀಕ್ಷಿತ್' ಬಗ್ಗೆ ಎಷ್ಟೇ ಬರೆದರೂ ಅಪೂರ್ಣ ಎನಿಸುವಂತೆ ಸೋಜಿಗವಾಗಿ ಕಾಡುತ್ತಾಳೆ.

● ಹೃದಯಶಿವ

ಹೊಸ ಸಿನಿಮಾಕ್ಕೆ ಪಿ.ಲಂಕೇಶ್ ಸಾಹಿತ್ಯ



ಪಿ.ಲಂಕೇಶ್ ಇಲ್ಲವಾಗಿ ಇಲ್ಲಿಗೆ ಹದಿನಾಲ್ಕು ವರ್ಷಕ್ಕೂ ಮೇಲಾಯಿತು. ಆದರೇನಂತೆ, ಪ್ರತಿಭಾವಂತ ಸಾಹಿತಿ ಆಗಿದ್ದ ಅವರು ಈಗ ಹೊಸ ಚಿತ್ರದಲ್ಲಿ ಒಂದು ಹಾಡಿಗೆ ಲಿರಿಕ್ಸ್ ಬರೆದಿದ್ದಾರೆ ಎಂದರೆ ನಿಮಗೆ ಅಚ್ಚರಿ ಆಗಬಹುದು!



ಚಿತ್ರದ ಹೆಸರು 'ಬಹುಪರಾಕ್'. ಶ್ರೀನಗರ ಕಿಟ್ಟಿ ಹೀರೋ ಆಗಿ ನಟಿಸುತ್ತಿರುವ ಈ ಚಿತ್ರವನ್ನು ನಿರ್ದೇಶಿಸುತ್ತಿರುವವರು ಸುನಿ. ಈ ಚಿತ್ರದಲ್ಲಿನ ಒಂದು ಹಾಡಿಗೆ ಸುನಿ ಅವರು ಲಂಕೇಶರ ಪ್ರಖ್ಯಾತ ನಾಟಕ 'ಸಂಕ್ರಾಂತಿ'ಯಿಂದ ಹನ್ನೊಂದು ಸಾಲುಗಳನ್ನು ಆಯ್ಕೆ ಮಾಡಿ ಅದನ್ನೇ ಒಂದು ಹಾಡಾಗಿ ಉಪಯೋಗಿಸಿಕೊಂಡಿದ್ದಾರೆ. 'ಗೆದ್ದೆ ಗೆಲ್ವಾನಂತ' ಎಂಬ ಈ ಹಾಡನ್ನು ನವೀನ್ ಸಜ್ಜು ಎಂಬ ಹೊಸ ಹಾಡುಗಾರ ಹಾಡಿದ್ದಾರೆ. ಜನಪದ ಶೈಲಿಯಲ್ಲಿರುವ ಈ ಹಾಡು 'ಬಹುಪರಾಕ್' ಸಿನಿಮಾದಲ್ಲಿ ರಾಜಕೀಯ ವಿಡಂಬನೆಯಾಗಿ ಮೂಡಿಬರಲಿದೆ.

ಪ್ರತಿಭೆಗೆ ಎಂದೂ ಸಾವಿಲ್ಲ ಎಂದು ಹೇಳುವುದು ಇದಕ್ಕೇ ಅಲ್ಲವೇ?!

ಮಹೇಶ್ ಪಿಸುಗುಟ್ಟಿದಾಗ



ಕಾಮಿಡಿ ಟೈಮ್ ಗಣೇಶ್ ತಮ್ಮ ಮಹೇಶ್ 'ಪಿಸುಗುಡಲೇ' ಎಂಬ ಚಿತ್ರದಲ್ಲಿ ನಾಯಕನಟನಾಗಿ ಅಭಿನಯಿಸುತ್ತಿದ್ದಾರೆ. 'ಪಿಸುಗುಡಲೇ' ತ್ರಿಕೋನ ಪ್ರೇಮಕಥೆ ಹೊಂದಿದ್ದು, ಕುಮಾರ್ ಎಂಬುವವರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಚಿತ್ರದಲ್ಲಿ ಆದ್ಯ ಮತ್ತು ಗೌತಮಿ ಎಂಬ ಇಬ್ಬರು ಹೀರೋಯಿನ್‌ಗಳಿದ್ದು ರಾಜು ಎಂಬುವವರು ಸ್ಕ್ರಿಪ್ಟ್ ಬರೆದಿದ್ದಾರೆ. ಈಗಾಗಲೇ ನಾಯಕನಟನಾಗಿ ತಮ್ಮ ಚೊಚ್ಚಲ ಚಿತ್ರ 'ನಮಕ್ ಹರಾಮ್'ನಲ್ಲಿ ಬ್ಯುಸಿಯಾಗಿರುವ ಮಹೇಶ್ ಆ ಚಿತ್ರ ಪೂರ್ಣವಾದ ನಂತರ 'ಪಿಸುಗುಡಲೇ' ಚಿತ್ರದಲ್ಲಿ ತೊಡಗಿಕೊಳ್ಳುತ್ತಾರಂತೆ. ಅಣ್ಣ ಗಣೇಶ್ ವೃತ್ತಿ ಬದುಕಿನ ಆರಂಭದ ದಿನಗಳಲ್ಲಿ ಸಿನಿಮಾಗಳಲ್ಲಿ ಅವಕಾಶ ಸಿಗದೇ ಖಾಲಿ ಜೇಬು ಹೊತ್ತು ಗಾಂಧಿನಗರದಲ್ಲಿ ಸೈಕಲ್ ಹೊಡೆಯುತ್ತಿದ್ದಾಗ ಅಲ್ಲಿ ಇಲ್ಲಿ ಕೆಲಸ ಮಾಡಿಕೊಂಡು ಅಣ್ಣನ ಖರ್ಚು ವೆಚ್ಚಕ್ಕೆ ಹಣ ನೀಡುತ್ತಿದ್ದದ್ದೇ ತಮ್ಮ ಮಹೇಶ್.

ಹಾಗೆ ನೋಡಿದರೆ ಗಣೇಶ್ ಹೀರೋ ಆಗಿ ಪೀಕ್‌ನಲ್ಲಿದ್ದಾಗಲೇ ಮಹೇಶ್ ಹೀರೋ ಆಗಬೇಕಿತ್ತು, ಒಬ್ಬ ಸ್ಟಿಲ್ ಫೋಟೋಗ್ರಾಫರ್ ಮಹೇಶ್‌ನನ್ನು ಹೀರೋ ಮಾಡಲು ಕೈಯಲ್ಲಿ ಕಥೆ ಹಿಡಿದುಕೊಂಡು ಓಡಾಡುತ್ತಿದ್ದ ದಿನಗಳೂ ಇದ್ದವು. ಆದೇಕೋ ಆ ಕಥೆ ಸಿನಿಮಾ ಆಗಲಿಲ್ಲ, ಸ್ಟಿಲ್ ಫೋಟೋಗ್ರಾಫರ್‌ನೂ ನಿರ್ದೇಶಕ ಆಗಲಿಲ್ಲ, 'ಚೆಲ್ಲಾಟ' ಬಿಡುಗಡೆಯಾದಾಗ ಮಾರ್ನಿಂಗ್ ಷೋನಿಂದ ಸೆಕೆಂಡ್ ಷೋವರೆಗೂ ಮೇನಕ ಟಾಕೀಸ್ ಮುಂದೆ ನಿಂತು 'ನನ್ನ ಅಣ್ಣನ ಸಿನಿಮಾ ಓಡಲಿ' ಅಂತ ತಾನು ನಂಬಿದ್ದ ದೇವರಲ್ಲಿ ಪ್ರಾರ್ಥಿಸುತ್ತಿದ್ದ ಮಹೇಶ್ ಕೂಡ ಹೀರೋ ಆಗಲಿಲ್ಲ, ಆದರೀಗ ಬರೋಬ್ಬರಿ ಎರಡು ಚಿತ್ರಗಳಲ್ಲಿ ಮಹೇಶ್ ಹೀರೋ ಆಗುತ್ತಿದ್ದಾನೆ. ಅಣ್ಣ ನಿವೃತ್ತಿ ಹೊಂದುವ ಹೊತ್ತಿಗೆ ತಮ್ಮ ಹೀರೋ ಆಗುತ್ತಿರುವುದು ಎಂಥ ಸೋಜಿಗ ಅಲ್ಲವೇ?

'ದೃಶ್ಯ' ಹಾಡು ಬಿಡುಗಡೆ

ಇಳಯರಾಜಾ ಸಂಗೀತದ 'ದೃಶ್ಯ' ಚಿತ್ರದ ಹಾಡುಗಳು ಮಾರುಕಟ್ಟೆಗೆ ಬಂದಿವೆ. ವಿ.ರವಿಚಂದ್ರನ್ ಅಭಿನಯದಲ್ಲಿ, ಪಿ.ವಾಸು ನಿರ್ದೇಶನದಲ್ಲಿ ತಯಾರಾಗಿರುವ ಹಾಡುಗಳು ಇದೀಗ ಎಲ್ಲೆಡೆ ಸಿಗುತ್ತಿವೆ. ಸಿಡಿ ಬಿಡುಗಡೆಯ ಸಂದರ್ಭದಲ್ಲಿ ರವಿಚಂದ್ರನ್ ಮಾತಾಡುತ್ತಾ, "ಇಳಯರಾಜಾ ಅವರೇ ನಿಜವಾದ ಹೀರೋ. ಸಂಗೀತದ ಕೆಲಸ ಶುರು ಮಾಡುವಾಗ ಎಲ್ಲರೂ 'ಓಂಕಾರ' ಬಳಸಿ ಶುರು ಮಾಡುತ್ತಾರೆ. ನಾವೆಲ್ಲಾ ಇಳಯರಾಜ ಅವರ ಹೆಸರಿನ ಮೂಲಕ ಸಂಗೀತ ಆರಂಭಿಸಬೇಕು" ಎಂದು ಹೇಳಿದರು. ಇದೇ ವೇಳೆ ಮಾತಾಡಿದ ಯಶ್ "ಇಳಯರಾಜಾ ಅವರ ಜೊತೆಯಲ್ಲಿ ಕೂರುವುದೇ ನನ್ನ ಸುಯೋಗ. ಅವರ 'ಗೀತಾ' ಹಾಡುಗಳನ್ನು ಎಷ್ಟು ಸಲ ಕೇಳಿದ್ದೀನೋ... ಹಾಗೇನೆ ರವಿಚಂದ್ರನ್ ಅವರು ನಮಗೆ ಮಾರ್ಗದರ್ಶಕರು" ಎಂದು ಹೇಳಿ ಮೈಕು ಪಾಸ್ ಮಾಡಿದರು. ಪಿ.ವಾಸು ಮಾತಾಡುತ್ತಾ "ನಾನು ನಿರ್ದೇಶಿಸಿರುವ ಅರವತ್ತೆರಡು ಸಿನಿಮಾಗಳ ಪೈಕಿ ಅರ್ಧಕ್ಕರ್ಧದಷ್ಟು ಸಿನಿಮಾಗಳಿಗೆ ಇಳಯರಾಜಾ ಅವರೇ ಸಂಗೀತ ನೀಡಿದ್ದಾರೆ. 'ದೃಶ್ಯ' ಚಿತ್ರದಲ್ಲಿ ಹಿನ್ನೆಲೆ ಸಂಗೀತ ಅದ್ಭುತವಾಗಿದೆ. ರವಿಚಂದ್ರನ್ ಒಳ್ಳೆಯ ನಟ, ಅವರೊಂದಿಗೆ ಮಾತಾಡುವಾಗ ಶಿವಾಜಿ ಪ್ರಭು ಜೊತೆ ಮಾತಾಡಿದ ಹಾಗೆ ಅನ್ನಿಸುತ್ತೆ ನನಗೆ" ಎಂದರು. "ಕೊಲ್ಲೂರು



ಮೂಕಾಂಬಿಕ ದೇವಾಲಯಕ್ಕೆ ಹೋಗುವ ಉದ್ದೇಶವಿತ್ತು, ಈ ಮಧ್ಯದ ಈ ಕಾರ್ಯಕ್ರಮಕ್ಕೆ ಬಂದೆ" ಎಂದು ಹೇಳಿದ ಇಳಯರಾಜಾ ಅವ 'ಕಿಂದರಿಜೋಗಿ' ದಿನಗಳನ್ನು ನೆನಪಿಸಿಕೊಂಡರು.



ಗಜಕೇಸರಿ ಅಮೆರಿಕಾಗೆ



ಯಶ್ ಅಭಿನಯದ 'ಗಜಕೇಸರಿ' ಚಿತ್ರವು ಅಮೆರಿಕಾದಲ್ಲಿ ಬಿಡುಗಡೆಯಾಗುತ್ತಿದೆ. ಈ ಬಗ್ಗೆ ಯಶ್, ಜಯಣ್ಣ ಭೋಗೇಂದ್ರ ಉತ್ಸುಕರಾಗಿದ್ದು ಚಿತ್ರವನ್ನು ವಿಶೇಷವಾಗಿ ಪ್ರೊಮೋಟ್ ಮಾಡಲು ಯೋಜಿಸಿದ್ದಾರಂತೆ. ಕನ್ನಡ ಚಿತ್ರಗಳಿಗೆ ದೊಡ್ಡಮಟ್ಟದ ಪ್ರೇಕ್ಷಕ ವರ್ಗವನ್ನು ಸೃಷ್ಟಿಸುವುದೇ 'ತಮ್ಮ ಗುರಿಯಾಗಿದ್ದು ಆ ನಿಟ್ಟಿನಲ್ಲಿ ಈ ಪ್ರಯತ್ನಕ್ಕೆ ಕೈ ಹಾಕುತ್ತಿದ್ದಾರಂತೆ. ಇಷ್ಟ ಶ್ರಮವಹಿಸಿ ಏರ್ಪಾಟು ಮಾಡುವ ಪ್ರದರ್ಶನಕ್ಕೆ, ಅಮೆರಿಕಾದ ಕನ್ನಡಿಗ ಪ್ರೋತ್ಸಾಹ ಬೇಕಾಗುತ್ತದೆ. ಅವರೆಲ್ಲ ಬಂದು ಸಿನಿಮಾ ನೋಡಿದಾಗ ಮಾ ಈ ಪ್ರಯತ್ನಕ್ಕೆ ಯಶಸ್ಸು ಸಿಗುತ್ತದೆ ಎಂದೂ ಮಾತು ಸೇರಿಸಿದ್ದಾರೆ. ಕುರಿತು ಹೆಚ್ಚಿನ ಮಾಹಿತಿಗಾಗಿ ಅಟ್ಲಾಂಟ ನಾಗೇಂದ್ರ ಅವರನ್ನು ಸಂಪರ್ಕಿಸುವ ಹೇಳಿದ್ದಾರೆ. ಇಷ್ಟಕ್ಕೂ ಕರ್ನಾಟಕದಲ್ಲೇ ಸರಿಯಾಗಿ ಕಲೆಕ್ಷನ್ ಇಲ್ಲದ 'ಗಜಕೇಸ ಚಿತ್ರವು ಅಮೆರಿಕಾದಲ್ಲಿ ಇನ್ನೆಷ್ಟು ಗೆದ್ದೀತು?

ಭಾರತಿ ಬ್ಯಾಕ್ ಟು ಸೆಟ್

ಭಾರತಿ ವಿಷ್ಣುವರ್ಧನ್ ಎರಡು ವರ್ಷಗಳ ನಂತರ ಮತ್ತೆ ನಟಿಸುತ್ತಿದ್ದಾ ಈ ಬಾರಿ ಇವರು ನಟಿಸುತ್ತಿರುವುದು ಹಿರಿಯ ಪತ್ರಕರ್ತರಾದ ನಂದಕುಮಾ ಅವರು ನಿರ್ಮಿಸುತ್ತಿರುವ 'ಯುವ ಸಾಮ್ರಾಟ್' ಚಿತ್ರದಲ್ಲಿ, ಕವಿತಾ ಲಂಕೇ



'ಕ್ರೇಜಿ ಲೋಕ'ದ ನಂತರ ಭಾರತಿ ಬೇರೆ ಯಾವ ಚಿತ್ರದಲ್ಲಿಯ ಈವರೆಗೆ ನಟಿಸಿರಲಿಲ್ಲ, ಇದೀಗ 'ಯುವ ಸಾಮ್ರಾಟ್' ಚಿತ್ರದ ಪುಟ್ಟದಾದರೂ ಮಹತ್ವಪೂರ್ಣವಾದ ಪಾತ್ರವೊಂದರಲ್ಲಿ ಭಾ ವಿಷ್ಣುವರ್ಧನ್ ಅವರು ಅಭಿನಯಿಸುತ್ತಿದ್ದಾರೆ. ಈಗಾಗ ಬಹುತೇಕ ಭಾಗದ ಚಿತ್ರೀಕರಣ ಮುಗಿಸಿಕೊಂಡಿರುವ 'ಯು ಸಾಮ್ರಾಟ್' ಚಿತ್ರವು ಇನ್ನು ಕೆಲವೇ ದಿನಗಳಲ್ಲಿ ತನ್ನ ಚಿತ್ರೀಕರಣ ಮುಗಿಸಿಕೊಳ್ಳಲಿದೆ. ಪತ್ರಕರ್ತ ನಂದಕುಮಾ ಅವರ ಹಿರಿಯ ಪುತ್ರ ಕಿರಣ್ ಕುಮಾರ್ ಈ ಚಿ ನಾಯಕನಟನಾಗಿ ನಟಿಸುತ್ತಿದ್ದು ಕಿರಿಯ ಪುತ್ರ ಯಶವ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶ ಜವಾಬ್ದಾರಿ ಹೊತ್ತಿದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Fax : 26604536